# ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ

ಸಂಗ್ರಹ & ತಯಾರಿಕೆ :

**ಸಿ.ಎನ್.ಪರಶಿವಮೂರ್ತಿ,** ಎಂ.ಎಸ್.ಡಬ್ಲ್ಯು, ಎಲ್.ಎಲ್.ಬಿ

ಸಹಕಾರ ಸಂಘಗಳ ನಿವೃತ್ತಿ ಅಪರ ನಿಬಂಧಕರು

**ಪ್ರಕಟಣೆ :**

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

**ನಿರ್ಮಾಣ ಭವನ, ಡಾ. ರಾಜಕುಮಾರ್ ರಸ್ತೆ,1ನೇ ಬ್ಲಾಕ್, ರಾಜಾಜಿನಗರ**

**ಬೆಂಗಳೂರು– 560010 Tel: 080 23378375–80**

ಇ–ಮೇಲ್: souharda@souharda.coop ವೆಬ್‌ಸೈಟ್: www.souharda.coop

ಪ್ರಕಾಶಕರು : **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
**ನಿರ್ಮಾಣ ಭವನ, ಡಾ. ರಾಜಕುಮಾರ್ ರಸ್ತೆ,**
**1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು– 560010**

**ದೂರವಾಣಿ: 080 23378375–80**

**ಇ–ಮೇಲ್:** souharda@souharda.coop

**ವೆಬ್‌ಸೈಟ್:** www.souharda.coop

ಮೊದಲ ಮುದ್ರಣ : ಸೆಪ್ಟೆಂಬರ್ 2018,

ಪ್ರತಿಗಳು : 500

ಬೆಲೆ : ರೂ.100/–

ಮುದ್ರಕರು : Banashankari Print Solutions
Rajajinagar, Bengaluru-10
M: 9242910465
prajvalprints1996@gmail.com

# ಮೊದಲ ಮಾತು



**ಆತ್ಮೀಯ ಸಹಕಾರಿ ಬಂಧುಗಳೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ, ಆರೋಗ್ಯಕರ ಬೆಳವಣಿಗೆಗಾಗಿ ಅನೇಕ ವಿಷಯಗಳ ಕುರಿತು ಪುಸ್ತಕಗಳನ್ನು, ಕೈಪಿಡಿಗಳನ್ನು ಹಾಗೂ ಪ್ರಕಟಣೆಗಳನ್ನು ಕಾಲಕಾಲಕ್ಕೆ ಪ್ರಕಟಿಸುತ್ತ ಬಂದಿದೆ. ಸಹಕಾರಿಗಳು ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ನ್ಯಾಯಾಲಯಗಳ ನೆರವು ಪಡೆಯುವುದು ಸರ್ವೆಸಾಮಾನ್ಯ. ನೋಂದಣಿ, ಉಪವಿಧಿಗಳ ತಿದ್ದುಪಡಿ, ಸಹಕಾರಿ ಸಂಸ್ಥೆಗಳನ್ನು ಒಂದುಗೂಡಿಸುವುದು, ವಿಭಜಿಸುವುದು, ಚುನಾವಣೆಗೆ ಸಂಬಂಧಿಸಿದ ವಿಷಯಗಳು, ಆಡಳಿತ ಮಂಡಳಿ ರದ್ದುಪಡಿಸುವಿಕೆ, ಆಡಳಿತಾಧಿಕಾರಿಗಳ ನೇಮಕ, ವಿಚಾರಣೆ, ಅದಿಭಾರ ನಡುವಳಿಕೆಗಳು, ದಾವಾ ಪ್ರಕರಣಗಳು ಹಣ ದುರುಪಯೋಗ, ಆದೇಶ ಮತ್ತು ತೀರ್ಪುಗಳನ್ನು ಜಾರಿಮಾಡುವ ವಿಧಾನ ಹಾಗೂ ಸಮಾಪನೆ ಇತ್ಯಾದಿ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಹಲವಾರು ಮಹತ್ವದ ತೀರ್ಪುಗಳಾಗಿವೆ. ಇಷ್ಟೊಂದು ತೀರ್ಪುಗಳಿದ್ದಾಗ್ಯೂ ಸಹ, ಅನೇಕ ಬಾರಿ ಸಹಕಾರ ಸಂಸ್ಥೆಗಳು ಇವುಗಳ ಸರಿಯಾದ ಮಾಹಿತಿಗಳು ದೊರಕದೆ ಆತಂಕದಲ್ಲಿದ್ದು, ಅನಗತ್ಯವಾಗಿ ಕಾನೂನು ಸಲಹೆ ಪಡೆಯುವ ಹಾಗೂ ನ್ಯಾಯಾಲಯಗಳ ಮೊರೆಹೋಗುವುದನ್ನು ಸಂಯುಕ್ತ ಸಹಕಾರಿಯು ಗಮನಿಸಲಾಗಿದೆ. ಈ ತೊಂದರೆಗಳನ್ನು ನಿವಾರಿಸುವುದಕ್ಕಾಗಿಯೇ ಸಂಯುಕ್ತ ಸಹಕಾರಿಯು ಸಹಕಾರ ಕಾಯಿದೆಗಳಿಗೆ ಸಂಬಂಧಪಟ್ಟ ತೀರ್ಪುಗಳ ಕುರಿತ ಪುಸ್ತಕಗಳನ್ನು ಶ್ರೀ ಸಿ ಎನ್ ಪರಶಿವಮೂರ್ತಿಯವರಿಂದ ಪಡೆದು ಪ್ರಕಟಿಸುವ ಕಾರ್ಯವನ್ನು ಮಾಡುತ್ತಲಿದೆ.

ಇಂತಹ ತೀರ್ಪುಗಳ ಪುಸ್ತಕ ಪ್ರಕಟಿಸುವ ಕಾರ್ಯದಲ್ಲಿ, ಮಾಹಿತಿ ಹಕ್ಕು ಕಾಯಿದೆಯಲ್ಲಿನ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳ ತೀರ್ಪಿನ ಸಾರಂಶಗಳನ್ನು ಪ್ರತ್ಯೇಕ ಪುಸ್ತಕವಾಗಿ ಪ್ರಕಟಿಸುವುದು ಸೂಕ್ತವೆಂದು ಭಾವಿಸಿ ಈ ಪುಸ್ತಕವನ್ನು ಸಿದ್ಧಪಡಿಸಿದೆ.

ಕೇಂದ್ರ ಸರ್ಕಾರ ಸಾರ್ವಜನಿಕರಿಗೆ, ಸರ್ಕಾರಿ ಇಲಾಖೆ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿನ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಿ "ಮಾಹಿತಿ ಹಕ್ಕು ಕಾಯಿದೆ 2005" ರಚಿಸಿರುವುದು ತಮಗೆಲ್ಲ ತಿಳಿದಿದೆ. ಈ ಕಾಯಿದೆಯಡಿ ಪ್ರತಿಯೊಬ್ಬ ಭಾರತದ ಪ್ರಜೆ "ಸಾರ್ವಜನಿಕ ಪ್ರಾಧಿಕಾರ" ಗಳಿಂದ ಮಾಹಿತಿ ಕೇಳಲು ಮತ್ತು ಪಡೆಯಲು ಅಧಿಕಾರ ನೀಡಲಾಗಿದೆ. ಇದರಲ್ಲಿ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಮಾಹಿತಿ ಹಕ್ಕು ಕಾಯಿದೆಗಳಡಿ ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯಗಳು ನೀಡಿದ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ಕ್ರೋಢೀಕರಿಸಿದೆ. ಸಹಕಾರಿಗಳಿಗೆ ಅನ್ವಯಿಸುವ ಮಹತ್ವದ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ಸೈಟೇಶನ್ ಸಂಖ್ಯೆಯೊಂದಿಗೆ ಪ್ರಕಟಿಸಲಾಗಿದೆ.

ಸಹಕಾರ ಇಲಾಖೆಯ ನಿವೃತ್ತ ಹಿರಿಯ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಇವುಗಳನ್ನು ಸಂಪಾದಿಸಿ, ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ಸಿದ್ಧಪಡಿಸಿ ಸಂಯುಕ್ತ ಸಹಕಾರಿಯು ಮುದ್ರಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಮಹತ್ವದ ಕಾರ್ಯವನ್ನು ಮಾಡಿಕೊಟ್ಟ ಅವರಿಗೆ ಕೃತಜ್ಞತೆಗಳು.

ಸಹಕಾರ ಕಾಯಿದೆಗಳಿಗೆ ಸಂಬಂಧಪಟ್ಟ ಮಾಹಿತಿ ಹಕ್ಕು ಕಾಯಿದೆಯಲ್ಲಿನ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳ ತೀರ್ಪಿನ ಸಾರಂಶಗಳ ಪುಸ್ತಿಕೆಯು ಸಹಕಾರಿಗಳಿಗೆ, ಸಹಕಾರಿ ಸಂಸ್ಥೆಗಳಿಗೆ ಅದರಲ್ಲೂ ಪ್ರಮುಖವಾಗಿ ಆಡಳಿತ ಮಂಡಲಿ ಸದಸ್ಯರಿಗೆ ಮಾರ್ಗದರ್ಶಿಯಂತೆ ಅಳವಡಿಸಿಕೊಳ್ಳಲು, ಈ ತೀರ್ಪುಗಳ ಸಂಕ್ಷಿಪ್ತ ಟಿಪ್ಪಣಿ ಅನುಕೂಲವಾಗುತ್ತದೆಂದು ಭಾವಿಸಿದೆ. ಸೌಹಾರ್ದ ಸಹಕಾರಿಗಳಿಗೆ, ಸಹಕಾರಿ ನೇತಾರರಿಗೆ, ವಕೀಲರಿಗೆ, ಇಲಾಖಾಧಿಕಾರಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಬಹುದೆಂದು ಸಂಯುಕ್ತ ಸಹಕಾರಿಯು ಭಾವಿಸಿದೆ. ತಾವುಗಳು ಈ ಸಂಗ್ರಹ ಪುಸ್ತಕವನ್ನು ಓದಿ ಪ್ರಯೋಜನ ಪಡೆದುಕೊಂಡರೆ ಸಂಯುಕ್ತ ಸಹಕಾರಿಯ ಈ ಪ್ರಯತ್ನ ಸಾರ್ಥಕ. ಈ ಪ್ರಕಟಣೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಾಗೂ ಸಲಹೆಗಳನ್ನು ಸ್ವಾಗತಿಸುತ್ತೇವೆ.

**ಬಿ. ಹೆಚ್. ಕೃಷ್ಣಾರೆಡ್ಡಿ**
**ಅಧ್ಯಕ್ಷರು**

# ಮುನ್ನುಡಿ



ಸಹಕಾರಿ ಆಂದೋಲನ ಶಾಸನಬದ್ಧವಾಗಿ ಪ್ರಾರಂಭವಾಗಿ 114 ವರ್ಷಗಳಾಗಿದ್ದರೂ, ಈ ಆಂದೋಲನ ಒಂದು ಜೀವನ ಕ್ರಮವಾಗಿದೆ. 1904ರ ಕಾಯಿದೆ ಬ್ರಿಟೀಷರ ಆಳ್ವಿಕೆಯಲ್ಲಿ ಪ್ರಾಂತೀಯವಾಗಿ ಪ್ರಾರಂಭವಾದರೂ, ಸ್ವಾತಂತ್ರ್ಯ ನಂತರ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಹಕಾರ ಕಾಯಿದೆಯನ್ನು ರಚಿಸಿಕೊಂಡಿದೆ. ನಮ್ಮ ರಾಷ್ಟ್ರದಲ್ಲಿ ಮಾತ್ರ ಸಹಕಾರ ಕಾಯಿದೆ ಸಂಘಗಳ ಸ್ಥಾಪನೆ, ಸದಸ್ಯತ್ವ, ಆಡಳಿತ ಮಂಡಲಿ, ಸಾಮಾನ್ಯ ಸಭೆ, ಮಂಡಳಿ ರದ್ಧತಿ, ವಿವಾದಗಳು, ಮಂಡಳಿ ಮತ್ತು ಸಾಮಾನ್ಯ ಸಭೆಯ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು, ಸಮಾಪನೆ ಮತ್ತಿತರ ವಿಷಯಗಳನ್ನು ಒಳಗೊಂಡಿದೆ. ಇದಕ್ಕೆ ಪೂರಕವಾಗಿಸಹಕಾರ ಸಂಘಗಳ ನಿಯಮಗಳನ್ನು ಜಾರಿ ಮಾಡಿದೆ. ಇದರ ಜೊತೆಗೆ ಸಹಕಾರ ಸಂಘಗಳನ್ನು ಮೇಲ್ವಿಚಾರಣೆ, ಮಾರ್ಗದರ್ಶನ ಮತ್ತು ತಾತ್ವಿಕ ನಿರ್ದೇಶನ ನೀಡಲು ನಿಬಂಧಕರ ನೇಮಕಾತಿಗೆ ಅವಕಾಶ ಕಲ್ಪಿಸಿದೆ.

ಸಹಕಾರಿ ಕಾಯಿದೆ ಜಾರಿಗೆ ಬಂದ ನಂತರ, ಕಾರ್ಯನಿರ್ವಹಣೆ ಸಂದರ್ಭದಲ್ಲಿ ಉಂಟಾಗುವ ವಿವಾದಗಳನ್ನು ತೀರ್ಮಾನಿಸಲು ವಿವಿಧ ನ್ಯಾಯಾಲಯಗಳು ವಿವಿಧ ಕಾಯಿದೆಗಳಲ್ಲಿ ರಚನೆಗೊಂಡಿವೆ. ಸಹಕಾರಿ ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯಗಳು ಪ್ರಾಥಮಿಕ ಹಂತದಲ್ಲಿ, ಎರಡನೇ ಹಂತದಲ್ಲಿ ನ್ಯಾಯಾಧೀಕರಣಗಳು ಮತ್ತು ಮೇಲ್ಮಟ್ಟದಲ್ಲಿ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳು. ಈ ನ್ಯಾಯಾಲಯಗಳು ನೀಡುವ ತೀರ್ಪುಗಳನ್ನು ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಕ್ರೋಢೀಕರಿಸಿ ಪ್ರಕಟಿಸುವ ಪ್ರಯತ್ನಗಳು ಆಗಿಲ್ಲ. ಹಲವು ಪ್ರಕಾಶಕರು ಕಾಯಿದೆಯನ್ನು ವಿಮರ್ಶಿಸುವಾಗ ಕೆಲವು ತೀರ್ಪುಗಳನ್ನು ಸೇರಿಸಿ ಪ್ರಕಟಿಸಿದರೂ, ಅವುಗಳು ಬಹುಸಂಖ್ಯೆಯಲ್ಲಿರುವುದಿಲ್ಲ.

"ಸಹಕಾರ" ಎಂಬ ವಿಷಯ ರಾಜ್ಯ ಪಟ್ಟಿಯಲ್ಲಿರುವುದರಿಂದ ಸಂವಿಧಾನಾತ್ಮಕವಾಗಿ ರಾಜ್ಯ ಸರ್ಕಾರಗಳೇ ಸಹಕಾರ ಕಾಯಿದೆ ರಚಿಸಬೇಕು. ಅದರಂತೆ ಎಲ್ಲಾ ರಾಜ್ಯಗಳು ಕಾಯಿದೆ ರಚಿಸಿದೆ. ಆದರೆ ಎಲ್ಲಾ ರಾಜ್ಯ ಸರ್ಕಾರಗಳು ಏಕರೀತಿಯಲ್ಲಿ ಇರುವುದಿಲ್ಲ. ಇದಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ರಚಿಸಿದ ಉದಾರೀಕೃತ ಕಾಯಿದೆ "ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯಿದೆ" ಮಾದರಿಯಲ್ಲಿಯೂ ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸುವುದು ಒಂದು ಮೂಲಭೂತ ಹಕ್ಕಾಗಿ ಸೇರ್ಪಡೆ ಮಾಡಿ, ರಾಜ್ಯ ಸರ್ಕಾರಗಳು ಸಹಕಾರ ಸಂಸ್ಥೆಗಳನ್ನು ಸರ್ಕಾರ/ನಿಬಂಧಕರ ನಿಯಂತ್ರಣದಿಂದ ಮುಕ್ತಿ ನೀಡಿ, ಈ ಸಂಸ್ಥೆಗಳು ಸ್ವಾಯತ್ತ, ಸ್ವತಂತ್ರ, ಸ್ವಯಂ ನಿಯಂತ್ರಿತ ಸಂಸ್ಥೆಗಳನ್ನಾಗಲು ಅವಕಾಶ ಕಲ್ಪಿಸಿದೆ. ಈ ಉದಾರೀಕರಣದಿಂದ ಸಹಕಾರ ಸಂಸ್ಥೆಗಳು ಸ್ವಾಯತ್ತತೆ ಹೆಸರಿನಲ್ಲೂ ಸ್ವೇಚ್ಛಾಚಾರಿಕೆ ಪ್ರಕಟಿಸಲು ಪ್ರಯತ್ನ ಪಡಬಹುದೆಂದು, ವಿವಿಧ ನ್ಯಾಯಾಲಯಗಳು ನೀಡಿದ ತೀರ್ಪಿನ ಮುಖ್ಯಾಂಶಗಳನ್ನು ಸಹಕಾರಿಗಳ/ಸಹಕಾರಿ ಸಂಘಗಳ ಗಮನಕ್ಕೆ ತರುವುದು ಅವಶ್ಯಕವೆಂದು ತಿಳಿದು, ಸಂಯುಕ್ತ ಸಹಕಾರಿ ನಡೆಸಿದ ಪ್ರಯತ್ನ ಪ್ರಶಂಸನೀಯ.

97ನೇ ಸಂವಿಧಾನ ತಿದ್ದುಪಡಿ ನಂತರ 2013 ಮತ್ತು 2014ರಲ್ಲಿ ಸಹಕಾರ ಸಂಘಗಳ ಕಾಯಿದೆ

ಅಭ್ಯಾಸ ಮಾಡಿ, ಅವುಗಳನ್ನು ಅನುಸರಿಸಿ ತೀರ್ಪುಗಳನ್ನು ನೀಡಿದ್ದೇನೆ. ನ್ಯಾಯಾಲಯದ ತೀರ್ಪುಗಳನ್ನು ಅಭ್ಯಾಸ ಮಾಡುವ ಸಂಕ್ಷಿಪ್ತ ಟಿಪ್ಪಣಿಯನ್ನು ಕನ್ನಡದಲ್ಲಿ ಆಗಿಂದಾಗ್ಗೆ ತಯಾರಿಸಿದ್ದೇನೆ.

ಕೇಂದ್ರ ಸರ್ಕಾರ ಸಾರ್ವಜನಿಕರಿಗೆ, ಸರ್ಕಾರಿ ಇಲಾಖೆ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿನ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಿ "ಮಾಹಿತಿ ಹಕ್ಕು ಕಾಯಿದೆ 2005" ಎಂದು ಒಂದು ಕಾಯಿದೆ ರಚಿಸಿದೆ. ಈ ಕಾಯಿದೆಯಡಿ ಪ್ರತಿಯೊಬ್ಬ ಭಾರತದ ಪ್ರಜೆ "ಸಾರ್ವಜನಿಕ ಪ್ರಾಧಿಕಾರ" ಗಳಿಂದ ಮಾಹಿತಿ ಕೇಳಲು ಮತ್ತು ಪಡೆಯಲು ಅಧಿಕಾರ ನೀಡಲಾಗಿದೆ. ಈ ಕಿರು ಹೊತ್ತಿಗೆಯ ಉದ್ದೇಶ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಮಾಹಿತಿ ಹಕ್ಕು ಕಾಯಿದೆಗಳಡಿ ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯಗಳು ನೀಡಿದ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ನೀಡುವ ಪ್ರಯತ್ನ. ಇದಕ್ಕೆ ಪ್ರೇರಣೆ ಶ್ರೀ ಆರ್.ಮುರುಳೀಧರನ್, ಸಹಕಾರ ಸಂಘಗಳ ಉಪನಿಬಂಧಕರು ಪುದುಚೇರಿ ಇವರು ಕ್ರೋಡೀಕರಿಸಿದ ಮಾಹಿತಿ ಹಕ್ಕು ಕಾಯಿದೆ ಪುಸ್ತಕ ಮತ್ತು ತೀರ್ಪುಗಳ ಆಂಗ್ಲ ಭಾಷೆಯ ಸಾರಾಂಶ.

ಈ ಪ್ರಕಟಣೆಗೆ ಸಂಯುಕ್ತ ಸಹಕಾರಿ ತೋರಿದ ಆಸಕ್ತಿ ಬಹುಮುಖ್ಯ. ಅದಕ್ಕಾಗಿ ನಾನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ನನ್ನ ಅಭಿಮಾನದ ನಮನ. ಇದರ ಜೊತೆಗೆ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಅವರಿಗೆ ನನ್ನ ನಮನ. ಈ ಪ್ರಕಟಣೆಯಿಂದ ಸಹಕಾರಿಗಳಿಗೆ ಉಪಯೋಗವಾಗುವುದಾದರೆ ಅದರಿಂದ ಸಂತೋಷಪಡುವ ವ್ಯಕ್ತಿ ನಾನು.

**– ಸಿ.ಎನ್. ಪರಶಿವಮೂರ್ತಿ**

# ಪರಿವಿಡಿ

1. ಮೊದಲ ಮಾತು

2. ಈ ಕಾಯಿದೆ ಯಾರಿಗೆ ಅನ್ವಯವಾಗುತ್ತದೆ.

3. ಮಾಹಿತಿ ಕಾಯಿದೆಯಡಿ ಸಾರ್ವಜನಿಕ ಪ್ರಾಧಿಕಾರದ ಭಾದ್ಯತೆಗಳು

4. ಸಾರ್ವಜನಿಕ ಸಂಪರ್ಕಾಧಿಕಾರಿಗೆ ಸಂಬಂಧಪಟ್ಟ ತೀರ್ಪುಗಳು

5. ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ನೀಡಲು ವಿನಾಯ್ತಿ ಇರುವ ವಿಷಯಗಳು

6. ಸಾರ್ವಜನಿಕ ಪ್ರಾಧಿಕಾರದ ದಾಖಲೆಯಲ್ಲಿರುವ ಮಾಹಿತಿಯನ್ನು ನೀಡುವ ಬಗ್ಗೆ.

7. ಮಾಹಿತಿ ನೀಡಲು ಅನುಸರಿಸಬೇಕಾದ ನೀತಿ

8. ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗ

9. ಆಯೋಗದ ಅಧಿಕಾರಗಳು ಮತ್ತು ಅಧಿಕಾರದ ವ್ಯಾಪ್ತಿ ಬಗ್ಗೆ ನ್ಯಾಯಾಲಯಗಳು ನೀಡಿದ ತೀರ್ಪುಗಳ ಸಾರಾಂಶ

10. ಪಿರ್ಯಾದು/ಅರ್ಜಿಗಳು ಮತ್ತು ಮೇಲ್ಮನವಿ

11. ದಂಡಗಳು & ದಂಡ ವಿಧಿಸುವ ಬಗ್ಗೆ ನ್ಯಾಯಾಲಯಗಳ ತೀರ್ಪಿನ ಸಾರಾಂಶ :

12. ಸಹಕಾರಿ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಮಾಹಿತಿ ಹಕ್ಕು ಕಾಯಿದೆಯಲ್ಲಿ ಉಚ್ಚನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯಗಳು ನೀಡಿದ ತೀರ್ಪುಗಳ ಸಾರಾಂಶ :

# ಸಹಕಾರ ಕಾಯಿದೆಗಳಿಗೆ ಸಂಬಂಧಪಟ್ಟ ಮಾಹಿತಿ ಹಕ್ಕು ಕಾಯಿದೆಯಲ್ಲಿನ ನ್ಯಾಯಾಲಯಗಳ ತೀರ್ಪಿನ ಸಾರಂಶಗಳು

ಕೇಂದ್ರ ಸರ್ಕಾರ ಸಾರ್ವಜನಿಕರಿಗೆ, ಸರ್ಕಾರಿ ಇಲಾಖೆ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿನ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಿ "ಮಾಹಿತಿ ಹಕ್ಕು ಕಾಯಿದೆ 2005" ಎಂದು ಒಂದು ಕಾಯಿದೆ ರಚಿಸಿದೆ. ಈ ಕಾಯಿದೆಯಡಿ ಪ್ರತಿಯೊಬ್ಬ ಭಾರತದ ಪ್ರಜೆ "ಸಾರ್ವಜನಿಕ ಪ್ರಾಧಿಕಾರ" ಗಳಿಂದ ಮಾಹಿತಿ ಕೇಳಲು ಮತ್ತು ಪಡೆಯಲು ಅಧಿಕಾರ ನೀಡಲಾಗಿದೆ.

ಈ ಕಾಯಿದೆಯಲ್ಲಿ ಪ್ರಮುಖವಾಗಿ ತಿಳಿಯಬೇಕಾದ ಪದವೆಂದರೆ "ಸಾರ್ವಜನಿಕ ಪ್ರಾಧಿಕಾರ" ಎಂದು ವಿವರಿಸಿದೆ. ಅಂದರೆ ಸರ್ಕಾರದ ಎಲ್ಲಾ ಅಂಗಗಳೂ ಇದರ ವ್ಯಾಪ್ತಿಗೆ ಬರುತ್ತದೆ. ಇದರಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಸೆರುತ್ತದೆ. ಇದರ ಜೊತೆಗೆ ಲೋಕ ಸಭೆ/ರಾಜ್ಯ ಸಭೆ/ವಿಧಾನ ಮಂಡಳಿ/ವಿಧಾನ ಪರಿಶತ್‌ಗಳು ಸೃಷ್ಟಿ ಮಾಡಿದ ಎಲ್ಲಾ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳಾಗುತ್ತವೆ. ಸಾರ್ವಜನಿಕ ಸಂಸ್ಥೆಗಳು ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಧನ ಪಡೆದಿದ್ದರೂ, ಅವು ಈ ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಸೇರುತ್ತದೆ.

ಈ ಕಾಯಿದೆಯಲ್ಲಿ ಕೆಲವು ವಿನಾಯ್ತಿಗಳನ್ನು ನೀಡಿದೆ. ಇದರಲ್ಲಿ ದೇಶದ ಭದ್ರತೆ ಮತ್ತು ಗುಪ್ತಚರ ಇಲಾಖೆಗೆ ಸಂಬಂಧಪಟ್ಟ ಇಲಾಖೆಗಳನ್ನು ಈ ಕಾಯಿದೆ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಯಾವ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತವೆ ಎಂಬುದನ್ನು ಅಧಿಸೂಚನೆ ಮೂಲಕ ಪ್ರಕಟಿಸಲು ಸರ್ಕಾರಕ್ಕೆ ಅಧಿಕಾರ ನೀಡಲಾಗಿದೆ. ಮತ್ತು ಅದಕ್ಕೆ ಪೂರಕವಾಗಿ ಈ ಕೆಳಕಂಡವುಗಳನ್ನು ಸೇರಿಸಿ ಎಂದು ವಿವರಿಸಿದೆ. ಅವುಗಳೆಂದರೆ ಸರ್ಕಾರ ಒಡೆತನದ, ನಿಯಂತ್ರಿಸುವ, ಹೆಚ್ಚು ಪ್ರಮಾಣದ ಹಣಕಾಸು ನೀಡಿರುವ ಸಂಸ್ಥೆಗಳು, ಸರ್ಕಾರದಿಂದ ದೊಡ್ಡ ಪ್ರಮಾಣದ ಹಣ ಸಹಾಯ ಪಡೆದ ಸಂಸ್ಥೆಗಳು ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಬಂಧಪಟ್ಟ ಸರ್ಕಾರದ ಪ್ರಾಧಿಕಾರಗಳಿಂದ ಹಣ ಪಡೆದಿರುವ ಸಂಸ್ಥೆಗಳು, ಈ ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತವೆಂದು ಉಲ್ಲೇಖಿಸಿದೆ. ಅಂದರೆ ಬಹುತೇಕ ಸರ್ಕಾರದ ಇಲಾಖೆಗಳು, ಸಂಘ ಸಂಸ್ಥೆಗಳ ಕಛೇರಿಗಳು, ಸರ್ಕಾರಿ ಸೌಮ್ಯದ ಕೈಗಾರಿಕೆಗಳು, ಸ್ಥಳೀಯ ಸಂಸ್ಥೆಗಳು, ಮಂಡಳಿಗಳು, ಆಯೋಗಗಳು, ಪಾಲಿಕೆಗಳು, ವಿಶ್ವವಿದ್ಯಾಲಯಗಳು, ಜಿಲ್ಲಾ ಪಂಚಾಯಿತ್, ಕೆಳಮಟ್ಟದ ಪಂಚಾಯತ್ ಸಂಸ್ಥೆಗಳು ಇದರ ವ್ಯಾಪ್ತಿಯಲ್ಲಿ ಸೇರುತ್ತವೆ.

ಈ ಕಿರು ಹೊತ್ತಿಗೆಯ ಉದ್ದೇಶ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಮಾಹಿತಿ ಹಕ್ಕು ಕಾಯಿದೆಗಳಡಿ ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯಗಳು ನೀಡಿದ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ನೀಡುವ ಪ್ರಯತ್ನ. ಇದಕ್ಕೆ ಪ್ರೇರಣೆ ಶ್ರೀ ಆರ್.ಮುರುಳೀಧರನ್, ಸಹಕಾರ ಸಂಘಗಳ ಉಪನಿಬಂಧಕರು ಪುದುಚೇರಿ ಇವರು ಕ್ರೋಢೀಕರಿಸಿದ ಮಾಹಿತಿ ಹಕ್ಕು ಕಾಯಿದೆ ಪುಸ್ತಕ ಮತ್ತು ತೀರ್ಪುಗಳ ಆಂಗ್ಲ ಭಾಷೆಯ ಸಾರಾಂಶ.

## I <u>ಈ ಕಾಯಿದೆ ಯಾರಿಗೆ ಅನ್ವಯವಾಗುತ್ತದೆ</u>

1) ಸರ್ಕಾರದಿಂದ ಸಹಾಯ ಧನ ಪಡೆದ ಖಾಸಗಿ ವಿದ್ಯಾ ಸಂಸ್ಥೆಗಳಿಗೆ, ಈ ಕಾಯಿದೆ ಅನ್ವಯಿಸುತ್ತದೆ. ತಮಿಳ್‌ನಾಡಿನ ಇರೋಡ್ ಜಿಲ್ಲೆ ಹೈಯರ್ ಸೆಕೆಂಡರಿ ಶಾಲೆ ಮತ್ತು ಕೇಂದ್ರ ಸರ್ಕಾರ ಎಂಬ ಪ್ರಕರಣದಲ್ಲಿ ಮದ್ರಾಸ್ ಉಚ್ಚನ್ಯಾಯಾಲಯ ಈ ಕೆಳಕಂಡ ತೀರ್ಪು ನೀಡಿದೆ. ಅರ್ಜಿದಾರ ಶಾಲೆ

ಸರ್ಕಾರದಿಂದ ಸಾಕಷ್ಟು ಆರ್ಥಿಕ ಸಹಾಯ ಪಡೆದಿದೆ ಮತ್ತು ಈ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆಗೆ ಬರುತ್ತಿದೆ ಎಂದು ತೀರ್ಪಿತ್ತಿದೆ. ಉಪಾದ್ಯಾಯರ ಪೂರ್ಣ ಸಂಬಳ (ಶೇ.100) ಸರ್ಕಾರದಿಂದ ಪಡೆಯುತ್ತಿದೆ. ಆದ್ದರಿಂದ ಈ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಸೇರುತ್ತದೆ. (2007) 3 MLJ 77, 2009 (1) ID 102

2) ಕೇರಳದ ವರ್ಗೀಸ್ ಮತ್ತು ಎಂಜಿ ವಿಶ್ವವಿದ್ಯಾಲಯ ಪ್ರಕರಣದಲ್ಲಿ, ಒಂದು ಸಂಸ್ಥೆಯನ್ನು ಸಾರ್ವಜನಿಕ ಪ್ರಾಧಿಕಾರ ಎಂದು ನಿರ್ಧರಿಸಬೇಕಾದರೆ ಕಕ್ಷಿದಾರರು ನಿರ್ವಹಿಸುವ ಕೆಲಸ ಮತ್ತು ಸಾರ್ವಜನಿಕರ ಹಕ್ಕು ನಿರ್ವಹಣೆ ಮಧ್ಯ ಸಂಘರ್ಷವೇರ್ಪಡದಂತೆ – ಮಾಹಿತಿ ನೀಡಲು ಸಾದ್ಯವೇ ಎಂದು ಒಂದು ವಿದ್ಯಾಲಯವನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯ ಆರ್ಥಿಕ ಸಹಾಯ ಮತ್ತು ನಿಯಂತ್ರಿಸುವ ಅಧಿಕಾರ ಹೊಂದಿದ್ದು, ಅದು ಸಾರ್ವಜನಿಕ ಸಂಸ್ಥೆಯಾಗುತ್ತದೆ. ಮಾಹಿತಿ ಕೇಳುತ್ತಿರುವುದು ವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗೆ ಸಂಬಂಧಪಟ್ಟಂತೆ ಮತ್ತು ಆಡಳಿತದ ಖಾಸಗಿ ವ್ಯವಹಾರದ ಬಗ್ಗೆಯಲ್ಲ, ಆದ್ದರಿಂದ ಈ ವಿದ್ಯಾಲಯ ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತಿದೆ. (2007(3) KLT 486)

3) ಕೇರಳ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಶ್ರೀ ನಾರಾಯಣ ವಿದ್ಯಾಲಯ ಮತ್ತು ಕೇರಳ ಸರ್ಕಾರ ಎಂಬ ಪ್ರಕರಣದಲ್ಲಿ ಈ ವಿದ್ಯಾಲಯ ಸರ್ಕಾರದ ಸಹಾಯ ಧನ ಪಡೆಯುತ್ತಿದ್ದು, ಸರ್ಕಾರದ ನಿಯಂತ್ರಣದಲ್ಲಿದೆ. ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗ ದೊಡ್ಡ ಪ್ರಮಾಣದ ಹಣಕಾಸು ನೆರವು ಪಡೆಯುತ್ತಿದ್ದು, ಈಗಾಗಲೇ 2007(3) KLT 486 ನ ತೀರ್ಪಿನಂತೆ ಅದೇ ತೀರ್ಮಾನವನ್ನು ಅನುಸರಿಸಿ, ಈ ವಿದ್ಯಾಲಯ ಸಾರ್ವಜನಿಕ ಪ್ರಾಧಿಕಾರ ಮತ್ತು ಮಾಹಿತಿ ಕಾಯಿದೆಯಡಿ ಬರುತ್ತಿದೆಂದು ತೀರ್ಪಿತ್ತಿದೆ. (2010 (1) KLT 691)

4) ಈ ಮೇಲ್ಕಂಡ ತೀರ್ಮಾನ ನೀಡುವಾಗ, ಕೇರಳ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ – ಈ ಕೆಳಕಂಡ ತೀರ್ಮಾನಗಳನ್ನು ಉಲ್ಲೇಖಿಸಿದೆ. AIR 2008 Pand H 117/2008 (2) ID 382/AIR 2008 Pand H 101/ AIR 2008 All 92/2008 (2) ID 179 ಗಳನ್ನು ಅನುಸರಿಸಿದೆ.

5) ಮಾಹಿತಿ ಹಕ್ಕು ಕಾಯಿದೆ 2005 ರಿಂದ ಜಾರಿಗೆ ಬಂದಿದ್ದು ಅದಕ್ಕೆ ಪೂರ್ವದ ಮಾಹಿತಿ ಕೇಳಿದರೆ ಕೊಡುವವಶ್ಯಕತೆ ಇಲ್ಲವೆಂಬವಾದವನ್ನು ಮದ್ರಾಸ್ ಉಚ್ಚನ್ಯಾಯಾಲಯ ಕಲಂ.2 (J) ಮತ್ತು ಕಲಂ.3 ರನ್ವಯ 2005ರ ಪೂರ್ವದ ಮಾಹಿತಿ ಕೇಳಬಾರದೆಂದು ತಿಳಿಯತಕ್ಕದ್ದಲ್ಲ. ಒಂದು ಕಾಯಿದೆಯುನ್ನು ಹಿಂದಿನ ದಿನಾಂಕದಿಂದ ರೂಪಿಸಬಹುದು. W.P.(MD) No.5857/2009/31.08.2010

6) ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಸರ್ಕಾರದಿಂದ ಸಾಕಷ್ಟು ಹಣಕಾಸು ನೆರವು ಪಡೆಯುತ್ತಿದ್ದು, ನಿಯಂತ್ರಣ ಕ್ಕೊಳಪಟ್ಟಿದ್ದಾರೆ. ಅದು ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆ ಎಂಬ ಏಕ ಸದಸ್ಯ ಪೀಠದ ಆದೇಶವನ್ನು ವಿಭಾಗೀಯ ಪೀಠ ಎತ್ತಿ ಹಿಡಿಯಿತು. 2010 (1) ಖಆ 454, ಂಖಖ 2010 (ಫಔಅ) 911

7) ಒಂದು ವಿದ್ಯಾ ಸಂಸ್ಥೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸಲು ಅಧಿಸೂಚನೆ ಹೊರಡಿಸಿದ್ದನ್ನು, ಸರ್ಕಾರದಿಂದ ಖಾಸಗಿ ಸಂಸ್ಥೆ ಯಾವುದೇ ಹಣ ಸಹಾಯ ಪಡೆಯುತ್ತಿಲ್ಲವೆಂದು ಮತ್ತು ಈ ಅಧಿಸೂಚನೆ ಸರ್ಕಾರೇತರ ವಿದ್ಯಾಸಂಸ್ಥೆಗಳಿಗೆ ಉದ್ದೇಶಿಸಿದ್ದು ಎಂದು ವಾದಿಸಿದ್ದಕ್ಕೆ, ಮುಂಬೈ ಉಚ್ಚನ್ಯಾಯಾಲಯ, ಯಾವುದೇ ವಿದ್ಯಾಲಯ ಸರ್ಕಾರದಿಂದ ಗ್ರ್ಯಾಂಟ್ ಇನ್ ಎಯಿಡ್ ಪಡೆಯುತ್ತಿದ್ದರೆ, (ಪ್ರತ್ಯಕ್ಷ ಅಥವಾ ಪರೋಕ್ಷ) ಅದು ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತದೆಂದು ವಿಭಾಗೀಯ ಪೀಠ ಆದೇಶಿಸಿತು. AIR 2011 (NOC) 137, 2011 (1) ID 470

8) ತಮಿಳ್‌ನಾಡು ನ್ಯೂಸ್ ಪ್ರಿಂಟ್ ಮತ್ತು ಪೇಪರ್ ಲಿಮಿಟೆಡ್ ಸಂಸ್ಥೆ ಒಂದು ಸಾರ್ವಜನಿಕ ಸಂಸ್ಥೆಯಾಗಿದ್ದು, ಈ ಸಂಸ್ಥೆಯ ಮೇಲೆ ರಾಜ್ಯ ಸರ್ಕಾರ, ಬಹುಮತದ ಪಾಲುದಾರರಾಗದೇ ಇದ್ದರೂ, ರಾಜ್ಯ ಸರ್ಕಾರ ಈ ಸಂಸ್ಥೆಯನ್ನು ನಿಯಂತ್ರಿಸುತ್ತಿದೆ ಎಂಬ ಕಾರಣದಿಂದ, ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತಿದೆಂದು ಆದೇಶಿಸಿತು. CDJ 2008 MHC 1871, (2008) 5 MLJ 200, 2009 (1) ID 7

9) ತಮಿಳ್‌ನಾಡು ರಸ್ತೆ ಅಭಿವೃದ್ಧಿ ಸಂಸ್ಥೆ ಒಂದು ಸಾರ್ವಜನಿಕ ಪ್ರಾಧಿಕಾರವೇ ಎಂಬ ಅಂಶವನ್ನು ಪರಿಶೀಲಿಸುವಾಗ, ಅದ್ದು ಕಲಂ.2(ച) ಒಂದು ಸಾರ್ವಜನಿಕ ಪ್ರಾಧಿಕಾರ, ಆದ್ದರಿಂದ ಅದು ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತದೆಂದು ಆದೇಶಿಸಿತು. ಈ ಸಂಸ್ಥೆಗೆ ಸರ್ಕಾರದಿಂದ ದೊಡ್ಡ ಪ್ರಮಾಣದ ಸಹಾಯಧನ ನೀಡದೇ ಇದ್ದರೂ, ಅದನ್ನು ಸರ್ಕಾರದ ಸಹಾಯಧನ ಪಡೆಯುತ್ತಿದೆ ಎಂಬ ಕಾರಣದಿಂದ ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆ ಎಂದು ತೀರ್ಪಿತ್ತಿದೆ. (2008) 8 MLJ 47

10) ಈ ಮೇಲ್ಕಂಡ ತೀರ್ಪನ್ನು ವಿಭಾಗೀಯ ಪೀಠದಲ್ಲಿ ಪ್ರಶ್ನಿಸಿದಾಗ, ಪೀಠ ಗಮನಿಸಿದ ಅಂಶವೆಂದರೆ, ಈ ಸಂಸ್ಥೆಯ ಆಡಳಿತ ಮಂಡಳಿ ರಚನೆಯನ್ನು ಗಮನಿಸಿದಾಗ, ರಾಜ್ಯ ಸರ್ಕಾರದ ನೇರ ನಿಯಂತ್ರಣದಲ್ಲಿ ಬರುತ್ತಿದ್ದು, ಇದು ಒಂದು ಸಾರ್ವಜನಿಕ ಪ್ರಾಧಿಕಾರ ಎಂದು ಆದೇಶಿಸಿತು. 2008 3 LW 904, (2008) 6 MLJ 737, 2009(1) ID 85

11) ಕಲಂ 2 (b) ರಡಿ ಒಂದು ಕಂಪನಿ ಸಾರ್ವಜನಿಕ ಪ್ರಾಧಿಕಾರ ಎಂದು ಅರ್ಥೈಸಿದಾಗ ಅದರಲ್ಲಿ ಮತ್ತೆ ಸೇರುತ್ತದೆ. (INCLUDES) ಎಂಬ ಪದ ಪ್ರಯೋಗ ಉಪಯೋಗಿಸಿರುವುದರಿಂದ "ಸಾರ್ವಜನಿಕ ಪ್ರಾಧಿಕಾರ" ಎಂದರೆ ಹಲವಾರು ಸಂಸ್ಥೆಗಳನ್ನು ಸೇರಿಸಬಹುದಾಗಿದೆ. ಏಕ ಸದಸ್ಯ ಪೀಠದ ಆದೇಶವನ್ನು ವಿಭಾಗೀಯ ಪೀಠ ದೃಡೀಕರಿಸಿತು. CDJ 2008 MHC 1871, 2008 5 MLJ 200, 2009 (1) ID 7

12) ಜೆಟ್ ಏರ್‌ವೇಸ್ ಸಂಸ್ಥೆ ಒಂದು ಸಾರ್ವಜನಿಕ ಪ್ರಾಧಿಕಾರವಲ್ಲವೆಂದು ಆಂದ್ರಪ್ರದೇಶ ಉಚ್ಚನ್ಯಾಯಾಲಯ ಆದೇಶಿಸಿತ್ತು. ಜೆಟ್‌ಏರ್‌ವೇಸ್ ಸಂಸ್ಥೆ ವಿಮಾನಯಾನ ನಿಯಂತ್ರಿಸುವ ಪ್ರಾಧಿಕಾರದಿಂದ ಲೈಸನ್ಸ್ ಪಡೆದಿದ್ದರೂ, ಅದು ಸೀಮಿತ ಉದ್ದೇಶಕ್ಕೆ ಮಾತ್ರ ಆದ್ದರಿಂದ ಜೆಟ್‌ಏರ್‌ವೇಸ್ ಸಂಸ್ಥೆ ಸಾರ್ವಜನಿಕ ಪ್ರಾಧಿಕಾರವಲ್ಲ. WP 6390/2010 / 16.04.2010

13) ಮಾಹಿತಿ ಹಕ್ಕು ಕಾಯಿದೆಯಲ್ಲಿನ ಅರ್ಥ ವಿವರಣೆಯಲ್ಲಿ ವಿದ್ಯಾ ಸಂಸ್ಥೆಗಳು ಸರ್ಕಾರದಿಂದ ಧನ

ಸಹಾಯ ಪಡೆಯುತ್ತಿದ್ದರೆ, ಅದು "ಸಾರ್ವಜನಿಕ ಪ್ರಾಧಿಕಾರ" ವಾಗುತ್ತದೆ. AIR 2008 P and H 117, 2008 (2) ID 382

14) ಸರ್ಕಾರದಿಂದ 95% ರಷ್ಟು ಸಹಾಯ ಧನ ಪಡೆಯುತ್ತಿರುವ ಒಂದು ವಿದ್ಯಾ ಸಂಸ್ಥೆ, ಒಂದು ಸಾರ್ವಜನಿಕ ಪ್ರಾಧಿಕಾರ ಎಂದು, ಇದನ್ನು ಕಲಂ 2 (b) ನಡಿ ವ್ಯಾಪ್ತಿಗೆ ಬರುತ್ತದೆ. WP 453/2008 / 14.01.2008

15) ಒಂದು ಸಂಸ್ಥೆಯನ್ನು ಸರ್ಕಾರ ನಿಯಂತ್ರಿಸುತ್ತಿದ್ದ ಮತ್ತು ಅದಕ್ಕೆ ಹಣ ಸಹಾಯ ನೀಡುತ್ತಿದ್ದರೆ – ಅದು ಖಾಸಗಿ ಸಂಸ್ಥೆಯಾಗಿದ್ದರೂ ಅದು ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತದೆ. 2008 (NOC) 2641 (All), 2008 (5) ALJ 88, 2008 (2) ID 224

16) ಖಾಸಗಿ ಮತ್ತು ಸರ್ಕಾರೇತರ ವಿದ್ಯಾ ಸಂಸ್ಥೆಗಳು ಉತ್ತರಪ್ರದೇಶ ಮಧ್ಯಂತರ ವಿದ್ಯಾ ಕಾಯಿದೆ ಮತ್ತು ಸಂಬಳ ವಿತರಣ ಕಾಯಿದೆಯಡಿ ಈಗಾಗಲೇ ತೀರ್ಮಾನಿಸಿದ ತೀರ್ಪ AIR 2009 All 7/2009 (1) ID 223 ಅನ್ವಯವಾಗುತ್ತದೆ. ಇದು ಹಿಂದಿನ ತೀರ್ಮಾನಗಳಿಗೆ ಅನ್ವಯವಾಗುವಂತೆ ಸಾರ್ವಜನಿಕ ಪ್ರಾಧಿಕಾರ. AIR 2008 All 92, 2008 (2) ID 179

17) ಶೇಕಡ 100 ರಷ್ಟು ಹಣ ಸಹಾಯ ನೀಡದೇ ಇದ್ದರೂ ಸಾಕಷ್ಟು ಹಣ ಪಾವತಿಸುತ್ತಿದ್ದರೆ. ಅದು ಒಂದು "ಸಾರ್ವಜನಿಕ ಪ್ರಾಧಿಕಾರ" ವಾಗುತ್ತದೆ. 2009 (1) ID 312, AIR 2009 All 36

18) ಕರ್ನಾಟಕ ಸಂಘಗಳ ಕಾಯಿದೆ 1960 ರಡಿ ನೋಂದಾಯಿಸಿದ ಸಂಘ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. ಲೆಕ್ಕ ಪತ್ರಗಳ ಮತ್ತು ಚುನಾವಣೆಯನ್ನು ನಿಬಂಧನೆಗಳಂತೆ ನಡೆಸಿದರೂ, ಸರ್ಕಾರದ ನಿಯಂತ್ರಣ ಇರುವುದು, ಅದರ ಕಾರ್ಯಕ್ರಮಗಳ ಬಗ್ಗೆ ಮಾತ್ರ. ಅಂದರೆ ಹಣ ದುರುಪವಾಗದಂತೆ ಕ್ರಮ ವಿಡುವುದೇ ಉದ್ದೇಶ – ಆದ್ದರಿಂದ ಕರ್ನಾಟಕ ಸಂಘಗಳ ಕಾಯಿದೆಯಲ್ಲಿ ನೋಂದಾವಣೆಯಾದ ಸಂಘ, ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರುವುದಿಲ್ಲ. AIR 2008 Kar 149, 2008 (2) ID 221

19) ಬೆಂಗಳೂರು ವಿಶ್ವವಿದ್ಯಾಲಯ ಮಾಹಿತಿ ಹಕ್ಕು ಕಾಯಿದೆಯಡಿ, ಒಂದು ಸಾರ್ವಜನಿಕ ಪ್ರಾಧಿಕಾರ. 2008 (2) ID 394

20) ದತ್ತ ಪ್ರಸಾದ್ ಗೃಹ ನಿರ್ಮಾಣ ಸಹಕಾರ ಸಂಘವು ಸಾರ್ವಜನಿಕ ಪ್ರಾಧಿಕಾರವಲ್ಲ. ನಿಬಂಧಕರು ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಯಲ್ಲಿ ಎಲ್ಲಾ ಸಹಕಾರ ಸಂಘಗಳು ಬರುತ್ತವೆಂದು ನೀಡಿದ ಆದೇಶ ಸರಿಯಲ್ಲ ಮತ್ತು ಸಹಕಾರ ಸಂಘಗಳ ಕಾಯಿದೆಯಲ್ಲಿ ಸಹಕಾರ ಸಂಘಗಳ ನೌಕರರು ಸಾರ್ವಜನಿಕ ಸೇವಕರು ಮತ್ತು ಕರ್ನಾಟಕ ಲೋಕಾಯುಕ್ತ ಕಾಯಿದೆಯಲ್ಲಿ ಸಹಕಾರ ಸಂಘಗಳು ಸೇರಿವೆ ಎಂಬ ಕಾರಣದಿಂದ, ಒಂದು ಸಹಕಾರ ಸಂಘ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ ಎಂದು ಆದೇಶಿಸಿತು ಮತ್ತು ಶ್ರೇಷ್ಠ ನ್ಯಾಯಾಲಯ AIR 205 SC 2677 ಮತ್ತು ಕೇರಳ ರಾಜ್ಯ ಉಚ್ಚನ್ಯಾಯಾಲಯ AIR 1988 Kar 75 (FB) ತೀರ್ಪಿನನ್ವಯ, ಈ ಗೃಹ ನಿರ್ಮಾಣ ಸಹಕಾರ ಸಂಘ ಮಾಹಿತಿ

ಹಕ್ಕು ಕಾಯಿದೆಯಡಿ ಬರುವುದಿಲ್ಲವೆಂದು ತೀರ್ಮಾನಿಸಿತು. AIR 2009 Kar 1, 2009 (1) ID 323, 2008 (4) KCCR 2357

21) ಬಿದರ್ ಜಿಲ್ಲಾ ಸಹಕಾರ ಬ್ಯಾಂಕ್ ಸರ್ಕಾರದಿಂದ ನೀಡಿದ್ದ ಪಾಲು ಬಂಡವಾಳದ ಪೂರ್ಣ ಹಣವನ್ನು ವಾಪಸ್ ಮಾಡಿದ್ದು – ರಾಜ್ಯ ಸರ್ಕಾರದಿಂದ ಸಾಕಷ್ಟು ಪ್ರಮಾಣದ ಸಹಾಯ ಧನ ಪಡೆದ ವ್ಯಾಪ್ತಿಗೆ ಬರುವುದಿಲ್ಲ. ನಿಬಂಧಕರು ಸಹಕಾರ ಸಂಸ್ಥೆಗಳ ಮೇಲ್ವಿಚಾರಣ, ನಿಯಂತ್ರಣ ಮಾಡುತ್ತಾರೆ ಎಂಬ ಆಧಾರದ ಮೇಲೆ ಅದು ಮಾಹಿತಿ ಹಕ್ಕು ಕಾಯಿದೆ ಕಲಂ.2(b) ಮತ್ತು (d) ನಡಿ ಪ್ರಾಧಿಕಾರವಾಗುವುದಿಲ್ಲ. ಆದ್ದರಿಂದ ನಿಬಂಧಕರ ಆದೇಶವನ್ನು ಕಿತ್ತು ಹಾಕಿತು. AIR 2009 (NOC) 1049 (Kar), 2009 91) ID 138

22) ಸಹಕಾರ ಬ್ಯಾಂಕ್ ಒಂದು ಸಾರ್ವಜನಿಕ ಪ್ರಾಧಿಕಾರವಲ್ಲ (ಕಲಂ 2 (b) ಅಡಿ) ಆದರಿಂದ ಮಾಹಿತಿ ಹಕ್ಕು ಆಯುಕ್ತರು ಮಾಹಿತಿ ನೀಡಲು ಸಹಕಾರ ಬ್ಯಾಂಕ್‌ಗೆ ನಿರ್ದೇಶನ ನೀಡಲಾಗದು. AIR 2009 Bom 75, 2009 (3) KLT SN 6, 2009 (2) ID 156

23) ಎಲ್ಲಾ ಸಹಕಾರ ಸಂಘಗಳ ಸಾರ್ವಜನಿಕ ಪ್ರಾಧಿಕಾರಗಳೆಂದು ತೀರ್ಮಾನಿಸತಕ್ಕದ್ದಲ್ಲ. ಯಾವುದೇ ಸಹಕಾರ ಸಂಘಕ್ಕೆ ಸಾಕಷ್ಟು ಹಣ ಸಹಾಯ ನೀಡಿದ್ದರೆ ಮಾತ್ರ (ಪ್ರತ್ಯಕ್ಷ/ಪರೋಕ್ಷ) ಅದು ಸಾರ್ವಜನಿಕ ಪ್ರಾಧಿಕಾರ ವಾಗುತ್ತದೆ. AIR 2010 AP 127, 2011 (1) ID 11

24) ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ನಿಯಂತ್ರಣಕ್ಕೆ ಬಹಳಷ್ಟು ಅವಕಾಶ ನೀಡಲಾಗಿದೆ. ನಿಬಂಧಕರು ಒಂದು ಸಾರ್ವಜನಿಕ ಪ್ರಾಧಿಕಾರ. ಈ ಪ್ರಾಧಿಕಾರಕ್ಕೆ ಯಾವುದೇ ಮಾಹಿತಿ ಪಡೆಯಲು ಅಧಿಕಾರ ಇದೆಯೋ, – ಖಾಸಗಿ ಸಂಸ್ಥೆಯ ಮಾಹಿತಿ – ಅಂದರೆ ಸಹಕಾರ ಸಂಘದ ಮಾಹಿತಿ – ಅಂತಹ ಸಂಸ್ಥೆ ಮಾಹಿತಿ ನೀಡುವ ಜವಾಬ್ದಾರಿ ಇದೆ. (ಉಲ್ಲೇಖವಿಲ್ಲ)

25) ಒಂದು ಗೃಹ ನಿರ್ಮಾಣ ಸಹಕಾರ ಸಂಘವನ್ನು ಸಾರ್ವಜನಿಕ ಪ್ರಾಧಿಕಾರವೆಂದು ತೀರ್ಮಾನಿಸತಕ್ಕದ್ದಲ್ಲ. ಅರ್ಜಿದಾರ ಸಹಕಾರ ಸಂಘಕ್ಕೆ ಹಣಕಾಸು ನೆರವು ನೀಡಲಾಗಿದೆ ಮತ್ತು ನಿಯಂತ್ರಣದಲ್ಲಿದೆ ಎಂದು ದೃಡೀಕರಿಸದಿದ್ದರೆ, ಅದು ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. ದತ್ತಪ್ರಸಾದ್ ಗೃಹ ನಿರ್ಮಾಣ ಸಹಕಾರ ಸಂಘದ ಪ್ರಕರಣ ಅನ್ವಯಿಸುತ್ತದೆ. AIR 2009 Kar1, 2009 (1) ID 323, 2008 94) KCCR 2357

26) ರೈಲ್ವೆ ಉಳಿತಾಯ ಮತ್ತು ಸಾಲ ನೀಡುವ ಸಹಕಾರ ಸಂಘದ ನಿರ್ದೇಶಕರಿಗೆ ವಿನಾಯ್ತಿ, ಸಂದರ್ಭಿಕ ರಜೆ, ಮತ್ತು ರೈಲ್ವೆ ನಿಯಮಗಳನ್ನು ಅನುಸರಿಸುತ್ತಿದ್ದರೆ, ಅದು ಸರ್ಕಾರ ನೀಡಿದ ಸಹಾಯ ಧನವಾಗುವುದಿಲ್ಲ. ಈ ಮೇಲ್ಕಂಡ ಸೌಲತ್ತುಗಳನ್ನು ವ್ಯಕ್ತಿಗಳಿಗೆ, ಅಂದರೆ ಪದಾಧಿಕಾರಿಗಳಿಗೆ ಮತ್ತು ನೌಕರರಿಗೆ ನೀಡಿದ್ದ ಸಹಕಾರ ಸಂಘಕ್ಕಲ್ಲ. ಈ ಸಹಾಯ ನೀಡಿದ್ದರೂ, ಅದು ಅಷ್ಟೇ ದೊಡ್ಡ ಪ್ರಮಾಣದ್ದಲ್ಲ. ಅದು ತೃಣ ಮಾತ್ರ. ಮಾದರಿ ಉಪನಿಯಮ ಅಳವಡಿಸಿಕೊಂಡಿದೆ ಎಂಬ ಕಾರಣವೂ ಸಮರ್ಥನೀಯವಲ್ಲ ಬಹು ರಾಜ್ಯ ಸಹಕಾರ ಕಾಯಿದೆ ಅಡಿ, ಈ ಎಲ್ಲಾ ಸೌಲತ್ತುಗಳನ್ನು ಪರಿಗಣಿಸಿದರೂ ಅದು ಸಾರ್ವಜನಿಕ ಪ್ರಾಧಿಕಾರ ವಾಗುವುದಿಲ್ಲ. ಆದ್ದರಿಂದ ಕೇಂದ್ರ ಮಾಹಿತಿ

ಆಯುಕ್ತರು ನೀಡಿದ ಸಾರ್ವಜನಿಕ ಪ್ರಾಧಿಕಾರ ಎಂದು ತೀರ್ಮಾನ ರದ್ದು ಪಡಿಸಲಾಯಿತು. 2012 (1) ID 280, AIR 2012 Delhi 112.

27) ಒಂದು ಸಹಕಾರಿ ಬ್ಯಾಂಕ್ ಸಾರ್ವಜನಕ ಪ್ರಾಧಿಕರವಾಗುವುದಿಲ್ಲ ಎಂದು ಬಾಂಬೆ ಉಚ್ಚನ್ಯಾಯಾಲಯ ತೀರ್ಮಾನಿಸಿದ್ದು. ಇದಕ್ಕೆ ಪೂರಕವಾಗಿ ಮಾಹಿತಿ ಹಕ್ಕು ಕಾಯಿದೆ ಕಲಂ.2(ಓ) ಅನ್ವಯ ಸಾರ್ವಜನಿಕ ಪ್ರಾಧಿಕಾರವಲ್ಲ. ದಾಖಲೆಗಳನ್ನು ಪರಿಶೀಲಿಸಲಾಗಿ, ಸರ್ಕಾರ ಈ ಸಂಸ್ಥೆಯ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನಿಯಂತ್ರಣ ಏರುತ್ತಿದ್ದೆ ಎಂಬುದಕ್ಕೆ ಯಾವುದೇ ಆಧಾರವಿಲ್ಲ. ನಿಯಂತ್ರಣ ಸಂಪೂರ್ಣವಾಗಿರಬೇಕು, ಆದರೆ ಮೇಲ್ವಿಚಾರಣೆಗೆ ಅಧಿಕಾರ ಇದೆ ಎಂಬುದೊಂದೇ ಕಾರಣದಿಂದ ಆ ಸಂಸ್ಥೆ ಸರ್ಕಾರದ ನಿಯಂತ್ರಣದಲ್ಲಿದೆ ಎಂದು ಅದು ಸಾರ್ವಜನಿಕರ ಪ್ರಾಧಿಕಾರ ಎಂದು ಹೇಳಲಾಗಿದೆ. ಮಹರಾಷ್ಟ ಸಹಕಾರ ಕಾಯಿದೆ ಮತ್ತು ಬಹು ರಾಜ್ಯ ಸಹಕಾರ ಕಾಯಿದೆಯಡಿಯಲ್ಲಿ ವ್ಯವಹಾರ ಮಾಡುತ್ತಿದೆ ಎಂಬ ಕಾರಣದಿದಲ್ಲೇ ಅದು ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. AIR 2009 Bom 75/ 2009 (3) KLT SM 6/ 2009 (2) ID 156

28) ಕೇರಳ ಸಹಕಾರಿ ಸಂಘಗಳ ಕಾಯಿದೆಯಲ್ಲಿ ಒಂದು ಸಹಕಾರಿ ಸಂಸ್ಥೆ ಖಾಸಗಿ ಸಂಸ್ಥೆ ಎಂದು ಮತ್ತು ಆ ಸಂಸ್ಥೆಯ ಮಾಹಿತಿಯನ್ನು ಪಡೆಯಲು ಸಾಧ್ಯವಿಲ್ಲದೆ ಇದ್ದಾಗ, ಆ ಸಂಸ್ಥೆಯನ್ನು ನಿಯಂತ್ರಿಸುವ ಸಾರ್ವಜನಿಕ ಪ್ರಾಧಿಕಾರದ ಮುಖಾಂತರ ಮಾಹಿತಿ ಪಡೆಯತಕ್ಕದ್ದು. ಇದರಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಸರ್ಕಾರ ಸಹಾಯ ಧನ ದೊಡ್ಡ ಪ್ರಮಾಣದಲ್ಲಿ ಇಲ್ಲದಿದ್ದರೆ ಅದು ಸಾರ್ವಜನಿಕರ ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಕೇರಳ ಕಾಯಿದೆಯಲ್ಲಿ ನೋಂದಾಯಿಸಿದ ಸಹಕಾರಿ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತದೆ, ಇದು ಅದರ ಜವಾಬ್ದಾರಿ. 2009 (2) KLT 507/ 2009 (2) ID 1/ AIR 2009 (NOC) 2185 (Kar)

29) ಈ ಮೇಲ್ಕಂಡ ತೀರ್ಮಾನವನ್ನು ವಿಭಾಗಿಯ ಪೀಠ ಮಾರ್ಪಡಿಸಿದೆ. ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ನೀಡುವ ಜವಾಬ್ದಾರಿ ಸಹಕಾರಿ ಸಂಸ್ಥೆಯದ್ದು. ಇದಕ್ಕೆ ಪೂರಕವಾಗಿ ಮಾಹಿತಿಯನ್ನು ನೀಡದೆ ಇದ್ದ ಸಹಕಾರಿ ಸಂಘವನ್ನು ಕೇರಳ ಕಾಯಿದೆ ಕಲಂ.32 ರಲ್ಲಿ ಆಡಳಿತ ಮಂಡಳಿಯನ್ನು ರದ್ದು ಪಡಿಸುವ ಅಧಿಕಾರ ಚಲಾಯಿಸಬಹುದೆ ಎಂಬುದನ್ನು ವಿಮರ್ಶಿಸಲಾಯಿತು. ನಿಬಂಧಕರು ಮಾಹಿತಿ ಹಕ್ಕು ಕಾಯಿದೆಯಡಿ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಸಹಕಾರ ಸಂಘಗಳ ತಮ್ಮ ಸಂಸ್ಥೆ ಈ ಸುತ್ತೋಲೆ ವ್ಯಾಪ್ತಿಗೆ ಬರುತ್ತದೆಯೇ ಇಲ್ಲವೇ ಎಂದು ತೀರ್ಮಾನಿಸತಕ್ಕದ್ದು. ಆ ತೀರ್ಮಾನದ ನಂತರ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ (ಮಾಹಿತಿ ಆಯುಕ್ತರ ಮುಂದೆ) ಅಂತಹ ಪ್ರಾಧಿಕಾರದ ತೀರ್ಮಾನದಂತೆ ಕ್ರಮ ಜರುಗಿಸುವುದು ಪ್ರಾಧಿಕಾರದ ಜವಾಬ್ದಾರಿ. 2009 (3) KLT 1001 ಇದಕ್ಕೆ ಪೂರಕವಾಗಿ ಈ ಹಿಂದೆ ರೂಪಿಸಿದ 2009 (2) KLT 507/2009 (2) ID 1/ AIR 2009 (NOC) 2185 (Kar) ಭಾಗಶಃ ಮಾರ್ಪಾಡು ಮಾಡಲಾಗಿತ್ತು.

30) ಈ ಮೇಲ್ಕಂಡ ಎರಡೂ ತೀರ್ಪುಗಳನ್ನು ಮತ್ತು ಕೆಲವು ಪ್ರಸಂಗಗಳನ್ನು ಕೇರಳ ಉಚ್ಚನ್ಯಾಯಾಲಯ ತೀರ್ಮಾನಿಸಿತು. ಸಹಕಾರಿ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳು ಎಂದು ತೀರ್ಮಾನಿಸಿತ್ತು. ಸಹಕಾರ ಸಂಘಗಳು ಕಾಯಿದೆಯಡಿ ಸೃಷ್ಟಿಯಾದ ಸಂಸ್ಥೆಗಳ ಮತ್ತು ಅವು ಕಾಯಿದೆ ಅಡಿ ನೋಂದಾವಣೆಯಾದ ಸಂಸ್ಥೆಗಳು. ಪ್ರತಿಯೊಂದು ಸಹಕಾರಿ ಸಂಸ್ಥೆಗಳು ಒಂದು ಆಡಳಿತ

ಮಂಡಳಿಯನ್ನು ಹೊಂದಿದ್ದು ಸಾಮಾನ್ಯ ಸಭೆಯ ಮುಖಾಂತರ ಕೆಲಸ ನಿರ್ವಹಿಸುತ್ತದೆ. ಒಂದು ಸಹಕಾರಿ ಸಂಘ ನಿಬಂಧಕರ ಶಾಸನ ಬದ್ದ ನಿಯಂತ್ರಣಕೊಳ್ಳಪಟ್ಟು ಲೆಕ್ಕ ತಪಾಸಣೆ, ವಿಚಾರಣೆ, ಪರಿವೀಕ್ಷಣೆ ಮತ್ತು ತಪ್ಪು ಮಾಡಿದಾಗ, ಅಧಿಭಾರ ಅರ್ಜಿ ದಾಖಲಿಸಿದಾಗ ಮತ್ತು ಕಲಂ.32 ರಡಿ ಆಡಳಿತ ಮಂಡಳಿಯನ್ನು ರದ್ದು ಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸುವ ಅಧಿಕಾರ ಹೊಂದಿದ್ದು, ಇದು ಸರ್ಕಾರದ ನಿಯಂತ್ರಣವೆಂದು ಅರ್ಥೈಸಬಹುದು. ಒಂದು ಸಹಕಾರಿ ಸಂಘ ಪ್ರಜಾಪ್ರಭುತ್ವದಡಿ ರಚನೆಯಾದ ಆಡಳಿತ ಮಂಡಳಿಯ ಮತ್ತು ಮಹಾಸಭೆಯ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸಬೇಕು. ಇದಕ್ಕೆ ಪೂರಕವಾಗಿ, ಭಾರತದ ಸಂವಿಧಾನದಲ್ಲಿ ಹೆಚ್ಚುವರಿ ಸೇರ್ಪಡೆಯನ್ನು ಮಾಡಿ, ಸಹಕಾರಿ ಸಂಸ್ಥೆಗಳ ಸ್ಥಾಪನೆ, ಒಂದು ಮೂಲಭೂತಹಕ್ಕಾಗಿ ಸೇರ್ಪಡೆಯಾಗಿದೆ [ಅನುಚ್ಛೇದ 19(1)(ಸಿ)]. ಇದರ ಜೊತೆಗೆ ಅನುಚ್ಛೇದ 43ಬಿ ಸೇರ್ಪಡೆ ಮಾಡಿ ರಾಜ್ಯ ಸರ್ಕಾರಗಳು ಸಹಕಾರಿ ಸಂಸ್ಥೆಗಳನ್ನು ಸ್ವಯತ್ತ, ಸ್ವತಂತ್ರ, ವೃತ್ತಿಪರ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಿದೆ. ಇಂತಹ ಸಂದರ್ಭದಲ್ಲಿ ಪ್ರಜಾಪ್ರಭುತ್ವದಡಿ ಆಡಳಿತ ಮಂಡಳಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಮಾಹಿತಿ ಹಕ್ಕು ಕಾಯಿದೆ ಅಡಿ ಸಾಕಷ್ಟು ಮುಂಜಾಗ್ರತ ಕ್ರಮ ತೆಗೆದುಕೊಂಡಿದ್ದು ಕೆಲವು ಮಾಹಿತಿಯನ್ನು ಕೊಡಲಾಗದಿದ್ದರೆ ಅದಕ್ಕೆ ವಿನಾಯಿತಿಯನ್ನು ನೀಡಲಾಗಿದೆ. ಪೂರ್ಣ ಪೀಠವು ಯಾವುದೇ ಸಂಸ್ಥೆ ಮಾಹಿತಿಯನ್ನು ನಿರಾಕರಿಸಿದರೆ, ಅದರಿಂದ ಮಾಹಿತಿಯನ್ನು ಮುಚ್ಚುಹಾಕಲಾಗುತ್ತದೆ ಎಂದು ಅರ್ಥೈಸಬೇಕು. ಆಡಳಿತ ಮಂಡಳಿಗಳು ಮಾಹಿತಿಯನ್ನು ನೀಡಲು ನಿರಾಕರಿಸಿದರೆ, ಅವರ ಅವಧಿ (5 ವರ್ಷ) ಮುಗಿಯುವ ತನಕ ಮುಚ್ಚುಹಾಕಿದರೆ, ದುರಾಡಳಿತ ನಡೆಸಿದ ಸಹಕಾರ ಸಂಘ ಅರ್ಥೈಸಬೇಕು ಎಂದು ಪೂರ್ಣ ಪೀಠ ಆದೇಶಿಸುತ್ತದೆ. AIR 2012 Kar 124/ 2012 (2) KLT 865 ಇದಕ್ಕೆ ಪೂರಕವಾಗಿ ಹಿಂದೆ ನೀಡದ್ದ 2009(3) 1001/ 2010 (1) ID 83/ 2009 (9) KLT 901 ತೀರ್ಪುಗಳನ್ನು ಉಲ್ಲೇಖಿಸಲಾಗಿದೆ.

31) ಕರ್ನಾಲ್ ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ ಏಕ ಸದಸ್ಯ ಪೀಠ ನೀಡಿದ್ದ ಆದೇಶವನ್ನು ಕಿತ್ತು ಹಾಕಿ, ವಿಭಾಗೀಯ ಪೀಠ ಆಡಳಿತ ಮಂಡಳಿ ಸರ್ಕಾರದಿಂದ ಪಡೆದ ಹಣ ಸಹಾಯದ ಮಾಹಿತಿಯನ್ನು, ಸರ್ಕಾರದ ಅಧಿಕಾರಿ ವ್ಯವಸ್ಥಾಪಕ ನಿರ್ದೇಶಕನಾಗಿದ್ದರೂ, ನೀಡಲು ನಿರಾಕರಿಸಿದ್ದರಿಂದ, ಆ ಮಾಹಿತಿಯನ್ನು ನೀಡಿದ್ದರೆ, ಅದರಿಂದ ವ್ಯತಿರಿಕ್ತ ತೀರ್ಮಾನ ತೆಗೆದುಕೊಳ್ಳಬಹುದು ಎಂಬ ಕಾರಣದಿಂದ ನೀಡಿಲ್ಲವೆಂದು ಪರಿಗಣಿಸಿ, ಈ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆ ಅಡಿ ಬರುತ್ತದೆ ಎಂದು ತೀರ್ಮಾನಿಸಿತು. AIR 2011 (NOC) 181 (P&H)/ 2011 (1) ID 430

32) ಕರ್ನಾಟಕ ಉಚ್ಚನ್ಯಾಯಾಲಯ ಒಂದು ನೇಕಾರರಿಗೆ ಸಹಕಾರ ಬ್ಯಾಂಕಿನ ಮುಖಾಂತರ ಸಾಲ ನೀಡಿದ್ದರೆ ಮತ್ತು ಅದಕ್ಕೆ ಸಂಬಂಧಪಟ್ಟ ಸಹಾಯಧನ ನೇಕಾರರಿಗೆ ನೀಡಿದ್ದರೆ, ಅದು ಸಹಕಾರ ಬ್ಯಾಂಕಿಗೆ ನೀಡಿದ ಸಹಾಯಧನವಾಗುವುದಿಲ್ಲ. ಸರ್ಕಾರ ಸಹಾಯ ಧನವನ್ನು ಬ್ಯಾಂಕ್‌ಗೆ ನೀಡಲಾಗಿದೆ ಎಂದು ವಾಧಿಸಿದರೂ, ಅದು, ಬ್ಯಾಂಕಿಗೆ ನೀಡಿದ ಸಹಾಯ ಧನವಲ್ಲವೆಂದು ತೀರ್ಪಿತ್ತದೆ. 2010 (1) ID 521

33) ಮದ್ರಾಸ್ ಉಚ್ಚನ್ಯಾಯಾಲಯ ಈಗಾಗಲೇ ಸಹಕಾರ ಸಂಘಗಳು ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತವೆಂದು ಈಗಾಗಲೇ 2008 (1) CTC 838 / 2008 (2) MLJ / 2008(2) ID 172

ತೀರ್ಮಾನ ನೀಡಿದ್ದು, ಈ ಪ್ರಕರಣದಲ್ಲಿ ಅದೇ ತೀರ್ಮಾನ ಅನ್ವಯವಾಗುತ್ತದೆ. WP.No.8068/8069 q 2008 dated 12-02-2010

34) ಒಂದು ಸಹಕಾರ ಬ್ಯಾಂಕ್, ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆಯೇ ಎಂಬುದರ ಬಗ್ಗೆ ತಮಿಳ್‌ನಾಡು ಮಾಹಿತಿ ಆಯುಕ್ತರು ನೀಡಿದ್ದ ಆದೇಶವನ್ನು ಪರಿಶೀಲಿಸುವಾಗ, ಕರ್ನಾಟಕ ಉಚ್ಚನ್ಯಾಯಾಲಯ ನೀಡಿರುವ ದತ್ತಪ್ರಸಾದ್ ಗೃಹ ನಿರ್ಮಾಣ ಸಹಕಾರ ಸಂಘ, ಪೂರ್ಣ ಪ್ರಜ್ಞೆ ಗೃಹ ನಿರ್ಮಾಣ ಸಹಕಾರ ಸಂಘ, ಮತ್ತಿತರ ಪ್ರಕರಣದಲ್ಲಿ ನೀಡಿದ ತೀರ್ಪನ್ನು AIR 2009 Kar1/2009 (1) ID 323/2008 (4) KCCR 2357 ರಲ್ಲಿ ನೀಡಿದ್ದ ತೀರ್ಮಾನದಲ್ಲಿ ಸಹಕಾರ ಸಂಘ ಸಾರ್ವಜನಿಕ ಪ್ರಾಧಿಕಾರವಲ್ಲ ಎಂಬುದನ್ನು ಉಲ್ಲೇಖಿಸಿತು ಮತ್ತು ಇದರ ಜೊತೆಗೆ ಬಾಂಬೆ ಉಚ್ಚನ್ಯಾಯಾಲಯ ನೀಡಿರುವ ತೀರ್ಮಾನ AIR 2009 Bom 75/2009 (3) KLT SN6/2009 (2) ID 156 ನ್ನು ಉಲ್ಲೇಖಿಸಿ, ಇವುಗಳ ತೀರ್ಮಾನವನ್ನು ಗಮನದಲ್ಲಿರಿಸಿಕೊಂಡು ತಮಿಳ್‌ನಾಡು ಉಪನಿಬಂಧಕರ ಪ್ರಕರಣದಲ್ಲಿ ನೀಡಿದ್ದ 2008 (1) CTL 838/2008 (2) MLJ 733/2008 (2) ID 172 ತೀರ್ಮಾನವನ್ನು ಮರು ಪರಿಶೀಲಿಸಬೇಕೆಂದು ತೀರ್ಮಾನಿಸಿತು. ತಮಿಳ್‌ನಾಡು ರಾಜ್ಯದಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿಗಳನ್ನು 30 ವರ್ಷಗಳಿಂದ ರದ್ದುಪಡಿಸಿ, ಸಹಕಾರ ಇಲಾಖೆ ಅಧಿಕಾರಿಗಳನ್ನು ಆಡಳಿತಾಧಿಕಾರಿಯಾಗಿ ನೇಮಿಸಿರುವುದರಿಂದ, ಸರ್ಕಾರದ ನಿಬಂಧಕರ ನಿಯಂತ್ರಣದಲ್ಲಿಯೇ, ಈ ಸಹಕಾರ ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿರುವುದರಿಂದ, ಈ ಸಹಕಾರ ಸಂಸ್ಥೆಗಳು "ಸಾರ್ವಜನಿಕ ಪ್ರಾಧಿಕಾರ" ಎಂದು ಪರಿಗಣಿಸತಕ್ಕದ್ದು ಮತ್ತು ಇದು ಮಾಹಿತಿ ಹಕ್ಕು ಕಾಯಿದೆ ಕಲಂ.2(h)(d) ಅಡಿ ಪ್ರಾಧಿಕಾರವಾಗುತ್ತದೆ ಎಂದು ತೀರ್ಪಿತ್ತರು. WP.No.9763/2008 dated 25-04-2012

35) ಕ್ರಿಬಕೋ, ಎನ್‌ಸಿಸಿಎಫ್ ಮತ್ತು ನೇಫೇಡ್ (KRIBCO/NCCF & NAFED) ಸಾರ್ವಜನಿಕ ಪ್ರಾಧಿಕಾರಗಳು – ಈ ಮೇಲ್ಕಂಡ ಮೂರು ಸಂಸ್ಥೆಗಳು ಬಹು ರಾಜ್ಯ ಸಹಕಾರ ಕಾಯಿದೆಯಡಿ ನೋಂದಾಯಿಸಲಾಗಿದೆ. ಈ ಸಂಸ್ಥೆಗಳು ಈ ಹಿಂದೆ ಸರ್ಕಾರದಿಂದ ಸಾಕಷ್ಟು ಹಣ ಸಹಾಯ ಪಡೆದಿದ್ದ – ಈ ಸಂಸ್ಥೆಗಳು ಕಾಯಿದೆ ಕಲಂ.2(h)(d) ಅಡಿ ಸಾರ್ವಜನಿಕ ಪ್ರಾಧಿಕಾರ ಎಂದು ತೀರ್ಮಾನಿಸಿತು. (1981) Supp SCC 87

36) ರಾಜ್ಯದ ರಾಜ್ಯಪಾಲರು ಸಾರ್ವಜನಿಕ ಪ್ರಾಧಿಕಾರವೇ ಎಂಬ ಪ್ರಶ್ನೆಗೆ ಮುಂಬೈ ಉಚ್ಚನ್ಯಾಯಾಲಯ ಮಾಹಿತಿ ಹಕ್ಕು ಕಾಯಿದೆಯಲ್ಲಿ "ಸಕ್ಷಮ ಪ್ರಾಧಿಕಾರ" ಮತ್ತು "ಸಾರ್ವಜನಿಕ ಪ್ರಾಧಿಕಾರ" ಎಂಬ ಎರಡು ಪದಗಳ ಪ್ರಯೋಗವಿದ್ದರೂ, ಈ ಎರಡೂ ಸಕ್ಷಮ ಪ್ರಾಧಿಕಾರಗಳು, ಅಂದರೆ ರಾಷ್ಟ್ರಧ್ಯಕ್ಷರು ಮತ್ತು ರಾಜ್ಯಪಾಲರು, ಸಕ್ಷಮ ಪ್ರಾಧಿಕಾರವೂ ಆಗಬಹುದು ಮತ್ತು ಸಾರ್ವಜನಿಕ ಪ್ರಾಧಿಕಾರವೂ ಆಗಬಹುದು. ಎರಡೂ ಸ್ಥಾನ ಅದಲು ಬದಲಾಗುವ ಸಾಧ್ಯತೆ ಇದೆ ಎಂದು, ಇದಕ್ಕೆ ಪೂರಕವಾಗಿ ಈ ಹಿಂದೆ ಪೂರ್ಣ ಪೀಠ ನೀಡಿದ್ದ 2010 (1) ID 1/2010 91) CTC 241/AIR 2010 Delhi 159 ಅನ್ನು ಉಲ್ಲೇಖಿಸಿತು. 2012 (1) ID 22/AIR 2012 Bomby 71

37) ಭಾರತದ ಶ್ರೇಷ್ಠನ್ಯಾಯಾಲಯದ ಮುಖ್ಯ ನ್ಯಾಯಾದೀಶರು ಸಾರ್ವಜನಿಕ ಪ್ರಾಧಿಕಾರ. ಮುಖ್ಯ ನ್ಯಾಯಾದೀಶರು ತಮ್ಮ ಆಸ್ತಿಗೆ ಸಂಬಂಧಪಟ್ಟ ಮಾಹಿತಿ ಸಲ್ಲಿಸಿದ್ದು – ಇದು ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತದೆ. 2009 (2) ID 217

ಈ ಮೇಲ್ಕಂಡ ತೀರ್ಮಾನವನ್ನು ದೆಲ್ಲಿ ಉಚ್ಚನ್ಯಾಯಾಲಯದ ಪೂರ್ಣ ಪೀಠವು 2010 (1) ID 1/2010 (1) CTC 241/AIR 2010 Delhi 159 ತೀರ್ಪಿನಲ್ಲಿ ದೃಡೀಕರಿಸಿದೆ.

38) ಸಾರ್ವಜನಿಕ ಟ್ರಸ್ಟ್ ಸಾರ್ವಜನಿಕ ಪ್ರಾಧಿಕಾರವಲ್ಲ ಏಕೆಂದರೆ, ಇವು ಸರ್ಕಾರ ಸೃಷ್ಟಿಸಿದ ಅಥವಾ ಸಾಕಷ್ಟು ಹಣ ಸಹಾಯ ನೀಡಿದ (ಸರ್ಕಾರದಿಂದ) ಸಂಸ್ಥೆಯಲ್ಲ. ಇದು ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. ಯಾವುದೇ ವ್ಯಕ್ತಿ ಇಂತಹ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರ ಎಂದು ಅರ್ಜಿಸಿದರೆ, ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ಸೃಷ್ಟಿಯಾದ ಅಥವಾ ದೊಡ್ಡ ಪ್ರಮಾಣದ ಸಹಾಯ ಧನ ನೀಡಿದ ಬಗ್ಗೆ ದಾಖಲೆ ನೀಡಿದ ನಂತರ ಪರಿಶೀಲಿಸಬೇಕು. AIR 2009 Bom 163/2010 (1) ID 310

39) ಪ್ರಾಚೀನ ಪತ್ರಗಾರ ಮತ್ತು ಚಾರಿತ್ರಿಕ ಸಂಶೋಧನಾ ಇಲಾಖೆ; ಒಂದು ಸಾರ್ವಜನಿಕ ಪ್ರಾಧಿಕಾರ. ಈ ಪ್ರಾಧಿಕಾರ ದಾಖಲೆಗಳನ್ನು ಸಂರಕ್ಷಿಸುವ ಜವಾಬ್ದಾರಿ ಇದ್ದು, ಮಾಹಿತಿ ನೀಡುವ ಜವಾಬ್ದಾರಿ ಇದೆ. ಈ ಕಾಯಿದೆಯನ್ನು ಲೋಕಸಭೆ ರೂಪಿಸಿರುವುದರಿಂದ, ಆಡಳಿತ ತೊಡಕುಗಳ ಆಧಾರದ ಮೇಲೆ ವಿನಾಯ್ತಿ ಇಲ್ಲ. 2010 (1) ID 235

40) ಒಂದು ಸಂಸ್ಥೆ ಸೃಷ್ಟಿಸಿದ ಸಾರ್ವಜನಿಕ ಟ್ರಸ್ಟ್ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. ಇಂತಹ ಸಂಸ್ಥೆಗಳನ್ನು ಸರ್ಕಾರ ನಿಯಂತ್ರಣ ಎಂದರೆ ಆಡಳಿತ ಮಂಡಳಿ ರಚನೆಯಲ್ಲಿನ ನಿಯಂತ್ರಣ ಇಲ್ಲದೇ ಇರುವುದರಿಂದ, ಇದು ಸಾರ್ವಜನಿಕ ಪ್ರಾಧಿಕಾರವಲ್ಲ. AIR 2010 Bom 1/2010 (1) ID 299

41) ಮಾಹಿತಿ ಹಕ್ಕು ಆಯೋಗ ಒಂದು ಸಂಸ್ಥೆಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ತೀರ್ಪಿತ್ತಾಗ ಮಾತ್ರ, ಅದು ಪ್ರಾಧಿಕಾರವಾಗುತ್ತದೆ. ಈ ಪ್ರಕರಣದಲ್ಲಿ ಮಾಹಿತಿ ಆಯೋಗ, ಒಂದು ಸಂಸ್ಥೆಗೆ ಮಾಹಿತಿ ನೀಡಲು ಆದೇಶಿಸಿದರೂ ನೀಡಲಿಲ್ಲ ಮತ್ತು ಸಾಕಷ್ಟು ಅವಕಾಶ ನೀಡಲಾಗಿದೆ ಎಂದ ಮಾತ್ರಕ್ಕೆ, ಅದನ್ನು ಸಾರ್ವಜನಿಕ ಪ್ರಾಧಿಕಾರ ಎಂದು ಪರಿಗಣಿಸಲಾಗದು. ಆಯೋಗ ಸ್ಪಷ್ಟವಾಗಿ ಇದು ಸಾರ್ವಜನಿಕ ಪ್ರಾಧಿಕಾರ ಎಂದು ಆದೇಶಿಸಿದಾಗ ಮಾತ್ರ, ಇದು ಅನ್ವಯವಾಗುತ್ತದೆ. WP 23618/23619/2009 - 17-03-2010

42) ಒಂದು "ಸಾರ್ವಜನಿಕ ಪ್ರಾಧಿಕಾರ" ಎಂದು ತೀರ್ಮಾನಿಸುವಾಗ ಅದು ಸರ್ಕಾರವೇ ಆಗಿರಬೇಕೆಂದಿಲ್ಲ. (ಸಂವಿಧಾನದ ಅನುಚ್ಛೇದ 12 ರನ್ವಯ). ಕಲಂ.2(h)(d) ನಲ್ಲಿ ವಿವರಿಸಿರುವುದು ಸರ್ಕಾರದ ನಿಯಂತ್ರಣ ಅಥವಾ ಸರ್ಕಾರದ ಮಾಲಿಕತ್ವ ಎಂದಿರುವುದರಿಂದ, ಆ ಸಂಸ್ಥೆ ಸರ್ಕಾರದ ಸಂಸ್ಥೆಯಾಗಿರಬೇಕಿಲ್ಲ. ಸಾಕಷ್ಟು ಹಣಕಾಸು ನೀಡಿದ್ದರೂ ಅದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ಸರ್ಕಾರೇತರ ಸಂಸ್ಥೆಗಳು ಈ ಅರ್ಥದಲ್ಲಿ ಸೇರ್ಪಡೆಯಾಗುತ್ತದೆ. 2010 4

LW 524/2010 (5) CTC 98/2011 (2) ID 27

43) ಸರ್ಕಾರೇತರ ಸಂಸ್ಥೆಗಳಿಗೆ ಸಾಕಷ್ಟು ಹಣಕಾಸು ನೆರವು ನೀಡಿದ್ದು, ಆ ಸಂಸ್ಥೆಗಳಿಗೆ ಪ್ರತ್ಯಕ್ಷ/ಪರೋಕ್ಷವಾಗಿ ಎಂಬುದಕ್ಕೆ ಅರ್ಥ ವಿವರಣೆ, ಸಾರ್ವಜನಿಕ ಹಿತಾಸಕ್ತಿ ನೀಡಲು, ಸಾರ್ವಜನಿಕ ಕೆಲಸಗಳನ್ನು ನಿರ್ವಹಿಸುತ್ತಿದರೆ, ಉದಾಹರಣೆಗೆ ಪಾಲಿಕೆಗಳು ಸರ್ಕಾರ ನಿರ್ವಹಿಸುವ ಕೆಲಸ ಮಾಡುತ್ತಿದ್ದರೆ, ಅಂತಹ ಸಂಸ್ಥೆಗಳನ್ನು ಸರ್ಕಾರದ ಸಾಧನ/ಮಾಧ್ಯಮವೆಂದು ಪರಿಗಣಿಸತಕ್ಕದ್ದು ಇಂತಹ ಸಂಸ್ಥೆಗಳು ಸರ್ಕಾರೇತರ ಸಂಸ್ಥೆಗಳಾಗಿದ್ದರೂ, ಅವು ಸಾರ್ವಜನಿಕ ಪ್ರಾಧಿಕಾರಗಳಾಗುತ್ತವೆ. ಇದನ್ನು ಭಾರತದ ಶ್ರೇಷ್ಠ ನ್ಯಾಯಾಲಯ ರಮಣ ದಯಾರಾಮ್ ಶೆಟ್ಟಿ ಮತ್ತು ಅಂತರ ರಾಷ್ಟ್ರೀಯ ವಿಮಾನ ಪ್ರಾಧಿಕಾರದ ಪ್ರಕರಣದಲ್ಲಿ ಉತ್ತರಿಸಿದೆ. AIR 2010 (NOC) 729/2010 (2) ID 257

44) ಸರ್ಕಾರದ ಒಂದು ಕಂಪನಿ ಸ್ಥಾಪಿಸಿದ್ದು ಅದು ಮತ್ತೊಂದು ಪೂರಕ ಸಂಸ್ಥೆ ಸ್ಥಾಪಿಸಿದರೆ, ಅದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ಸರ್ಕಾರದ ಒಂದು ಸಂಸ್ಥೆ ನಾಲ್ಕು ವಿತರಣಾ ಸಂಸ್ಥೆಗಳಲ್ಲಿ ಶೇ.49% ರಷ್ಟು ಪಾಲು ಹೊಂದಿದ್ದರೆ, ಅದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ರಾಜ್ಯ ಸರ್ಕಾರ ಈ ನಾಲ್ಕು ಸಂಸ್ಥೆಗಳ ಸಾರ್ವಜನಿಕ ಪ್ರಾಧಿಕಾರಗಳು ಎಂದು ತೀರ್ಮಾನಿಸಿರುವುದು ಸರಿಯಾದ ಕ್ರಮ. AIR 2010 ori 54/ 2010 (1) ID 521

45) ಭಾರತ ಸಂಸತ್ತು ರಚಿಸಿದ ಕಾಯಿದೆ, ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ, ಜಮ್ಮು ಮತ್ತು ಕಾಶ್ಮೀರ ಹೊರತು ಪಡಿಸಿ ಎಂದಿದ್ದರೂ, ಕೇಂದ್ರ ಸರ್ಕಾರದ ಕಛೇರಿ ಅಥವಾ ಕಾರ್ಯಾಲಯ ಜಮ್ಮು ಕಾಶ್ಮೀರ ರಾಜ್ಯವಲ್ಲದ್ದಿದರೂ, ಅಂದರೆ ಕೇಂದ್ರ ಸರ್ಕಾರ ನಿಯಕ್ತಿ ಮಾಡಿದ ಭದ್ರತಾ ವ್ಯವಸ್ಥೆಯಲ್ಲಿನ ಮಾಹಿತಿ, ಲಭ್ಯವಿದ್ದ, ಅದು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗದು ಎಂಬ ಕಾರಣಕ್ಕೆ ತಡೆಹಿಡಿಯತಕ್ಕದ್ದಲ್ಲ. ಇದರ ಮುಂದೆ ಜಮ್ಮು ಕಾಶ್ಮೀರ ಪೋಲೀಸ್ ಇಲಾಖೆ ಮಾಹಿತಿ ಆರ್ಮಿಯಲ್ಲಿಯೂ ಲಭ್ಯವಿದ್ದರೆ, ಅಂತಹ ಮಾಹಿತಿ ನೀಡಬೇಕಾಗುತ್ತದೆ. ಅಂದರೆ ಜಮ್ಮು ಕಾಶ್ಮೀರ ರಾಜ್ಯ ಒಂದು ಕಾಯಿದೆಯನ್ನು ತನ್ನ ರಾಜ್ಯಕ್ಕೆ ಅಳವಡಿಸಿಕೊಳ್ಳದೇ ಇದ್ದರೂ. ಅದೇ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಇಲಾಖೆ, ಮಾಹಿತಿ ಹಕ್ಕು ಕಾಯಿದೆ ಯಡಿ ಬರುತ್ತವೆ. 2010 (2) ID 332

46) ಭಾರತೀಯ ರೈಲ್ವೆ ಕಲ್ಯಾಣ ಸಂಘಟಣೆ, ಒಂದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ಇದರಲ್ಲಿ ಪರಿಶೀಲಿಸಬೇಕಾದ ಅಂಶಗಳೆಂದರೆ, (1)ಈ ಸಂಸ್ಥೆಯನ್ನು ಸರ್ಕಾರ ನಿಯಂತ್ರಿಸುತ್ತದೆಯೇ ಮತ್ತು (2)ಈ ಸಂಸ್ಥೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಹಣಕಾಸು ನೆರವು ನೀಡಲಾಗಿದೆಯೇ ಎಂದು. ಈ ಸಂಸ್ಥೆಯನ್ನು ರೈಲ್ವೆ ಮಂಡಳಿ ಮತ್ತು ರೈಲ್ವೆ ಮಂತ್ರಾಲಯದ ನಿಯಂತ್ರಣದಲ್ಲಿದೆ ಮತ್ತು ಈ ಹಿಂದೆ ಈ ಸಂಸ್ಥೆಗೆ ರೈಲ್ವೆ ಮಂತ್ರಾಲಯದಿಂದ ಹಣ ಪಾವತಿಯಾಗಿತ್ತು ಮತ್ತು ಈ ಸಂಸ್ಥೆಗೆ ಸಾಲ ನೀಡಲು ರೈಲ್ವೆ ಮಂತ್ರಾಲಯ ಪ್ರಸ್ತಾವನೆ ಸಲ್ಲಿಸಿರುವುದನ್ನು ತಿರಸ್ಕರಿಸಿಲ್ಲವಾದ್ದರಿಂದ, ಇದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. 2010 (2) ID 250

47) ಪಂಜಾಬ್ ಮತ್ತು ಹರ್‍ಯಾನ ನ್ಯಾಯವಾದಿಗಳ ಪರಿಶತ್‌ನ ವ್ಯಾಪ್ತಿ ರಾಜ್ಯದ ಜೊತೆ ಕೇಂದ್ರಾಡಳಿತ ಪ್ರದೇಶ ಚಂದೀಘಡ್ ಸೇರಿರುವುದರಿಂದ, ಈ ಪರಿಶತ್ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಇದಕ್ಕೆ ಕೇಂದ್ರ ಸರ್ಕಾರವೇ ಸಕ್ಷಮ ಪ್ರಾಧಿಕಾರ. 2008 (2) ID 139

48) ದೆಲ್ಲಿ ಸಿಕ್ ಗುರುದ್ವಾರ ಆಡಳಿತ ಸಮಿತಿ ಒಂದು ಸಾರ್ವಜನಿಕ ಪ್ರಾಧಿಕಾರ. ಈ ಸಂಸ್ಥೆಯನ್ನು ಸಂಸತ್ತು

ಒಂದು ಕಾಯಿದೆ ಮೂಲಕ ಸೃಷ್ಟಿ ಮಾಡಲಾಗಿದ್ದು, ಇದು ಮಾಹಿತಿ ಹಕ್ಕು ಕಾಯಿದೆ ಕಲಂ.2 (h) (a) (b) (c) ಮತ್ತು (d) ಒಂದು ಪ್ರತ್ಯೇಕ ಶ್ರೇಣಿಯ ಸಂಸ್ಥೆ. ಹೆಚ್ಚುವರಿಯಾಗಿ ಸೇರಿಸಿ "includes" ಎಂಬ ಅರ್ಥ ಒಂದು ಪ್ರತ್ಯೇಕ ಶ್ರೇಣಿಗೆ ಸೇರುತ್ತವೆ. ಅಂದರೆ ಸಂಸತ್ತು ರೂಪಿಸಿದ ಒಂದು ಕಾಯಿದೆಯಡಿ ರೂಪಿಸಿದ ಸಂಸ್ಥೆ ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ಸಂಸ್ಥೆಯನ್ನು ಕಾಯಿದೆಯಡಿ ನೋಂದಾಯಿಸಿಲ್ಲ – ಕಾಯಿದೆಯೇ ಈ ಸಂಸ್ಥೆಯನ್ನು ಹುಟ್ಟು ಹಾಕಿದೆ. 2010 (2) ID 308/AIR 2010 (NOC) 1109 (Del)

49) ವಿದ್ಯೂನ್ಮಾನ ಮತ್ತು ಕಂಪ್ಯೂಟರ್ ನಿರ್ಯಾತ ಅಭಿವೃದ್ಧಿ ಪರಿಶತ್ ಒಂದು ಸಾರ್ವಜನಿಕ ಪ್ರಾಧಿಕಾರ. ಸರ್ಕಾರ ಈ ಪರಿಶತ್‌ಗೆ ಹಣಕಾಸು ನೆರವನ್ನು ಯಾವ ಉದ್ದೇಶಕ್ಕೆ ಬಳಸಬೇಕೆಂಬ ಶರತ್ತು ವಿಧಿಸದೆ ನೀಡುತ್ತಿದ್ದು ಹಾಗೂ ಹಣವನ್ನು ಯಾವ ಉದ್ದೇಶಕ್ಕೆ ಉಪಯೋಗಿಸಬೇಕೆಂದು ಸೂಚಿಸಬಹುದು. ಈ ಸಂಸ್ಥೆಯು ನೌಕರರು ಸರ್ಕಾರಿ ನೌಕರರಲ್ಲ ಮತ್ತು ಈ ಸಂಸ್ಥೆ ವಾರ್ತಾ ಮತ್ತು ಯಂತ್ರ ವಿಜ್ಞಾನಿಕ ಇಲಾಖೆ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತದೆ ಮತ್ತು ಇದು ಸಾರ್ವಜನಿಕ ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ಇದು ಸಾರ್ವಜನಿಕ ಪ್ರಾಧಿಕಾರ. WP II 434/2006 - 19-07-2006

50) ಭಾರತೀಯ ಒಲಂಪಿಕ್ ಸಂಸ್ಥೆ, ಸಂಸ್ಕೃತ ಶಾಲೆ ಮತ್ತು ಕಾಮನ್‌ವೆಲ್ತ್ ಕ್ರೀಡಾ ಸಮಿತಿ ಸಾರ್ವಜನಿಕ ಪ್ರಾಧಿಕಾರಗಳು – ಅರ್ಜಿದಾರರು ಪ್ರತಿಪಾಧಿಸಿದ ಅಂಶಗಳೆಂದರೆ, ಸಾರ್ವಜನಿಕ ಪ್ರಾಧಿಕಾರಗಳಾಗ ಬೇಕಾದರೆ.

(1) ಸರ್ಕಾರ ಶೇ.50% ಕ್ಕಿಂತ ಹೆಚ್ಚು ಹಣ ನೀಡಿರಬೇಕು.

(2) ಸತತವಾಗಿ ಮತ್ತು ಖಾಯಂ ಆಗಿ, ಸರ್ಕಾರಕ್ಕೆ ಅವಲಂಬಿತರಾಗಿರಬೇಕು.

(3) ರಚನೆಯಾದ ಮಂಡಳಿ ತಾತ್ಪೂರ್ತಿಕವಾಗಿರಬಾರದು ಅಂದರೆ ಖಾಯಂ ಆಗಿರಬೇಕು.

(4) ವಾಣಿಜ್ಯ ವ್ಯವಹಾರಕ್ಕೆ ಹಣ ಸಂದಾಯ ಮಾಡಿದಾಗ, ಅದು ಸರ್ಕಾರದ ಸಹಾಯ ಧನವೆಂದು ಪರಿಗಣಿಸಲಾಗದು.

ಇದಕ್ಕೆ ಒಂದು ಕಾಯಿದೆಯನ್ನು ಸಂಸತ್ತು ರೂಪಿಸಿದಾಗ ಅದರ ಉದ್ದೇಶವನ್ನು ಗಮನಿಸಬೇಕು. ಹಣಕಾಸು ನೆರವು ಎಂದು ಬಹುಮತದ ಪಾಲುಬಂಡವಾಳ ಎಂದು ಅರ್ಥೈಸಲಾಗದು. ಇಂತಹ ಪ್ರಸಂಗವನ್ನು ಪ್ರತಿಯೊಂದು ಪ್ರಕರಣದಡಿ ಪರಿಶೀಲಿಸಬೇಕು. ಸರ್ಕಾರದ ನಿಯಂತ್ರಣ ಎಂದರೆ ಹಣಕಾಸು ಮತ್ತು ಆಡಳಿತದ ಮೇಲೆ ಎಂದು ಪರಿಶೀಲಿಸಬೇಕು. ಇದರ ಜೊತೆಗೆ ಇಂತಹ ಸಂಸ್ಥೆಗಳು ಸಾರ್ವಜನಿಕ ಕೆಲಸ ನಿರ್ವಹಿಸುತ್ತಿರಬೇಕು. ಈ ಎಲ್ಲಾ ಕಾರಣ ಪರಿಶೀಲಿಸಿ ಈ ಎಲ್ಲಾ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳೆಂದು ತೀರ್ಮಾನಿಸಿತು. 2010 (2) ID 129

51) ಮಂಗಳೂರು ವಿಶೇಷ ಆರ್ಥಿಕ ವಲಯ (SEZ) ಒಂದು ಸಾರ್ವಜನಿಕ ಪ್ರಾಧಿಕಾರ. ಈ ಸಂಸ್ಥೆಯಲ್ಲಿ ಶೇ.50 ರಷ್ಟು ಸರ್ಕಾರಿ ಸೌಮ್ಯದ ಸಂಸ್ಥೆಗಳಿಂದ ಬಂದಿದೆ. ಇದಕ್ಕೆ ಪೂರಕವಾಗಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನಯಾನ ಪ್ರಾಧಿಕಾರದ ಪ್ರಕರಣ AIR 2010 (NOC) 729/2010 (2) ID 257 ರ ತೀರ್ಪನ್ನು ಉಲ್ಲೇಖಿಸಿ, ಈ ಸಂಸ್ಥೆಯೂ ಒಂದು ಸಾರ್ವಜನಿಕ ಪ್ರಾಧಿಕಾರವೆಂದು

ತೀರ್ಮಾನಿಸಿತು. WP. 34095/2010 / WP. No.37312/2010 - 14-08-2012

52) ಬಾಂಬೆ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ, ಮುಂಬೈ ಭಾರತೀಯ ವಿಜ್ಞಾನ ಸಂಸ್ಥೆ ಒಂದು ಸಾರ್ವಜನಿಕ ಪ್ರಾಧಿಕಾರ ಎಂದು ತೀರ್ಮಾನಿಸುವಾಗ, ಈ ಸಂಸ್ಥೆಯ ಮಂಡಳಿ ನಾಲ್ಕು ಜನರನ್ನು ಕೂಡಿದ್ದ, ಇದರಲ್ಲಿ ಇಬ್ಬರು ಸರ್ಕಾರದ ಅಧಿಕಾರಿಗಳಿದ್ದ, ಇದರ ಜೊತೆಗೆ ಒಬ್ಬರನ್ನು ಕೇಂದ್ರ ಸರ್ಕಾರ ನೇಮಿಸುತ್ತಿದ್ದ, ನಾಲ್ಕು ಜನರ ಮಂಡಳಿಯಲ್ಲಿ ಮೂರು ಸದಸ್ಯರು ಸರ್ಕಾರದ ಪ್ರತಿನಿಧಿಗಳಿರುವುದರಿಂದ ಇದು ಸರ್ಕಾರದ ನಿಯಂತ್ರಣದ ಸಂಸ್ಥೆ. ಈ ಸಂಸ್ಥೆಯನ್ನು ಹುಟ್ಟು ಹಾಕಿರುವುದು ಕೇಂದ್ರ ಸರ್ಕಾರದ ಒಂದು ಯೋಜನೆಯಡಿ. ಆದ್ದರಿಂದ ಇದು ಒಂದು ಸಾರ್ವಜನಿಕ ಪ್ರಾಧಿಕಾರ. 2010 (2) ID 543/AIR 2011 Bombay 53

53) ಒಂದು ಖಾಸಗಿ ಸಂಸ್ಥೆ ಸೃಷ್ಟಿಯಾಗಿರುವುದು ಒಂದು ಸರ್ಕಾರದ ಆದೇಶದಡಿಯಲ್ಲಿ, ಅಥವಾ ಆ ಸಂಸ್ಥೆಯನ್ನು ಸರ್ಕಾರ ಒಡೆತನದಲ್ಲಿಲ್ಲ ಹಾಗೂ ಇದನ್ನು ಸರ್ಕಾರ ನಿಯಂತ್ರಿಸುತ್ತಿಲ್ಲ ಅಥವಾ ಸರ್ಕಾರದಿಂದ ದೊಡ್ಡಪ್ರಮಾಣದ ಸಹಾಯಧನ ನೀಡುತ್ತಿಲ್ಲವಾದ್ದರಿಂದ, ಇದು ಸಾರ್ವಜನಿಕ ಪ್ರಾಧಿಕಾರ ವಾಗುವುದಿಲ್ಲ. AIR 2010 ULR 72/ 2010 (2) ID 552

54) ಸರ್ಕಾರದ ಸಹಾಯಧನವನ್ನು ಒಂದು ಪ್ರಾಧಿಕಾರ ನಿಯಂತ್ರಿಸುತ್ತಿದ್ದರೆ – ಸರ್ಕಾರೇತರ ಸಂಸ್ಥೆಯೂ ಒಂದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ತಮಿಳ್‌ನಾಡು ಸಂಘಗಳ ನೋಂದಾವಣೆ ಕಾಯಿದೆಯಡಿ ಕಲಂ.17ರಲ್ಲಿ, ದಾಖಲೆಗಳನ್ನು ಸಲ್ಲಿಸುವ ಶರತ್ತು ವಿಧಿಸಿದ್ದು, ಇದು ಸಾರ್ವಜನಿಕ ಪ್ರಾಧಿಕಾರ ಎಂಬ ಅರ್ಥ ವಿವರಣೆಯಲ್ಲಿ ವಿನಾಯ್ತಿಗೆ ಬರುವುದಿಲ್ಲ. ಸ್ವತಂತ್ರ ಸಂಸ್ಥೆ ಎಂದು, ಮಾಹಿತಿ ನೀಡಲು ನಿರಾಕರಿಸತಕ್ಕದ್ದಲ್ಲ. (2010) 7 MLJ 670/AIR 2011 madras 13 /2011 (1) ID 31

55) ರಾಜ್ಯ ಸರ್ಕಾರ ಕಾಯಿದೆ ಮೂಲಕ, ಸ್ವತಂತ್ರ ಸಂಸ್ಥೆಯಾಗಿ ಆಹಾರ ಉತ್ಪನ್ನು ಮಾರುಕಟ್ಟೆ ಸಮಿತಿಗಳನ್ನು ರಚಿಸಿದಾಗ, ಇದು ಒಂದು ವಲಯ ಪ್ರಾಧಿಕಾರವಾಗುತ್ತಿದೆ. ಈ ಸಮಿತಿಯನ್ನು ಕಾಯಿದೆಯಲ್ಲಿ ರೂಪಿಸಿದ ನಿಯಮದಂತೆ ರಚನೆ ಮಾಡಲಾಗುತ್ತದೆ. ಅಂದರೆ ಸ್ವಯಂ ನಿಯಂತ್ರಣ ಸಂಸ್ಥೆಯಾಗಿ ರೂಪಿತವಾಗಿದ್ದರು ಇದು ಸಾರ್ವಜನಿಕ ಪ್ರಾಧಿಕಾರ ಆಗುತ್ತದೆ. AIR 2011 Bombay 48/2011 (1) ID 135

ಸೂಚನೆ : ಈ ಮೇಲ್ಕಂಡ ತೀರ್ಮಾನ ನೀಡುವಾಗ ವಿಭಾಗೀಯ ಪೀಠ, ಸಹಕಾರ ಪತ್ತಿನ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕ್‌ಗಳು, ಮತ್ತಿತರ ಸಹಕಾರ ಬ್ಯಾಂಕ್‌ಗಳು ಹಣ ದುರುಪಯೋಗ ಪ್ರಸ್ತಾಪಿಸಿ ಠೇವಣಿದಾರರ ಹಣವನ್ನು ಅಪರಾ ತಪರಾ ಮಾಡುತ್ತಿದ್ದು, ಇಂತಹ ಸಂಸ್ಥೆಗಳನ್ನು ಮಾಹಿತಿ ಹಕ್ಕು ಕಾಯಿದೆಯಡಿ ತರುವುದು ಅವಶ್ಯಕವೆಂದು ವ್ಯಾಖ್ಯಾನಿಸಿದೆ.

56) ರಾಜ್ಯ ಸರ್ಕಾರದ ಒಪ್ಪಿಗೆಯೊಂದಿಗೆ ಸ್ಥಾಪಿತವಾದ ವಿದ್ಯಾಲಯ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. ನಿಯಂತ್ರಣ, ಮಾಲೀಕತ್ವ ಮತ್ತು ಸಾಕಷ್ಟು ಹಣಕಾಸು ನೆರವು ಎಂಬ ಅರ್ಥದ ವ್ಯಾಪ್ತಿಗೆ ವಿದ್ಯಾ ಸಂಸ್ಥೆಯು ಸರ್ಕಾರದ ಒಪ್ಪಿಗೆಯಿಂದ ಸ್ಥಾಪಿತವಾಗಿದ್ದರೂ ಅದು ಸರ್ಕಾರದ ನಿಯಂತ್ರಣದಲ್ಲಿ ಇಲ್ಲವಾದ್ದರಿಂದ ಇದು ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. AIR 2010 Ganhati 73/2011 (1) ID 297

57) ಸರ್ಕಾರೇತರ ಸಂಸ್ಥೆ, ಸರ್ಕಾರದ ಸಹಾಯಧನ/ನೆರವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆದಿದ್ದರೆ, ಅದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ಎಷ್ಟೇ ಪ್ರಮಾಣದ ಸಹಾಯಧನ ಪಡೆದಿದ್ದರೂ, ಮಾಹಿತಿ ನೀಡಿರುವುದು ಮತ್ತು ಸಾರ್ವಜನಿಕ ಅಧಿಕಾರಿ, ಸಹಾಯಕ ಸಾರ್ವಜನಿಕ ಅಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರಗಳನ್ನು ರಚನೆ ಮಾಡಿ ಅಗತ್ಯವಾದ ಕೆಲವು ಮಾಹಿತಿಯನ್ನು ನೀಡಿರುವುದರಿಂದ ಮತ್ತು ಸರ್ಕಾರದಿಂದ ಸಹಾಯಧನ ಪಡೆದಿರುವುದರಿಂದ ಇದು ಸಾರ್ವಜನಿಕ ಪ್ರಾಧಿಕಾರ ಎಂದು ಜಾರ್ಕಂಡ್ ಉಚ್ಚನ್ಯಾಯಾಲಯ ತೀರ್ಮಾನಿಸಿತು. ೦ಖಖ 2010 ಝಚಿಡಿಇಚಿಟಿಜ 147 / 2011 (1) ಖಆ 216

58) ಸರ್ಕಾರದ ಸಹಾಯಧನ ಪಡೆಯದ ಖಾಸಗಿ ಶಾಲೆ ಮಾಹಿತಿ ಹಕ್ಕು ಕಾಯಿದೆಯಡಿ ಬರುವುದಿಲ್ಲ. ಶಾಲೆ ನಡೆಸಲು ಸರ್ಕಾರದ ಸಹಾಯಧನ ಪಡೆಯುತ್ತಿಲ್ಲ. ಕಾಯಿದೆ ರಚನೆ ಮಾಡಿದ ಉದ್ದೇಶ ಸಾರ್ವಜನಿಕ ಪ್ರಾಧಿಕಾರಗಳು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕೆಂಬ ಉದ್ದೇಶದಿಂದ ಈ ಪ್ರಕರಣದಲ್ಲಿ ಸರ್ಕಾರೇತರ ಸಂಸ್ಥೆ, ಶಾಲೆ, ನಡೆಸಲು ಯಾವುದೇ ಹಣ ಸಹಾಯ ಪಡೆಯುತ್ತಿಲ್ಲ, ಆದ್ದರಿಂದ ಇದು ಮಾಹಿತಿಹಕ್ಕು ಕಾಯಿದೆಯಡಿ ಬರುವುದಿಲ್ಲ. 2011 (1) ಖಆ 366

59) ಸರ್ಕಾರದ ಸಹಾಯಧನ ಎಷ್ಟು ಪ್ರಮಾಣದಲ್ಲಿದ್ದರೂ ಅದು ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆ ಎಂಬ ವಿಷಯದ ಬಗ್ಗೆ ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ ಪರಿಶೀಲಿಸುವಾಗ, ಆ ಸಂಸ್ಥೆಯೂ ಒಟ್ಟು ವೆಚ್ಚದಲ್ಲಿ ಸರ್ಕಾರದ ಹಣ ಶೇ.25% ಮಾತ್ರ ಮತ್ತು ಇದು ಸುಮಾರು 3.00 ಕೋಟಿ. ಇಷ್ಟು ಹಣ ಪಡೆದರೂ ಅರ್ಜಿದಾರರು, ಇದು ದೊಡ್ಡಪ್ರಮಾಣದ ಸಹಾಯಧನವಲ್ಲವೆಂಬ ವಾದವನ್ನು ತಿರಸ್ಕರಿಸಿ. ಈ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತದೆ ಎಂದು ತೀರ್ಮಾನಿಸಿತು. WP. 16063/2009 - 21-01-2010

60) ಕೇರಳ ವಿಭಾಗೀಯ ಪೀಠ, ಮಲಬಾರ್ ದೇವಸ್ಥಾನ ಮಂಡಳಿಯಡಿ ಬರುವ ಮಠಗಳು, ಚಾರಿಟಿ, ಧಾರ್ಮಿಕ, ಧರ್ಮರ್ಥಾ ಸಂಸ್ಥೆಗಳು, ದೇವಸ್ಥಾನಗಳು, ಟ್ರಸ್ಟ್‌ಗಳು (ಹಿಂದು ಧಾರ್ಮಿಕ ಮತ್ತು ಚಾರಿಟಿ ಏಂಡೋಮೆಂಟ್ ಕಾಯಿದೆ) ಈ ಸಂಸ್ಥೆಯು ಅಂಗ ಸಂಸ್ಥೆಗಳಲ್ಲ. ಈ ಸಂಸ್ಥೆಗಳ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶಿಸುವ ಅಧಿಕಾರವಿದ್ದರೂ, ಇಂತಹ ಸಂಸ್ಥೆಗಳು ಮಲಬಾರ್ ದೇವಸ್ಥಾನ ಮಂಡಳಿ, ಆಡಳಿತ ಶಾಖೆಗಳಲ್ಲ. ಈ ಸಂಸ್ಥೆಗಳಿಗೆ ಮುಖ್ಯ ಕಾರ್ಯಾನಿರ್ವಾಹಕರನ್ನು ನೇಮಿಸಿದರೂ, ಅವರಿಗೆ ನೀಡುವ ಸಂಬಳ, ಆಯಾ ಸಂಸ್ಥೆಗಳೇ ನೀಡಬೇಕು. ಇದರ ಜೊತೆಗೆ ಪ್ರತಿಯೊಂದು ಸಂಸ್ಥೆ ಸಂಗ್ರಹಿಸುವ ಹಣ ಭಕ್ತರು ನೀಡಿದ ಕಾಣಿಕೆ. ಆದ್ದರಿಂದ ಇಂತಹ ಹಣ ಸಂಗ್ರಹಣೆಯನ್ನು ಸರ್ಕಾರದಿಂದ ನೀಡಿದ ಹಣ ಸಹಾಯವೆಂದು ಪರಿಗಣಿಸತಕ್ಕದ್ದಲ್ಲ. ಆದ್ದರಿಂದ ಈ ಎಲ್ಲಾ ಸಂಸ್ಥೆಯನ್ನು ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ. 2011 (2) KLT 312/2011 (1) ID 490

61) ಒಂದು ದೇವಸ್ಥಾನ ವಂಶಪಾರಂಪರ್ಯವಾಗಿ ನಿರ್ವಹಿಸುತ್ತಿದ್ದು, ಅದು ಸಾರ್ವಜನಿಕ ಉದ್ದೇಶಕ್ಕೆ ಪೂರಕವಾಗಿದೆ. ಈ ದೇವಸ್ಥಾನವನ್ನು ವಂಶಪಾರಂಪರ್ಯವಾಗಿ, ಒಬ್ಬ ಟ್ರಸ್ಟಿ ನಿರ್ವಹಿಸುತ್ತಿದ್ದರೆ, ಅದು ಸಾರ್ವಜನಿಕ ಉದ್ದೇಶದಿಂದ ದೇವಸ್ಥಾನಗಳನ್ನು, ಹಿಂದು ಧಾರ್ಮಿಕ ಮತ್ತು ಚಾರಿಟಬಲ್ ಕಾಯಿದೆಯಡಿ ಬರುವುದರಿಂದ ಮತ್ತು ಸಾರ್ವಜನಿಕರಿಂದ ಹಣ ಸಂಗ್ರಹಣೆ ಮಾಡಿ

ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಇದರ ಜೊತೆಗೆ ಈ ದೇವಸ್ಥಾನ ಜೀರ್ಣೋದ್ದಾರಕ್ಕೆ ಸರ್ಕಾರದ ಸಹಾಯಧನ ನೀಡಲಾಗುತ್ತಿದೆ, ಈ ದೇವಸ್ಥಾನಕ್ಕೆ ಸಾರ್ವಜನಿಕ ಮಾಹಿತಿ ಅಧಿಕಾರಿ ನೇಮಿಸಬೇಕು ಮತ್ತು ಟ್ರಸ್ಟಿಗಳು ಮಾಹಿತಿಯನ್ನು ಟ್ರಸ್ಟ ಮಂಡಳಿಗೆ ನೀಡುತ್ತಿದ್ದ  ಈ ಮಾಹಿತಿ ಮುಖ್ಯ ಕಾರ್ಯನಿರ್ವಾಹಕನಿಗೆ ಈ ಮಾಹಿತಿ ಪಡೆಯಲಾಗದೇ ಇರಬಹುದು. ಇದು ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತದೆ. Chennai (2012) 5 MLJ 53

62) ಸಹಕಾರ ಸಂಘಗಳು, ಶಾಲೆಗಳು, ಕ್ರಿಕೆಟ್ ಸಂಘ ಮತ್ತಿತರೆ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳು– ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ ಹಿಂದು ಪಟ್ಟಣ ಸಹಕಾರ ಬ್ಯಾಂಕ್ ಮತ್ತು ಮಾಹಿತಿ ಆಯುಕ್ತರ ಪ್ರಕರಣದಲ್ಲಿ ಅರ್ಜಿದಾರ ಸಹಕಾರ ಸಂಘಗಳು, ಬ್ಯಾಂಕ್‌ಗಳು, ಸಕ್ಕರೆ ಕಾರ್ಖಾನೆಗಳು, ಶಾಲೆಗಳು, ವಿದ್ಯಾ ಸಂಸ್ಥೆಗಳು, ಕ್ರಿಕೆಟ್ ಸಂಘ, ಜಮಖಾನಾ ಮತ್ತು ಕ್ಲಬ್ ತಾವು ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಎಂಬ ವಾದವನ್ನು ತಳ್ಳಿಹಾಕಿತ್ತು. ಇದಕ್ಕೆ ವಿವಿಧ ನ್ಯಾಯಾಲಯಗಳು ನೀಡಿದ ತೀರ್ಪಗಳನ್ನು ಆಧರಿಸಿ, ಮಾಹಿತಿ ಹಕ್ಕು ಕಾಯಿದೆ ಕಲಂ.2 (h)(a)(b)(c) ಮತ್ತು (d) ನ ಉಪ ಕಲಂ.(i) ಮತ್ತು (ii) ನಡಿ ಈ ಎಲ್ಲಾ ಸಂಸ್ಥೆಗಳು ಮಾಹಿತಿ ನೀಡುವ ಜವಾಬ್ದಾರಿ ಇದೆ ಎಂದು ತೀರ್ಮಾನಿಸಿ, ಕಲಂ.2(h) ಅನ್ವಯ ಈ ಎಲ್ಲಾ ಸಂಸ್ಥೆಗಳ ಮಾಹಿತಿ ನೀಡಬೇಕೆಂದು ಸೂಚಿಸಿತು.

ಸರ್ಕಾರದ ಮಧ್ಯ ಪ್ರವೇಶವಿಲ್ಲದೆ ಈ ಸಂಸ್ಥೆಗಳು ಅಸ್ತಿತ್ವಕ್ಕೆ ಬರುವುದಿಲ್ಲ ಮತ್ತು ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ಅಧಿಕಾರಿಗಳ ಒಪ್ಪಿಗೆ ಇಲ್ಲದೆ/ನಿರ್ದೇಶನವಿಲ್ಲದೆ ಕೆಲಸ ನಿರ್ವಹಿಸಲಾಗುವುದಿಲ್ಲ ಹಾಗೂ ಕಾನೂನಿನ ಶರತ್ತುಗಳನ್ನು ಪಾಲಿಸಲೇಬೇಕು ಮತ್ತು ಸಹಕಾರದಿಂದ ಎಷ್ಟು ಪ್ರಮಾಣದಲ್ಲಿ ಸಹಾಯಧನ ಪಡೆದಿರಬೇಕೆಂಬ ಬಗ್ಗೆ ವಿಮರ್ಷಿಸಿ, ದೊಡ್ಡಪ್ರಮಾಣದ ಸಹಾಯಧನ ಎಂಬುದಕ್ಕೆ ಕಾಯಿದೆಯಲ್ಲಿ ಅರ್ಥವಿವರಣೆ ನೀಡಿಲ್ಲವಾದ್ದರಿಂದ ಮತ್ತು ಅಲ್ಪ ಪ್ರಮಾಣದ ಸಹಾಯ ಎಂದಾಗ ದೊಡ್ಡಪ್ರಮಾಣದ ಸಹಾಯಧನವನ್ನು ಅರ್ಥೈಸಬೇಕು. ಸರ್ಕಾರದಿಂದ ಪಡೆಯುವ ಪಾಲು ಬಂಡವಾಳ, ಸಹಾಯಧನ, ಜಮೀನು ಮತ್ತು ಇತರ ಪ್ರತ್ಯಕ್ಷ ಮತ್ತು ಪರೋಕ್ಷ ಪಡೆಯುವ ಹಣದ ಆಧಾರದ ಮೇಲೆ ಈ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತವೆ ಎಂದು ತೀರ್ಮಾನಿಸಬೇಕು. ಈ ಮೇಲ್ಕಂಡ ಅಂಶಗಳು ಗಮನಿಸಿ. ಈ ಎಲ್ಲಾ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳಾಗಿ ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆ. 2011 (1) ID 377

## <u>ಮಾಹಿತಿ ಕಾಯಿದೆಯಡಿ ಸಾರ್ವಜನಿಕ ಪ್ರಾಧಿಕಾರದ ಭಾದ್ಯತೆಗಳು</u>

1) ಮಾಹಿತಿ ಕಾಯಿದೆ ಜಾರಿ ಮಾಡುವಾಗ, ಅದರ ಮೂಲ ಉದ್ದೇಶಗಳನ್ನು ಅರ್ಥೈಸಿಕೊಂಡು ಕಾರ್ಯನಿರ್ವಹಿಸುವ ಬಗ್ಗೆ ತಿಳಿಸುತ್ತದೆ. ಈ ಕಾಯಿದೆಯ ತತ್ವ, ಅರ್ಜಿದಾರರಿಗೆ ಅವರು ಕೇಳಿದ ಮಾಹಿತಿಯನ್ನು ಕೊಡುವ ವ್ಯವಸ್ಥೆ. ಇದಕ್ಕೆ ಒಂದು ಪ್ರಾಧಿಕಾರ ತನ್ನ ಸಂಸ್ಥೆಯ ಮಾಹಿತಿಯನ್ನು ಲಭ್ಯವಾಗುವಂತೆ ಮಾಡುವ ಜವಾಬ್ದಾರಿ ಇರಬೇಕು. ಅಂತಹ ಪ್ರಾಧಿಕಾರಗಳು, ತಮ್ಮ ಮಾಹಿತಿಯನ್ನು ಪ್ರಕಟಿಸಿ, ಸಾರ್ವಜನಿಕರು ಕೇಳುವ ಮಾಹಿತಿ ಕೊಡುವ ಒಂದು ವ್ಯವಸ್ಥೆ. ಸಾರ್ವಜನಿಕರು ಒಂದು ಇಲಾಖೆಯ/ಸಂಸ್ಥೆಯ ಮಾಹಿತಿ ಪಡೆಯಲು ಯಾವುದೇ ತೊಡಕು ಇಲ್ಲದಂತೆ ಮಾಡುವುದು.

2) ಇದಕ್ಕೆ ಪೂರಕವಾಗಿ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರ

ಎ) ಸಮರ್ಪಕವಾದ ದಾಖಲೆಯನ್ನು ವಿಷಯ/ವರ್ಷವಾರು ವರ್ಗೀಕರಿಸಿಡುವುದು ▯ ಇದರಿಂದ ಅರ್ಜಿದಾರರು ಕೇಳಿದ ಮಾಹಿತಿಯನ್ನು ತುರ್ತಾಗಿ ನೀಡಲು ಸಹಕಾರಿಯಾಗುತ್ತದೆ.

ಬಿ) ಎಲ್ಲಾ ಮಾಹಿತಿಯನ್ನು ಗಣಕೀಕರಣಗೊಳಿಸುವ ವ್ಯವಸ್ಥೆ ಮಾಡುವುದು ▯ ಇದಕ್ಕೆ ಪೂರಕವಾಗಿ ಸಂಪನ್ಮೂಲವನ್ನು ಕ್ರೋಡಿಕರಿಸುವುದು.

ಸಿ) ವಿವಿಧ ಕಛೇರಿಗಳ ಮಾಹಿತಿಯನ್ನು ಗಣಕೀಕೃತ ಮಾಹಿತಿ ಜೊಡಿಸಿದಾಗ ▯ ಅಂತಹ ದಾಖಲೆಗಳು ಅರ್ಜಿದಾರರಿಗೆ ತುರ್ತಾಗಿ ನೀಡಲು ಸಹಕಾರಿಯಾಗುತ್ತದೆ.

3) ಸಾರ್ವಜನಿಕ ಪ್ರಾಧಿಕಾರ ಕೆಲವು ಹಂತದ ತಯಾರಿ ಮಾಡಿಕೊಂಡಿದ್ದರೆ, ಸಾರ್ವಜನಿಕರಿಗೆ ಮಾಹತಿ ನೀಡಲು ಸಾಧ್ಯ.

ಎ) ಸ್ವಯಂ ಸ್ಫೂರ್ತಿಯಿಂದ ಮಾಹಿತಿ ಸಂಗ್ರಹಣೆ.

ಬಿ) ಸಾಕಷ್ಟು ಮಾಹಿತಿ ಸಂಗ್ರಹಿಸಿಡುವುದು.

ಸಿ) ಈ ಮಾಹಿತಿಯನ್ನು ಕಾಲಕಾಲಕ್ಕೆ ಉನ್ನತೀಕರಿಸುವುದು.

ಡಿ) ವಿವಿಧ ವಾರ್ತಾ ಸಾಧನಗಳ ಮೂಲಕ ಮಾಹಿತಿ ಸಂಗ್ರಹಿಸುವುದು.

ಇ) ಇದರಿಂದ ಅರ್ಜಿದಾರರು/ಸಾರ್ವಜನಿಕರು ತನಗೆ ಅವಶ್ಯಕ ಮಾಹಿತಿಯನ್ನು ಪಡೆಯಲು ಕನಿಷ್ಠ ಶ್ರಮ ವಹಿಸಬೇಕಾಗಲು ಅವಕಾಶ. ಅಂದರೆ ಕನಿಷ್ಠ ಶ್ರಮದಿಂದ ಗರಿಷ್ಠ ಮಾಹಿತಿ.

4) ಮಾಹಿತಿಯನ್ನು ಸಕ್ರಿಯ/ಕ್ರಿಯಾಶೀಲತೆ ಮೂಲಕ ಪ್ರಸಾರ ಮಾಡಲು ಕ್ರಮವಿಡುವುದು.

ಎ) ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗಲು ವ್ಯವಸ್ಥೆ ಮಾಡುವುದು.

ಬಿ) ಸುಲಭ ಬೆಲೆಗೆ ಸಿಗುವ ವ್ಯವಸ್ಥೆ.

ಸಿ) ಆ ಪ್ರದೇಶದ ಭಾಷೆಯಲ್ಲಿ ಮಾಹಿತಿ ಲಭ್ಯತೆ ವ್ಯವಸ್ಥೆ.

ಡಿ) ವಿದ್ಯುನ್ಮಾನದ ಮೂಲಕ ಮಾಹಿತಿ ನೀಡುವುದು.

ಇ) ಉಚಿತವಾಗಿ ಅಥವಾ ಕನಿಷ್ಠ ಹಣದಲ್ಲಿ ಮಾಹಿತಿ ಲಭ್ಯವಾಗುವಂತೆ ಮಾಡುವುದು.

5) ಮಾಹಿತಿ ನೀಡುವ ಅಧಿಕಾರಿಗಳನ್ನು ಹೆಸರಿಸುವುದು

ಪ್ರತಿಯೊಂದು ಆಡಳಿತ ಕಛೇರಿಯಲ್ಲಿ ಒಬ್ಬ ಅಧಿಕಾರಿಯನ್ನು ಹೆಸರಿಸಿ, ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಲು, ಮಾಹಿತಿ ಸಂಗ್ರಹಿಸಲು, ಅರ್ಜಿದಾರನಿಗೆ ಮುಟ್ಟಿಸಲು ಅವಕಾಶ ಕಲ್ಪಿಸಬೇಕು. ಮಾಹಿತಿ ಹಕ್ಕು ಕಾಯಿದೆ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಒಬ್ಬ ಅಧಿಕಾರಿಯನ್ನು ಹೆಸರಿಸಬೇಕು– ಇದು ಕಡ್ಡಾಯ. ಇಂತಹ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ಕರೆಯಲಾಗುತ್ತದೆ. ಕೇಂದ್ರ ಸರ್ಕಾರದ ಪ್ರಕರಣದಲ್ಲಿ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು, ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ಕರೆಯತಕ್ಕದ್ದು. ಇದಕ್ಕೆ ಪೂರಕವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ, ತನಗೆ ಸಹಾಯ ಮಾಡಲು ಪ್ರತಿ ಉಪಕಛೇರಿಗಳಲ್ಲಿ ಸಹಾಯಕರನ್ನು ನೇಮಿಸಿ, ತುರ್ತು ಮಾಹಿತಿ ಸಂಗ್ರಹಣೆ ಮತ್ತು ಮಾಹಿತಿ

ನೀಡಲು ಕ್ರಮ ಜರುಗಿಸಬಹುದು. ಇದಕ್ಕೆ ಪೂರಕವಾಗಿ ಈ ಸಹಾಯಕರು, ಮಾಹಿತಿ ಸಂಗ್ರಹಣೆ, ವಿಳಂಬವನ್ನು ಕಡಿಮೆ ಮಾಡುವುದು, ಯಾವ ಮಾಹಿತಿ ಯಾವ ಕಛೇರಿಯಲ್ಲಿ ಬಾಕಿ ಇದೆ, ಎಷ್ಟು ಸಮಯದಲ್ಲಿ ಮಾಹಿತಿ ಸಂಗ್ರಹಿಸಬಹುದು ಎಂಬ ಮಾಹಿತಿ ಇಂತಹ ಸಹಾಯಕರಿಂದ ಲಭ್ಯವಾಗಬೇಕು. ಸಾರ್ವಜನಿಕ ಮಾಹಿತಿ ಅಧಿಕಾರಿ, ತನಗೆ ಸಹಾಯ ಮಾಡಲು ಮತ್ತಾವುದೇ ಪರಿಣಿತಿ ಹೊಂದಿದ ಅಧಿಕಾರಿಯ ಸಹಾಯ ಪಡೆಯಬಹುದು ಮತ್ತು ಯಾವ ಮೂಲದಿಂದ ಮಾಹಿತಿ ಸಂಗ್ರಹಿಸಬೇಕು ಎಂಬದಕ್ಕೆ ಸಹಕಾರಿಯಾಗುವ ಅಧಿಕಾರಿಗಳು ಸಹ ಮಾಹಿತಿ ಅಧಿಕಾರಿಗಳಾಗುತ್ತಾರೆ.

6) <u>ಅರ್ಜಿಗಳನ್ನು ವರ್ಗಾಯಿಸುವುದು.</u>

ಒಂದು ಅರ್ಜಿಯನ್ನು ಒಂದು ಕಛೇರಿಯಲ್ಲಿನ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸಲ್ಲಿಸಿದಾಗ, ಅರ್ಜಿಯನ್ನು ಪರಿಶೀಲಿಸಿದಾಗ, ಆ ಅರ್ಜಿ ತಪ್ಪಾಗಿ ಅವರ ಕಛೇರಿಗೆ ಸಲ್ಲಿಕೆಯಾಗಿದೆ ಎಂದು ಗಮನಕ್ಕೆ ಬಂದ ಕೂಡಲೆ, ಐದು ದಿವಸದೊಳಗಾಗಿ, ಅಂತಹ ಅರ್ಜಿಯನ್ನು ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ವರ್ಗಾಯಿಸಿ, ಅರ್ಜಿದಾರನಿಗೆ, ವರ್ಗಾವಣೆಯಾದ ಮಾಹಿತಿ ನೀಡಬೇಕು. ಬೇರೆ ಯಾವುದೇ ಕಛೇರಿಯಿಂದ ವರ್ಗಾವಣೆ ಮಾಡಿದ ಅರ್ಜಿಗಳನ್ನು ಸಹ ಸ್ವೀಕರಿಸಿ, ಮಾಹಿತಿ ಸಂಗ್ರಹಿಸಿ, ಅರ್ಜಿದಾರನಿಗೆ ನೀಡಲು ಕ್ರಮವಿಡುವುದು ಅಂತಹ ಅಧಿಕಾರಿಯ ಜವಾಬ್ದಾರಿ.

**<u>ಸಾರ್ವಜನಿಕ ಸಂಪರ್ಕಾಧಿಕಾರಿಗೆ ಸಂಬಂಧಪಟ್ಟ ತೀರ್ಪುಗಳು</u>**

1) ಮಾಹಿತಿ ಕಾಯಿದೆ ಕಲಂ.4(b)(x) ಅನ್ವಯ ಸಾರ್ವಜನಿಕ ಪ್ರಾಧಿಕಾರ ತನ್ನ ನೌಕರರಿಗೆ ಸಂಬಂಧಪಟ್ಟಂತೆ, ಅದರಲ್ಲಿ ಸೂಚಿಸಿರುವ ಮಾಹಿತಿಯನ್ನು ಮಾತ್ರ ನೀಡಬೇಕೆಂಬ ಅಭಿಪ್ರಾಯಕ್ಕೆ, ಕಲಂ.2, 3 ಮತ್ತು 4 ನ್ನು ಒಟ್ಟಾಗೆ ಪರಿಶೀಲಿಸಿದಾಗ, ಕಲಂ.3, 5, 4 ರ ನಿಯಮ ಬದ್ಧ (circumscribed) ಅಥವಾ ಪರಿಲಿಖಿತವಾಗುವುದಿಲ್ಲ. ಕಲಂ.4 ರಲ್ಲಿ ಸೂಚಿಸಿರುವ ಮಾಹಿತಿ ನೀಡಲೇಬೇಕೆಂಬ ಮತ್ತು ಪ್ರಕಟಿಸಲೇಬೇಕೆಂಬ ಶರತ್ತು. ಇದರ ಜೊತೆಗೆ ಕಲಂ.2 ರಲ್ಲಿನ ವಿಷಯ, ಕಲಂ.4ರ ವ್ಯಾಪ್ತಿಯೊಳಗೇ ಇರಬೇಕೆಂದಿಲ್ಲ. ನ್ಯಾಯಾಲಯ ಕಲಂ.4 ರಲ್ಲಿನ ಮಾಹಿತಿಯನ್ನು ಮಾತ್ರ ನೀಡಲು ಪ್ರೋತ್ಸಾಹಿಸಲಿಲ್ಲ. (countenance) ಮಾಹಿತಿ ಆಯುಕ್ತರು ಮಾಹಿತಿ ನೀಡಲು ಆದೇಶಿಸಿದುದನ್ನು ಪ್ರಶ್ನಿಸಿದ ಅರ್ಜಿ ವಜಾಗೊಳಿಸಲಾಯಿತು. 2007 (3) KLT 550/2008 (1) ID 241

2) ಅರ್ಜಿದಾರ ಕಾರ್ಖಾನೆ ಕೆಲಸಕ್ಕೆ ಅರ್ಜಿ ಹಾಕಿದ್ದ. ಆದರೆ ಆ ಅರ್ಜಿ ನಿಗದಿ ಪಡಿಸಿದ ದಿನಾಂಕದ ನಂತರ ಬ್ಯಾಂಕ್ ತಲುಪಿದೆ ಎಂಬ ಕಾರಣಕ್ಕೆ ಅರ್ಜಿ ತಿರಸ್ಕೃತಗೊಂಡಿತು. ಇದನ್ನು ಅರ್ಜಿದಾರನಿಗೆ ಬ್ಯಾಂಕ್ ತಿಳಿಸಿತು. ಅದನ್ನು ಆ ಅರ್ಜಿದಾರ ಪ್ರಶ್ನಿಸಲಿಲ್ಲ. ಇದಕ್ಕೆ ಬದಲಾಗಿ ಬ್ಯಾಂಕು, ಒಬ್ಬ ಸಾರ್ವಜನಿಕ ಮಾಹಿತಿ ಅಧಿಕಾರಿ ನೇಮಿಸಲು ಮತ್ತು ಅಗತ್ಯ ಮಾಹಿತಿ ನೀಡಲೆಂದು ರಿಟ್ ದಾಖಲಿಸಿದ. ನ್ಯಾಯಾಲಯ ನೌಕರರ ನೇಮಕಾತಿ ನಿಯಮ/ಶರತ್ತುಗಳಿಗೊಳ ಪಡಬೇಕು. ಕಡೆಯ ದಿನಾಂಕದ ನಂತರ ಬಂದ ಅರ್ಜಿಯನ್ನು ಪುರಸ್ಕರಿಸುವುದಿಲ್ಲವೆಂಬ ಶರತ್ತಿಗನ್ವಯ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಅದ್ದರಿಂದ ಅಂತಹ ಅರ್ಜಿದಾರ ನೇಮಕಾತಿ ಬಗ್ಗೆ ಮಾಹಿತಿ ಕೇಳಲು ಮತ್ತು ಪಡೆಯಲು ಅಧಿಕಾರ ಹೊಂದಿಲ್ಲ. AIR 2007 Madras 13/2010 (2) ID 459

3) ಒಬ್ಬ ಅರ್ಜಿದಾರ, ತಾನು ಪೋಲೀಸ್ ನಿರೀಕ್ಷರ ಮೇಲೆ ನೀಡಿದ ಅರ್ಜಿಯ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಶ್ನಿಸಿದಾಗ ಮತ್ತು ಅಂಥಹ ಅರ್ಜಿದಾರ ಆಂಗ್ಲಭಾಷೇ ಬರದಿದ್ದರೆ, ಅಂತಹ ವ್ಯಕ್ತಿಗೆ ಆಂಗ್ಲಭಾಷೆ ಗೊತ್ತಿರುವ ಒಬ್ಬ ಸಹಾಯಕನನ್ನು ನೀಡಬೇಕು ಮತ್ತು ಅಂತಹ ವ್ಯಕ್ತಿ ದಾಖಲೆಯನ್ನು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕದ್ದು. AIR 2008 (NOC) 1139

4) ಒಬ್ಬ ಅರ್ಜಿದಾರ ಕೆಲವು ಮಾಹಿತಿ ಕೇಳಿ ಅರ್ಜಿ ಸಲ್ಲಿಸಿದಾಗ, ಕಲಂ.6 ರನ್ವಯ ಅಂತಹ ವ್ಯಕ್ತಿ ಲಿಖಿತವಾಗಿ ಯಾವ ಮಾಹಿತಿ ಬೇಕೆಂದು ಕೇಳಬೇಕು. ಈ ಮಾಹಿತಿ ಪಡೆಯಲು ಅರ್ಜಿ ಹಾಕಿದ ವ್ಯಕ್ತಿ ಮಾಹಿತಿ ಪಡೆಯಬೇಕು. ಇದು ಅವನ ಅಭಿವ್ಯಕ್ತ ಅಧಿಕಾರ. ಮಾಹಿತಿ ಕೇಳುವಾಗ, ಕಾರಣ ನೀಡುವ ಅವಶ್ಯಕತೆ ಇಲ್ಲ. ಕೇಳಿದ ಮಾಹಿತಿ ಪಡೆಯಲು ಅರ್ಜಿದಾರನಿಗೆ ಅಧಿಕಾರಸ್ಥಾನ (locus standi) ಹಕ್ಕಿಲ್ಲ ಎಂದು ತಿಳಿಯತಕ್ಕದ್ದಲ್ಲ. AIR 2008 Jharkhand 19/2008 (1) ID 161

5) ಒಂದು ಸಾರ್ವಜನಿಕ ಕೈಗಾರಿಕೊಧ್ಯಮದ ನೌಕರನು ಪಡೆದ ಹಣಕಾಸು ಸೌಲತ್ತುಗಳನ್ನು ಖಾಸಗಿ ಮಾಹಿತಿ ಎಂದು ತಿಳಿಯತಕ್ಕದ್ದಲ್ಲ. ಮೊದನೇ ವ್ಯಕ್ತಿ, ಅರ್ಜಿದಾರ, ಆ ಮಾಹಿತಿ ಪಡೆಯಲು ಕಾರಣ ನೀಡುವ ಅವಶ್ಯಕತೆ ಇಲ್ಲ. ಆದ್ದರಿಂದ ಒಬ್ಬ ಉಪವ್ಯವಸ್ಥಾಪಕನ ವಾರ್ಷಿಕ ಆದಾಯದ ವಿವರ ಪಡೆಯಬಹುದು. (2008) 2 MLJ 200/2009 (1) ID 7

6) ಮುಂಬೈ ಉಚ್ಚನ್ಯಾಯಾಲಯ, ಕಲಂ.6 ರಲ್ಲಿ ಅರ್ಜಿ ಸಲ್ಲಿಸಿ ಮಾಹಿತಿ ಕೇಳಿದಾಗ, ಆ ಮಾಹಿತಿ ಪಡೆಯುವ ಉದ್ದೇಶ ತಿಳಿಸುವ ಅವಶ್ಯಕವಿಲ್ಲ. ಆದ್ದರಿಂದ ಕೇಳಿದ ಮಾಹಿತಿಯನ್ನು ನೀಡಬೇಕು. ಆದರೆ ಕಲಂ.8 ರಲ್ಲಿ ವಿನಾಯ್ತಿಸಲಾದ ಮಾಹಿತಿ ಪಡೆಯಲಾಗದು. 2010 (2) ID 543

7) ಒಬ್ಬ ವಿದ್ಯಾರ್ಥಿ, ವಿಶ್ವವಿದ್ಯಾಲಯ ನಡೆಸಿದ ಪರೀಕ್ಷೆಯಲ್ಲಿ ಬರೆದ ಉತ್ತರ ಪತ್ರಿಕೆಯ ಪ್ರತಿ ಕೇಳಿದಾಗ, ಅದನ್ನು ಕೊಡಲು ವಿಶ್ವವಿದ್ಯಾನಿಲಯ ನಿರಾಕರಿಸಿತು. ಉತ್ತರ ಪತ್ರಿಕೆ ಮಾಹಿತಿಯಲ್ಲಿ ಎಂಬ ವಿಶ್ವವಿದ್ಯಾನಿಲಯುದ ವಾದವನ್ನು ತಿರಸ್ಕರಿಸಿತು. ಉತ್ತರ ಪತ್ರಿಕೆ ಒಂದು ಹೊಸ ದಾಖಲೆಯಾಗುವುದಿಲ್ಲ. ಮಾಹಿತಿ ಹಕ್ಕು ಕಾಯಿದೆ ಪ್ರಾರಂಭವಾಗುವುದು, ಅರ್ಜಿದಾರ ಮಾಹಿತಿ ಕೇಳುವುದು ಮತ್ತು ಅದು ಮುಕ್ತಾಯವಾಗುವುದು, ಆ ಉತ್ತರ ಪಡೆದ ನಂತರ ಮಾತ್ರ. ಇದು ಮಾಹಿತಿ ಹಕ್ಕು ಕಾಯಿದೆ ಉದ್ದೇಶ. ಮಾಹಿತಿ ನಿರಾಕರಿಸುವುದು ಅಥವಾ ಮಾಹಿತಿ ನೀಡಿದರೆ ಮುಂದೇನಾಗುತ್ತಿದೆ ಎಂಬುದು ಈ ಕಾಯಿದೆ ವ್ಯಾಪ್ತಿಯಿಂದ ಹೊರಗೆ. AIR 2008 cal 118/ 2008 (2) ID 267

8) ಅರ್ಜಿದಾರ ತಾನು ಕೇಳಿದ ಮಾಹಿತಿಯನ್ನು ಯಾವ ಉದ್ದೇಶಕ್ಕಾಗಿ ಕೇಳಿದ್ದಾನೆ ಅಥವಾ ಉಪಯೋಗಿಸುತ್ತಾನೆ ಎನ್ನುವುದು ಸಾರ್ವಜನಿಕ ಮಾಹಿತಿ ಪ್ರಾಧಿಕಾರ ತಿಳಿದುಕೊಳ್ಳುವ ಅಥವಾ ವಿಚಾರಣೆ ಮಾಡುವ ಅಧಿಕಾರ ಇಲ್ಲ. ಈ ಕಾಯಿದೆಯ ಮೂಲ ಉದ್ದೇಶ ಸಾರ್ವಜನಿಕ ಪ್ರಾಧಿಕಾರಗಳನ್ನು ಪಾರದರ್ಶಕ ಮತ್ತು ಜವಾಬ್ದಾರಿಯುತ ಕೆಲಸ ನಿರ್ವಹಿಸುವಂತೆ ಮಾಡುವ ಒಂದು ಕಾಯಿದೆ. ಈ ಕಾಯಿದೆಯ ಮಾಹಿತಿ ನೀಡಬೇಕೆ/ಬೇಡವೇ ಎಂಬ ವಿಷಯ ಪರಿಶೀಲಿಸಲಾಗದು. ಈ ಪ್ರಕರಣದಲ್ಲಿ ಜಿಲ್ಲಾ ಮಾಹಿತಿ ಅಧಿಕಾರಿ, ಅರ್ಜಿದಾರ ಕೇಳಿದ ಮಾಹಿತಿ ನೀಡಲು ಮಾತ್ರ ಜವಾಬ್ದಾರ. AIR 2008 (NOC) 2143 (All) / 2008 (2) ID 176

9) ಕಾಯಿದೆ ಕಲಂ.2(J) ರಲ್ಲಿ ಮಾಹಿತಿ ಎಂಬುದನ್ನು ವಿವರಿಸಿದೆ. ಕಲಂ.3 ರಲ್ಲಿ ಪ್ರತಿ ಪ್ರಜೆ ಮಾಹಿತಿ

ಪಡೆಯುವ ಹಕ್ಕು ಪಡೆಯುತ್ತಾನೆ. ಈ ಮಾಹಿತಿಯನ್ನು ಪಡೆದ ನಂತರ, ಅದೇ ಅರ್ಜಿದಾರ ಮಾಡಿದ ಆದೇಶಕ್ಕೆ ಕಾರಣಗಳೇನೆಂದು ಪ್ರಶ್ನಿಸಿದರೆ, ಅದನ್ನು ನೀಡುವ ಜವಾಬ್ದಾರಿ ಮಾಹಿತಿ ಪ್ರಾಧಿಕಾರಕ್ಕೆ ಇಲ್ಲ. ಅರ್ಜಿದಾರ, ಅಧಿಕಾರಿ ಮಾಡಿದ ಆದೇಶದ ಮೇಲೆ, ಅದು ಅವನಿಗೆ ವ್ಯತಿರಿಕ್ತವಾಗಿದ್ದರೆ, ಅದನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿ ಪರಿಹಾರ ಪಡೆಯಬೇಕು. WP. 11448/2007 – 24-02-2009

10) ಜಮೀನು ಸ್ವಾಧೀನ ಪಡಿಸಿಕೊಂಡ ಬಗ್ಗೆ ಮಾಹಿತಿ ಕೇಳುವ ಅಧಿಕಾರ, ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದಾಗ ನೀಡಬೇಕು/ಪಡೆಯಬೇಕು. ಉಚ್ಚನ್ಯಾಯಾಲಯದಲ್ಲಿ ರಿಟ್ ಮೂಲಕ, ಸರ್ಕಾರದ ನಿಶ್ಚಯತೆ ಬಗ್ಗೆ ಪರಿಹಾರ ನೀಡಲಾಗದು. ರಿಟ್ ಅರ್ಜಿ ಉರ್ಜಿತವಲ್ಲವೆಂದು ವಜಾ ಮಾಡಿತು. AIR 2008 (NOC) 2144

11) ಮಾಹಿತಿ ಹಕ್ಕು ಕಾಯಿದೆ ದಾಖಲೆಯಲ್ಲಿರುವ ಮಾಹಿತಿ ನೀಡಲು ಮಾತ್ರ ಅಧಿಕಾರ ನೀಡುತ್ತದೆ. ಕೇಳಿದ ಮಾಹಿತಿ ಬಗ್ಗೆ ವಿಚಾರಣೆ ಮಾಡಿ ಮಾಹಿತಿ ಸೃಷ್ಟಿ ಮಾಡಿ ನೀಡುವ ಅವಕಾಶವಿಲ್ಲ. ಅಂದರೆ ವಿಚಾರಣೆ ಮಾಡಿ ಮಾಹಿತಿ ಸೃಷ್ಟಿ ಮಾಡಲು ಅವಕಾಶ ಇಲ್ಲ. ದಾಖಲೆಯಲ್ಲಿದ್ದ ಎಲ್ಲಾ ಮಾಹಿತಿ ನೀಡಿದ ನಂತರ, ಅರ್ಜಿದಾರ ನಿವೇಶನ ತಪಾಸಣೆ ಮಾಡಲು ಕೇಳಿದ್ದ, ಅದು ಮಾಹಿತಿ ದಾಖಲೆಯಲ್ಲಿ ಇರಲಿಲ್ಲ. ಆ ಅಧಿಕಾರಿಯ ವರ್ಗಾವಣೆ ನಂತರ, ಮುಂದೆ ಬಂದ ಅಧಿಕಾರಿ ನಿವೇಶನ ತಪಾಸಣೆ ಮಾಡಿ ಮಾಹಿತಿ ಸಂಗ್ರಣೆ ಮಾಡಿದ್ದರೂ, ಮೊದಲ ಅಧಿಕಾರಿ ಅವಶ್ಯಕವಾದ ಮಾಹಿತಿ ನೀಡಿದ್ದ – ಮುಂದಿನ ಕ್ರಮಗಳ ಮಾಹಿತಿ, ಅವನ ನಿಯಂತ್ರಣದಲ್ಲಿ ಇರಲಿಲ್ಲ. ಆದ್ದರಿಂದ, ಅಂತಹ ವ್ಯಕ್ತಿ ಮಾಹಿತಿ ನೀಡಿಲ್ಲವೆಂದು ತಿಳಿಯತಕ್ಕದ್ದಲ್ಲ.

12) ಮಾಹಿತಿ ಹಕ್ಕು ಕಾಯಿದೆಯಲ್ಲಿನ ಮೂಲ ಉದ್ದೇಶ ಕೇಳಿದ ಮಾಹಿತಿ ನೀಡುವುದು. ಈ ಮಾಹಿತಿ ನೀಡಲು ಯಾವುದೇ ವಿಚಾರಣೆ ಮಾಡಿ, ಮಾಹಿತಿ ಸೃಷ್ಟಿಸಿ ನೀಡುವ ಉದ್ದೇಶದಿಂದಲ್ಲ. ಏಕ ಸದಸ್ಯ ಪೀಠ ರೂ.25,000/– ದಂಡವನ್ನು ಕಿತ್ತುಹಾಕಿ ವಿಭಾಗೀಯ ಪೀಠ ಆದೇಶಿಸಿತು ಇದಕ್ಕೆ ಪೂರಕವಾಗಿ, ಈಗಾಗಲೇ ಶ್ರೇಷ್ಠ ನ್ಯಾಯಾಲಯ ನೀಡಿದ್ದ 2011 (2) ID 100/2011-04-2W 289/2011 (7) MLJ 1237/(2011) 8 SCC 497/2011 AIR SCW 4888/2011 (3) KLT SN 117 (C-120) ಅನ್ನು ಉಲ್ಲೇಖಿಸಿತು. AIR 2012 Patna 60

13) ಮಾಹಿತಿ ಕೇಳುವುದು ಎಂದರೆ ಅರ್ಜಿದಾರ ಕೇಳಿದ ಮಾಹಿತಿಗೆ ಉತ್ತರ ನೀಡುವುದಲ್ಲ. ಒಬ್ಬ ಅರ್ಜಿದಾರ ಕೇಳಿದ ಮಾಹಿತಿಯಲ್ಲಿ ಆದೇಶ ಮಾಡಲು ಕಾರಣ ಕೇಳಿದರೆ, ನೀಡುವ ಅವಶ್ಯಕತೆ ಕಾಯಿದೆಯಡಿ ಪ್ರಸ್ತಾಪವಾಗುವುದಿಲ್ಲ ಮತ್ತು ಅಂತಹ ಮಾಡಿದ ಆದೇಶಗಳನ್ನು ಸಮರ್ಥಿಸಲು ಸಹ ಕಾರಣ ನೀಡಬೇಕಾಗಿಲ್ಲ. ಕಾರಣಗಳ ಬಗ್ಗೆ ಮಾಹಿತಿ ಪಡೆಯಬೇಕಾದರೆ ಅದು ಸಂಬಂಧಪಟ್ಟ ಪ್ರಾಧಿಕಾರಗಳ ಮುಂದೆ ಪ್ರಶ್ನಿಸಿ ಪರಿಹಾರ ಪಡೆಯಬೇಕು. ಸಾರ್ವಜನಿಕ ಮಾಹಿತಿ ಪ್ರಾಧಿಕಾರ, ಮಾಹಿತಿ ಇಲ್ಲ ಅಥವಾ ನನಗೆ ಗೊತ್ತಿಲ್ಲ ಎಂದರೆ ಅದು ತಪ್ಪು ಮಾಹಿತಿ ನೀಡಿದಂತಾಗುವುದಿಲ್ಲ. AIR 2008 Bombey 120/2008 (2) ID 386/2008 (3) KLT SN 84 (C-103)

14) ಒಬ್ಬ ಅರ್ಜಿದಾರ, ಒಂದು ಮರಣ ಶಾಸನ ಜಾರಿ ಮಾಡುವಾಗ ಕಂದಾಯ ಇಲಾಖೆಯಲ್ಲಿ ತನ್ನ ಹೆಸರು ದಾಖಲಿಸಲು, ನಿರಾಕರಿಸಿದಾಗ (ಅದಕ್ಕೆ ಕಾರಣ ಆಸ್ತಿ ಸರ್ವೆ ಸಂಖ್ಯೆ ಸರಿಯಿಲ್ಲವೆಂದು) ಅದಕ್ಕೆ ಅರ್ಜಿದಾರ, ಹಿಂಬರಹ ಯಾವಾಗ ನೀಡಲಾಯಿತು ಮತ್ತು ಅದನ್ನು ಮುಟ್ಟಿಸಿದ ಬಗ್ಗೆ ಪತ್ರಗಳ

ಬಗ್ಗೆ ಕೇಳಿರುವುದು ಅಸಂಬದ್ಧ. ಏಕೆಂದರೆ ಇದು ಮಾಹಿತಿ ಹಕ್ಕು ಕಾಯಿದೆ ಉದ್ದೇಶವಲ್ಲ. ಅರ್ಜಿದಾರ, ಅಂತಹ ತೀರ್ಮಾನಕ್ಕೆ ಮೇಲ್ಮನವಿ ಸಲ್ಲಿಸಿ ಪರಿಹಾರ ಪಡೆಯಬೇಕೇ ಹೊರತು, ಮಾಹಿತಿ ಹಕ್ಕು ಕಾಯಿದೆಯಡಿ ಅಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯ ಅರ್ಜಿಯನ್ನು ವಜಾಗೊಳಿಸಿತು. WP. 10646/2007 – 18-06-2008

15) ಮಾಹಿತಿ ಆಯೋಗ, ಒಂದು ಪ್ರಕರಣದಲ್ಲಿ ಪೂರ್ವಭಾವಿ ವಿಚಾರಣೆ ಮಾಡುತ್ತಿರುವಾಗ 30 ದಿವಸಗಳ ಅವಧಿ ನಂತರ ಉಚಿತ ಮಾಹಿತಿ ನೀಡಬೇಕೆಂದಿದೆ. ಆದರೆ ಪ್ರಕರಣ ವಿಚಾರಣೆ ನಡೆಸಿ, ಮಾಹಿತಿ ನೀಡಲು ಆಯೋಗ ನಿರ್ದೇಶನ ನೀಡಿತ್ತು ಮತ್ತು ಮಾಹಿತಿ ಪ್ರಮಾಣ ಹೆಚ್ಚಿರುವುದರಿಂದ 60 ದಿವಸಗಳ ಅವಧಿ ನೀಡಲಾಯಿತು. ಆಯೋಗವು ಪ್ರಕರಣವನ್ನು ದಾಖಲಿಸಿಕೊಂಡು ಮಾಹಿತಿ ನೀಡಲು ಆದೇಶಿಸಿದ ನಂತರ, ಕಲಂ.7 ರಂತೆ ಪ್ರಕರಣದ ಮೊದಲನೇ ದಿನದಿಂದಲೇ ಲೆಕ್ಕ ಹಾಕಬೇಕು. ಪ್ರತಿ ಪುಟಕ್ಕೆ ರೂ.2/– ಎಂದು ನಿಗದಿ ಪಡಿಸಿದ್ದು, 60 ದಿನ ಸಂದಿದ್ದರೂ – ಮಾಹಿತಿ ನೀಡದೇ ಇದ್ದುದರಿಂದ, ಆಯೋಗದ ಆದೇಶ ಸಮಂಜಸ ಆದೇಶವಾಗಿದ್ದು ಮಧ್ಯಪ್ರವೇಶ ಅವಶ್ಯಕವಿಲ್ಲ ವೆಂದು ಉಚ್ಚನ್ಯಾಯಾಲಯ ವಜಾ ಮಾಡಿತು. 2009 (1) ID 556

16) ಮಾಹಿತಿ ಆಯುಕ್ತರು ಒಂದು ಸಹಕಾರ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಂತೆ, ಒಂದು ನ್ಯಾಯಾಲಯದ ಆದೇಶದನ್ವಯ ದಾಖಲೆಗಳನ್ನು ಒಂದು ಟ್ರಂಕ್‌ನಲ್ಲಿ ಭದ್ರ ಪಡಿಸಿ ನಿಬಂಧಕರ ವಶದಲ್ಲಿದ್ದುದನ್ನು ನೀಡಲು ಆದೇಶಿಸಿದ್ದರು. ಆಯುಕ್ತರು ಟ್ರಂಕ್‌ನ್ನು ತೆರೆದು ದಾಖಲೆಯನ್ನು ನೀಡಲು ಸೂಚಿಸಿದ್ದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ರಿಟ್ ದಾಖಲಿಸಿದಾಗ, ಅದು ಕಲಂ.18(3) ರನ್ವಯ ವೆಸ್ಟ್‌ಬೆಂಗಾಲ್ ಸಹಕಾರ ಸಂಘಗಳ ಕಾಯಿದೆ ಕಲಂ.134 ಮತ್ತು 143 ರಡಿ ಅನ್ವಯವಾಗುವುದಿಲ್ಲವೆಂದು ಮತ್ತು ದಾಖಲೆ ಕೇಳಿರುವುದು, ಒಂದು ಸಹಕಾರ ಸಂಘಗಳ ಸಭಾ ನಡಾವಳಿಕೆಗಳ 1985ರ ಪ್ರತಿ. ಇಂತಹ ಪ್ರಸಂಗದಲ್ಲಿ ಈ ನಡಾವಳಿಗಳನ್ನು ಗುಪ್ತವೆಂದು ನೀಡಲಾಗದಿದ್ದರೆ, ಅದರ ಬಗ್ಗೆ ಆದೇಶವಾಗಬೇಕು. ಇಂತಹ ತೀರ್ಮಾನವನ್ನು ನ್ಯಾಯಾಲಯಗಳು ನೀಡಬೇಕು ಹಾಗೂ ಇದನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ನೀಡುವ ಅಧಿಕಾರವಿಲ್ಲ. ಆದ್ದರಿಂದ ಮಾಹಿತಿ ಆಯೋಗದ ಆಯುಕ್ತರ ಆದೇಶವನ್ನು ಕಿತ್ತು ಹಾಕಿತು. ಇದರ ಜೊತೆಗೆ ನಿಬಂಧಕರು ಮತ್ತು ಸಹಕಾರ ಸಂಘಕ್ಕೆ ಅವಕಾಶ ನೀಡದೇ ಆದೇಶ ಮಾಡಿರುವುದು ಸರಿಯಲ್ಲ. AIR 2009 Cal 129/2009 (2) ID 140

17) ಮಾಹಿತಿ ಹಕ್ಕು ಕಾಯಿದೆ ಸದುಪಯೋಗ ಮಾಡಿಕೊಳ್ಳುವುದು ಸಾರ್ವಜನಿಕರ ಜವಾಬ್ದಾರಿ. ಆದರೆ ಮಾಹಿತಿ ಪಡೆಯುವ ಉದ್ದೇಶ – ಮಾಹಿತಿ ಇರಲೆಂದು ಮಾತ್ರಕ್ಕಲ್ಲ. ಏಕೆಂದರೆ, ಈ ಮಾಹಿತಿ ನೀಡಲು ಪ್ರತಿಯೊಂದು ಸಂಸ್ಥೆ ಅಧಿಕಾರಿಗಳ ಶ್ರಮ ವಹಿಸಬೇಕು – ಸದುದ್ದೇಶವಲ್ಲದಿದ್ದರೆ, ಈ ಮಾಹಿತಿ ನೀಡುವ ಶ್ರಮ ಬೇಕಾಗುವುದಿಲ್ಲ. ಆದ್ದರಿಂದ ಮಾಹಿತಿ ಕೇಳುವ ವ್ಯಕ್ತಿ ಜವಾಬ್ದಾರಿಯುತನಾಗಿರಬೇಕು – ಏಕೆಂದರೆ ಸಂಪನ್ಮೂಲವನ್ನು ಸದುಪಮಾಡಿಕೊಂಡಾಗ ಮಾತ್ರ, ಅದರ ಸಾರ್ಥಕತೆ ಇರುತ್ತದೆ. AIR 2009 (NOC) 1362/2009 (2) ID 167

18) ಸಿವಿಲ್ ನ್ಯಾಯಾಲಯದಲ್ಲಿ ದಾವಾ ಹೂಡಿದಾಗ ದಾಖಲೆಗಳನ್ನು ಸಿ.ಪಿ.ಸಿ ಕಾಯಿದೆಯಲ್ಲಿ ನೀಡಬೇಕು/ಪಡೆಯಬೇಕು – ಮಾಹಿತಿ ಕಾಯಿದೆಯಡಿ ಅಲ್ಲ. ಒಂದು ಸಿವಿಲ್ ಪ್ರಕರಣದಲ್ಲಿ ಸಿ.ಪಿ.ಸಿ ನಿಯಮ 6 ರಂತೆ ಮಾಹಿತಿ ಕೇಳಿದಾಗ, ಅದನ್ನು ಮಾಹಿತಿ ಹಕ್ಕು ಕಾಯಿದೆಯಡಿ ಪಡೆಯಬೇಕೆಂದು

ತಿರಸ್ಕರಿಸತಕ್ಕದ್ದಲ್ಲ ಎಂಬ ಆದೇಶಕ್ಕೆ ಉಚ್ಚನ್ಯಾಯಾಲಯ ಮಾಹಿತಿ ಹಕ್ಕು ಕಾಯಿದೆಯಡಿ ದಾಖಲೆ ಪಡೆಯಬಹುದೆಂಬ ಕಾರಣದಿಂದ, ಸಿ.ಪಿ.ಸಿ ನಿಯಮ 6 ರಡಿ ಸಲ್ಲಿಸಿದ ಅರ್ಜಿ ತಿರಸ್ಕರಿಸಲಾಗದು. ಸಮನ್ಸ್ ಜಾರಿ ಮಾಡಬೇಕೆಂದು ಅರ್ಜಿ ಸಲ್ಲಿಸಿದಾಗ ಅದು ಸಿವಿಲ್ ಪ್ರಕರಣಕ್ಕೆ ಸಂಬಂಧಪಟ್ಟಿದೆ ಎಂದಾಗ ಮಾತ್ರ – ಮಾಹಿತಿ ಹಕ್ಕು ಕಾಯಿದೆಯಡಿ ಅಲ್ಲ. 2009 (2) KLT 4/ AIR 2009 Kar 104/ 2009 (2) ID 91

19) ಒಂದು ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದಾಗ, ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸದೇ ಇರುವುದರಿಂದ, ಆ ಮಾಹಿತಿ ನೀಡುವ ಅವಶ್ಯಕತೆ ಇಲ್ಲ ಎಂದು ತೀರ್ಮಾನಿಸಲಾಗದು. ಕಲಂ.6 ರನ್ವಯ ಯಾವ ಕಾರಣಕ್ಕೆ ಮಾಹಿತಿ ಕೇಳಿ ಅರ್ಜಿ ಸಲ್ಲಿಸಲಾಗಿದೆ ಎಂದು ತಿಳಿಸಬೇಕಾಗಿಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಮಾಹಿತಿಗಾಗಿ ಅರ್ಜಿ ಸಲ್ಲಿಸಲಾಗಿದೆ ಎಂಬ ಕಾರಣದಿಂದ ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ನೀಡಲಾಗದು ಎಂದು ತಿಳಿಯತಕ್ಕದ್ದಲ್ಲ. ಇದರಲ್ಲಿ ನಕಲು ಪಡೆಯಲು ಫಿ ಪಾವತಿ ಬಗ್ಗೆ ಮಾಹಿತಿ ಕಾಯಿದೆಯಡಿ ಅವಕಾಶ ಇದೆ. ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸ ಲಾಗಿದೆ ಎಂಬ ಕಾರಣದಿಂದ ಮಾಹಿತಿ ಹಕ್ಕು ಕಾಯಿದೆಯಲ್ಲಿ ಅರ್ಜಿ ಸಲ್ಲಿಸಿದಾಗ ಮಾಹಿತಿ ನಿರಾಕರಿಸತಕ್ಕದ್ದಲ್ಲ. 2008 (1) ID 9

20) ಪ್ರಾಧಿಕಾರಗಳು, ಅವರ ನ್ಯಾಯಾಂಗದ ಕೆಲಸ ನಿರ್ವಹಿಸುವ ಸಮಯದಲ್ಲಿ ಮತ್ತು ತೀರ್ಮಾನ ನೀಡುವಾಗ ಕಾರಣಗಳನ್ನು ನೀಡಬೇಕಾಗಿಲ್ಲ. ನ್ಯಾಯಾಲಯಗಳ ಪ್ರಕರಣಗಳ ವಿಚಾರಣೆ ನಡೆಸಿ ತೀರ್ಮಾನ/ಆದೇಶ ನೀಡುವಾಗ, ಆ ತೀರ್ಮಾನಕ್ಕೆ ಕಾರಣಗಳನ್ನು ನೀಡಬೇಕು. ಆದರೆ ಈ ಪ್ರಕರಣದಲ್ಲಿ ಅರ್ಜಿದಾರ, ದಾಖಲೆಯಲ್ಲಿರುವ ಕೆಲವು ದಾಖಲೆಗಳನ್ನು, ಆದೇಶ ನೀಡುವ/ಮಾಡುವಾಗ ಪರಿಗಣಿಸಲಿಲ್ಲವೇಕೆ ಎಂದು ಪ್ರಶ್ನಿಸಿದಾಗ, ಅದು ಮಾಹಿತಿ ಆಗುವುದಿಲ್ಲ. ನ್ಯಾಯಾದೀಶರ ಮನಸ್ಸಿನಲ್ಲಿ ಏನಿತ್ತ ಎಂಬುದು ದಾಖಲೆಯಲ್ಲಿ ಆದೇಶ ಮಾಡುವಾಗ ಯಾವುದಾದರೂ ದಾಖಲೆಯನ್ನು ಪರಿಗಣಿಸದಿದ್ದರೆ, ಅದನ್ನು ಮೇಲ್ಮನವಿ ಮೂಲಕ ಪರಿಹಾರ ಪಡೆಯಬೇಕೆ ಹೊರತು, ಅದೇ ನ್ಯಾಯಾದೀಶರ ಮುಂದೆ ಪ್ರತಿಪಾದಿಸಲಾಗದು. AIR 2009 AP 174/2009 (2) ID 313

ಸೂಚನೆ : ಈ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ AIR 2010 SC 615/2010 (1) CTC 355/(2010) 1 MLJ 1319/2010 (1) ID 287/2010-2-LW-136 ರಲ್ಲಿ ದೃಡೀಕರಿಸಿದೆ.

21) ಒಂದು ಖಾಸಗಿ ಸಂಸ್ಥೆ ಸಾರ್ವಜನಿಕ ಪ್ರಾಧಿಕಾರವಾಗಬೇಕಿಲ್ಲ. ಆದರೆ ಸಾರ್ವಜನಿಕ ಪ್ರಾಧಿಕಾರ ಯಾವುದೇ ಖಾಸಗಿ ಸಂಸ್ಥೆಯಿಂದ ಪಡೆಯಲು ಕಾಯಿದೆಯಲ್ಲಿ ಅವಕಾಶ ನೀಡಲಾಗಿದೆಯೋ, ಅಂತಹ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯಿದೆ ಕಲಂ.2(f) ರಲ್ಲಿ ಪಡೆಯಬಹುದಾಗಿದೆ. ಯಾವುದೇ ಖಾಸಗಿ ಸಂಸ್ಥೆಯಿಂದ ಮಾಹಿತಿ ಪಡೆಯುವ ಹಕ್ಕಿನ ಬಗ್ಗೆ ಶರತ್ತುಗಳು ಅಥವಾ ಮಿತಿಗಳನ್ನು ನಿಗದಿ ಪಡಿಸಿದ್ದರೆ, ಅವುಗಳನ್ನು ಪೂರೈಸಬೇಕು. ಒಂದು ಖಾಸಗಿ ಶಾಲೆ, ಸಾರ್ವಜನಿಕ ಪ್ರಾಧಿಕಾರ, ಮಾಹಿತಿ ನೀಡಲು ನಿರ್ದೇಶಿಸತಕ್ಕದ್ದಲ್ಲ. ಏಕೆಂದರೆ ಅಂತಹ ಮಾಹಿತಿ ಪಡೆಯಲು ಸಾರ್ವಜನಿಕ ಪ್ರಾಧಿಕಾರಕ್ಕೆ ಹಕ್ಕು ಇಲ್ಲ ಎಂದು ಮತ್ತು ಅದು ಕಲಂ.8 ರನ್ವಯ ವಿನಾಯ್ತಿ ಇದೆ ಎಂದು ಪ್ರತಿ ಪಾದಿಸಬಹುದು. ಒಂದು ವಿದ್ಯಾ ಸಂಸ್ಥೆಯಲ್ಲಿ ವಿದ್ಯಾ ಇಲಾಖೆ ನಾಮನಿರ್ದೇಶನ ಮಾಡಿದ ಒಬ್ಬ ಅಧಿಕಾರಿ ನೇಮಿಸಿದ್ದರೆ, ಸಭಾ ನಡವಳಿಕೆಗಳ ಪ್ರತಿಯನ್ನು ಸದಸ್ಯರಿಗೆ ಕಳುಹಿಸಬೇಕೆಂದಿದ್ದರೆ, ಅಂತಹ

ನಡವಳಿಕೆಗಳ ಪ್ರತಿ ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆ. 2010 (1) ID 61

22) ಮಾಹಿತಿ ಆಯುಕ್ತರು, ಉಚಿತವಾಗಿ ಕರ್ನಾಟಕ ಉಚ್ಚನ್ಯಾಯಾಲಯದ ಕಾಯಿದೆ ಮತ್ತು ನಿಯಮಗಳನ್ನು ಸಲ್ಲಿಸಲು ಆದೇಶಿಸಿದಾಗ, ಅದನ್ನು ಕರ್ನಾಟಕ ಉಚ್ಚನ್ಯಾಯಾಲಯ ತಿರಸ್ಕರಿಸಿತು. ಯಾವುದೇ ವ್ಯಕ್ತಿ ಉಚ್ಚನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣದ ದಾಖಲೆಗಳ ಪ್ರಮಾಣೀಕೃತ ಪ್ರತಿ ಪಡೆಯಲು ನಿಯಮದಲ್ಲಿ ಅವಕಾಶವಿದೆ. ಮಾಹಿತಿ ಆಯುಕ್ತರು ಈ ಮಾಹಿತಿಯನ್ನು (ಕಾಯಿದೆ ಮತ್ತು ನಿಯಮಗಳ ಪ್ರತಿಯು ಉಚಿತವಾಗಿ ಸಲ್ಲಿಸಲು) ನೀಡಿದ ಆದೇಶ ಅಸಿಂದು ಮತ್ತು ನ್ಯಾಯಾ ಬದ್ಧವಲ್ಲ. AIR 2010 Kar 64

23) ಸಾರ್ವತ್ರಿಕ ಚುನಾವಣೆಗೆ ಸಂಬಂಧಪಟ್ಟಂತೆ ಒಂದು ಪ್ರಕರಣದಲ್ಲಿ, ಚುನಾವಣೆ ನಂತರ, ಮತ ಪತ್ರಗಳು, ಇವಿಎಂ ಮತ್ತು ನಿಯಂತ್ರಣ ಯಂತ್ರ ಭದ್ರ ಪಡಿಸಿದ ನಂತರ (sealed) ಅದನ್ನು ತೆರೆಯಬೇಕಾದರೆ ಸಂಬಂಧಪಟ್ಟ ನ್ಯಾಯಾಧಿಕಾರದ ಆದೇಶದ ನಂತರವೇ. ಕಾಯಿದೆಯಲ್ಲಿ ಯಾವ ರೀತಿ ಕಾರ್ಯನಿರ್ವಹಿಸಬೇಕೆಂದಿದೆಯೇ, ಅದೇ ರೀತಿ ಮಾಡಬೇಕು. ಅದಕ್ಕೆ ವಾಮಮಾರ್ಗವಲ್ಲ. ಈ ಪ್ರಕರಣದಲ್ಲಿ ಮಾಹಿತಿ (information) ನೀಡುವುದರ ಜೊತೆ ಅದನ್ನು ದೃಢೀಕರಿಸಿ (confirmation) ಬೇಕು ಎಂಬ ಬೇಡಿಕೆಯನ್ನು ಪುರಸ್ಕರಿಸಲಿಲ್ಲ. ಒಮ್ಮೆ ಭದ್ರ ಪಡಿಸಿದ ಮಾಹಿತಿಯನ್ನು ಮತ್ತು ತೆರೆಯಬೇಕಾದರೆ, ಅದು ನ್ಯಾಯಾಲಯದ ಆದೇಶದ ಮುಖಾಂತರ, ಇಲ್ಲವಾದರೆ ಅದನ್ನು ನ್ಯಾಯಾಲಯದ ಆದೇಶ ವಿಲ್ಲದೇ ತೆರೆದಾಗ, ಮತ ಪತ್ರಗಳು, ಮತ ಚಲಾವಣೆ ವಿಭಾಗ ಮತ್ತಿತರ ಮಾಹಿತಿ ಲಭ್ಯವಾಗುತ್ತದೆ. ಆದ್ದರಿಂದ ಅಂತಹ ಆದೇಶ ನೀಡಲಾಗದು. ಅಂತಹ ಆದೇಶ ನೀಡಬೇಕಾದರೆ, ಸಂಬಂಧಪಟ್ಟ ನ್ಯಾಯಾಲಯದ ಆದೇಶದಂತೆ ತೆರೆಯಬಹುದು. 2010 (1) ID 433

24) ಕೇಂದ್ರ ಮಾಹಿತಿ ಆಯುಕ್ತರು (CIC) ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗೆ, ಅರ್ಜಿದಾರನಿಗೆ ಮಾಹಿತಿ ನೀಡಲು ಸೂಚಿಸಿತ್ತು, ಮುಂದುವರಿದು ನಿರ್ದೇಶಿಸಿದ್ದೇನೆಂದರೆ ಪ್ರತಿಯೊಬ್ಬ ಸೂಪರಿಟೆಂಡೆಂಟ್/ಮೇಲ್ವಿಚಾರಕರನ್ನು ಸೂಕ್ಷ್ಮ ಹುದ್ದೆಗಳಿಗೆ ನೇಮಿಸಿದ ಮಾಹಿತಿ ಸಂಗ್ರಹಿಸಿ, ಅವರ ಕಾರ್ಯನಿರ್ವಹಣೆ ಬಗ್ಗೆ ನಿಗಾ ವಹಿಸಲು ಸೂಚಿಸಿರುವುದು, ಅಧಿಕಾರ ವಿಸ್ತರಿಸಿದಂತೆ. ಮಾಹಿತಿ ಕಲೆ ಹಾಕುವ ವಿಧಾನದಲ್ಲಿ ಮಾರ್ಪಾಡು ಮಾಡಬೇಕಿದ್ದರೂ, ಅದನ್ನು ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ವ್ಯಾಪ್ತಿಗೆ ಸೇರುತ್ತಿದೆ. ಆದರೆ ಮಾಹಿತಿ ಆಯೋಗ/ಆಯುಕ್ತರು ಆದೇಶ ಮಾಹಿತಿಗೆ ಸಂಬಂಧಪಟ್ಟಂತೆ ಮಾತ್ರ ನೀಡಬೇಕು. 2010 (1) ID 482

25) ಮಾಹಿತಿ ಹಕ್ಕು ಕಾಯಿದೆಯಡಿ ದಾಖಲಿಸಿದ ಅರ್ಜಿಗಳಿಗೆ ನಿಗದಿ ಪಡಿಸಿದ ಹಣ ಪಾವತಿ ಮಾಡಿದರೆ ಮಾತ್ರ ನೀಡಬೇಕು. ಕಾನೂನಿನಲ್ಲಿ ಸ್ಪಷ್ಟವಾಗಿ ನಮೂದಿಸಿರುವುದು, ಅರ್ಜಿದಾರ ಹಣ ಪಾವತಿಯಲ್ಲಿ ವಿನಾಯ್ತಿ ನೀಡಲಾಗದು. ಸಾರ್ವಜನಿಕ ಪ್ರಾಧಿಕಾರ ಲಾಭದ ದೃಷ್ಟಿಯಿಂದ ಹಣ ಪಡೆಯುತ್ತಿಲ್ಲ. ಮಾಹಿತಿ ನೀಡಲು ಕನಿಷ್ಠ ಪ್ರಮಾಣದ ಹಣ ನಿಗದಿ ಪಡಿಸಿದೆ. CCP 612/2007 - 26-08-2008

26) ಸಂಬಂಧಪಟ್ಟ ಸರ್ಕಾರ, ಮಾಹಿತಿ ಹಕ್ಕು ಕಾಯಿದೆಯಲ್ಲಿ ಪ್ರತಿ ಪುಟಕ್ಕೆ ತಗಲುವ ವೆಚ್ಚವನ್ನು ಪ್ರಕಟಣೆ ಮೂಲಕ ನಿಗದಿ ಪಡಿಸಬಹುದು. ಅದರಂತೆ ಪ್ರತಿ ಪುಟಕ್ಕೆ ರೂ.10ನ್ನು (A-4 & A-3) ನಿಗದಿ ಪಡಿಸಿರುವುದು ಸರಿ. ಅರ್ಜಿದಾರರು ಈ ಹಣವನ್ನು ನೀಡದೇ ಇದ್ದರೆ, ಪ್ರತಿ ನೀಡಲು ಸಾಧ್ಯವಿಲ್ಲ.

ಮಾಹಿತಿ ಆಯುಕ್ತರು ಉಚಿತ ನಕಲು ನೀಡಲು ಮಾಡಿದ ಆದೇಶವನ್ನು ಕಿತ್ತು ಹಾಕಿತು (ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ.) WP. 19692/2008 - 26-10-2009

27) ಅರ್ಜಿದಾರನ ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿಯ ಜೊತೆ ಫಿ ನೀಡಬೇಕು. ಆದರೆ ಹೆಚ್ಚುವರಿ ಹಣ ಬೇಡಿದಾಗ, ಅದನ್ನು 30 ದಿವಸದೊಳಗಾಗಿ ಕೇಳಬೇಕು. ಈ ಪ್ರಕರಣದಲ್ಲಿ ಅರ್ಜಿಯನ್ನು 19–01–2007 ರಲ್ಲಿ ನೀಡಿದ್ದ ಮಾಹಿತಿಯನ್ನು 30–06–2008 ರಂದು ನೀಡಿದೆ. ಇದರಲ್ಲಿ ಹೆಚ್ಚುವರಿ ಫಿ ತುಂಬಲು 28–04–2008 ರಂದು ಸೂಚಿಸಿದ್ದು ಅರ್ಜಿ ದಿನಾಂಕದಿಂದ ಮೂವತ್ತು ದಿವಸದೊಳಗಲ್ಲ. ಆದ್ದರಿಂದ ಅಂತಹ ವ್ಯಕ್ತಿಗೆ ದಂಡ ವಿಧಿಸುವುದು ಅವಶ್ಯಕ ಎಂದು ಕೇರಳ ಉಚ್ಚನ್ಯಾಯಾಲಯ ಆದೇಶಿಸಿತು. WP. 2170/2009 - 22-01-2009

28) ದೆಲ್ಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ, ಮಾಹಿತಿ ಆಯುಕ್ತರು, ಸಾರ್ವಜನಿಕ ಮಾಹಿತಿ ಅಧಿಕಾರರಿಗೆ ಪ್ರಕರಣದ ಟಿಪ್ಪಣಿ ಅಥವಾ ಸೂಚನೆ ಇದ್ದರೆ ನೀಡಬೇಕೆಂದು ಆದೇಶಿಸಿದ್ದನ್ನು, ವಿಮರ್ಷಿಸಿ, ಆಯುಕ್ತರ ಆದೇಶದ ಮುಂದುವರಿದ ಭಾಗದಲ್ಲಿ, ಆಯುಕ್ತ ಯಾವುದೇ ದಾಖಲೇ ಇಲ್ಲವೆಂದು ತೀರ್ಮಾನಿಸಿದ್ದು, ಇದಕ್ಕೆ ವಿರುದ್ದವಾಗಿ ನಕಲು ನೀಡಲು ಆದೇಶಿಸಿರುವುದು ತಪ್ಪು. ಮನೋಹರ್ ಸಿಂದ್ VS NTPC ಪ್ರಕರಣ ದಿನಾಂಕ 11–01–2008ರ ತೀರ್ಮಾನದಂತೆ.

29) ಮಾಹಿತಿ ಆಯುಕ್ತರು ಮಾಹಿತಿ ನೀಡಲು ಆದೇಶಿಸಿದ ನಂತರ ಮಾಹಿತಿ ನೀಡದೇ ಇರುವುದು. ಕಾನೂನಿಗೆ ವಿರುದ್ದ. ಮಾಹಿತಿ ಹಕ್ಕು ಕಾನೂನು ರೂಪಿಸಿರುವುದೇ ಸಾರ್ವಜನಿಕರಿಗೆ ಮಾಹಿತಿ ನೀಡಲು ಸರ್ಕಾರದ ಇಲಾಖೆಗಳು ಮಾಹಿತಿ ನೀಡಲು ಸೋಂಬೇರಿತನ ಒಳ್ಳೆಯದಲ್ಲ. ಇದು ಪಾರದರ್ಶಕತೆ ನೀತಿಗೆ ವಿರುದ್ದ ಎಂದು ಆಂದ್ರಪ್ರದೇಶ ಉಚ್ಚನ್ಯಾಯಾಲಯ ತೀರ್ಮಾನಿಸಿತು. WP. 4109/2008 - 11-04-2008

30) ಮಾಹಿತಿ ಹಕ್ಕು ಕಾಯಿದೆಯಡಿ, ಮಾಹಿತಿಯನ್ನು ಆ ಭಾಗದ ಭಾಷೆಯಲ್ಲಿ ನೀಡಬೇಕು. ಅರ್ಜಿದಾರ ತನಗೆ ಗೊತ್ತಿರುವ ಭಾಷೆಯಲ್ಲಿ ಅರ್ಜಿ ನೀಡಬಹುದು. ಉತ್ತರಖಾಂಡ ರಾಜ್ಯದ ಭಾಷೆ ಹಿಂದಿಯಾಗಿದ್ದು, ಅದೇ ಭಾಷೆಯಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಪ್ರಕರಣದಲ್ಲಿ ರಾಜ್ಯ ಭಾಷೆಯದ (ರಾಷ್ಟ್ರ ಭಾಷೇಯೂ ಹೌದು) ಹಿಂದಿಯಲ್ಲಿ ಸಲ್ಲಿಸಿದು, ಮಾಹಿತಿಯನ್ನು ಹಿಂದಿ ಭಾಷೆಯಲ್ಲಿ ನೀಡಿಲ್ಲ ಮತ್ತು ಅದೇ ಭಾಷೆಯಲ್ಲಿ ದಾಖಲೆ ಇಲ್ಲದೇ ಇದ್ದರೆ ಅದನ್ನು ತರ್ಜಿಮೆ ಮಾಡಿಸಿ ಕೊಡುವ ಜವಾಬ್ದಾರಿ ಮಾಹಿತಿ ಆಯೋಗದ ಜವಾಬ್ದಾರಿ. AIR 2010 UTR 55/2010 (2) ID 562

ಸೂಚನೆ : ಇದೇ ನಿಲುವನ್ನು ಉತ್ತರಖಾಂಡ್ ಉಚ್ಚನ್ಯಾಯಾಲಯ 2011 (2) ID 6 ರಲ್ಲಿ ಸಮರ್ಥಿಸಿದೆ.

31) ಜಬ್ಬಲ್‌ಪುರ್ ದಂಡು ಮಂಡಳಿ (Jabalpur Contonement Board) ತನ್ನ ಮಂಡಳಿಯಲ್ಲಿ A–4 ಅಳತೆಯ ಪ್ರತಿ ಪುಟಕ್ಕೆ ರೂ.50/– ಎಂದು ನಿಗದಿ ಪಡಿಸಿದ್ದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನಿಯಮಗಳನ್ನು ರೂಪಿಸುವ ಅಧಿಕಾರ ಪುರಸಭೆಗೆ ಅನ್ವಯವಾಗುವಂತೆ ನೀತಿ ಪ್ರಕಾರ ದರವನ್ನು ನಿಗದಿ ಪಡಿಸಿದ್ದರೂ, ಈ ಮಂಡಳಿಗೆ ನಿಯಮ ರೂಪಿಸುವ ಅಧಿಕಾರದ, ಸಕ್ಷಮ ಪ್ರಾಧಿಕಾರವಲ್ಲ ಮಧ್ಯಪ್ರದೇಶದ ಉಚ್ಚನ್ಯಾಯಾಲಯ ನಿಯಮ ರೂಪಿಸುವ ಅಧಿಕಾರ ದಂಡು ಮಂಡಳಿಗೆ ಇಲ್ಲ. ಆದ್ದರಿಂದ ಜಬ್ಬಲ್‌ಪುರ್ ದಂಡು ಮಂಡಳಿ ಪ್ರತಿ ಪುಟಕ್ಕೆ ರೂ.50/– ನಿಗದಿ

ಪಡಿಸಿರುವುದನ್ನು ರದ್ದುಗೊಳಿಸಿತು. AIR 2009 MP 121/2009 (2) ID 150

32) ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯದ ಮುಂದೆ ಒಂದು ಅರ್ಜಿ ಸಲ್ಲಿಸಿ ರೂ.1,01,400/– ಫಿ ತುಂಬಿದರೆ ದಾಖಲಾತಿ ನೀಡಲಾಗುವುದೆಂದು ಕೇಳಿರುವುದು ತಪ್ಪು ಎಂದು ವಾದಿಸಿದಾಗ, ಉಚ್ಚನ್ಯಾಯಾಲಯ ಇಂತಹ ಬೇಡಿಕೆ ತಪ್ಪು ಎಂದು ಪರಿಗಣಿಸಿ ಸಾರ್ವಜನಿಕ ಪ್ರಾಧಿಕಾರಗಳು, ಪಾರದರ್ಶನ ನೀತಿಯನ್ನು ಅನುಸರಿಸಬೇಕೆಂಬ ನೀತಿಯಿಂದ ದಾಖಲೆಗಳನ್ನು ನೀಡುವಾಗ ಸಾರ್ವಜನಿಕರಿಗೆ ಆದಾಯ ಖರ್ಚನ್ನು ಲೆಕ್ಕ ಹಾಕತಕ್ಕದ್ದಲ್ಲ ಮತ್ತು ಈ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಲು ಹೆಚ್ಚುವರಿ ನೌಕರರ ನೇಮಕ ಮತ್ತು ಅವರಿಗೆ ನೀಡಬೇಕಾದ ಸಂಬಳ ಇತ್ಯಾದಿ ಸೇರಿಸಿ ಫಿ ಕೇಳತಕ್ಕದ್ದಲ್ಲ. ಆದ್ದರಿಂದ ಈ ರೀತಿ ಹಣ ಕೇಳುವುದು ತಪ್ಪು ಎಂದು ತೀರ್ಮಾನಿಸಿತು. AIR 2010 Pand H 182/2011 (1) ID 233

33) ಕೇರಳ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಸಾರ್ವಜನಿಕ ಸೇವಾ ಆಯೋಗ, (PSC) ಸಾರ್ವಜನಿಕ ಪ್ರಾಧಿಕಾರವಲ್ಲ. ಮಾಹಿತಿ ಕಾಯಿದೆ ಕೇರಳ ಸಾರ್ವಜನಿಕ ಸೇವಾ ಆಯೋಗ ಅನ್ವಯವಾಗುವುದಿಲ್ಲ ಎಂಬ ವಾದವನ್ನು ಪರಿಗಣಿಸಬೇಕಿಲ್ಲ. ಏಕೆಂದರೆ ಮಾಹಿತಿ ಹಕ್ಕು ಕಾಯಿದೆಯಲ್ಲಿ "ಮಾಹಿತಿ" ಎಂಬ ಪದದ ಅರ್ಥ ವಿವರಣೆಯಲ್ಲಿ ಬರುವುದರಿಂದ, ಶಾಸಕಾಂಗ ಮಾಹಿತಿ ಕಾಯಿದೆ ರಚಿಸುವಾಗ ಇದನ್ನು ಪರಿಗಣಿಸಿದೆ ಎಂದು ತಿಳಿಯಬೇಕು. ಆದ್ದರಿಂದ ಮಾಹಿತಿ ಹಕ್ಕು ಕಾಯಿದೆಯಲ್ಲಿನ ಅರ್ಥ ವಿವರಣೆ ಅನ್ವಯವಾಗತಕ್ಕದ್ದು. 2011 (2) KLT 88

34) ಕೇರಳ ಉಚ್ಚನ್ಯಾಯಾಲಯ, ಒಬ್ಬ ರಾಜ್ಯ ಸರ್ಕಾರಿ ನೌಕರನನ್ನು, ರಾಜ್ಯ ಮಾಹಿತಿ ಅಧಿಕಾರಿ ಎಂದು ಹೆಸರಿಸಿದಾಗ, ಅವನಿಗೆ ಮಾಡಲು ಬೇರೆ ಕೆಲಸ ವಿರುವುದರಿಂದ, ಅರ್ಜಿದಾರರು ಸಲ್ಲಿಸಿದ ಅರ್ಜಿ ಪರಿಗಣಿಸಿ, ತುರ್ತಾಗಿ ಕ್ರಮ ಜರುಗಿಸಲಾಗದು ಎಂದು ಹೇಳತಕ್ಕದ್ದಲ್ಲ. ಅಂತಹ ನೌಕರ ಮಾಹಿತಿ ಕಾಯಿದೆಯಡಿ ಹೆಸರಿಸಲಾದ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದ ನಂತರ, ಅವನು ಬೇರೆ ಕೆಲಸವಿದೆ ಎಂಬ ಕಾರಣದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಬೇರೆ ಕೆಲಸದ ಒತ್ತಡ ಇದೆ ಎಂದು ಮಾಹಿತಿ ಹಕ್ಕು ಕಾಯಿದೆ ಜವಾಬ್ದಾರಿ ನಿರ್ವಹಿಸಲಾಗದೆಂದು ತಿಳಿಯತಕ್ಕದ್ದಲ್ಲ. 2011 (2) ID 211

35) ಒಂದು ರಾಜ್ಯದ ರಾಜ್ಯಪಾಲರು ಸಾರ್ವಬೌಮ ಎಂದು, ಅವರಿಗೆ ಮಾಹಿತಿ ನೀಡಲು ನಿರ್ದೇಶನ ನೀಡಬಹುದೇ ಎಂಬ ಪ್ರಶ್ನೆ ಬಂದಾಗ, ಬಾಂಬೆ ಉಚ್ಚನ್ಯಾಯಾಲಯ ನೀಡಬಹುದು ಎಂದು ತೀರ್ಪಿತ್ತದೆ. ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರು ಕಾರ್ಯಾಂಗದ ಮುಖ್ಯಸ್ತರು. ಸಂವಿಧಾನ ಪೂರಕವಾಗಿ ಮಂತ್ರಿ ಮಂಡಳದ ಶಿಫಾರಸ್ ಅನ್ವಯ ಕಾರ್ಯನಿರ್ವಹಿಸ ಬೇಕು. ರಾಷ್ಟ್ರಪತಿ ಮತ್ತು ರಾಜ್ಯಪಾಲರು ಮಂತ್ರಿ ಮಂಡಳದ ತೀರ್ಮಾನಗಳಿಗೆ ಒಪ್ಪಿಗೆ ನೀಡಲು ಭದ್ದರಾಗಿರಬೇಕು. ರಾಷ್ಟ್ರಪತಿ ಮತ್ತು ರಾಜ್ಯಪಾಲರು ಮಾಡುವ ಕರ್ತವ್ಯಗಳಿಗೆ ನಿರ್ವಹಣೆ ಸಂದರ್ಭದಲ್ಲಿ ಸಂವಿಧಾನದಲ್ಲಿ ನೀಡಿದ ಲಿಖಿತ ಮೂಲಕ ಸಂವಿಧಾನದಲ್ಲಿ ರಕ್ಷಣೆ (immunity) ನೀಡಲಾಗಿದೆ. ಇನ್ನಿತರ ಪ್ರಸಂಗದಲ್ಲಿ ರಾಷ್ಟ್ರಪತಿ ಮತ್ತು ರಾಜ್ಯಪಾಲರು ಮಾಹಿತಿ ಕಾಯಿದೆಯಡಿ ಬರುತ್ತಾರೆ. ಅಂದರೆ ಮಾಹಿತಿ ಕಾಯಿದೆ 8(1)(ಎ) ಮತ್ತು ಸಂವಿಧಾನದ ಅನುಚ್ಛೇದ 361 ರಲ್ಲಿನ ರಕ್ಷಣೆ ಹೊರತು ಪಡಿಸಿ, ಉಳಿದೆಲ್ಲ ಕ್ರಿಯೆಗಳಿಗೆ ಮಾಹಿತಿ ಹಕ್ಕು ಕಾಯಿದೆ ಅನ್ವಯವಾಗುತ್ತಿದೆ. AIR 2012 Bombey 71/2012 (1) ID 22

36) ಸಾರ್ವಜನಿಕ ಮಾಹಿತಿ ಪ್ರಾಧಿಕಾರಿ ಅರ್ಜಿದಾರನಿಗೆ ಮಾಹಿತಿ ನೀಡಲು, ವಿವರಗಳನ್ನು ನೀಡಲು ಕೇಳತಕ್ಕದ್ದಲ್ಲ. ಒಬ್ಬ ಅರ್ಜಿದಾರ ಮಾಹಿತಿ ಕಾಯಿದೆ ಕಲಂ.6 ರನ್ವಯ ತನಗೆ ನೀಡಲಾದ ಜಮೀನನ್ನು ಸರ್ಕಾರ ಭೂಸ್ವಾದೀನ ಮಾಡಿಕೊಂಡಿದೆಯೇ? ಹಾಗಿದ್ದರೆ ನೀಡಿದ ಪರಿಹಾರದ ಹಣದ ವಿವರ ಕೇಳಿದಾಗ ಅಧಿಕಾರಿ, ಜಮೀನು ಸಂಖ್ಯೆ ಮತ್ತು ಭೂಸ್ವಾಧೀನ ಆದೇಶದ ಸಂಖ್ಯೆ ನೀಡಲು, ಅರ್ಜಿದಾರನನ್ನು ಕೇಳಿದಾಗ, ಅಂತಹ ಮಾಹಿತಿಯನ್ನು ಕೇಳುವ ಅಧಿಕಾರಿಗಳು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಮತ್ತು ಜವಾಬ್ದಾರಿಯಿಂದ ನುಣುಚಿಕೊಳ್ಳಲು ನಡೆಸಿದ ಕ್ರಿಯೆ. ಸಾರ್ವಜನಿಕ ಮಾಹಿತಿ ಅಧಿಕಾರಿಗೆ, ಕೇಳುವ ಮಾಹಿತಿ ನೀಡಲು ಆದೇಶಿಸಲಾಯಿತು. WP. 21565/2011 - 09-02-2012

37) ಸಾರ್ವಜನಿಕ ಮಾಹಿತಿ ಅಧಿಕಾರಿ ತನ್ನ ಕೆಲಸವನ್ನು ಕೆಳವರ್ಗದ ಅಧಿಕಾರಿ ಮಧ್ಯ ವಾಹಕನಾಗತಕ್ಕದ್ದಲ್ಲ. ಈ ಅಧಿಕಾರಿ ಅರ್ಜಿ ಸಲ್ಲಿಸಿದ ನಂತರ ಮತ್ತೊಬ್ಬರಿಗೆ ವರ್ಗಾಯಿಸಿ ಮಾಹಿತಿ ಬಂದ ನಂತರ ಅರ್ಜಿದಾರನಿಗೆ ನೀಡುವ ಕೆಲಸವಷ್ಟೆ ಅಲ್ಲ. ಈ ಮಾಹಿತಿ ಅಧಿಕಾರಿ ಮಾಹಿತಿಗೆ ಅರ್ಜಿ ಬಂದಾಗ, ಅರ್ಜಿಯನ್ನು ಪರಿಶೀಲಿಸಿ, ಮಾಹಿತಿ ಪಡೆದ ನಂತರ, ಆ ಮಾಹಿತಿ ಸಮರ್ಪಕವಾಗಿದೆಯೇ, ಅಥವಾ ಆ ಮಾಹಿತಿ ನೀಡಲು ವಿನಾಯ್ತಿ ಇದೆಯೇ, ಎಂದು ಮಾಹಿತಿ ಅಧಿಕಾರಿ ಸ್ವತಂತ್ರವಾಗಿ ಯೋಜನೆ ಮಾಡಿ, ತನ್ನ ಜವಾಬ್ದಾರಿ ನಿರ್ವಹಿಸಬೇಕು. ಮಾಹಿತಿ ಪಡೆದ ನಂತರ ವಿವೇಚನೆ ಮಾಡದೆ, ಕೆಳ ಅಧಿಕಾರಿ ನೀಡಿದ ಮಾಹಿತಿಯನ್ನು ಯಾಂತ್ರಿಕವಾಗಿ ಅರ್ಜಿದಾರನಿಗೆ ನೀಡುವುದಷ್ಟೇ ಅಲ್ಲ. ಮುಖ್ಯ ಮಾಹಿತಿ ಆಯುಕ್ತರು ವಿಧಿಸಿದ ದಂಡ ರೂ.25,000/– ವನ್ನು ವಿವಿಧ ಅಧಿಕಾರಿಗಳಿಗೆ ಹಂಚಿರುವುದು ತಪ್ಪಲ್ಲ. ಮಧ್ಯಪ್ರವೇಶ ಅವಶ್ಯಕವಿಲ್ಲ. (ದೆಹಲಿ ಉಚ್ಚನ್ಯಾಯಾಲಯ) 2012 (1) ID 391

38) ಪಾಟ್ನ ಉಚ್ಚನ್ಯಾಯಾಲಯ, ಒಬ್ಬ ವ್ಯಕ್ತಿ ತನ್ನ ಮಾಹಿತಿ ಅರ್ಜಿಯನ್ನು ನೇರವಾಗಿ ಆಯೋಗದ ಮುಂದೇ ಸಲ್ಲಿಸಬಹುದೇ ಎಂಬುದನ್ನು ದೃಡೀಕರಿಸಿ, ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮಾಹಿತಿ ನೀಡಲು ಸೂಚಿಸಿದ್ದನ್ನು ದೃಡೀಕರಿಸಿತು. ಇದರಲ್ಲಿ ಅಡಕವಾಗಿರುವ ವಿಷಯ, ಒಬ್ಬ ವ್ಯಕ್ತಿ ಆಯ್ಕೆ ಮಾಡುವಾಗ, ಆ ವ್ಯಕ್ತಿ ದೃಷ್ಟಿ ಅಂಗಹೀನತೆಯಿಂದ ಬಳಲತ್ತಿರುವ ಬಗ್ಗೆ ವ್ಯದ್ಯಕೀಯ ಪ್ರಮಾಣ ಪತ್ರ ನೀಡಿದ್ದರೆ ಮತ್ತು ಇದನ್ನು ಮೆಡಿಕಲ್ ಮಂಡಳಿ ದೃಡೀಕರಿಸಿದೆಯೇ ಎಂಬ ಮಾಹಿತಿ ಲಭ್ಯತೆ ಬಗ್ಗೆ ಕೇಳಿದ್ದರು. ಇದರ ಜೊತೆಗೆ ಶಿಕ್ಷಕರಾಗಿ ಆಯ್ಕೆಯಾದ ವ್ಯಕ್ತಿಗಳು ಅರ್ಹರಿದ್ದರೆ ಎಂಬ ಮಾಹಿತಿ ಕೇಳಿದ್ದರು. ಮಾಹಿತಿ ಆಯುಕ್ತರು ಅರ್ಜಿಯನ್ನು ನೇರವಾಗಿ ಸ್ವೀಕರಿಸಿ ಆದೇಶಿಸಿರುವುದು ನ್ಯಾಯಸಮ್ಮತವಾಗಿದೆ ಎಂದು ತೀರ್ಮಾನಿಸಿತು. ಅಂದರೆ ಅರ್ಜಿ ಸ್ವೀಕರಿಸಿದ ನಂತರ ನೋಟೀಸ್ ಜಾರಿ ಮಾಡಿ, ಉತ್ತರ ನೀಡಲು ಅವಕಾಶ ನೀಡಲಾಗಿತ್ತು. ಇದಕ್ಕೆ ಪೂರಕವಾಗಿ ಮಾಹಿತಿ ಆಯುಕ್ತರು ನೀಡಿದ ನಿರ್ದೇಶನ ಮತ್ತು ರಊ.25,000/– ದಂಡ ವಿಧಿಸಿದ್ದನ್ನು ಸಮರ್ಥಿಸಿತು.

ಈ ಏಕ ಸದಸ್ಯ ಪೀಠದ ಆದೇಶವನ್ನು ವಿಭಾಗೀಯ ಪೀಠ ರದ್ದು ಪಡಿಸಿತು. ಇದಕ್ಕೆ ವಿಭಾಗೀಯ ಪೀಠ ನೀಡಿದ ಕಾರಣ ಮಾಹಿತಿ ಆಯೋಗ ಅರ್ಜಿ ಸ್ವೀಕರಿಸಿದ ನಂತರ ವಿವಿಧ ರೀತಿಯ ಮಾಹತಿ ಪಡೆದು – ಅದರಲ್ಲಿ ವಿವಿಧ ಶಾಖೆ (Blocks) ಗಳಿಂದಲೂ ಮಾಹಿತಿ ಪಡೆಯಿತು. ಮಾಹಿತಿ ನೀಡಲು ಆದೇಶಿಸಿ ಅದರಲ್ಲಿ ಮಾಹಿತಿ ನೀಡದಿದ್ದರೆ ದಂಡವನ್ನು ವಿಧಿಸಲಾಗುವುದೆಂದು ಸೂಚಿಸಿತು. ಇದಕ್ಕೆ ವಿಭಾಗೀಯ ಪೀಠ, ಆಯುಕ್ತರು ಅರ್ಜಿದಾರ ಕೇಳಿದ ಮಾಹಿತಿ ನೀಡಲು ಮಾತ್ರ ಕ್ರಮ ಜರುಗಿಸಬೇಕಾಗಿತ್ತು. ಇದರ ಜೊತೆಗೆ ಆಯುಕ್ತರು ಹೆಚ್ಚುವರಿ ಮಾಹಿತಿ ಕೇಳಿದ್ದು, ಈ ಮಾಹಿತಿ

ನೀಡಿದರೆ ಅದು ಆಯ್ಕೆ ಪ್ರಕ್ರಿಯೆ ಮೇಲೆ ಮತ್ತು ಒಂದು ಸಂಸ್ಥೆ, ಅಧಿಕಾರ, ಜವಾಬ್ದಾರಿ, ಕಾರ್ಯನಿರ್ವಹಣೆ ಮತ್ತು ವ್ಯಾಪ್ತಿಯ ಬಗ್ಗೆ ಮಧ್ಯಪ್ರವೇಶಿಸಿದಂತಾಗಿದೆ. ಇದು ಸಂಸ್ಥೆಯಲ್ಲಿ ಭಯ ಹುಟ್ಟಿಸುವ ಕ್ರಮ ಸರಿಯಲ್ಲ. ಈ ಪ್ರಕರಣದಲ್ಲಿ ದೃಷ್ಟಿ ಅಂಗಹೀನತೆ ಬಗ್ಗೆ ಶೇ.100 ರಷ್ಟು ಇದ್ದರೂ, ಅದನ್ನು ಪ್ರಶ್ನಿಸಲಿಲ್ಲ. ಆದರೆ ಮಾಹಿತಿ ಆಯೋಗ, ಕಾನೂನು ಬಾಹಿರವಾಗಿ ಆಯ್ಕೆ ಪ್ರಕ್ರಿಯೆ ಬಗ್ಗೆ ಮಧ್ಯಪ್ರವೇಶ ಮಾಡಿರುವುದು ತಪ್ಪು. ಏಕ ಸದಸ್ಯ ಪೀಠದ ಆದೇಶವನ್ನು ಕಿತ್ತುಹಾಕಿ, ಮರು ವಿಚಾರಣೆಗೆ ಮಾಹಿತಿ ಆಯೋಗಕ್ಕೆ ರವಾನಿಸಿತು. CWJC No.13476/2008 - 09-09-2010 / LPA No.1812/2010 - 09-03-2011

11) ಕಂಪನಿ ಕಾಯಿದೆ ಕಲಂ.610 ರಲ್ಲಿ ಕಂಪನಿ ನಿಬಂಧಕರು ಕೆಲವು ತಃಖ್ತೆಗಳ ಮತ್ತು ಮಾಹಿತಿಯನ್ನು ಪ್ರತಿ ನೋಂದಾಯಿತ ಕಂಪನಿ ಬಗ್ಗೆ ನಿರ್ವಹಿಸಬೇಕು. ಇದು ಸಾರ್ವಜನಿಕರಿಗೆ ಲಭ್ಯವಾಗುತ್ತಿದೆ. ಏಕೆಂದರೆ ಪ್ರತಿಯೊಂದು ನೋಂದಾಯಿತ ಕಂಪನಿ ಮಾಹಿತಿ ನೀಡುವುದು ಕಡ್ಡಾಯ ಮತ್ತು ಅದನ್ನು ನಿರ್ವಹಿಸುವುದು ಕಂಪನಿ ನಿಬಂಧಕರ ಕರ್ತವ್ಯ. ಎರಡನೇಯದಾಗಿ ಕಂಪನಿ ಕಾಯಿದೆಯನ್ನು ನಿರ್ವಹಿಸುವ ಜವಾಬ್ದಾರಿಯಡಿ, ನೋಂದಾಯಿತ ಸಂಸ್ಥೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಕಛೇರಿ ನಿರ್ವಹಿಸುವ ಬಗ್ಗೆ. ಈ ರೀತಿ ನಿರ್ವಹಿಸಿದ ದಾಖಲೆಗಳು ಮಾಹಿತಿ ಹಕ್ಕು ಕಾಯಿದೆಯಲ್ಲಿಯೇ ಪಡೆಯಲು ಅವಕಾಶ ಇದೆ. ಒಂದು ಕಂಪನಿಗೆ ಸಂಬಂಧಪಟ್ಟಂತೆ, ಕಂಪನಿ ಆಯುಕ್ತರು ಪಡೆಯ ಬಹುದಾದ (ಕಲಂ.610ರ ಹೊರತಾಗಿ) ಇನ್ನಿತರ ಮಾಹಿತಿಗಳು ಸಹ ಸಾರ್ವಜನಿಕ ಮಾಹಿತಿ ಎಂದು ಪರಿಗಣಿಸಬೇಕು. ಏಕೆಂದರೆ ಆ ಮಾಹಿತಿಯನ್ನು ಕಂಪನಿ ನಿಬಂಧಕರು ಸಂಗ್ರಹಿಸುತ್ತಾರೆ. ಎರಡೂ ಕಾಯಿದೆಗಳು ಸಾರ್ವಜನಿಕರಿಗೆ ಮಾಹಿತಿ ಪಡೆಯುವ ಅಧಿಕಾರ ಇದೆ. ಅಂದರೆ ಮಾಹಿತಿ ಕಾಯಿದೆಯಲ್ಲಿ ಪಡೆಯಬಹುದೆಂದು, ಅದು ಕಂಪನಿ ಕಾಯಿದೆ ಅನ್ವಯವಾಗದು ಎಂದು ತಿಳಿಯತಕ್ಕದ್ದಲ್ಲ. ಕಂಪನಿ ಕಾಯಿದೆ ಒಂದು ನಿರ್ದಿಷ್ಟ ಗುಂಪಿನ ಸಂಸ್ಥೆಗಳಿಗೆ ಸಂಬಂಧಪಟ್ಟ, ಒಂದು ವಿಶೇಷ ಕಾಯಿದೆ ಆದರೆ ಮಾಹಿತಿ ಹಕ್ಕು ಕಾಯಿದೆ, ಪ್ರತಿಯೊಬ್ಬ ಭಾರತೀಯ ಪ್ರಜೇಯೂ ಪಡೆಯಬಹುದಾದ ಅವಕಾಶ. ಇದು ಕಂಪನಿ ಕಾಯಿದೆ ಕಲಂ.610ಕ್ಕೆ ನಿರ್ವಹಣೆಗೆ ಯಾವುದೇ ಅಡಚಣೆ ಇಲ್ಲ. WP. 11271/2009 - 01-06-2012

**ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ನೀಡಲು ಕೆಲವು ಪಟ್ಟಿ ಮಾಡಿದ ವಿಷಯಗಳಲ್ಲಿ ವಿನಾಯ್ತಿ ಇದೆ**

1) ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯಗಳು ತಮ್ಮ ತೀರ್ಮಾನಗಳಲ್ಲಿ ಮೂಲ ಭೂತ ಹಕ್ಕುಗಳ ಬಗ್ಗೆ ಪ್ರಸ್ತಾಪಿಸಿ, ಪ್ರತಿ ಪ್ರಜೆಯ ವಾಕ್ ಸ್ವಾತಂತ್ರ್ಯ ಮತ್ತು ಲಿಖಿತವಾಗಿ ಪ್ರಕಟಿಸುವ ಬಗ್ಗೆ ಉಲ್ಲೇಖಿಸುತ್ತದೆ. ಸಂವಿಧಾನದ ಅನುಚ್ಛೇದ 19 ರಲ್ಲಿ ನೀಡಿದ ಸ್ವಾತಂತ್ರ್ಯ, ಎಷ್ಟು ಪ್ರಮಾಣದಲ್ಲಿ ಅನ್ವಯಸುತ್ತದೆ ಎಂದು ಅಗಿಂದಾಗ್ಗೆ ತೀರ್ಪುಗಳನ್ನು (ನ್ಯಾಯಾಲಯಗಳು) ನೀಡುತ್ತಿರುತ್ತವೆ. ಮೂಲ ಭೂತ ಹಕ್ಕು ನೀಡಿರುವುದು, ಕೆಲವು ಶರತ್ತುಗಳೊಂದಿಗೆ. ರಾಷ್ಟ್ರದ/ ರಾಜ್ಯದ ಕೆಲವು ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡಲಾಗುವುದಿಲ್ಲವೆಂದು ಉಲ್ಲೇಖಿಸಲಾಗಿದೆ. ಸರ್ಕಾರ ನಡೆಸುವಾಗ ಕೆಲವು ತೀರ್ಮಾನಗಳ ಬಗ್ಗೆ ಸಾರ್ವಜನಿಕವಾಗಿ ಪ್ರಕಟಿಸಬೇಕಾಗಿಲ್ಲ. ಸರ್ಕಾರ ತನ್ನ ಆಡಳಿತಾವಧಿಯಲ್ಲಿ ಕೆಲವು ಪ್ರಸಂಗಳಲ್ಲಿ ತೆಗೆದುಕೊಂಡ ತೀರ್ಮಾನಗಳು, ಆಡಳಿತದ ವ್ಯಾಪ್ತಿಯಿಂದ ಪ್ರಕಟಿಸಲಾಗದು, ಆದರೂ ನ್ಯಾಯಾಲಯಗಳು ಯಾವ ಮಾಹಿತಿ ನೀಡಬಹುದು ಎಂಬ ಬಗ್ಗೆ ಅಗಿಂದಾಗ್ಗೆ ಆದೇಶಿಸುತ್ತಿದೆ. ಈ ದೃಷ್ಟಿಯಿಂದ ಮಾಹಿತಿ ಹಕ್ಕು ಕಾಯಿದೆಯಡಿ ಕೆಲವು ವಿಷಯಗಳ ಬಗ್ಗೆ ಮಾಹಿತಿ

ನೀಡಲು ವಿನಾಯ್ತಿ ನೀಡಲಾಗಿದೆ. ಸಾರ್ವಜನಿಕ ಮಾಹಿತಿ ಅಧಿಕಾರಿ, ಸಾರ್ವಜನಿಕರಿಗೆ ಮಾಹಿತಿ ನೀಡುವಾಗ, ಅಂತಹ ಮಾಹಿತಿ, ವಿನಾಯ್ತಿಯಡಿ ಬರುತ್ತಿದ್ದರೆ, ಅಂತಹ ಮಾಹಿತಿ ಸಂಗ್ರಹಿಸಲಾಗದು ಮತ್ತು ನೀಡಲಾಗದು.

2) ಮಾಹಿತಿ ಹಕ್ಕು ಕಾಯಿದೆಯ ಕಲಂ.8 ಮತ್ತು 9 ರಲ್ಲಿ ಯಾವ ಮಾಹತಿ ನೀಡಲಾಗದು ಎಂದು ಪಟ್ಟಿ ಮಾಡಿದೆ. ಇದಲ್ಲಿ 10 ಅಂಶಗಳನ್ನು ಸೇರಿಸಿದೆ. ಇದಕ್ಕೆ ಹೊರತು ಪಡಿಸಿ, ಮತ್ತಾವುದೇ ವಿಷಯದಲ್ಲಿ ಅರ್ಜಿ ಸಲ್ಲಿಸಿದಾಗ ಮಾಹಿತಿ ಆಯೋಗ ಮಾಡುವ ತೀರ್ಮಾನಕ್ಕೆ ಪೂರಕವಾಗಿ ಮಾಹಿತಿ ನೀಡಬಹುದು.

1. ದೇಶದ ಸಾರ್ವಭೌಮತ್ವ, ಭದ್ರತೆ, ನೀತಿ, ವಿಜ್ಞಾನ ಮತ್ತು ಸ್ವಾಭಿಮಾನಕ್ಕೆ ಸಂಬಂಧಪಟ್ಟ ಮಾಹಿತಿ ನೀಡಿದರೆ ಅದು ಒಂದು ಅಪರಾಧ.

2. ಯಾವ ವಿಷಯವನ್ನು ಪ್ರಕಟಿಸಬಾರದೆಂದು ನ್ಯಾಯಾಲಯ ಆದೇಶಿಸಿದ್ದರೆ.

3. ಯಾವ ಮಾಹಿತಿಯನ್ನು ನೀಡಿದರೆ ಅದು ಸಂಸತ್ತಿನ ಅಥವಾ ವಿಧಾನ ಸಭೆಗಳ ಸಾರ್ವಭೌಮತ್ವಕ್ಕೆ ತೊಡಕಾಗುತ್ತಿದ್ದರೆ.

4. ವಿದೇಶಗಳಿಂದ ಸ್ವೀಕರಿಸಿದ ಗುಪ್ತ ಮಾಹಿತಿ.

5. ಯಾವ ಮಾಹಿತಿಯನ್ನು ನೀಡಿದರೆ ಮಾಹಿತಿದಾರರ ಜೀವಕ್ಕೆ ತೊಡಕಾಗುತ್ತಿದೆಂದು ಭಾವಿಸಿದರೆ.

6. ಯಾವ ಮಾಹಿತಿ ನೀಡಿದರೆ, ವಿಚಾರಣೆ ಮಾಡಲು ತೊಡಕಾಗುತ್ತಿದೆ ಎಂದು ಮನಗಂಡರೆ.

7. ಕೇಂದ್ರ ಮಂತ್ರಿ ಮಂಡಳದ/ರಾಜ್ಯ ಮಂತ್ರಿ ಮಂಡಳದ ಸಭೆಗಳ, ನೀಡಿದ ಟಿಪ್ಪಣಿ, ಮತ್ತಿತರ ಮಾಹಿತಿ.

ಸೂಚನೆ : ಸಂಪುಟ ತೀರ್ಮಾನವಾದ ನಂತರ ಟಿಪ್ಪಣಿ, ತೀರ್ಮಾನಗಳ ಬಗ್ಗೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಹಕ್ಕಿದೆ. ಆದರೆ ವಿನಾಯ್ತಿ ನೀಡಲಾದ ವಿಷಯದಲ್ಲಿ ಮಾಹಿತಿ ನೀಡತಕ್ಕದ್ದಲ್ಲ.

8. ವ್ಯಯಕ್ತಿಕ ಮಾಹಿತಿ ನೀಡಿದರೆ, ಅದು ವ್ಯಕ್ತಿ ಸ್ವಾತಂತ್ರಕ್ಕೆ ಧಕ್ಕೆಯಾಗುವುದಿಲ್ಲ ಎಂಬ ಬಗ್ಗೆ ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯುಕ್ತರು ತೀರ್ಮಾನಿಸಿದಾಗ, ಆದರೆ ಯಾವ ಮಾಹಿತಿಯನ್ನು ಸಂಸತ್ತು ಮತ್ತು ವಿಧಾನ ಮಂಡಳಗಳಿಗೆ ನಿರಾಕರಿಸದೇ ಇದ್ದಾಗ, ಅದು ಸಾರ್ವಜನಿಕರಿಗೂ ಲಭ್ಯವಾಗುತ್ತಿದೆ.

ಇದರ ಜೊತೆಗೆ ಸಾಮಾನ್ಯವಾಗಿ ವಿನಾಯ್ತಿ ನೀಡುವ ಉದ್ದೇಶ (1) ವ್ಯವಹಾರದ ಗುಪ್ತ ಮಾಹಿತಿ ನೀಡಿದರೆ, ಅದರಿಂದ ಬೆರೆಯವರಿಗೆ ತೊಡಕಾಗುತ್ತಿದ್ದರೆ (2) ಪರಸಂಬಂಧ (Fiduciary) ಗಳ ಮಾಹಿತಿ (3) ಸಾರ್ವಜನಿಕ ಕೆಲಸ ನಿರ್ವಹಿಸುವ ವ್ಯಕ್ತಿಗಳ ವೈಯಕ್ತಿಕ ಗುಪ್ತ ಮಾಹಿತಿ – ಅದು ಸಾರ್ವಜನಿಕ ಹಿತದೃಷ್ಟಿಯಿಂದ ತಡೆ ಹಿಡಿಯಬಾರದೆಂದು ಮಾಹಿತಿ ಅಧಿಕಾರಿ ತೀರ್ಮಾನಕ್ಕೆ ಬಂದಿದ್ದರೆ – ಇಂತಹ ಮಾಹಿತಿ ನೀಡತಕ್ಕದ್ದಲ್ಲ.

ಇದರ ಜೊತೆಗೆ ಮಂತ್ರಿ ಪರಿಶತ್ ತೆಗೆದುಕೊಂಡ ತೀರ್ಮಾನಗಳು ಮತ್ತು ಕಾರಣಗಳ ವಿವರ ನೀಡಬಹುದು. ಆದರೆ ಮಂತ್ರಿ ಪರಿಶತ್‌ನಲ್ಲಿ ಹಂಚಿದ ಎಲ್ಲಾ ಕಾಗದ ಪತ್ರಗಳನ್ನು ಮಾಹಿತಿ ಕಾಯಿದೆಯಡಿ ನೀಡತಕ್ಕದ್ದಲ್ಲ.

3) ವಿನಾಯ್ತಿ ನೀಡಲಾದ ವಿಷಯಗಳಡಿ ಮಾಹಿತಿ ನೀಡಲು ನಿಗದಿ ಪಡಿಸಿದ ಅವಧಿ

ವಿನಾಯ್ತಿ ಪಡೆದ 10 ವಿಷಯಗಳಲ್ಲಿ ಏಳು ವಿಷಯಗಳ ವಿನಾಯದಲ್ಲಿ, ಪ್ರತಿ ಪ್ರಕರಣ ಸಂಬವಿಸಿದ

20 ವರ್ಷಗಳ ನಂತರ ಮಾಹಿತಿ ನೀಡಬೇಕು. ಕಾಯಿದೆ ಕಲಂ8(1)(a)(c) ಮತ್ತು (i) ನಲ್ಲಿನ ವಿಷಯಗಳ ಬಗ್ಗೆ 20 ವರ್ಷಗಳ ನಂತರವೂ ಅದು ಮುಂದುವರಿಯಬಹುದು.

4) <u>ಮಾಹಿತಿ ನೀಡಲು ವಿನಾಯ್ತಿ ಇರುವ ಕಲಂಗೆ ಪೂರಕವಾಗಿನ ತೀರ್ಮಾನಗಳು</u>

1. ನೌಕರರ ವರ್ಗಾವಣೆ ಮತ್ತು ಭಡ್ತಿ ವಿಷಯದಲ್ಲಿ ಮಾಹಿತಿ ನೀಡಲು ನಿರಾಕರಿಸತಕ್ಕದ್ದಲ್ಲ. ಕೇರಳ ಉಚ್ಚನ್ಯಾಯಾಲಯ, ಕೆನರಾ ಬ್ಯಾಂಕ್‌ನ ಪ್ರಕರಣದಲ್ಲಿ, ಭಡ್ತಿ ಮತ್ತು ವರ್ಗಾವಣೆ ಬಗ್ಗೆ ಮಾಹಿತಿ ನೀಡಲು ನಿರಾಕರಿಸತಕ್ಕದ್ದಲ್ಲ ಮತ್ತು ಸಂಬಂಧಗಳ ಮಾಹಿತಿಯು ಸೇರಿ ಎಲ್ಲಾ ವಿಷಯಗಳಲ್ಲಿ ಮಾಹಿತಿ ಹಕ್ಕು ಕಾಯಿದೆಯಡಿ ವಿನಾಯ್ತಿ ಇಲ್ಲ. ಕಲಂ.8(1)(J) ಅಡಿ ಸಂಸತ್ತು ಮತ್ತು ವಿಧಾನ ಮಂಡಳಿಗಳಿಗೆ ನಿರಾಕರಿಸಲಾಗದ ಮಾಹಿತಿ ಇದಾಗಿರುವುದರಿಂದ ಮಾಹಿತಿ ಹಕ್ಕು ಕಾಯಿದೆಯಲ್ಲಿ ನೀಡಬೇಕು. ಅರ್ಜಿದಾರರು ಕಳೆದ ಐದು ವರ್ಷಗಳ ಮಾಹಿತಿ – ದೊಡ್ಡ ಪ್ರಮಾಣದಲ್ಲಿದ್ದು ನೀಡಲಾಗದು ಎಂಬ ಮನವಿಗೆ, ದೊಡ್ಡ ಪ್ರಮಾಣದ ಮಾಹಿತಿಗೆ ವಿನಾಯ್ತಿ ನೀಡಿಲ್ಲವಾದ್ದರಿಂದ, ಮಾಹಿತಿ ನೀಡಬೇಕೆಂದು ಆದೇಶಿಸಿತು. 2007 (3) KLT 550/2008 (1) ID 241
2. ಕರ್ನಾಟಕ ರಾಜ್ಯ ಸರ್ಕಾರದ ನೌಕರನ ಆಸ್ತಿ ಜವಾಬ್ದಾರಿ ತಃಖ್ತೆಯನ್ನು ನೀಡಲು ಮೂರನೇ ವ್ಯಕ್ತಿ ಅರ್ಜಿ ಸಲ್ಲಿಸಿದಾಗ, ಅದನ್ನು ನೀಡಲು ಆದೇಶಿಸಲಾಯಿತು. (ಇದಕ್ಕೆ ಪೂರ್ವದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗಿತ್ತು) ಇದನ್ನು ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ದಾಖಲಿಸಿದಾಗ, ಸಾರ್ವಜನಿಕರಿಗೆ ಮಾಹಿತಿ ಪಡೆಯುವ ಹಕ್ಕು ಇದೆ ಎಂಬುದು ನಿಜ. ಆದರೆ ಈ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿರುವುದು, ಒಬ್ಬ ಅಧಿಕಾರಿ ವ್ಯಯಕ್ತಿಕ ಮಾಹಿತಿ ಪಡೆದು ಅವನನ್ನು ಇಕ್ಕಟ್ಟಿಗೆ ಸಿಲುಕಿಸುವ ಉದ್ದೇಶದಿಂದ ಮತ್ತು ವ್ಯಯಕ್ತಿವಾಗಿ ಹಗೆ ಸಾಧಿಸಲು ಮಾಡಿದ ಪ್ರಯತ್ನ. ಆದ್ದರಿಂದ ಈ ರಿಟ್ ಅರ್ಜಿದಾರನಿಗೆ ದಂಡ ಪಾವತಿಸಲು ಮೂಲ ಅರ್ಜಿದಾರನಿಗೆ ಆದೇಶಿಸಲಾಯಿತು. AIR 2009 Kar 8/2009 (1) ID 141
3. ಕರ್ನಾಟಕ ಉಚ್ಚನ್ಯಾಯಾಲಯ ಒಬ್ಬ ನೌಕರನು ಹೊಂದಿರುವ ಆಸ್ತಿ ಬಗ್ಗೆ ಸಲ್ಲಿಸಿದ್ದ ಅರ್ಜಿ ಬಗ್ಗೆ ಮಾಹಿತಿ ನೀಡಲು ಆದೇಶಿಸಿದಾಗ, ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ವಿಚಾರಣೆಯಲ್ಲಿ ಖಾಸಗಿ ಮಾಹಿತಿ ನೀಡಲಾಗದು ಎಂದು ಕಲಂ.8 ರಲ್ಲಿರುವ ವಿನಾಯ್ತಿಯನ್ನು ತೋರಿಸಿದಾಗ, ಪ್ರತಿ ನೌಕರ ವಾರ್ಷಿಕವಾಗಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ವಿವರಗಳನ್ನು ಸಲ್ಲಿಸಬೇಕಾಗಿದ್ದು – ಅದು ಒಂದು ವಾರ್ಷಿಕ ಪ್ರಕ್ರಿಯೆಯಂತೆ ಸಲ್ಲಿಸಲಾಗಿದೆ. ಇಂತಹ ಮಾಹಿತಿ ಕಲಂ.8(J) ಅನ್ವಯ ವಿನಾಯ್ತಿ ಪಡೆದಿಲ್ಲ. ಆದ್ದರಿಂದ ಪ್ರಾಧಿಕಾರ ಮಾಡಿದ ಆದೇಶ ಸರಿಯಿದೆ. WP.7953/2007 - 16-07-2008
4. ಪಂಜಾಬ್ ಮತ್ತು ಹರ್‍ಯಾಣ ಉಚ್ಚನ್ಯಾಯಾಲಯ, ಪ್ರತಿ ನೌಕರ ಸಲ್ಲಿಸುವ ಆಸ್ತಿ ತಃಖ್ತೆಯನ್ನು ನೀಡಿದರೆ ಅದು ಖಾಸಗೀತನದ ಉಲ್ಲಂಘನೆ ಎಂದು ಪರಿಗಣಿಸಲಾಗದು. ನೌಕರ ತಾನು ನಿರ್ವಹಿಸುವ ಕೆಲಸ ಒಂದು ಸಾರ್ವಜನಿಕ ಸೇವಕ, ಅದಕ್ಕೆ ಪೂರಕವಾಗಿ ಆಸ್ತಿ ತಃಖ್ತೆ ವಿವರಗಳನ್ನು ಸಲ್ಲಿಸುವುದು ಒಂದು ಜವಾಬ್ದಾರಿ ಮತ್ತು ಇದು ಸೇವಾ ನಿಯಮಗಳ ಒಂದು ಭಾಗ. ಆದ್ದರಿಂದ ಇದು ಕಲಂ.8(e)(j) ಅಡಿ ವಿನಾಯ್ತಿ ಇಲ್ಲಿ ಎಂದು ತೀರ್ಪಿತ್ತಿತು. 2011 91) ID 335
5. ಆದಾಯ ತೆರಿಗೆ ಆಯುಕ್ತರ ಮುಂದೆ ಒಬ್ಬ ಅಧಿಕಾರಿಯ ಆದಾಯದ ಬಗ್ಗೆ ಮಾಹಿತಿ ಕೇಳಿ, ಆ ವ್ಯಕ್ತಿ

ಮೇಲೆ ಕರ ತಪ್ಪಿಸಿದ (Tax evasion petition) ಅರ್ಜಿ ಸಲ್ಲಿಸಿ, ಈ ಅರ್ಜಿಯ ಮೇಲೆ ತೆಗೆದುಕೊಂಡ ಕ್ರಮದ ವಿವರ ಕೇಳಿದಾಗ, (ಆದಾಯದ ಮೂಲವನ್ನು ಕೇಳಿದಾಗ.) ಅದು ಕಲಂ.8(1)(j) ಅಡಿ ಮೊದಲನೆ ವ್ಯಕ್ತಿ ಪಡೆಯುವಂತಿಲ್ಲ ಮತ್ತು ಅದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಎಂದು ತಿರಸ್ಕರಿಸಿತ್ತು. ಇದನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರವೂ ತಿರಸ್ಕರಿಸಿತು. ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಮೇಲ್ಮನವಿ ಪ್ರಾಧಿಕಾರ ಕಲಂ.8(1)(j) ನ್ನು ಉಲ್ಲೇಖಿಸಿ, ಕೇಳಿರುವ ಮಾಹಿತಿ ವ್ಯಯಕ್ತಿಕ ಮತ್ತು ಖಾಸಗಿವಿವರವೆಂದು ತೀರ್ಮಾನಿಸಿ, ಮಾಹಿತಿ ನೀಡುವ ಅವಶ್ಯಕವಿಲ್ಲವೆಂದು ತೀರ್ಮಾನಿಸಿದ್ದನ್ನು ಉಚ್ಚನ್ಯಾಯಾಲಯ ಎತ್ತಿ ಹಿಡಿಯಿತು.

6. ಸಾರ್ವಜನಿಕ ಉದ್ಯಮದ ನೌಕರನ ಪಡೆದ ಸಂಬಳ ವ್ಯಯಕ್ತಿಕ ಮಾಹಿತಿಯಲ್ಲ – ನೌಕರ ತನ್ನ ಸಂಬಳವನ್ನು ಸರ್ಕಾರಿ ಸೌಮ್ಯದ ಸಂಸ್ಥೆಯಿಂದ ಪಡೆಯುತ್ತಿದ್ದು, ಅದು ಆದಾಯ ತೆರಿಗೆ ಕಾಯಿದೆಗೊಳಪಡುತ್ತದೆ. ಇದರಿಂದ ಸಂಬಳ ಪಡೆಯುವುದು ಖಾಸಗಿ/ಗುಪ್ತ ಮಾಹಿತಿಯಲ್ಲಿ ಒಬ್ಬ ವ್ಯಕ್ತಿ ಹೆಚ್.ಐ.ವಿ ರೋಗ ಭಾದಿತನಾಗಿದ್ದರೆ, ಅದು ಖಾಸಗಿ ಮಾಹಿತಿಯಾಗುತ್ತದೆ. ಅದಕ್ಕೆ ವಿನಾಯ್ತಿ ಇದೆ. ಆದರೆ ಸರ್ಕಾರದ ಪೂರಕ ಸಂಸ್ಥೆಯಿಂದ ಪಡೆಯುವ ಸಂಬಳ ಖಾಸತಿ ಮಾಹಿತಿಯಲ್ಲಿ. 2008 (5) MLJ 200/2009 (1) ID 7

7. ದೆಹಲಿ ಉಚ್ಚನ್ಯಾಯಾಲಯ, ಮಾರಾಟ ತೆರಿಗೆ ಆಯುಕ್ತರ ಮುಂದೆ ಸಲ್ಲಿಸಿದ ಒಂದು ಕಂಪನಿಯ, ತಃಖ್ತೆಗಳನ್ನು ನೀಡಲು ನಿರಾಕರಿಸಿದಾಗ (ಕೇಂದ್ರ ಮಾಹಿತಿ ಅಧಿಕಾರಿ ಮುಖಾಂತರ) ಈ ತೀರ್ಮಾನವನ್ನು ಕೇಂದ್ರ ಮಾಹಿತಿ ಆಯುಕ್ತರು ದೃಡೀಕರಿಸಿದ್ದರು. ಆಯುಕ್ತರು ತಮ್ಮ ಆದೇಶದಲ್ಲಿ ಮಾಹಿತಿ ಕಾಯಿದೆ ದುರುಪಯೋಗ ಮಾಡಿಕೊಳ್ಳತ್ತಿರುವ ಬಗ್ಗೆ ವಿವರಿಸಿ ಆದೇಶಿಸಿದ್ದರು ಎಂಬುದನ್ನು ಉಚ್ಚನ್ಯಾಯಾಲಯ ಗಮನಿಸಿತು. ದೆಹಲಿ VAT ಕಾಯಿದೆಯಡಿ ಸಲ್ಲಿಸಿದ ಮಾಹಿತಿ ಗುಪ್ತವಾಗಿರಬೇಕೆಂದು ಸೂಚಿಸುತ್ತದೆ. (ಕಲಂ.98 ರನ್ವಯ) ಈ ಕಾಯಿದೆಯಡಿ ಮಾಹಿತಿ ಗುಪ್ತತೆ ಕಾಪಾಡಲು ಅವಕಾಶ ಇರುವುದರಿಂದ, ಕೆಳಗಿನ ಎಲ್ಲಾ ಪ್ರಾಧಿಕಾರಗಳು ತೆಗೆದುಕೊಂಡ ತೀರ್ಮಾನ ಸಮರ್ಪಕವಾಗಿದೆ ಎಂದು ಮತ್ತು ಈ ಮಾಹಿತಿ ಕಾಯಿದೆಯಲ್ಲಿನ ಅವಕಾಶ ದುರುಪವಾಗುತ್ತದೆಂದು ಗಮನಿಸಿ, ಮಾಹಿತಿ ನೀಡಲಾಗದು ಎಂದು ವಿಭಾಗೀಯ ಪೀಠ ಆದೇಶಿಸಿತು ಮತ್ತು ಮೂಲ ಅರ್ಜಿದಾರರಿಗೆ ರೂ.50,000/– ದಂಡ ವಿಧಿಸಿತು. 2012 (1) ID 300

8. ಸರ್ಕಾರದ ಹಣ, ಒಬ್ಬ ಸರ್ಕಾರಿ ಅಧಿಕಾರಿ ನಿರ್ವಹಿಸಿ ಖರ್ಚು ಮಾಡಿದಾಗ, ಅದು ಖಾಸಗಿ ಮಾಹಿತಿಯಾಗುವುದಿಲ್ಲ. ಕೇಂದ್ರ ವಿಚಕ್ಷಣ ಆಯೋಗದ ಮುಂದೆ ಸಲ್ಲಿಸಿದ ಆರೋಪ ಪಟ್ಟಿಯ ಮೇಲೆ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಕೇಂದ್ರ ವಿಚಕ್ಷಣ ಆಯೋಗ, ಆರೋಪದಲ್ಲಿ ಹುರುಳಿಲ್ಲವೆಂದು ಮತ್ತು ಆ ಬಗ್ಗೆ ಮತ್ತೆ ವಿಚಾರಣೆ ಮಾಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿದಾಗ, ಆ ಪತ್ರ ಖಾಸಗಿ ತನದ ಉಲ್ಲಂಘನೆ ಎಂದು ಪರಿಗಣಿಸತಕ್ಕದ್ದಲ್ಲ. ಮಾಹಿತಿ ಕೇಳಿರುವುದು ವ್ಯಕ್ತಿಗೆ ಸಂಬಂಧಿಸಿದ್ದಲ್ಲ. ಈ ಮಾಹಿತಿ ಒಬ್ಬ ಅಧಿಕಾರಿ ನಿರ್ವಹಿಸುವ ಅಧಿಕೃತ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರೆ ಅದರ ದುರುಪಯೋಗವಾಗಬಹುದು ಎಂದು ತಡೆಯಿಡಿಯತಕ್ಕದ್ದಲ್ಲ. 2012 (1) ID 307

9. ದೆಹಲಿ ಉಚ್ಚನ್ಯಾಯಾಲಯ ಮತ್ತು ಭಾರತೀಯ ಶ್ರೇಷ್ಠ ನ್ಯಾಯಾಲಯ ಮುಂದೆ ಬಂದ ಪ್ರಶ್ನೆ ಎಂದರೆ ಶ್ರೇಷ್ಠ ನ್ಯಾಯಾಲಯದ ನ್ಯಾಯಾದೀಶರು ಸಲ್ಲಿಸಿದ ಪ್ರಮಾಣಿಕೃತ ತಃಖ್ತೆಗಳು (ಆಸ್ತಿ

ಜವಾಬ್ದಾರಿ) ಖಾಸಗಿ ಮಾಹಿತಿಯಲ್ಲಿ. ಆದರೆ ಅರ್ಜಿದಾರ ಕೇಳಿರುವ ಮಾಹಿತಿ ಮುಖ್ಯ ನ್ಯಾಯಮೂರ್ತಿಗಳಿಗೆ ಉಳಿದ ನ್ಯಾಯಾದೀಶರು 1997ರ ನಿಬಂಧನೆಯಡಿ ಮಾಹಿತಿ ಸಲ್ಲಿಸಿದ್ದಾರೆಯೇ ಎಂದು ಮಾತ್ರ. ಈ ಮಾಹಿತಿ, ಮಾಹಿತಿ ಹಕ್ಕು ಕಾಯಿದೆ ಕಲಂ.8(1)(j) ಅಡಿ ವಿನಾಯ್ತಿ ಪಡೆಯುವುದಿಲ್ಲ. 2009 (2) ID 217

ಈ ತೀರ್ಮಾನವನ್ನು ಪೂರ್ಣ ಪೀಠದ ಮುಂದೆ ವಿಚಾರಣೆ ನಡೆಸಿದಾಗ ಮಾಹಿತಿ ಕೇಳಿರುವುದು ಆಸ್ತಿ ತಃಖ್ತೆಗಳನ್ನು ಮುಖ್ಯ ನ್ಯಾಯಾದೀಶರ ಮುಂದೆ ಸಲ್ಲಿಸಲಾಗಿದೆಯೇ ಎಂದು. ಇದು ಖಾಸಗಿ ಮಾಹಿತಿಯಲ್ಲಿ. ಅರ್ಜಿದಾರ ವ್ಯಯಕ್ತಿಕವಾಗಿ ನ್ಯಾಯಾದೀಶರ ಮಾಹಿತಿ ಕೇಳಿರಲಿಲ್ಲ. ಈ ವಿಷಯವನ್ನು ತಿರಸ್ಥರಿಸುವುದು ಅಥವಾ ದೃಡೀಕರಿಸುವುದು ಮಾತ್ರ. ಈ ಬಗ್ಗೆ ನ್ಯಾಯಾದೀಶರು ಸಲ್ಲಿಸಿದ ಆಸ್ತಿ ತಃಖ್ತೆ ಕಲಂ.8(1)(j) ಅಡಿ ವಿನಾಯ್ತಿ ನೀಡಬೇಕು ಎಂದು ಮತ್ತು ಈ ಎಲ್ಲಾ ಮಾಹಿತಿ ಪ್ರತಿ ನ್ಯಾಯಾದೀಶರ ಮಾಹಿತಿ ಕೇಳಿದಾಗ ಸಾರ್ವಜನಿಕ ಹಿತ ದೃಷ್ಟಿಯಿಂದ ನೀಡಬಹುದು ಮತ್ತು ಕಲಂ.8(1)(j) ಅನ್ವಯವಾಗುವುದರ ಬಗ್ಗೆ ಪ್ರತ್ಯೇಕ ಅರ್ಜಿ ಸಲ್ಲಿಸಿದಾಗ ತೀರ್ಮಾನಿಸಬೇಕು ಮತ್ತು ಸಾರ್ವಜನಿಕ ಹಿತಾಸಕ್ತಿ ಪೂರಕ ಕ್ರಮವಿಡಬಹುದು. 2010 (1) ID 1/2010 (1) CTC 214 / AIR 2010 Del 154

10. ರಾಜ್ಯಪಾಲರು ಸಂವಿಧಾನದ ಅನುಚ್ಛೇದ 356 ರನ್ವಯ ರಾಷ್ಟ್ರಪತಿಗಳಿಗೆ ನೀಡದ ವರದಿ ಕಲಂ.8(1)(e) ಅನ್ವಯ ವಿನಾಯ್ತಿಗೊಳ ಪಡುತ್ತದೆಯೇ? ರಾಜ್ಯಪಾಲರು ಸಂವಿಧಾನದ ಕೆಲಸ ನಿರ್ವಹಿಸುವಾಗ ರಾಜ್ಯ ಸರ್ಕಾರದ ಮೇಲೆ ಅನುಚ್ಛೇದ 356 ರಡಿ ವರದಿ ನೀಡಿದರೆ ಅದಕ್ಕೆ ವಿನಾಯ್ತಿ ಇದೆಯೇ ಎಂಬುದಕ್ಕೆ ಬಾಂಬೆ ಉಚ್ಚನ್ಯಾಯಾಲಯ ವರದಿಯನ್ನು ತಯಾರಿಸಿದ (ರಾಜ್ಯಪಾಲರು) ರಾಜ್ಯಪಾಲರಿಗೆ ಕಲಂ.8(1)(e) ಅನ್ವಯ ವಿನಾಯ್ತಿ ಇಲ್ಲ. ಆದರೆ ಆ ವರದಿಯನ್ನು ಪಡೆದ ರಾಷ್ಟ್ರಪತಿಗಳಿಗೆ ವಿನಾಯ್ತಿ ಇದೆ. ಆದ್ದರಿಂದ ರಾಜ್ಯಪಾಲರು ನೀಡಿದ ಸಂವಿಧಾನದ ಅನುಚ್ಛೇದ 356ರ ವರದಿ ಕಲಂ.8(1)(e) ಅನ್ವಯ ವಿನಾಯ್ತಿ ಇಲ್ಲ. 2012 (1) ID 22

11. ಗುಜರಾತ್ ರಾಜ್ಯದಲ್ಲಿ ದಂಗೆ ಬಗ್ಗೆ ರಾಜ್ಯಪಾಲರು ಮತ್ತು ಪ್ರಧಾನ ಮಂತ್ರಿಗಳ ಮಧ್ಯ ನಡೆದ ಪತ್ರ ವ್ಯವಹಾರಗಳ ಬಗ್ಗೆ ಕೇಂದ್ರ ಮಾಹಿತಿ ಆಯೋಗ ಪರಿಶೀಲಿಸಬಹುದೇ ಎಂಬುದಕ್ಕೆ ನಕರಾತ್ಮಕ ತೀರ್ಮಾನವನ್ನು ದೆಹಲಿ ಉಚ್ಚನ್ಯಾಯಾಲಯ ನೀಡಿತು. ಕೇಂದ್ರ ಮಾಹಿತಿ ಆಯೋಗ ತನ್ನ ನಿಲುವಳಿಯಲ್ಲಿ ಅನುಚ್ಛೇದ 74(2) ರನ್ವಯ ನೀಡಿರುವ ಅಧಿಕಾರ ಅಭಾದಿತವಲ್ಲ. ಅದು ಮಾಹಿತಿ ಕಾಯಿದೆ ಪೂರಕವಾಗಿರಬೇಕು. ಮಾಹಿತಿ ಹಕ್ಕು ಕಾಯಿದೆ ಸಂಸತ್ತು ಸಂವಿಧಾನದಡಿ ಮಾಡಿದ ಒಂದು ಕಾಯಿದೆ. ಆದರೆ ಅನುಚ್ಛೇದ 74, ಸಂವಿಧಾನದಲ್ಲಿಯೇ ಸೇರಿದೆ. ಆದ್ದರಿಂದ ಅದಕ್ಕೆ ವಿನಾಯ್ತಿ ಸಂವಿಧಾನದಿಂದ ಪ್ರಸ್ತಾವಾಗುತ್ತಿದೆ. ಸಂವಿಧಾನದ 74ನೇ ಅನುಚ್ಛೇದಲ್ಲಿ ಮಂತ್ರಿಗಳ ಮತ್ತು ಅಧ್ಯಕ್ಷರ ನಡುವೆ ನಡೆದ ಪತ್ರಗಳ ವಿನಿಮಯ ಮಾಹಿತಿ ಕಾಯಿದೆಯಡಿ ಬರುವುದಿಲ್ಲ. ಕೇಂದ್ರ ಮಾಹಿತಿ ಆಯೋಗ ನೀಡಿದ ಆದೇಶವನ್ನು ಕಿತ್ತುಹಾಕಿತು, ಅಂದರೆ ಗುಜರಾತ್ ದಂಗೆ ವಿಷಯಕ್ಕೆ ಸಂಬಂಧಪಟ್ಟ ಪತ್ರಗಳ ವಿನಿಮಯ (ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳ ಮಧ್ಯ) ಕೇಂದ್ರ ಮಾಹಿತಿ ಆಯುಕ್ತರ ವ್ಯಾಪ್ತಿಗೆ ಬರುವುದಿಲ್ಲ. 2012 (3) KLT SN 52/WP © 13090/2006 - 11-07-2012

12. ಕೇಂದ್ರ ಮಾಹಿತಿ ಆಯೋಗ (ಆಯುಕ್ತರು) ಮತ್ತು ನ್ಯಾಯಾಲಯ, ಮಂತ್ರಿಗಳ ಗುಂಪು ತೆಗೆದುಕೊಂಡ ತೀರ್ಮಾನಗಳ ಮೇಲ್ಮನವಿ ಪ್ರಾಧಿಕಾರಗಳಲ್ಲಿ. ಕೇಂದ್ರ ಮಾಹಿತಿ ಆಯೋಗದ ಮುಂದೆ ಅರ್ಜಿದಾರ ಕೇಳಿದ ಮಾಹಿತಿ ಎಂದರೆ ಮಂತ್ರಿಗಳ ಗುಂಪು ವರದಿಯಲ್ಲಿ ಕೆಲವು ಭಾಗದ ವರದಿ ತೆಗೆದು ಹಾಕಿದ ಬಗ್ಗೆ ಮಾಹಿತಿ ಕೇಳಿದಾಗ – ಅದು ಅರ್ಜಿದಾರನ ವಿರುದ್ದವಾಗಿತ್ತು. ಇದನ್ನು ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ. ಅದನ್ನು ವಜಾ ಮಾಡಿತು ಮತ್ತು ಅದಕ್ಕೆ ಕಾರಣಗಳನ್ನು ಈ ಕೆಳಕಂಡಂತೆ ನೀಡಿತು. ಮಂತ್ರಿಗಳ ಗುಂಪು ಬಂದು ವರದಿಯನ್ನು ತಯಾರಿಸುವಾಗ ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಕೆಲವು ಸೂಕ್ಷ್ಮ ಮಾಹಿತಿಯನ್ನು ವರದಿಯಲ್ಲಿ ಕೈಬಿಡಲು ತೀರ್ಮಾನಿಸಿದಾಗ, ಅದು ಅವರುಗಳ ಸಾಮೂಹಿಕ ತೀರ್ಮಾನ. ದೇಶದ ಭದ್ರತೆ ದೃಷ್ಟಿಯಿಂದ ಕೆಲವು ಮಾಹಿತಿ ಸೇರಿಸಬಾರದೆಂದು, ಆ ಗುಂಪು ನಿರ್ಧರಿಸಿದಾಗ, ಆ ತೀರ್ಮಾನವನ್ನು ಕೇಂದ್ರ ಮಾಹಿತಿ ಆಯೋಗ ಮಧ್ಯಪ್ರವೇಶ ಮಾಡಲಾಗದು. ಇದರ ಜೊತೆಗೆ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನ್ಯಾಯಾಲಯಗಳು ಸಹ ಮಂತ್ರಿಗಳ ಗುಂಪಿನ ವರದಿ ಬಗ್ಗೆ ಪರಿಶೀಲಿಸುವ ಹಕ್ಕು ಇರುವುದಿಲ್ಲ. ಏಕೆಂದರೆ ತಾಂತ್ರಿಕವಾಗಿ ನ್ಯಾಯಾಲಯ ಇಂತಹ ತೀರ್ಮಾನ ಪರಿಶೀಲಿಸಲು ಭದ್ದರಾಗತಕ್ಕದ್ದಲ್ಲ. WP (c) 7671/2010 - 08-12-2010

13. ಅರ್ಜಿದಾರನು ಸಹಾಯಕ ಇಂಜಿನಿಯರ್‌ಗಳ ಆಯ್ಕೆ ಮಾಡುವಾಗ ಅನುಸರಿಸಿದ ಮಾನದಂಡದ ಮಾಹಿತಿ ಕೇಳಿದಾಗ – ಅದನ್ನು ನೀಡಬೇಕೆಂದು ಏಕ ಸದಸ್ಯ ಪೀಠ ಆದೇಶಿಸಿದಾಗ (ಅಂತಹ ವಿಷಯಗಳು ಗುಪ್ತ ಮಾಹಿತಿ ಎಂದು ವಾದಿಸಿದರೂ) ಅದನ್ನು ಪ್ರಶ್ನಿಸಿ ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಮುಂದೆ ಬಂದಾಗ ಕಾಯಿದೆ ಕಲಂ.8(a), (b), (c), (f), (g) ಮತ್ತು (h) ಗಳಿಗೆ ಸಂಬಂಧಪಟ್ಟಂತೆ ದಾಖಲೆ ನೀಡಲು ನಿರ್ಭಂದಿಸಲಾಗಿದೆ. ಆದ್ದರಿಂದ ಮಾಹಿತಿ ಅಧಿಕಾರಿ, ಈ ಮೇಲ್ಕಂಡ ವಿಷಯದಲ್ಲಿ ಮಾಹಿತಿ ನೀಡಲು ನಿರಾಕರಿಸಬಹುದು. ಆದರೆ ಕಲಂ.8(d), (e), (h) ಮತ್ತು (i) ಗಳಿಗೆ ಸಂಬಂಧಪಟ್ಟಂತೆ ಮಾಹಿತಿ ಅಧಿಕಾರಿ, ಮಾಹಿತಿ ನೀಡುವುದರ ಬಗ್ಗೆ ತೀರ್ಮಾನಿಸಬೇಕು ಎಂದು ತಿಳಿಸಿತು. ಈ ಪ್ರಕರಣದಲ್ಲಿ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಿದ ಮಾನದಂಡಗಳ ಬಗ್ಗೆ ಮತ್ತು ಅಂಕಗಳಿಕೆ ವಿವರ ಸಾರ್ವಜನಿಕ ಮಾಹಿತಿಯಲ್ಲ. ಈ ಬಗ್ಗೆ ಹಿಂದೆ ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯದ (2009 (1) ID 202) ವಿಭಾಗೀಯ ಪೀಠ ಕಲಂ.8(i)(e) ನಡಿ ವಿನಾಯ್ತಿ ಪಡೆದಿದೆ ಎಂದು ತೀರ್ಮಾನಿಸಿರುವುದನ್ನು ಉಲ್ಲೇಖಿಸಿದೆ. ಅರ್ಜಿದಾರನು ಆಯ್ಕೆ ಪ್ರಕ್ರಿಯೆ ಮತ್ತು ವಿದ್ಯಾರ್ಹತೆಗೆ ನೀಡಿದ ಅಂಕಗಳನ್ನು ನೀಡಬೇಕು ಮತ್ತು ಇದನ್ನು ಗುಪ್ತ ಮಾಹಿತಿ ಎಂದು ತಿಳಿಯತಕ್ಕದ್ದಲ್ಲ ಎಂದು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ W.P 12857/2008 – 03-11-2009 ಅನ್ನು ಉಲ್ಲೇಖಿಸಿದೆ. AIR 2009 P&H 14/2009 (1) ID 316

14. ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ಕೇಂದ್ರ ಮಾಹಿತಿ ಆಯುಕ್ತರು ಯುಕೋ ಬ್ಯಾಂಕಿಗೆ ಮಾಹಿತಿ ನೀಡಲು ನೀಡಿದ್ದ ನಿರ್ದೇಶನದಲ್ಲಿ, ಲಿಖಿತ ಪರೀಕ್ಷೆ, ಮೌಖಿಕ ಪರೀಕ್ಷೆ ಮತ್ತು ಆಯ್ಕೆಯಾದ ಕೊನೆಯ ಅಭ್ಯರ್ಥಿಯ ಅಂಕ ಪಟ್ಟಿಯನ್ನು ನೀಡಲು ಆದೇಶಿಸಿದರು. ಅದರಂತೆ ಬ್ಯಾಂಕ್ ಮಾಹಿತಿ ನೀಡಿತು, ಅಂದರೆ ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಮಾತ್ರ ನೀಡಿತು. ಅರ್ಜಿದಾರ ಸಂಬಂಧಪಟ್ಟ ಪ್ರಾಧಿಕಾರ ವರ್ಗೀಕರಿಸಿದ ಬಗ್ಗೆ ಮಾಹಿತಿ ಕೇಳಿದಾಗ, ಅದು ವ್ಯಯಕ್ತಿಕ ಮಾಹಿತಿ

ನೀಡಬಹುದು, ಅದರ ವರ್ಗೀಕರಣ ವ್ಯಯಕ್ತಿಕ ಮಾಹಿತಿಯಲ್ಲ ಆದ್ದರಿಂದ ನೀಡಲಾಗದು.

15. ರಾಜಸ್ಥಾನ ಸಾರ್ವಜನಿಕ ಸೇವ ಆಯೋಗ ನಡೆಸಿದ ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆ ನಕಲನ್ನು, (ಅರ್ಜಿದಾರನಲ್ಲದ ವ್ಯಕ್ತಿಗೆ) ನೀಡಲು ಮುಖ್ಯ ಮಾಹಿತಿ ಆಯುಕ್ತರು ಆದೇಶಿಸಿದ್ದನ್ನು, ರಾಜಸ್ಥಾನ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅರ್ಜಿದಾರನಲ್ಲದ ವ್ಯಕ್ತಿಯೂ, ಉತ್ತರ ಪತ್ರಿಕೆಗಳನ್ನು ಕಂಪ್ಯೂಟರ್‌ನಲ್ಲಿ ಸ್ಕ್ಯಾನ್ ಮಾಡಿದ ನಂತರ, ಪ್ರತ್ಯೇಕ ಹಾಳೆಗಳನ್ನು ನಿರ್ವಹಿಸುವುದಲ್ಲ. ಆದ್ದರಿಂದ ಯಾವುದೇ ಮಾಹಿತಿ ನೀಡಲಾಗದು. ಉತ್ತರ ಪತ್ರಗಳನ್ನು ಪುನರ್ ಪರಿಶೀಲಿಸಿ ಮತ್ತು ಪುನಹ ಉತ್ತರ ಪತ್ರಿಕೆ ಮರು ಪರೀಕ್ಷಿಸಿದೆ. ಆದ್ದರಿಂದ ಮತ್ತೊಮ್ಮೆ ಪುನಹ ಉತ್ತರ ಪತ್ರಿಕೆ ಮರು ಪರಿಶೀಲಿಸಲು ಅವಕಾಶವಿಲ್ಲ. ಇದಕ್ಕೆ ಪೂರಕವಾಗಿ ಈ ಹಿಂದೆ ಶ್ರೇಷ್ಠ ನ್ಯಾಯಾಲಯ ನೀಡಿದ್ದ ತೀರ್ಪುಗಳನ್ನು 2011 (2) ID 101/ 2011-4-LW-289/2011 (7) MLJ 1238/(2011) 8 SCC 497/2011 AIR SCW 4888/ 2011 (3) KLTSN 117 ಗಳನ್ನು ಉಲ್ಲೇಖಿಸಿದೆ. ಇದರಲ್ಲಿ ಮಾಹಿತಿ ಹಕ್ಕು ಕಾಯಿದೆ ದುರುಪಯೋಗವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದೆ. ಅಂದರೆ ಸಂವಿಧಾನಾತ್ಮಕ ಸಂಸ್ಥೆಗಳನ್ನು ಅನುಮಾನದಿಂದ ನೋಡಲಾಗದು. ಏಕೆಂದರೆ, ಅವರು ನಿರ್ವಹಿಸಬೇಕಾದ ಕೆಲಸಗಳನ್ನು ನಿಗದಿ ಪಡಿಸಲಾಗಿದೆ. ಮಾಹಿತಿ ಆಯೋಗ, ವಿವೇಚನಾ ಪೂರಕ ಆದೇಶ ಮಾಡಿಲ್ಲ. ಆದ್ದರಿಂದ ಅರ್ಜಿದಾರನಲ್ಲದ ಅಬ್ಯರ್ಥಿ ಸಾಮಾನ್ಯ ಜ್ಞಾನ, ರಾಜ್ಯ ಶಾಸ್ತ್ರ ಮತ್ತು ತತ್ವಜ್ಞಾನದ ಉತ್ತರ ಪತ್ರಿಗಳನ್ನು ಮಾತ್ರ ನೋಡಲು ಅವಕಾಶ ನೀಡಿತು. AIR 2012 Raj 52

16. ಒಂದು ಸೇವಾ ಸಹಕಾರ ಸಂಘದ ನೌಕರರನ್ನು ಅಮಾನತ್ತು ಮಾಡಿ, ಆ ನಂತರ ವಜಾ ಮಾಡಿತ್ತು. ಈ ಪ್ರಕರಣ ARC 29/2008 ರ ದಾವಾ ಪ್ರಕರಣ ದಾಖಲಾಗಿದೆ. ಈ ಪ್ರಕರಣದಲ್ಲಿ ನೌಕರರು ಕೇಳಿದ ಮಾಹಿತಿ, ಆಡಳಿತ ಮಂಡಳಿ ತೆಗೆದುಕೊಂಡ ತೀರ್ಮಾನದ ಒಂದು ಪ್ರತಿ. ಮಾಹಿತಿ ಆಯುಕ್ತರು ಮಾಹಿತಿ ನೀಡುವಂತೆ ಆದೇಶಿಸಿದರು. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅರ್ಜಿದಾರನು ಕೇಳಿರುವ ಮಾಹಿತಿಗೂ ಕ್ರಿಮಿನಲ್ ಪ್ರಕರಣದ ವಿಚಾರಣೆಗೂ ಸಂಬಂಧವಿಲ್ಲ. ನಡವಳಿಕೆಗಳ ಪ್ರತಿ ಕೇಳುತ್ತಿರುವುದು ಆ ನೌಕರನ ಬ್ಯಾಂಕಿನ ಸೇವೆಯಲ್ಲಿದ್ದಾಗಿನ ತೀರ್ಮಾನದ ಪ್ರತಿ. ಆದ್ದರಿಂದ ಕಲಂ.8(i)(h) ಅಡಿ ಅನ್ವಯವಾಗುವುದಿಲ್ಲ. ಬೇರೆ ವ್ಯಕ್ತಿಯ ಬಗ್ಗೆ ಮಾಹಿತಿ ಕೇಳಿದಾಗ ಮಾತ್ರ ಈ ಅವಕಾಶ ಅನ್ವಯವಾಗುತ್ತದೆ. ಅರ್ಜಿದಾರರು ಅಥವಾ ಬ್ಯಾಂಕ್ ಈ ಪ್ರಕರಣದಲ್ಲಿ ಯಾವುದೇ ಪರಿಹಾರ ಪಡೆಯುವುದಿಲ್ಲ. WP © 15464/2011 (G) – 09-06-2011

17. ಒಬ್ಬ ನೌಕರನು ತನ್ನ ವಾರ್ಷಿಕ ಗುಪ್ತ ವರದಿಯನ್ನು ಕೇಳಿ ಅರ್ಜಿ ಸಲ್ಲಿಸಿದಾಗ, ಅದನ್ನು ನಿರಾಕರಿಸಲಾಯಿತು. ಇದು ಸಾರ್ವಜನಿಕ ಮಾಹಿತಿಯಲ್ಲ ಎಂದು ತಿಳಿಸಲಾಯಿತು. ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ, ನೌಕರನ ಗುಪ್ತ ಮಾಹಿತಿ ಖಾಸಗಿ ಮಾಹಿತಿಯಲ್ಲಿ. ಇದು ಸಾರ್ವಜನಿಕ ಮಾಹಿತಿ ಎಂದು ಶ್ರೇಷ್ಠ ನ್ಯಾಯಾಲಯ ನೀಡಿದ (2008) 8 SCC 725 ನ್ನು ಆಧರಿಸಿ ಈ ಮಾಹಿತಿ ನೀಡಬೇಕೆಂದು ಆದೇಶಿಸಿತು. 2009 (1) ID 233

18. ನೌಕರನ ಗುಪ್ತ ಮಾಹಿತಿಯನ್ನು ಸಂಬಂಧಪಟ್ಟ ನೌಕರನಿಗಲ್ಲದೆ ನೀಡತಕ್ಕದ್ದಲ್ಲ. ಆದರೆ ವಾರ್ಷಿಕ ಗುಪ್ತ ಮಾಹಿತಿ ಸಾರ್ವಜನಿಕ ಹಿತಾಸಕ್ತಿ ಇದೆ ಎಂದು ತೀರ್ಮಾನಿಸದಿದ್ದಾಗ ಮಾತ್ರ. ದೆಹಲಿ ಉಚ್ಚನ್ಯಾಯಾಲಯ, ಒಬ್ಬ ಒಂದು ನ್ಯಾಯಾಧಿಕರಣದ ಸದಸ್ಯನ ರಹಸ್ಯ ವಾರ್ಷಿಕ ವರದಿ ಮೇಲೆ

ತೆಗೆದುಕೊಂಡ ಕ್ರಮಗಳ ಬಗ್ಗೆ, ವಿಮರ್ಷೆ ಮಾಡುವಾಗ, ತೆಗೆದುಕೊಂಡ ಕ್ರಮಗಳ ಬಗ್ಗೆ ಅರ್ಜಿಯನ್ನು ತಿರಸ್ಕರಿಸಲಾಯಿತು ಮತ್ತು ಮೇಲ್ಮನವಿಯನ್ನೂ ತಿರಸ್ಕರಿಸಲಾಯಿತು. ಇದನ್ನು WP (c) 6756/2010 – 08-12-2011 ಪ್ರಶ್ನಿಸಿದಾಗ ವಾರ್ಷಿಕ ಗುಪ್ತ ವರದಿ ಮತ್ತು ಆ ವರದಿ ಮೇಲೆ ತೆಗೆದುಕೊಂಡ ಕಡತಗಳು ವಿಭಿನ್ನ ಎಂದು ಕಲಂ.8(1)(J) ಅಡಿ, ಗುಪ್ತ ವರದಿಯ ಮೇಲೆ ತೆಗೆದುಕೊಂಡ ಕ್ರಮ ಪ್ರತ್ಯೇಕ ಮತ್ತು ಆ ಮಾಹಿತಿಯನ್ನು ಸಾರ್ವಜನಿಕ ಮಾಹಿತಿ, ಏಕೆಂದರೆ ಅದು ಒಂದು ಪ್ರಾಧಿಕಾರದ ಸದಸ್ಯನ ನೀತಿ ನಿಷ್ಠೆ (integrity) ಪ್ರಶ್ನಿಸಲಾಗಿದೆ. ಈ ಬಗ್ಗೆ ಮಾಹಿತಿ ಆಯುಕ್ತರು ಪರಿಶೀಲಿಸಲು ಪುನರ್ ಪರಿಶೀಲನೆಗೆ ವರ್ಗಾಯಿಸಿದರು. ಇದಕ್ಕೆ ಪೂರಕವಾಗಿ ಕಲಂ.11 ನ್ನು ಕ್ರಮ ಜರುಗಿಸಲು ಸೂಚಿಸಲಾಯಿತು. ಇದನ್ನು ವಿಭಾಗೀಯ ಪೀಠದ ಮುಂದೆ ಬಂದಾಗ, ಅದನ್ನು ತಿರಸ್ಕರಿಸಲಾಯಿತು. (2012 (1) ID 478) ಇದಕ್ಕೆ ಪೂರಕವಾಗಿ ದೆಹಲಿ ಉಚ್ಚನ್ಯಾಯಾಲಯ 2010 (2) ID 485/AIR 2010 Delhi 216 ರಲ್ಲಿ ನೀಡಿದ್ದ ತೀರ್ಪಿನಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಮಾತ್ರ ವಾರ್ಷಿಕ ಗುಪ್ತ ವರದಿ ನೀಡಲು ಮಾತ್ರ ಸಾಧ್ಯ ಎಂಬುದನ್ನು ಉಲ್ಲೇಖಿಸಿದೆ.

19. ವಿದ್ಯಾ ಸಂಸ್ಥೆಗಳು ಅಲ್ಲಿನ ಅಭ್ಯರ್ಥಿಗಳು ಸಲ್ಲಿಸಿದ ವಿದ್ಯಾರ್ಹತೆ ಪ್ರಮಾಣ ಪತ್ರಗಳನ್ನು ನೀಡಬೇಕು. ಇದು ಖಾಸಗಿ ಮಾಹಿತಿಯಲ್ಲಿ. ಸಹಾಯಕ ಶಿಕ್ಷಕರು ತಮ್ಮ ಆಯ್ಕೆ ಸಮಯದಲ್ಲಿ ಸಲ್ಲಿಸಿದ ಮಾಹಿತಿ, ವ್ಯಯಕ್ತಿಕವಲ್ಲ. ಏಕೆಂದರೆ ಅದು ದಾಖಲೆಯ ಒಂದು ಭಾಗ. ಇದರ ಜೊತೆಗೆ ಆ ವಿದ್ಯಾಸಂಸ್ಥೆ ಸಾರ್ವಜನಿಕ ಪ್ರಾಧಿಕಾರವಾಗಿದ್ದು, ಅದರ ನೌಕರರು ಮಾಹಿತಿ ನೀಡುವುದು ಮಾಹಿತಿ ಕಾಯಿದೆ ಪೂರಕ. ಈ ತೀರ್ಮಾನವನ್ನು ಅಲಹಾಬಾದ್ ಉಚ್ಚನ್ಯಾಯಾಲಯ ನೀಡಿದ AIR 2009 All 106/2009 (2) ID 190 ರಲ್ಲಿ ವಿಭಾಗೀಯ ಪೀಠ ಈ ನಿರ್ಧಾರ ನೀಡಿತ್ತು. ಇದರ ಜೊತೆಗೆ ಅಲಹಾಬಾದ್ ಉಚ್ಚನ್ಯಾಯಾಲಯದ 2009 (1) ID 312/AIR 2009 All 36 ನ್ನು ಸಹ ಉಲ್ಲೇಖಿಸಿತು.

20. ವಿದ್ಯಾರ್ಹತೆ ಮತ್ತು ಅನುಭವ – ಆಯ್ಕೆ ಪಟ್ಟಿಯ ಮಾಹಿತಿಯನ್ನು ನೀಡಬೇಕು – ಇದು ಖಾಸಗಿ ಮಾಹಿತಿಯಲ್ಲ. ಕೇಂದ್ರ ಸಾರ್ವಜನಿಕ ಸೇವಾ ಆಯೋಗಕ್ಕೆ ಕೇಂದ್ರ ಮಾಹಿತಿ ಆಯೋಗ ನಿರ್ದೇಶನ ನೀಡಿ ಮಾಹಿತಿ ನೀಡಲು ಸೂಚಿಸಿತು. ಇದನ್ನು ಪ್ರಶ್ನಿಸಿ ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ. (LPA 797/2011/12-12-2011) ಅದನ್ನು ಏಕ ಸದಸ್ಯ ಪೀಠ ಮತ್ತು ವಿಭಾಗೀಯ ಪೀಠ ತಿರಸ್ಕರಿಸಿದೆ. ಯಾವುದೇ ವ್ಯಕ್ತಿ ಸಾರ್ವಜನಿಕ ಹುದ್ದೆ ಆಯ್ಕೆಯಲ್ಲಿ ಭಾಗವಹಿಸಿದ್ದು, ಅವನು ಸಲ್ಲಿಸಿದ ಮಾಹಿತಿ ಖಾಸಗಿಯಲ್ಲಿ ಮತ್ತು ಗುಪ್ತ ಮಾಹಿತಿ ಎಂದು ಪರಿಹಾರ ನಿರಾಕರಿಸತಕ್ಕದ್ದಲ್ಲ. ಇದಕ್ಕೆ ಪೂರಕವಾಗಿ LPA 802/2011 dt 12-12-2011 ರಲ್ಲಿ ನೀಡಿದು ಮಾಹಿತಿ ಆಯುಕ್ತ ಮಾಹಿತಿ ನೀಡಲು ಆದೇಶಿಸಿದ್ದ ಆದೇಶ ಪರಿಶೀಲಿಸುವಾಗ, ಅರ್ಜಿದಾರರ ವಿದ್ಯಾರ್ಹತೆ, ಅನುಭವ ಮತ್ತು ಮೌಖಿಕ ಪರೀಕ್ಷೆ ಕಲಂ.2(1)(J) ಅಡಿ ವಿನಾಯ್ತಿ ಇಲ್ಲ ಎಂದು ತೀರ್ಮಾನಿಸಿ ತಿರಸ್ಕರಿಸಿದರು. LPA 797/2011/12-12-2011/LPA 802/2011/LPA 803/2011/12-12-2011

21. ಸಾರ್ವಜನಿಕ ಹುದ್ದೆಗೆ ಅರ್ಜಿ ಸಲ್ಲಿಸಿದ ಪ್ರಕ್ರಿಯೆಯಲ್ಲಿ ಆಯುಕ್ತರು ತಿರಸ್ಕರಿಸಲ್ಪಟ್ಟ ಮಾಹಿತಿ ಸಾರ್ವಜನಿಕ ಹಿತಾಸಕ್ತಿಯಿಂದಲ್ಲ. ಮಾಹಿತಿ ಆಯುಕ್ತರು, ಮಾಹಿತಿ ನೀಡಲು ಆದೇಶಿಸಿದ್ದನ್ನು ಏಕ

ಸದಸ್ಯ ಪೀಠ ಸಮರ್ಥಿಸಿತ್ತು. ಇದಕ್ಕೆ ಮೇಲ್ಮನವಿ ಸಲ್ಲಿಸಿದಾಗ (LPA 810/2011/12-12-2011) ವಿಭಾಗೀಯ ಪೀಠ ಅರ್ಜಿದಾರ ಕೇಳಿರುವುದು, ತನ್ನಂತೆ ತಿರಸ್ಕರಿಸಿದ ವ್ಯಕ್ತಿಗಳ ಮಾಹಿತಿ, ಅದು ಸಾರ್ವಜನಿಕ ಹಿತಾಸಕ್ತಿಯಿಂದಲ್ಲ ಎಂದು ವಿಭಾಗೀಯ ಪೀಠ, ಮಾಹಿತಿ ಆಯೋಗದ ಆದೇಶವನ್ನು ಭಾಗಶಃ ಮಾರ್ಪಡಿಸಿ, ಮೌಖಿಕ ಪರೀಕ್ಷೆಗೆ ಕರೆದ ಅಭ್ಯರ್ಥಿಗಳ ಮಾಹಿತಿ ನೀಡಲು, ಕರೆಯಲಾಗದ ವ್ಯಕ್ತಿಗಳ ಮಾಹಿತಿ ನೀಡಲಾಗದು ಎಂದು ತೀರ್ಮಾನಿಸಿತು. LPA 810/2011/12-12-2011

22. ಅರ್ಜಿದಾರ, ತನ್ನ ಅರ್ಜಿಯಲ್ಲಿ ಬೇರೊಬ್ಬ ನೌಕರನ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪಡೆದ ರಜೆ ಅರ್ಜಿ ಮತ್ತು ಅದಕ್ಕೆ ಸಂಬಂಧಪಟ್ಟ ಟಿಪ್ಪಣಿ ನೀಡಲು. ವಿಭಾಗೀಯ ಪೀಠ ಆದೇಶಿಸಿತು. ಈ ಮಾಹಿತಿ ಸರ್ಕಾರದ ಸ್ವಾಧೀನದಲ್ಲಿ ಇರುವುದರಿಂದ, ಇದು ಸಾರ್ವಜನಿಕ ಮಾಹಿತಿಯಾಗುತ್ತಿದೆ. 2012 (1) ID 389

23. ಒಬ್ಬ ನಿವೃತ್ತಿ ನೌಕರ, ಮತ್ತೊಬ್ಬ ನೌಕರನ ಹುದ್ದೆಗೆ ನೀಡುತ್ತಿರುವ ವೇತನ ಶ್ರೇಣಿ ಬಗ್ಗೆ ಕೇಳಿದಾಗ, ಅದನ್ನು ತಿರಸ್ಕರಿಸಲಾಯಿತು. ಇದಕ್ಕೆ ಕಾರಣ ನೀಡಿದ್ದು ಖಾಸಗಿ ವಿವಾದಕ್ಕೆ ಸಂಬಂಧಪಟ್ಟಿದೆ ಎಂದು. ಇದನ್ನು 2007 (4) MLJ 394/2009 (1) ID 108 ನ್ನು ಮತ್ತು 2008 (2) MLJ 733/2008 (2) ID 172 ಮತ್ತು 2006 (5) CTC 829 ಅನ್ನು ಆಧರಿಸಿ, ಅರ್ಜಿದಾರನು ಕೇಳಿರುವ ಮಾಹಿತಿಯನ್ನು ನೀಡಲು ಆದೇಶಿಸಿತು. (2010) 2 MLJ 395

24. ಅರ್ಜಿದಾರ ಅವನು ಸಂಬಳ ಸಹಿತ, ಸಂಬಳ ರಹಿತ, ಗಳಿಕೆ ರಜೆ ಮತ್ತು ಸಾಂದರ್ಭಿಕ ರಜೆ ಮಂಜೂರಾದ ಬಗ್ಗೆ ಕೇಳಿದಾಗ, ಅದನ್ನು ನೀಡಲು ಮಾಹಿತಿ ಆಯುಕ್ತರು ಆದೇಶ ನೀಡಿದಾಗ, ಈ ರೀತಿ ದಾಖಲೆಗೆ ಆರೋಗ್ಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತನ್ನ ಕುಟುಂಬದ ವೈದ್ಯರು ನೀಡದಿರುವುದು ಒಂದು ಖಾಸಗಿ ಮಾಹಿತಿ, ಉಳಿದಂತೆ ರಜೆ ಮಂಜೂರಾತಿ ಬಗ್ಗೆ ಮಾಹಿತಿ ನೀಡಬೇಕೆಂದು ಆದೇಶಿಸಲಾಯಿತು. WP 1/2009 / 20-01-2008

25. ಒಬ್ಬ ವಿಜ್ಞಾನಿ ಮತ್ತೊಬ್ಬ ವಿಜ್ಞಾನಿಯ ಬಗ್ಗೆ ಗುಪ್ತ ಮಾಹಿತಿಯ ದಾಖಲೆ ಕೇಳಿದಾಗ, ಅದನ್ನು ಮಾಹಿತಿ ಅಧಿಕಾರಿ ತಿರಸ್ಕರಿಸುತ್ತಾನೆ. ರಾಜ್ಯ ಮಾಹಿತಿ ಆಯೋಗ ಮಾಹಿತಿ ನೀಡಲು ಆದೇಶಿಸಿತು. ಇದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಮಾಹಿತಿ ಆದೇಶ ನೀಡಿದ್ದ ಆರು ವಿಜ್ಞಾನಿಗಳ ಗುಪ್ತ ಮಾಹಿತಿ ನೀಡಲು ಆದೇಶಿಸಿದ್ದನ್ನು ಸಮರ್ಥಿಸಿತು. ಇದು ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಿದಾಗ ಇಲ್ಲಿ ಪರಿಶೀಲಿಸಬೇಕಾದ ಅಂಶವೆಂದರೆ, ಮಾಹಿತಿ ಕಾಯಿದೆ ರಚನೆಯಾಗಿರುವುದೆ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗಬೇಕೆಂದು, ಅದನ್ನು ವಿಮರ್ಷಿಸುವಾಗ ಕಲಂ.8(1)(e) ಮತ್ತು 8(1)(j) ಅಡಿ ವಿನಾಯ್ತಿಗೆ ಅರ್ಹತೆ ಇಲ್ಲದಿದ್ದರೆ, ಅಂತಹ ಮಾಹಿತಿ ನೀಡಬೇಕು. ಈ ಎರಡನ್ನು ಸಮರ್ಥಿಸಲಾಗದಿದ್ದರೆ, ಅದು ಸಾರ್ವಜನಿಕ ಮಾಹಿತಿ. ಅಂತರಿಕ ವಿಚಾರಣೆಗೆ ಸಂಬಂಧಪಟ್ಟ ದಾಖಲೆಗಳು, ಸಾರ್ವಜನಿಕರಿಗೆ ಲಭ್ಯವಾಗುವುದರಿಂದ ವಿಚಾರಣೆಗೆ ಸಂಬಂಧಪಟ್ಟ ಮಾಹಿತಿ ನೀಡಬಹುದು. ಗುಪ್ತ ಮಾಹಿತಿ, ಸಾರ್ವಜನಿಕ ಮಾಹಿತಿ ಆದ್ದರಿಂದ ಈ ಮಾಹಿತಿ ನೀಡಬೇಕೆಂದು ತೀರ್ಮಾನಿಸಿತು. 2010 (2) KLT 233/2010 (2) ID 111/AIR 2010 Kar 151
ಸೂಚನೆ : ಈ ಮೇಲ್ಕಂಡ ತೀರ್ಮಾನ ಶ್ರೇಷ್ಠ ನ್ಯಾಯಾಲಯ 2012 (5) CTC 810/(2012)8

MLJ 122 (SC) ರಲ್ಲಿ ನೀಡಲಾದ ತೀರ್ಮಾನದಂತೆ ಊರ್ಜಿತವಾಗುವುದಿಲ್ಲ. ಅಂದರೆ ಮಾಹಿತಿ ಕೇಳಿರುವುದು ವ್ಯಯಕ್ತಿ ಮಾಹಿತಿ ಅದು ಕಲಂ.8(1)(j) ವಿನಾಯ್ತಿಯಡಿ ಬರುತ್ತದೆ.

26. ಒಂದು ವಿಶೇಷ ತನಿಖಾ ತಂಡದ ಸದಸ್ಯನ ಬಹುಮಾನ ನೀಡಿದ ಬಗ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ಕಡತ ಮತ್ತು ಸಂಖ್ಯೆಯನ್ನು ಸುಂಕ ಆಯುಕ್ತರಿಗೆ ಕೇಳಿದಾಗ ಅದನ್ನು ತಿರಸ್ಕರಿಸಲಾಯಿತು. ಅದನ್ನು ಮಾಹಿತಿ ಆಯೋಗ ಮಾಹಿತಿ ನೀಡಲು ಆದೇಶಿಸಿತು. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ನ್ಯಾಯಾಲಯ ಬಹುಮಾನ ನೀಡಿದ ಮಾಹಿತಿ ಮತ್ತು ಕಡತ ಮತ್ತು ಪತ್ರ ವ್ಯವಹಾರ ಬೇರೆ ಬೇರೆಯಾಗಿದೆ ಎಂದು ವಿಮರ್ಷಿಸದೇ ಆದೇಶಿಸಿದ್ದು, ಬಹುಮಾನ ನೀಡಿದ ಮಾಹಿತಿ ನೀಡಲು ಮತ್ತು ಕಡತದಲ್ಲಿನ ಪತ್ರ ವ್ಯವಹಾರ ಮತ್ತು ಸಂಖ್ಯೆಯನ್ನು ನೀಡಲಾಗದು ಎಂದು ಆದೇಶಿಸಿತು. (ಕಲ್ಕತ್ತಾ ಉಚ್ಚನ್ಯಾಯಾಲಯ) WP 121/2009, 310/2009 - 30-07-2009

27. ಒಬ್ಬ ನೌಕರ ತನ್ನ ಭಡ್ತಿ ನೀಡಲಾಗದ ವಿಷಯದ ಬಗ್ಗೆ ಮಾಹಿತಿ ಕೇಳಿದರೆ, ನೀಡಬೇಕು. ಅದು ಕಲಂ.8(1)(e) ಮತ್ತು (j) ನಡಿ ವಿನಾಯ್ತಿ ಇಲ್ಲ. ಭಾರತೀಯ ಸ್ಟೇಟ್ ಬ್ಯಾಂಕ್ ನಲ್ಲಿ ನಂಬಿಕೆಯ ಆಧಾರದ ಮೇಲೆ ನಿರಾಕರಿಸಲಾಗದು ಎಂಬ ತೀರ್ಮಾನ ಸರಿಯಿಲ್ಲ. ಇದು ಕಲಂ.8(1)(e) ಮತ್ತು (j) ನ ತಪ್ಪು ವಿಮರ್ಷೆ ಎಂದು ಮತ್ತು ವಾರ್ಷಿಕ ಗುಪ್ತ ವರದಿ ನೌಕರನ ಗುಣ ಪರಾಮರ್ಷಿಸಿ ವರದಿಗಳನ್ನು ನೀಡಲು ಮಾಹಿತಿ ಆಯೋಗದ ತೀರ್ಮಾನದ ಮಧ್ಯ ಪ್ರವೇಶ ಅವಶ್ಯಕವಿಲ್ಲವೆಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. AIR 2010 Delhi 205

28. ಒಬ್ಬ ವ್ಯಕ್ತಿ ಆಯ್ಕೆ ಸಂದರ್ಭದಲ್ಲಿ ದಾಖಲಿಸಿದ ವಿದ್ಯಾರ್ಹತೆ ಪ್ರಮಾಣ ಪತ್ರಗಳು, ಸಾರ್ವಜನಿಕ ಕೆಲಸದಲ್ಲಿ ದಾಖಲಿಸಿದೆ ಎಂದು ಮಾಹಿತಿ ನೀಡಲಾಗದು. ಆಂದ್ರಪ್ರದೇಶ ಉಚ್ಚನ್ಯಾಯಾಲಯ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ಮಾಹಿತಿಯನ್ನು ಸಾರ್ವಜನಿಕ ಕೆಲಸಕ್ಕೆ ಹೋಲಿಸಲಾಗದು. ಇಂತಹ ಮಾಹಿತಿ ನೀಡಿದರೆ ಅದು ಖಾಸಗೀ ತನಕ್ಕೆ ಧಕ್ಕೆಯಾಗುತ್ತಿದೆ ಎಂದು ತೀರ್ಮಾನಿಸಿತು. AIR 2010 AP 105/ 2010 (2) ID 481

ಸೂಚನೆ : ಈ ತೀರ್ಮಾನ ಇನ್ನಿತರ ಕೆಲವು ತೀರ್ಮಾನಗಳಿಗೆ ವಿರುದ್ದ. ಆದ್ದರಿಂದ ಈ ತೀರ್ಮಾನ, ಈ ಪ್ರಕರಣದಲ್ಲಿ ಮಾತ್ರ ಅನ್ವಯ.

29. ಒಬ್ಬ ವ್ಯಕ್ತಿ ಸಂಬಂಧಪಟ್ಟ ಕ್ರಿಮಿನಲ್ ಮೊಕದ್ದೊಮ್ಮೆಗೆ ಸಂಬಂಧಪಟ್ಟ ಮಾಹಿತಿ ನೀಡಲು ನಿರಾಕರಿಸಲಾಗದು. ಕ್ರಿಮಿನಲ್ ಪ್ರಕರಣ ಬಾಕಿ ಇದೆ ಎಂಬ ಕಾರಣಕ್ಕೆ ಮಾಹಿತಿ ನೀಡಲು ನಿರಾಕರಿಸಲಾಗದು. ಅರ್ಜಿದಾರನ ಮಾಹಿತಿ ಪಡೆಯುವ ಹಕ್ಕನ್ನು, ಅವನದೇ ಕ್ರಿಮಿನಲ್ ಪ್ರಕರಣದಲ್ಲಿ ನಿರಾಕರಿಸಲಾಗದು. ಇದಕ್ಕೆ ಪೂರಕವಾಗಿ ಕಲಂ.22 ರಲ್ಲಿ ನೀಡಿರುವ ಅಧಿಕಾರ, ಬೇರೆ ಕಾಯಿದೆಯಲ್ಲಿನ ಅಧಿಕಾರಗಳಿಗೆ ಹಿರಿದು ಎಂದಿರುವುದರಿಂದ ಅಧಿಕಾರಿ ರಹಸ್ಯ ಕಾಯಿದೆ 1923 ರಲ್ಲಿನ ನಿರ್ಬಂಧ ಅನ್ವಯಿಸದು – ಎಂದು ದೆಹಲಿ ಉಚ್ಚನ್ಯಾಯಾಲಯ ತೀರ್ಪಿತ್ತಿದೆ. 2011 (1) ID 293

30. ವೈಯಕ್ತಿಕ ದಾಖಲೆ ಮತ್ತು ಸೇವಾ ಪುಸ್ತಕ ವ್ಯಯಕ್ತಿಕ ಮಾಹಿತಿ. ಮಧ್ಯಪ್ರದೇಶ ಉಚ್ಚನ್ಯಾಯಾಲಯ ಮೊದಲನೇ ವ್ಯಕ್ತಿಗೆ ವ್ಯಯಕ್ತಿಕ ದಾಖಲೆ ಮತ್ತು ಸೇವಾ ಪುಸ್ತಕದ ಗುಪ್ತತೆ ಕಾಯಬೇಕಾಗುತ್ತದೆ. ಇಂತಹ ಮಾಹಿತಿ ನೀಡಿದರೆ ಅದು ವ್ಯಯಕ್ತಿಕ ಮಾಹಿತಿ ನೀಡಿದಂತಾಗುತ್ತದೆ – ಅದು ಖಾಸಗೀತನ

ಅನ್ವೇಷಣೆಯಾಗುತ್ತದೆ. AIR 2011 MP 14/ 2011 (2) ID 376

31. ಒಬ್ಬ ಜಿಲ್ಲಾಧಿಕಾರಿಯ ಲೈಂಗಿಕ ಆನಾರೋಗ್ಯದ ಬಗ್ಗೆ ಮಾಹಿತಿ ನೀಡಲಾಗದು, ಏಕೆಂದರೆ ಇದು ಒಂದು ಖಾಸಗಿ ಮಾಹಿತಿ ಮತ್ತು ಇಂತಹ ಮಾಹಿತಿ ನೀಡಿದರೆ ಅದು ಖಾಸಗಿ ತನದ ಮಧ್ಯಪ್ರವೇಶ ಮಾಡಿದಂತೆ. ಆದ್ದರಿಂದ ಇದು ಸಾರ್ವಜನಿಕ ಹಿತಾಸಕ್ತಿ ಪೂರಕವಲ್ಲ ಎಂದು ದೆಹಲಿ ಉಚ್ಚನ್ಯಾಯಾಲಯ ತೀರ್ಮಾನಿಸಿತು. AIR 2011 Delhi 82/2011 (2) ID 297

32. ಒಬ್ಬ ಪ್ರಜೆ, ಒಬ್ಬ ಐಎಎಸ್ ಅಧಿಕಾರಿಯ ಆಸ್ತಿ ಜವಾಬ್ದಾರಿ ತಃಖ್ತೆಯು ನೋಡಬಹುದು. ಅದನ್ನು ಮುಚ್ಚಿದ ಲಕೋಟೆಯಲ್ಲಿ ನೀಡಿದ್ದರೂ ಮದ್ರಾಸ್ ಉಚ್ಚನ್ಯಾಯಾಲಯ, ಸರ್ಕಾರದ ಒಬ್ಬ ನೌಕರ, ತನ್ನ ವಾರ್ಷಿಕ ಆಸ್ತಿ ಜವಾಬ್ದಾರಿ ತಃಖ್ತೆನ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದರೂ, ಅದನ್ನು ಸಾರ್ವಜನಿಕರು ಪಡೆಯಬಹುದು ಎಂದು ವಿಭಾಗೀಯ ಪೀಠ ಆದೇಶಿಸಿದೆ. ಈ ತೀರ್ಪಿಗೆ ಪೂರಕವಾಗಿ ಪರಿಶೀಲಿಸಬೇಕಾದ ಅಂಶಗಳೆಂದರೆ ಎ) ಈ ಮಾಹಿತಿ ವ್ಯಕ್ತಿಯ ಖಾಸಗಿ ವಿಷಯವೇ ಮತ್ತು ಅದು ಸಂಸ್ಥೆಗೆ ಸಂಬಂಧಪಟ್ಟಿಲ್ಲವೇ ಬಿ) ಈ ಮಾಹಿತಿ ವ್ಯಕ್ತಿಯ ಕಾರ್ಯನಿರ್ವಹಣೆ ಮತ್ತು ಸೇವಕನ ಕೆಲಸಕ್ಕೆ ಸಂಬಂಧಿಸಿದ್ದೆ. ಸಿ) ಈ ಮಾಹಿತಿ ನೀಡಿದರೆ ಅದು ಪಾರದರ್ಶಕ ಅಥವಾ ಜವಾಬ್ದಾರಿ ನಿಗದಿ ಪಡಿಸಬಹುದಾಗಿದ್ದರೆ.

ಒಬ್ಬ ಸರ್ಕಾರಿ ನೌಕರರು, ತಾನು ಸಲ್ಲಿಸಿದ ಆಸ್ತಿ ಜವಾಬ್ದಾರಿ ತಃಖ್ತೆ, ಸರ್ಕಾರದ ವಶಕ್ಕೆ ನೀಡಲಾಗಿದ್ದರೆ – ಮತ್ತು ಅದು ಸಾರ್ವಜನಿಕ ಪ್ರಾಧಿಕಾರದ ಪಡೆಯಬಹುದಾಗಿದ್ದರೆ ಅದು ಐಎಎಸ್ ಅಧಿಕಾರಿಗೆ ಸಂಬಂಧಪಟ್ಟಿದ್ದರೂ ಅದು ಸಾರ್ವಜನಿಕರಿಗೆ ಸಿಗತಕ್ಕದ್ದು. (2011) 6 MLJ 653/2011 (2) ID 553/2011-3-LW-798/ AIR 2012 Mad 5

33. ಒಬ್ಬ ಎಂ.ಎಲ್.ಎ ಬಗ್ಗೆ ಸಾರ್ವಜನಿಕರು ಮಾಹಿತಿ ಕೇಳಿದರೆ ಅದನ್ನು ಖಾಸಗಿ ಮತ್ತು ಗುಪ್ತ ಮಾಹಿತಿ ಎಂದು ನಿರಾಕರಿಸತಕ್ಕದ್ದಲ್ಲ. ಒಂದು ಕಾಯಿದೆ ನಿಬಂಧನೆಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಮೆಡಿಕಲ್ ಪರಿಶತ್ ರೂಪಿಸಿದ ನಿಬಂಧನೆಗಳಲ್ಲಿ, ಆಸ್ಪತ್ರೆಯಲ್ಲಿ ನಿರ್ವಹಿಸಿದ ಮಾಹಿತಿಯನ್ನು ಮೂರನೇ ವ್ಯಕ್ತಿಗೆ ನೀಡಲಾಗದು ಎಂಬ ಅವಕಾಶ ಕಾನೂನಿಗೆ ವಿರುದ್ದ. ಆದ್ದರಿಂದ ಮಾಹಿತಿ ಹಕ್ಕು ಕಾಯಿದೆಯಲ್ಲಿ ಮಾಹಿತಿ ನೀಡಬೇಕು. ಈ ಪ್ರಕರಣದಲ್ಲಿ ಭಾರತೀಯ ಶ್ರೇಷ್ಠ ನ್ಯಾಯಾಲಯ ಒಂದು ಜನಪ್ರತಿನಿಧಿಗೆ (ಎಂಎಲ್ಎ) ನ್ಯಾಯಾಲಯ ನಿಂದನೆ ಆರೋಪದಲ್ಲಿ ಒಂದು ತಿಂಗಳು ಜೈಲು ಶಿಕ್ಷೆ ವಿಧಿಸಿದ್ದು, ಈ ಅವಧಿಯಲ್ಲಿ ಆ ಜನಪ್ರತಿನಿಧಿಯ ಒಂದು ಆಸ್ಪತ್ರೆಯ ಹವಾನಿಯಂತ್ರಣ ಕೊಟ್ಟಡಿಯಲ್ಲಿ ಕಳೆದರು, ಆ ಮಾಹಿತಿ ಖಾಸಗಿ ಮಾಹಿತಿಯಲ್ಲ. ಅದು ಕಾಯಿದೆ ಕಲಂ.8(1)(j) ನಡಿ ವಿನಾಯ್ತಿ ಇಲ್ಲ. ಈ ಬಗ್ಗೆ ಬಾಂಬೆ ಉಚ್ಚನ್ಯಾಯಾಲಯ, ಶ್ರೇಷ್ಠ ನ್ಯಾಯಾಲಯದದಲ್ಲಿ ನ್ಯಾಯಾಲಯ ನಿಂದನೆ ಪ್ರಕರಣದಲ್ಲಿನ ಮಾಹಿತಿ ನೀಡಬೇಕೆಂಬ, ಮಾಹಿತಿ ನೀಡಲು ಆದೇಶಿಸಿತು ಮತ್ತು ಮಾಹಿತಿ ದುರುಪಯೋಗವಾಗಬಹುದೆಂದು ನಿರಾಕರಿಸತಕ್ಕದ್ದಲ್ಲ. AIR 2007 Bom 121/2008 (1) ID 185

34. ಒಬ್ಬ ಅರ್ಜಿದಾರ ಮಾಹಿತಿ ಹಕ್ಕು ಕಾಯಿದೆಯಲ್ಲಿ ಕೇಳಿದ ಮಾಹಿತಿಗೆ – ಅದರ ಉಪಯೋಗಿಸುವ ಬಗ್ಗೆ ಕಾರಣ ನೀಡಬೇಕಾಗಿಲ್ಲ. ಮದ್ರಾಸ್ ಉಚ್ಚನ್ಯಾಯಾಲಯ, ಒಂದು ವಿಶ್ವವಿದ್ಯಾಲಯ ಯಾವುದೇ ವ್ಯಕ್ತಿಯ ಮಾಹಿತಿ ಕೇಳಿದಾಗ, ಅದರ ಉದ್ದೇಶವನ್ನು ಸ್ಪಷ್ಟ ಪಡಿಸಲಿಲ್ಲವೆಂದು ಮಾಹಿತಿ ನಿರಾಕರಿಸಿರುವುದನ್ನು ಮಾಹಿತಿ ಆಯೋಗ, ಕಲಂ.6(2) ರಲ್ಲಿ ಕಾರಣ ನೀಡುವ ಅವಶ್ಯಕತೆ

ಇಲ್ಲವೆಂದಿದ್ದರೂ, ಅದನ್ನು ಪರಿಶೀಲಿಸದೆ ಆದೇಶಿಸಿರುವುದು ತಪ್ಪು. ಇದನ್ನು ಉಚ್ಚನ್ಯಾಯಾಲಯ ಪ್ರಕರಣವನ್ನು ಮಾಹಿತಿ ಆಯೋಗಕ್ಕೆ ಮರು ಪರಿಶೀಲನೆಗಾಗಿ, ಅಂದರೆ, ಅರ್ಜಿದಾರ ಕೇಳಿದ ಮಾಹಿತಿ, ಕಲಂ.6(2) ರನ್ವಯ ಕಾರಣ ನೀಡುವ ಅವಶ್ಯಕತೆ ಇಲ್ಲವೆಂಬ ಬಗ್ಗೆ ಪರಿಶೀಲಿಸದೆ, ಮಾಹಿತಿ ನೀಡಲು ಆದೇಶಿಸಿರುವುದು ಸರಿಯವೆಂದು ಸೂಚಿಸಿತು. 012 (1) ID 167

35. ಒಬ್ಬ ಪರೀಕ್ಷಾರ್ಥಿ, ತನ್ನ ಅರ್ಹತೆ ಬಗ್ಗೆ ತಿಳಿಯಬೇಕಾದರೆ, ಪರೀಕ್ಷೆ ನಡೆಸಿದಾಗ ಪರೀಕ್ಷೆ ನ್ಯಾಯ ಸಮ್ಮತವಾಗಿ ಮತ್ತು ಪಾರದರ್ಶಕವಾಗಿ ನಡೆದಿದೆ ಎಂದು ತೀರ್ಮಾನಿಸಲು, ಆಯ್ಕೆ ನಿಯಮಗಳ, ಬಗ್ಗೆ ಮಾಹಿತಿ ಕೇಳಿದರೆ ನೀಡಬೇಕು ಎಂದು ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. ಅಂದರೆ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು, ಎಷ್ಟು ಅಂಕಗಳ ಕನಿಷ್ಟ ಅರ್ಹತೆ (cut off marks) ವಿಷಯಗಳ ಅಂಕ ಪಟ್ಟಿ ಬಗ್ಗೆ ಮಾಹಿತಿ ಕೇಳಿದಾಗ, ಸಾರ್ವಜನಿಕ ಮಾಹಿತಿ ಅಧಿಕಾರಿ ನಿರಾಕರಿಸಿದಾಗ, ಅಥವಾ ಉಚ್ಚನ್ಯಾಯಾಲಯವಲ್ಲ ಪ್ರಶ್ನಿಸಿದಾಗ, ಮಾಹಿತಿ ನೀಡಲು ನ್ಯಾಯಾಲಯ ಆದೇಶಿಸಿತು. ಅದನ್ನು ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಿದಾಗ ಮಾಹಿತಿ ನೀಡಲು ಗುಪ್ತತೆ ಮತ್ತು ರಹಸ್ಯತೆ ಅನ್ವಯಿಸದು ಎಂದು ತಿಳಿಸಿ ಶ್ರೇಷ್ಠ ನ್ಯಾಯಾಲಯ AIR 2011 SC 3336/2011 (9) Scale 639/2011 (2) ID 432/2011 (5) CTC 780/2011-5-LW-229/(2011) 8 SCC 781 ನಲ್ಲಿ ತಿಳಿಸಿದಂತೆ ಉತ್ತರ ಪತ್ರಿಕೆ ಮತ್ತು ಮುಖ್ಯ ಉತ್ತರಗಳ ಮಾಹಿತಿ ನೀಡಬೇಕೆಂದು ಮತ್ತು ಅದನ್ನು ಪರೀಕ್ಷೆ ಪಲಿತಾಂಶ ಪ್ರಕಟಿಸಿದ ನಂತರ ನೀಡಬೇಕೆಂದು ಸೂಚಿಸಿರುವುದಿಲ್ಲ ಎಂದು ಉಲ್ಲೇಖಿಸಿತು ಮತ್ತು ಕೇಂದ್ರ ಸಾರ್ವಜನಿಕ ಸೇವಾ ಆಯೋಗಕ್ಕೆ ಮಾಹಿತಿ ನೀಡಲು ಆದೇಶಿಸಿತು. LPA 229/2011 dt 13-07-2012/ WP © 3316/2011

36. ನ್ಯಾಯಾಲಯಗಳ ದಾಖಲೆಗಳನ್ನು ಮಾಹಿತಿ ಹಕ್ಕು ಕಾಯಿದೆಯಲ್ಲಿಯೂ ಪಡೆಯಬಹುದು. ಮದ್ರಾಸ್ ಉಚ್ಚನ್ಯಾಯಾಲಯ, ಮೂರನೆ ವ್ಯಕ್ತಿ ಒಂದು ಕ್ರಿಮಿನಲ್ ಪ್ರಕರಣದಲ್ಲಿ, ಹಣ ಪಾವತಿ ಮಾಡಿ, ಮಾಹಿತಿ ಪಡೆಯಬಹುದೆಂದು ಆದೇಶಿಸಿತು. ಕಲಂ.8(1)(h) ಅಡಿ ಮಾಹಿತಿ ನೀಡಲು ನಿರಾಕರಿಸಬಹುದಾದ ಪ್ರಸಂಗವೆಂದರೆ, ಅಂತಹ ದಾಖಲೆ ನೀಡಿದರೆ ಅದು ಪ್ರಕರಣ ತನಿಖೆ ಮಾಡಲು ಅಡ್ಡಿಯಾಗಬಹುದೆಂದಾಗ ಮಾತ್ರ. ಅಥವಾ ಖಾಸಗೀತನಕ್ಕೆ ದಕ್ಕೆಯಾಗುತ್ತದೆ ಎಂದಾಗ ಮಾತ್ರ. ನಿರಾಕರಿಸಬಹುದು. 2012 (1) ID 365

37. ಮಾಹಿತಿ ಹಕ್ಕು ಕಾಯಿದೆ ಕಲಂ.8(1)(j) ಖಾಸಗಿತನ ಮತ್ತು ಮಾಹಿತಿ ಎರಡನ್ನು ಸರಿದೂಗಿಸುತ್ತದೆ. ಅರ್ಜಿದಾರ ಕೇಳಿದ ಮಾಹಿತಿ ಪ್ರಕರಣದಲ್ಲಿ ವಾರೆಂಟ್ ನೀಡಲಾಗಿತ್ತು ಮತ್ತು ವಾರೆಂಟ್ ಜಾರಿ ಮಾಡುವಾಗ ಪೋಲೀಸ್‌ರ ವರದಿ ಕೇಳಲಾಗಿತ್ತು. ದೆಹಲಿ ಉಚ್ಚನ್ಯಾಯಾಲಯ 2010 (1) ID 72 ನಲ್ಲಿ ಖಾಸಗಿತನದ ವಿನಾಯ್ತಿ ಅಪರಿಮಿತವಲ್ಲ ಎಂಬುದನ್ನು ಉಲ್ಲೇಖಿಸಿ ಮಾಹಿತಿಯನ್ನು ನೀಡಬೇಕೆಂದು ಆದೇಶಿಸಿತು. ಇದಕ್ಕೆ ಪೂರಕವಾಗಿ ಶ್ರೇಷ್ಠ ನ್ಯಾಯಾಲಯದ (1994) 6 SCC 632 ನ್ನು ಅನುಸರಿಸಿತು. 2010 (1) ID 72/(1994) 6 SCC 632

38. ಸಾರ್ವಜನಿಕ ದಾಖಲೆಯನ್ನು ಕೇಳಿದ ವ್ಯಕ್ತಿ ಯಾವುದೇ ಉದ್ದೇಶದಿಂದ ಮಾಹಿತಿ/ದಾಖಲೆ ನೀಡಬೇಕು. ಮದ್ರಾಸ್ ಉಚ್ಚನ್ಯಾಯಾಲಯ ಒಂದು ಕಂಪನಿ ಮತ್ತೊಂದು ಕಂಪನಿಗೆ 10 ವರ್ಷಗಳ ಅವಧಿಗೆ ಗುತ್ತಿಗೆದಾರರು ಮತ್ತು ಪ್ರಯಾಣ ರಹದಾರಿ ಬಗ್ಗೆ ಮಾಹಿತಿ ನಿರಾಕರಿಸಿದಾಗ, ಇದನ್ನು

ಮದ್ರಾಸ್ ಉಚ್ಚನ್ಯಾಯಾಲಯದಲ್ಲಿ ಮಾಹಿತಿ ನೀಡಲು ಆದೇಶಿಸಿತು. ಈ ಮಾಹಿತಿಯನ್ನು ನೀಡುವುದರಿಂದ ಯಾವುದೇ ನೀತಿಯನ್ನು ಉಲ್ಲಂಘಿಸಿದಂತಾಗುವುದಿಲ್ಲ ಮತ್ತು ಎರಡನೇ ಮೇಲ್ಮನವಿ ಸಲ್ಲಿಸಲು ಕಲಂ.19(3) ರಲ್ಲಿ ಅವಕಾಶ ಇರುವುದರಿಂದ, ಅದರಲ್ಲಿ ಪರಿಹಾರ ಪಡೆಯಲು ಅರ್ಜಿದಾರನಿಗೆ ರಾಜ್ಯ ಮಾಹಿತಿ ಆಯೋಗದಲ್ಲಿ ಅರ್ಜಿ ಹಾಕಲು ಸೂಚಿಸಿ, ವಜಾ ಮಾಡಿತು. 2009 (1) ID 108

39. ಬಾಂಬೆ ಉಚ್ಚನ್ಯಾಯಾಲಯ ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ನಿರಾಕರಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಯ ಅಧಿಕಾರ. ಈ ಅಧಿಕಾರ ಚಲಾಯಿಸುವಾಗ ಕಲಂ.8(1) ರಡಿ ವಿನಾಯ್ತಿ ಇದೆಯೇ ಎಂದು ತೀರ್ಮಾನಿಸಲು ಕಲಂ.19(4) ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ನೀಡಲಾಗಿದೆ. ಈ ರೀತಿ ತೀರ್ಮಾನ ಮಾಡುವಾಗ, ಈ ಎರಡೂ ಕಲಂಗಳಡಿ ಮಾತ್ರ ಪರಿಶೀಲಿಸಿ ಆದೇಶಿಸಬೇಕು. ಮಾಹಿತಿ ಹಕ್ಕು ಆಯೋಗ ಕಲಂ.8(1) ರಡಿ ಪರಿಶೀಲಿಸಿ, ಮಾಹಿತಿ ನೀಡಲು ಆದೇಶಿಸಿರುವುದು ಸರಿ ಇದೆ ಎಂದು ತೀರ್ಮಾನಿಸಿತು. 2010 (2) ID 543

40. ಸಾರ್ವಜನಿಕ ಮಾಹಿತಿ ಅಧಿಕಾರಿಗೆ, ವಾಣಿಜ್ಯ ತೆರಿಗೆ ಅಧಿಕಾರಿ ಅಡಿ ಕೆಲಸ ನಿರ್ವಹಿಸುವ, ವಾಹನಗಳ (flying squad) ಮತ್ತು ದಂಡವನ್ನು ವಸೂಲಿ ಮಾಡದೆ ಇದ್ದ ಬಗ್ಗೆ ಮಾಹಿತಿ ಕೇಳಿದಾಗ, ಅದು ಲಭ್ಯವಿಲ್ಲವೆಂದು ಕೆಲವು ಅಧಿಕಾರಗಳು ತಿಳಿಸಿ, ಅದು ಸಾರ್ವಜನಿಕ ಸಂಪರ್ಕ ಅಧಿಕಾರಿಯಲ್ಲಿ ಸಿಗುತ್ತದೆಂದು ತಿಳಿಸಿದಾಗ, ಅದನ್ನು ನೀಡಬೇಕು, ಆದರೆ ಮಾಹಿತಿ ಕೇಳಿದ ವ್ಯಕ್ತಿ ಯಾವ ಕ್ಷೇತ್ರಕ್ಕೆ ಸಂಬಂಧಪಟ್ಟ ಮಾಹಿತಿ ಎಂದು ತಿಳಿಸದೇ ಇದ್ದುದರಿಂದ, ಯಾರ ಮುಂದೆ ಅರ್ಜಿ ಸಲ್ಲಿಸಲಾಗಿದೆಯೇ, ಆ ವಲಯಕ್ಕೆ ಸಂಬಂಧಪಟ್ಟ ಮಾಹಿತಿ ನೀಡಬೇಕೆಂದು ಮತ್ತು ಆ ಮಾಹಿತಿ ಕಲಂ.8(1) ರಡಿ ವಿನಾಯ್ತಿಯಲ್ಲ ಎಂದಿದ್ದರೆ ನೀಡಬೇಕೆಂದು (ಹಾಗೂ ಕಲಂ.8(1) ರಡಿ ವಿನಾಯ್ತಿ ಇತ್ತೆಂದು ತಿಳಿಸಿಲ್ಲ) ಕರ್ನಾಟಕ ಮಾಹಿತಿ ಆಯೋಗ ನೀಡಿದ್ದ ಆದೇಶಕ್ಕೆ, ಕರ್ನಾಟಕ ಉಚ್ಚನ್ಯಾಯಾಲಯ ಮಾಹಿತಿ ನೀಡಲು ಆದೇಶಿಸಿತು. WP.13286/2009 - 03-11-2004

41. ಚುನಾವಣೆ ಸಮಯದಲ್ಲಿ ಮತ ಪತ್ರಗಳನ್ನು ಮತ್ತು ವಿದ್ಯುನ್ಮಾನ ಮತ ಯಂತ್ರಗಳನ್ನು ಭದ್ರ ಪಡಿಸಿದ ನಂತರ, ಅದೇ ಮಾಹಿತಿಯನ್ನು ನ್ಯಾಯಾಲಯದ ಆದೇಶವಿಲ್ಲದೆ, ತೆರೆಯುವಂತಿಲ್ಲ. ಚುನಾವಣಾ ಆಯೋಗಕ್ಕೆ ಆ ದಾಖಲೆ ಪರಿಶೀಲಿಸಲಾಗದು. ಆದರೆ ಕೆಲವು ಮಾಹಿತಿಯನ್ನು ಪುನರ್ ದೃಢೀಕರಣ ಮಾಡಲು ಕೇಳಿದಾಗ ಅದರ ಅವಶ್ಯಕತೆ ಇಲ್ಲವೆಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಅಂದರೆ ಈಗಾಗಲೇ ಕೆಲವು ಮಾಹಿತಿ ತಃಖ್ತೆ ಗಳಲ್ಲಿ ಲಭ್ಯವಿರುವುದರಿಂದ, ಅದೇ ಮಾಹಿತಿಯನ್ನು ಚುನಾವಣಾ ಆಯೋಗ ದೃಢೀಕರಿಸುವ ಅವಶ್ಯಕತೆ ಇಲ್ಲ – ಏಕೆಂದರೆ ಅದನ್ನು ದೃಢೀಕರಿಸಲು ಭದ್ರ ಪಡಿಸಿದ ದಾಖಲೆಗಳನ್ನು ನ್ಯಾಯಾಲಯದ ಆದೇಶವಿಲ್ಲದೆ ತೆರೆಯಲಾಗದು ಮತ್ತು ಅದರ ನಂತರವೇ ದೃಢೀಕರಿಸಬಹುದು. ಆದ್ದರಿಂದ, ದಾಖಲೆಗಳನ್ನು ಪುನರ್ ದೃಢೀಕರಿಸಲಾಗದು. (ನ್ಯಾಯಾಲಯದ ಆದೇಶವಿಲ್ಲದೆ) 2010 (1) ID 433

42. ಮಾಹಿತಿ ಹಕ್ಕು ಕಾಯಿದೆಯಡಿ ತನಿಖೆ ಮಾಡಬೇಕಾದ ಪ್ರಕ್ರಿಯೆ ಇರುವುದರಿಂದ, ಮಾಹಿತಿ ನಿರಾಕರಿಸಲಾಗದು. ಅಂದರೆ ಕಲಂ.8(1) ರಡಿ ವಿನಾಯ್ತಿ ಇಲ್ಲದಿದ್ದರೆ, ಅರ್ಜಿದಾರ ಕೇಳಿದ ಮಾಹಿತಿ ನೀಡಬೇಕು. ಈ ಹಿಂದೆ 2008 (2) ID 234 ನ ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದಾಯ ತೆರಿಗೆ ಕಾಯಿದೆಯಡಿ, ಮಾಹಿತಿ ಕೇಳಿದಾಗ, ತನಿಖೆಗೆ ಬಾಕಿ ಇದ್ದರೆ,

ಅಂತಹ ಮಾಹಿತಿ ನೀಡುವುದು ತೊಡಕಾಗುತ್ತಿದ್ದರೆ ಮಾತ್ರ ತಡೆಹಿಡಿಯಬಹುದೆಂದು ಪರಿಗಣಿಸಿದ್ದನ್ನು ಗಮನಿಸಲಾಯಿತು. ಆ ಪ್ರಸಂಗದಲ್ಲಿ ಮಾಹಿತಿ ನೀಡಬೇಕೆಂದು ವಿಭಾಗೀಯ ಪೀಠ ಆದೇಶಿಸಿತು. ಇದೇ ರೀತಿ ಕರ್ನಾಟಕ ಉಚ್ಚನ್ಯಾಯಾಲಯ 2008 (2) ID 398 ಪ್ರಕರಣದಲ್ಲಿ (ರವಿಕುಮಾರ್ ಪ್ರಕರಣದಲ್ಲಿ) ಮಾಹಿತಿ ಗುಪ್ತ ಮತ್ತು ರಹಸ್ಯ ಎಂದು ಮಾಹಿತಿ ನಿರಾಕರಿಸುವಾಗ, ಅದನ್ನು ಸಮರ್ಥಿಸಬಹುದು. ಆದರೆ ಸಾಮಾನ್ಯವಾಗಿ ಮಾಹಿತಿ ನೀಡಬೇಕು. ಇದಕ್ಕೆ ಪೂರಕವಾಗಿ AIR 1965 SC 745 ಮತ್ತು AIR 1997 SC 1125 ನ ಉಲ್ಲೇಖಿಸಿ, ಮಾಹಿತಿ ಅಧಿಕಾರಿ ಮಾಹಿತಿ ಸಾರಾಸಗಟು ಮಾಹಿತಿ ನೀಡಲು ನಿರಾಕರಿಸತಕ್ಕದ್ದಲ್ಲವೆಂದು/ತೀರ್ಮಾನಿಸತಕ್ಕದ್ದಲ್ಲವೆಂಬ ಉಲ್ಲೇಖಿಸಲಾಗಿದೆ. ಅದರಂತೆ ಕಲಂ.8(1)(b) ರಡಿ ವಿನಾಯ್ತಿ ಇದೆ ಎಂದು ದೃಡ ಪಟ್ಟಾಗ, ಮಾಹಿತಿ ನಿರಾಕರಿಸಬಹುದು ಎಂಬ ದೆಹಲಿ ಉಚ್ಚನ್ಯಾಯಾಲಯ ನೀಡಿದ WP 295/2011 – 03-06-2011 ರನ್ನು ಉಲ್ಲೇಖಿಸಿತು. ಇದೇ ರೀತಿ ದೆಹಲಿ ಉಚ್ಚನ್ಯಾಯಾಲಯದ 2012 (1) ID 228 ನ ತೀರ್ಪನ್ನು ಉಲ್ಲೇಖಿಸಿ ಮಾಹಿತಿ ನಿರಾಕರಿಸಲು ಕಾರಣಗಳಿಲ್ಲವೆಂದು ಆದೇಶಿಸಿತು. 2008 (2) ID 200/2008 (2) ID 234/2008 (2) ID 398/AIR 1965 SC 745/AIR 1997 SC 1125/2012 (1) ID 228

43. ಒಂದು ಪ್ರಕರಣದಲ್ಲಿ ತನಿಖೆಗೆ ತೊಡಕಾಗುತ್ತದೆ ಎಂದು ಮನಗಂಡರೆ, ಅದನ್ನು ನೀಡಬೇಕಾಗಿಲ್ಲ. ಅರ್ಜಿದಾರ ಒಂದು ಕ್ರಿಮಿನಿಲ್ ಪ್ರಕರಣದಲ್ಲಿ ಅವನಿಗೆ ಬೇಕಾದ ಮಾಹಿತಿ ಪಡೆಯಲು ಪ್ರಯತ್ನಿಸಿದಾಗ ಅಲಹಾಬಾದ್ ಉಚ್ಚನ್ಯಾಯಾಲಯ, ಈ ವಿಷಯ ಕಲಂ.8(1)(h) ರಡಿ ಬರುವುದರಿಂದ ಮಾಹಿತಿ ನಿರಾಕರಿಸಬಹುದೆಂದು ತೀರ್ಮಾನಿಸಿತು. 2009 (1) ID 135/AIR 2009 All 51

44. ಭ್ರಷ್ಟಚಾರ ನಿರ್ಮೂಲನ ಕಾಯಿದೆಯಲ್ಲಿ ಪ್ರಕರಣ ನಡೆಸಿದಾಗ, ಅರ್ಜಿ ಸಲ್ಲಿಸಿ, ಸರ್ಕಾರದ ಒಪ್ಪಿಗೆ ನೀಡುವಾಗಿನ ಕೆಲವು ಮಾಹಿತಿ ಕೇಳಿದಾಗ, ಅದು ತನಿಖೆಗೆ ತೊಡಕಾಗುತ್ತಿದೆಂದು ನೀಡಲು ನಿರಾಕರಿಸಿದ್ದನ್ನು ಮತ್ತು ಕಲಂ.8(1)(h) ರಡಿ ವಿನಾಯ್ತಿ ಇದೆ ಎಂಬ ಮತ್ತು ಮಾಹಿತಿ ನೀಡಲು ನಿರಾಕರಿಸಿರುವುದು ಸರಿ ಎಂದಿತು. ಇಂತಹ ಮಾಹಿತಿ ನಿರಾಕರಿಸಿರುವುದು ಸರಿ ಎಂದು ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. 2008 (2) ID 153

45. ಕೇಂದ್ರ ಸಾರ್ವಜನಿಕ ಸೇವಾ ಆಯೋಗ ನಡೆಸಿದ ಪರೀಕ್ಷೆಗೆ ನಿಗದಿ ಪಡಿಸಿದ ಕನಿಷ್ಠ (cut off) ಅಂಕಗಳ ಬಗ್ಗೆ ಮಾಹಿತಿ ಕೇಳಿದಾಗ, ಮತ್ತು ವ್ಯಕ್ತಿಗತವಾಗಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ಮಾಹಿತಿ, ಇದು ಈಗಾಗಲೆ ಸಂಗ್ರಹಿಸಿರುವ ಮಾಹಿತಿಯಾಗಿರುವುದರಿಂದ, ಇದು ಮತ್ತಾವುದೇ ತೊಡಕಾಗುವುದಿಲ್ಲ ಮತ್ತು ಅದು ಕಲಂ.8(1)(b) ಅಡಿ ವಿನಾಯ್ತಿ ಇದ್ದರೂ, ಅದು ಮುಂದಿನ ವರ್ಷದ ಪರೀಕ್ಷೆಗೆ ಸಂಬಂಧಪಟ್ಟಂತೆ, ಅನ್ವಯವಾಗುವುದರಿಂದ, ಹಿಂದಿನ ವರ್ಷದ ಮಾಹಿತಿ ನೀಡಬಹುದು. ಪರೀಕ್ಷೆಯನ್ನು ಮೂರು ಹಂತದಲ್ಲಿ ಅಂದರೆ (1) ಪೂರ್ವಭಾವಿ (2) ಮುಖ್ಯ ಪರೀಕ್ಷೆ ಮತ್ತು (3) ಮೌಖಿಕ ಪರೀಕ್ಷೆ ನಡೆಸುವುದು, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ. ಆದ್ದರಿಂದ ಮಾಹಿತಿ ನೀಡಬಹುದೆಂದು ವಿಭಾಗೀಯ ಪೀಠ ಆದೇಶಿಸಿತು. (ದೆಹಲಿ ಉಚ್ಚನ್ಯಾಯಾಲಯ) 2012 (1) ID 325/ 2008 (1) ID 430

46. ವಿಶ್ವಾವಿದ್ಯಾಲಯ ಪರೀಕ್ಷೆ ನಡೆಸಿದಾಗ, ಅಭ್ಯರ್ಥಿಗೆ ಉತ್ತರ ಪತ್ರಿಕೆ ಮೌಲ್ಯ ಮಾಪನದ ಪತ್ರಿಕೆ ಪ್ರತಿಯನ್ನು ಅಭ್ಯರ್ಥಿ ಕೇಳಿದಾಗ, ಅದನ್ನು ನಿರಾಕರಿಸಲಾಯಿತು. ಇದನ್ನು ಪ್ರಶ್ನಿಸಿದಾಗ, ಒಬ್ಬ ಅಭ್ಯರ್ಥಿ ತನ್ನ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಯಾವುದೇ ತೊಡಕಿಲ್ಲವೆಂದು ಸೂಚಿಸಿತು. ಆದರೆ ಮೌಲ್ಯ ಪಾಪಕರ ಸುರಕ್ಷೆತೆ ದೃಷ್ಟಿಯಿಂದ, ಅವರ ಹೆಸರನ್ನು ನೀಡಲಾಗದೆಂಬ ವಾದಕ್ಕೆ ಮನ್ನಣೆ ನೀಡಲಾಯಿತು. (ಕಲ್ಕತ್ತ ಉಚ್ಚನ್ಯಾಯಾಲಯ) AIR 2008 Cal 118/2008 (2) ID 267 ಸೂಚನೆ : ಈ ಪ್ರಕರಣದಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಉಲ್ಲೇಖಿಸಲಾಯಿತು. 2009 (1) ID 161/ AIR 2009 Cal 97/2009 (2) KLT SN 43/AIR 1982 SC 149/(1995) 2 SCC 161/ 2010 (1) ID 337/2010 (1) ID 587/(2007) 1 SCC 603/AIR 2001 Chh 143/2011 (2) ID 383/2010 (1) KLT SN 69/2010 (2) ID 119/2011 (1) ID 172/2011 (2) KLT 88/ 2011 (1) ID 504/AIR 2011 Kar 135 ಕೇಂದ್ರ ಸಾರ್ವಜನಿಕ ಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತರ ಪತ್ರಿಕೆಗಳ ಪ್ರತಿ ನೀಡಲು ಶ್ರೇಷ್ಠ ನ್ಯಾಯಾಲಯ 2011 (2) ID 101/2011-4-LW-289/2011 (1) MLJ 123/(2011) 8 SCC 497/2011 AIR SCW 4888/2011 (3) KLT SN 117 ರಲ್ಲಿ ದೃಡೀಕರಿಸಿದೆ.

47. ರಾಜ್ಯ ಮಾಹಿತಿ ಆಯೋಗ ಆಯ್ಕೆಯಾದ ಅಭ್ಯರ್ಥಿಗಳ ಒ.ಎಂ.ಆರ್ ಶೀಟ್‌ಗಳು ಮತ್ತು ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ ನೀಡಲು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಅಲಹಬಾದ್ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಆ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ಉಚ್ಚನ್ಯಾಯಾಲಯ ಆದೇಶಿಸಿತು. ಪ್ರಶ್ನಿಸಲಾಗಿರುವ ಅಂಶ ಕಲಂ.8(1)() ಅಡಿ ಅರ್ಥೈಸಲಾಗದು ಮತ್ತು ಇದರ ಜೊತೆಗೆ ಕಲಂ.11 ನ್ನು ಇದು ಅನ್ವಯಿಸದು. ಈ ಮಾಹಿತಿ ನೀಡುವಲ್ಲಿ ಯಾವುದೇ ಗುಪ್ತತೆ ಕಾಪಾಡಲು ವಿನಾಯ್ತಿ ನೀಡಲಾಗದೆಂದು, ಅರ್ಜಿಯನ್ನು ವಜಾ ಮಾಡಿತು. AIR 2012 NOC 273 (All)/ W.P. 1974/2012 – 16-03-2012

48. ಒಬ್ಬ ಅರ್ಜಿದಾರ ತಾನು ಬರೆದ ಉತ್ತರ ಪತ್ರಿಕೆಯ ಪ್ರತಿಯೊಂದು ಪ್ರಶ್ನೆಗೆ ನೀಡಿದ ಉತ್ತರಕ್ಕೆ ಪಡೆದ ಅಂಕಗಳನ್ನು ಕೇಳಿದಾಗ ಅದನ್ನು, ನೀಡಬೇಕೆಂದು ರಾಜ್ಯ ಮಾಹಿತಿ ಆಯೋಗದ ಆದೇಶವನ್ನು ಪ್ರಶ್ನಿಸಿದಾಗ, ಅದನ್ನು ಬಿಹಾರ್ ಉಚ್ಚನ್ಯಾಯಾಲಯ ಕಾಯಿದೆ ಜಾರಿ ಮಾಡುವ ಮತ್ತು ಅರ್ಜಿದಾರರಿಗೆ ಅದರ ಪೂರ್ಣ ಉಪಯೋಗ ನೀಡಲು, ಮಾಹಿತಿ ನೀಡಬೇಕೆಂದು ದೃಡೀಕರಿಸಿತು. ಇದಕ್ಕೆ ಪೂರಕವಾಗಿ ಶ್ರೇಷ್ಠ ನ್ಯಾಯಾಲಯ ನೀಡಿದ್ದ AIR 1950 SC 265 ನ್ನು ಉಲ್ಲೇಖಿಸಿ ಆದೇಶಿಸಿತು. 2009 (1) ID 298

49. ಒಂದು ತಾಂತ್ರಿಕ ಪರಮವಿಶೇಷ ಪ್ರಾರಂಭಿಕ ಪರೀಕ್ಷೆಯಲ್ಲಿ (super specality entrance exam) ಉತ್ತರಿಸಿದ ಉತ್ತರ ಪತ್ರಿಕೆಗಳ ಪ್ರಮಾಣೀಕೃತ ಪ್ರತಿ ನೀಡಲು ಮನವಿ ಸಲ್ಲಿಸಿದಾಗ, ಕೇಂದ್ರ ಮಾಹಿತಿ ಆಯೋಗ ಮಾಹಿತಿ ನೀಡಲು ಆದೇಶಿಸಿದರು. ಅದನ್ನು ಪ್ರಶ್ನಿಸಿ ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅದನ್ನು ಶ್ರೇಷ್ಠ ನ್ಯಾಯಾಲಯ ನೀಡಿದ ಸನ್ನದ್ದು ಲೆಕ್ಕಿಕರ ಸಂಸ್ಥೆ ಪ್ರಕರಣ AIR 2011 SC 3336/2011 (9) Scale 639/ 2011 (2) ID 432 ದ ತೀರ್ಮಾನವನ್ನು ಉಲ್ಲೇಖಿಸಿ, ಈ ಪ್ರಕರಣವನ್ನು ಬೇರ್ಪಡಿಸಬೇಕೆಂದು ತೀರ್ಮಾನಿಸಿತು. ಶ್ರೇಷ್ಠ

ನ್ಯಾಯಾಲಯದ ತೀರ್ಮಾನದಲ್ಲಿ ಪ್ರಶ್ನೆ ಪತ್ರಿಕೆ, ಅಭ್ಯರ್ಥಿಗಳಿಗೆ ಲಭ್ಯವಾಗುತ್ತಿತ್ತು – ಮತ್ತು ಅಂತಹ ಎಲ್ಲಾ ಪ್ರಶ್ನೆ ಪತ್ರಿಕೆಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿತ್ತು. ಆದ್ದರಿಂದ ಅಂತಹ ಮಾಹಿತಿ ನೀಡಲು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು (ಸನ್ನದ್ದು ಲೆಕ್ಕಿಕರ ಪ್ರಕರಣದಲ್ಲಿ). ಆದರೆ ಈ ಪ್ರಕರಣದಲ್ಲಿ, ಪ್ರಶ್ನೆಗಳು ಸಂಕ್ಷಿಪ್ತವಾಗಿರುತ್ತವೆ, ಮತ್ತು ಪತ್ರಿಕೆಗಳು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ ಮತ್ತು ಯಾವುದೇ ಪ್ರಶ್ನೆ ಪತ್ರಿಕೆಯನ್ನು ತೆಗೆದುಕೊಂಡು ಹೋಗಲು ಅವಕಾಶವಿಲ್ಲ. ಈ ಪ್ರಶ್ನೆಗಳು ಸಂಶೋದನೆಗೆ ಸಂಬಂಧಪಟ್ಟಂತೆ ಕಾಪಿರೈಟ್‌ಗೆ ಅನ್ವಯವಾಗುತ್ತವೆ. ಏಕೆಂದರೆ ಇಂತಹ ಪ್ರಶ್ನೆಗಳು ಮೂಲ ಸಂಶೋಧನೆಗೆ ಸಂಬಂಧಪಟ್ಟಿವೆ, ಆದ್ದರಿಂದ ಈ ಪ್ರಕರಣವನ್ನು ಸನ್ನದ್ದು ಲೆಕ್ಕಿಕರದ ಪ್ರಕರಣದಲ್ಲಿ ಶ್ರೇಷ್ಠ ನ್ಯಾಯಾಲಯ ನೀಡಿದ ತೀರ್ಮಾನ ಅನ್ವಯವಾಗುವುದಿಲ್ಲ. ಆದ್ದರಿಂದ, ಈ ಪ್ರಕರಣದಲ್ಲಿ ಪ್ರಶ್ನೆ ಪತ್ರಿಕೆ ನೀಡಲಾಗದು ಎಂದು ತೀರ್ಮಾನಿಸಿ ವಿಭಾಗೀಯ ಪೀಠ ಆದೇಶಿಸಿತು. W.P LPA 487/2011 - 28-05-2012

50. ರಾಜ್ಯದ ನ್ಯಾಯಾಂಗ ಸೇವೆಗೆ ಪರೀಕ್ಷೆ ನಡೆಸಿದಾಗ ಅದಕ್ಕೆ ಸಂಬಂಧಪಟ್ಟಂತೆ ಲಿಖಿತ ಪರೀಕ್ಷೆಗೆ ಹಾಜರಿದ್ದ ಅಭ್ಯರ್ಥಿಗಳ ಹೆಸರು, ವಿಳಾಸ ಮತ್ತು ಕ್ರಮ ಸಂಖ್ಯೆ ಮತ್ತಿತರ ಮಾಹಿತಿ ಕೇಳಿದ್ದನ್ನು, ಪ್ರಾಧಿಕಾರ, ಅಂತಹ ಮಾಹಿತಿ, ಅರ್ಜಿದಾರನ ಬಳಿ ಇದೆ, ಏಕೆಂದರೆ ಈ ಪ್ರಕರಣದಲ್ಲಿ ಅವರ ಹೆಸರಿನಲ್ಲಿ ಮಾಹಿತಿ ಇದೆ. ಆದ್ದರಿಂದ ನೀಡಲಾಗದು ಎಂಬುದಕ್ಕೆ ಮದ್ರಾಸ್ ಉಚ್ಚನ್ಯಾಯಾಲಯ, ಇದು ನ್ಯಾಯಾಲಯದ, ನ್ಯಾಯಾದೀಶರ ನೇಮಕಾತಿ ಸಂಬಂಧಪಟ್ಟಂತೆ ಪಾರದರ್ಶಕತೆ ಮತ್ತು ಜವಾಬ್ದಾರಿ ನಿರ್ವಹಿಸಲು, ಮಾಹಿತಿ ನೀಡಬೇಕೆಂದು ಆದೇಶಿಸಿತು. (2009) 5 MLJ 701/2009 (5) CTC 828

51. ಸಿ.ಬಿ.ಎಸ್.ಸಿ ಪರೀಕ್ಷೆಗಳಲ್ಲಿ ಅಂಕಗಳ ಬದಲಾಗಿ ಶ್ರೇಣೀಕರಣ ನೀಡಲು ವ್ಯವಸ್ಥೆಯಾಗಿರುವುದರಿಂದ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ನೀಡಲಾಗದು. 2010 ರಿಂದ ಪರೀಕ್ಷೆಯ ಅಂಕಗಳನ್ನು ನೀಡುವುದನ್ನು ಮಾರ್ಪಡಿಸಿ ಶ್ರೇಣೀಕರಣ (ವರ್ಗೀಕರಣ) ನೀಡಲು ಪ್ರಾರಂಭಿಸಿದ ಮೇಲೆ, ಅಂಕಗಳನ್ನು ನೀಡಲಾಗದು ಎಂಬ ವಾದಕ್ಕೆ, ಕೇಂದ್ರ ಮಾಹಿತಿ ಆಯೋಗ, ಅಂಕಗಳು ಲಭ್ಯವಿರುವುದರಿಂದ ನೀಡಲು ಆದೇಶಿಸಿದರು. ಈ ಆಯೋಗವನ್ನು ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಏಕ ಸದಸ್ಯ ಪೀಠ ಅಂಕಗಳನ್ನು ನೀಡಲು ಸೂಚಿಸಿತು. ಇದನ್ನು ವಿಭಾಗೀಯ ಪೀಠದಲ್ಲಿ ಪ್ರಶ್ನಿಸಿದಾಗ, ಪರೀಕ್ಷೆಯಲ್ಲಿ ವರ್ಗೀಕರಣ/ಶ್ರೇಣೀಕರಣ ವ್ಯವಸ್ಥೆಗೆ ವರ್ಗಾವಣೆ ಮಾಡಿದ ನಂತರ ಶಿಕ್ಷಕರಿಗೆ, ಮಾರ್ಪಾಡು ಮಾಡಿಕೊಳ್ಳಲು ಸಮಯ ನೀಡಲು ಅಂಕಗಳನ್ನು ದಾಖಲಿಸಿರುವುದು ಮಾತ್ರವೇ ಹೊರತು, ಅಭ್ಯರ್ಥಿಗಳಿಗೆ ನೀಡಲಲ್ಲ. ಕೇಂದ್ರ ಮಾಹಿತಿ ಆಯೋಗ ಕಲಂ.8 ರಲ್ಲಿನ ವಿನಾಯ್ತಿಯಲ್ಲಿ, ಈ ವಿಷಯ ವಿನಾಯ್ತಿ ಪಡೆದಿಲ್ಲವೆಂಬ ತೀರ್ಮಾನ ಮಾಡಿದ್ದರೂ, ಅದನ್ನು ಹೊಸ ವ್ಯವಸ್ಥೆ ಮಾರ್ಪಾಡಿಗೆ ಜೋಡಿಸಲಾಗದು. ಆದ್ದರಿಂದ ಮಾಹಿತಿ ಆಯೋಗ ಮತ್ತು ಏಕ ಸದಸ್ಯ ಪೀಠದ ಆದೇಶವನ್ನು ಕಿತ್ತುಹಾಕಿ, ಅಂಕಪಟ್ಟಿ ನೀಡತಕ್ಕದ್ದಲ್ಲ ವೆಂದು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ ಸನ್ನದ್ದು ಲೆಕ್ಕಿಗರ ಪ್ರಕರಣವನ್ನು ಉಲ್ಲೇಖಿಸಿದೆ. (AIR 2011 SC 3336).

2012 (3) KLT SN 47 LPA 1090/2011 - 24-05-2012

52. ಸ್ಪರ್ದಾತ್ಮಕ ಪರೀಕ್ಷೆಯನ್ನು ನಡೆಸಿದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ – ಮಾಹಿತಿ ಕಾಯಿದೆಯಲ್ಲಿನ ವಿನಾಯ್ತಿ ಅನ್ವಯವಾಗದು. ಮೇಲ್ಮನವಿಯಲ್ಲಿ ಅಂಕಪಟ್ಟಿಯನ್ನು ನೀಡಲಾಗದು ಎಂಬ ತೀರ್ಮಾನಕ್ಕೆ

ಮಾಹಿತಿ ಆಯೋಗ ಕಲಂ.8(1) ರಲ್ಲಿ ವಿನಾಯ್ತಿಯೂ ಬರುವುದಿಲ್ಲ. ಅದ್ದರಿಂದ ಮಾಹಿತಿ ನೀಡಲು ಆದೇಶಿಸಿದ್ದನ್ನು ತಮಿಳ್‌ನಾಡು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಮಾಹಿತಿ ಆಯೋಗದ ತೀರ್ಮಾನ ಸರಿಯಾಗಿದೆ ಆದ್ದರಿಂದ ವಿನಾಯ್ತಿ ಇಲ್ಲದ ಕಾರಣ ಅಂಕಪಟ್ಟಿ ನೀಡಬೇಕೆಂದು ಆದೇಶಿಸಿತು. 2010 (1) ID 190 - 2011 (1) CTC 641/2011 (1) ID 279/(2011) 3 MLJ 401 – ವಿಭಾಗೀಯ ಪೀಠ

53. ಅಲಹಬಾದ್ ಉಚ್ಚನ್ಯಾಯಾಲಯ ಅಂಕಪಟ್ಟಿ ನೀಡುವ ಬಗ್ಗೆ, ಕಾನೂನಿನಲ್ಲಿ ನಕಲು ನೀಡಲು ಅವಕಾಶ ಇಲ್ಲದೇ ಇರುವುದರಿಂದ, ಉತ್ತರ ಪತ್ರಿಕೆ ನಕಲು ನೀಡಲಾಗದು ಎಂದು ತೀರ್ಮಾನಿಸಿತು ಮತ್ತು ಇದರಲ್ಲಿ ಶ್ರೇಷ್ಠ ನ್ಯಾಯಾಲಯ AIR 1984 SC 1543 ಉಲ್ಲೇಖಿಸಿತು. ಇದರಲ್ಲಿ ಅಭ್ಯರ್ಥಿಗಳು ಸ್ವಯಂ ಉತ್ತರ ಪತ್ರಿಕೆ ವಿಮರ್ಷಿಸಲು ಅವಕಾಶ ನೀಡಿದಂತಾಗುತ್ತದೆ. AIR 2010 All 1

    ಸೂಚನೆ : ಶ್ರೇಷ್ಠ ನ್ಯಾಯಾಲಯದ AIR 2011 SC 3336 ತೀರ್ಮಾನದಂತೆ ಮಾಹಿತಿ ನೀಡಲು ಆದೇಶಿಸಿರುವುದರಿಂದ, ಈ ಮೇಲ್ಕಂಡ ತೀರ್ಮಾನ ಊರ್ಜಿತವಲ್ಲ.

54. ರಾಜ್ಯ ಮಾಹಿತಿ ಆಯೋಗ, ಸಾರ್ವಜನಿಕ ಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿ, ಮೌಖಿಕ ಪರೀಕ್ಷೆಯ, ಮಂಡಳಿ ಸದಸ್ಯರ ಹೆಸರನ್ನು ಕೇಳಿದಾಗ ಅದನ್ನು ನೀಡಲಾಗದು, ಏಕೆಂದರೆ ಅದು ಗುಪ್ತತೆ ನೀತಿಗೆ ವಿರುದ್ಧವೆಂದು, ಆದರೆ ಅಭ್ಯರ್ಥಿಗಳು ಗಳಿಸಿದ ಅಂಕಗಳು ಮತ್ತು ಜೇಷ್ಠತಾ ಪಟ್ಟಿ ನೀಡಬಹುದೆಂದು ತೀರ್ಮಾನವನ್ನು ಏಕ ಸದಸ್ಯ ಪೀಠದ ಆದೇಶವನ್ನು ಪಾಟ್ನ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಮಾರ್ಪಡಿಸಿ, ಮೌಖಿಕ ಪರೀಕ್ಷೆ ಮಾಡುವವರು, ಅಭ್ಯರ್ಥಿಗಳ ಸಮಕ್ಷಮ ನಡೆಸಿರುವುದರಿಂದ, ಪರೀಕ್ಷೆ ನಡೆಸಿದವರ ಮಾಹಿತಿ ನೀಡಲು ಆದೇಶಿಸಿತು. AIR 2011 Patna 103/2011 (2) ID 311

ಸೂಚನೆ : ಈ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ 9052/2012 ದಿನಾಂಕ 13–12–2012 ರಲ್ಲಿ ಕಿತ್ತುಹಾಕಿ ಸಾರ್ವಜನಿಕ ಸೇವಾ ಆಯೋಗ ಪರೀಕ್ಷೆ ನಡೆಸಿದವರ ವಿವರ ನೀಡಲು, ಪಾಟ್ನ ವಿಭಾಗೀಯ ಪೀಠ ನೀಡಿದ್ದ ಆದೇಶವನ್ನು ಕಿತ್ತು ಹಾಕಿತು.

55. ಜಾರ್ಖಾಂಡ್ ಉಚ್ಚನ್ಯಾಯಾಲಯ ಪರೀಕ್ಷೆ ನಡೆಸಿದವರ ಮಾಹಿತಿ ನೀಡಲಾಗದು, ಏಕೆಂದರೆ ಪರೀಕ್ಷೆಯಲ್ಲಿ ಗುಪ್ತತೆ ಇರಬೇಕೆಂದು ಆದೇಶಿಸಿತು. AIR 2011 Jhar 7/2011 (2) ID 23

56. ಮಾಹಿತಿ ಹಕ್ಕು ಕಾಯಿದೆಯಡಿ ರೂಪಿಸಿದ ಕೈಪಿಡಿಯಲ್ಲಿನ ಅಂಶಗಳ ಆಧಾರದ ಮೇಲೆ (ಕಾಯಿದೆಗೆ ಪೂರಕವಲ್ಲದ) ಮಾಹಿತಿ ನೀಡಬಹುದೇ ಎಂಬ ಬಗ್ಗೆ. ಮದ್ರಾಸ್ ಉಚ್ಚನ್ಯಾಯಾಲಯ, ಕಾಯಿದೆಯ ಕಲಂ.8 ರಡಿ ನೀಡಿದ್ದ 10 ವಿನಾಯ್ತಿಗಳಲ್ಲದೆ, 27 ಸಂಖ್ಯೆ ವಿನಾಯ್ತಿ ತಯಾರಿಸಿರುವುದು ಸರಿಯಲ್ಲ. ಏಕೆಂದರೆ ಕಾಯಿದೆಯಲ್ಲದ ವಿಷಯವನ್ನು ಕೈಪಿಡಿಯಲ್ಲಿ ಸೇರಿಸಿದರೆ ಅದು ಊರ್ಜಿತವಲ್ಲ. 2010 (1) ID 542/(2010) 5 MLJ 56

57. ಅರುಣಾಚಲ ಉಚ್ಚನ್ಯಾಯಾಲಯ ಸಾರ್ವಜನಿಕ ಸೇವಾ ಆಯೋಗ ನಡೆಸಿದ ಪರೀಕ್ಷೆಯ ಮಾಹಿತಿ ನೀಡಲು ಮಾಹಿತಿ ಆಯೋಗ ಆದೇಶಿಸಿರುವುದು ಸರಿ ಎಂದು ಸೇವಾ ಆಯೋಗ ತನ್ನ ನಿಲುವಿಗೆ ಸಮರ್ಥನೀಯ ಕಾರಣಗಳನ್ನು ನೀಡಿಲ್ಲವಾದ್ದರಿಂದ, ಮಾಹಿತಿ ಆಯೋಗ ನೀಡಿದ ಆದೇಶ

ಪಾಲಿಸಬೇಕೆಂದು ಮತ್ತು ಆದೇಶದಲ್ಲಿ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. 2010 (2) ID 582

58. ಪರೀಕ್ಷೆ ನಡೆಸುವ ಸಂಸ್ಥೆಯ ಹೆಸರನ್ನು ನೀಡುವ ಅವಶ್ಯಕತೆ ಇಲ್ಲ ಎಂದು ಪಾಟ್ನ ಉಚ್ಚನ್ಯಾಯಾಲಯ ಆದೇಶಿಸಿತು. ಈ ಮಾಹಿತಿ ನೀಡಿದರೆ, ಪರೀಕ್ಷೆ ನಡೆಸಿದ ವ್ಯಕ್ತಿಗಳು, ಆ ಸಂಸ್ಥೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಮತ್ತು ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಮಾಹಿತಿ, ವ್ಯಯಕ್ತಿಕತನಕ್ಕೆ ಧಕ್ಕೆಯಾಗುತ್ತಿದೆ. ಪರೀಕ್ಷೆ ನಡೆಸುವುದು ಒಂದು ಪವಿತ್ರ ಪ್ರಕ್ರಿಯೆ ಅದಕ್ಕೆ ಕಲಂ.8(1)(j) ನಡಿ ಅಂಕಗಳನ್ನು ನೀಡಬಹುದು, ಪರೀಕ್ಷೆ ನಡೆಸಿದವರ ಮಾಹಿತಿಯಲ್ಲ. AIR 2010 Patna 176/2011 (1) ID 109

59. ಬಾಂಬೆ ಉಚ್ಚನ್ಯಾಯಾಲಯ ಪರೀಕ್ಷೆ ನಡೆಸುವಾಗ ನೀಡಿದ ಸೂಚನೆಗಳು ಮತ್ತು ಮಾದರಿ ಉತ್ತರ ನೀಡಿದ ಪರೀಕ್ಷಕರು ಮತ್ತು ಮರು ಪರಿಶೀಲಿಸಿದ ವ್ಯಕ್ತಿಗಳ ಮಾಹಿತಿ ನೀಡಬೇಕು ಎಂದು ಆದೇಶಿಸಿತು. ಮಾಹಿತಿ ಅಧಿಕಾರಿ ಮಾಹಿತಿ ನೀಡಲು ನಿರಾಕರಿಸಿದಾಗ, (ಕಲಂ.8(1)(e) ಅಡಿ ಗುಪ್ತ ಮಾಹಿತಿ ಎಂದು) ಮಾಹಿತಿ ಆಯೋಗ, ಈ ಮಾಹಿತಿ ಗುಪ್ತ ಮಾಹಿತಿ ಎಂದು, ಅದರಲ್ಲೂ ಪರೀಕ್ಷೆ ನಡೆದು ಪಲಿತಾಂಶ ಪ್ರಕಟವಾದ ನಂತರ ಮಾಹಿತಿ ಗುಪ್ತವಲ್ಲ. ಇದರ ಜೊತೆಗೆ ಮಾದರಿ ಉತ್ತರ, ಪ್ರಶ್ನೆ ಪತ್ರಿಕೆ ಸಾರ್ವಜನಿಕರಿಗೆ ಲಭ್ಯವಾಗಿ, ಪ್ರಕಟವಾಗುವುದರಿಂದ ಮಾಹಿತಿ ನೀಡಲು ಆದೇಶಿಸಿತು. 2011 (1) ID 344

ಸೂಚನೆ : ಶ್ರೇಷ್ಠ ನ್ಯಾಯಾಲಯ ಸನ್ನದ್ದು ಲೆಕ್ಕಿಕರ ಪ್ರಕರಣದಲ್ಲಿ AIR 2011 SC 3336 ಉಚ್ಚನ್ಯಾಯಾಲಯದ ಮಾಹಿತಿ ನೀಡಲು ಆದೇಶಿಸಿರುವುದನ್ನು ಗಮನಿಸಬಹುದು.

60. ಜೆಇಇ ಮತ್ತು ಗೇಟ್ ಪರೀಕ್ಷೆ ನಡೆಸುವಾಗ ಪೋಟೋ ನಕಲು ನೀಡಲಾಗುವುದಿಲ್ಲವೆಂದು ಶರತ್ತು ವಿಧಿಸಿದ್ದರೂ. ಅದನ್ನು ನೀಡಬೇಕೆಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಮಾಹಿತಿ ಹಕ್ಕು ಕಾಯಿದೆಯಲ್ಲಿ ನಕಲು ಪಡೆಯಲು ಅವಕಾಶ ಇರುವುದರಿಂದ ಪರೀಕ್ಷೆ ನಡೆಸುವ ಪ್ರಾಧಿಕಾರ ಶರತ್ತಿನನ್ವಯ ಕೊಡಲಾಗದು ಎಂದು ತೀರ್ಮಾನ ತಪ್ಪು. 2011 (1) ID 259

61. ಒಂದು ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲೆಯ ಒಬ್ಬ ಸಾರ್ವಜನಿಕ ಅಭಯೋಗಕಾರಿ (public prosecutor) ಯನ್ನು ಕೇಳಿದಾಗ ಮತ್ತು ಅವರ ಕಛೇರಿ ಟಿಪ್ಪಣಿ ಮತ್ತು ಮೇಲ್ಮನವಿಗೆ ನೀಡಿದ ಅಭಿಪ್ರಾಯಗಳನ್ನು ಕೇಳಿದಾಗ, ಅದು ಒಬ್ಬ ಪಕ್ಷಗಾರ ಮತ್ತು ವಕೀಲರ ನಡುವೆ ನಡೆದ ವ್ಯವಹಾರ, ಅದು ಸಾರ್ವಜನಿಕ ಮಾಹಿತಿ ಆಗುವುದಿಲ್ಲವೆಂದು ಮತ್ತು ಸಾಕ್ಷಿ ಕಾಯಿದೆ 126 ಮತ್ತು ಕಲಂ.49(1)ರ ವಕೀಲರ ಕಾಯಿದೆ ಖಾಸಗಿ ಮಾಹಿತಿಯಾಗುತ್ತದೆ. ಮದ್ರಾಸ್ ಉಚ್ಚನ್ಯಾಯಾಲಯ ಸಾಕ್ಷಿ ಕಾಯಿದೆ ಕಲಂ.126ನ್ನು ಮಾಹಿತಿ ಹಕ್ಕು ಕಾಯಿದೆ ಕಲಂ.22 ಗಿಂತ ಮೇಲಿನದು ಎಂದು ತಿಳಿಯತಕ್ಕದ್ದಲ್ಲ. ಸಾಕ್ಷ್ಯಾ ಕಾಯಿದೆ ಮತ್ತು ವಕೀಲರ ಕಾಯಿದೆಯಲ್ಲಿ ಒಬ್ಬ ವಕೀಲ ಅವನ ಕಕ್ಷಿದಾರನ ಮಾಹಿತಿ ನೀಡಲು ನಿರಾಕರಿಸಬಹುದು. 2010 (1) ID 177/(2010) 4 MLJ 828/2010 (5) CTR 238 ತೀರ್ಪಿನಲ್ಲಿ ಮಾಹಿತಿ ಹಕ್ಕು ಕಾಯಿದೆ ಕಲಂ.22, ಸಾಕ್ಷಿ ಕಾಯಿದೆ ಕಂ.126 ಮತ್ತು ವಕೀಲರ ಕಾಯಿದೆ ಕಲಂಕ್ಕಿಂತ ಮೇಲ್ಮಟ್ಟಿದ್ದು (over rides) ಎಂದು ತಿಳಿಯತಕ್ಕದ್ದಲ್ಲ. ತಮಿಳ್‌ನಾಡು ಉಚ್ಚನ್ಯಾಯಾಲಯ, ಮೇಲ್ಕಂಡ ತೀರ್ಪಿನಲ್ಲಿ ಸಾರ್ವಜನಿಕ ಅಭಯೋಗಕಾರ, ಸಾರ್ವಜನಿಕ ಅಧಿಕಾರಿಯಾಗಿದ್ದರೂ. ಆ ವ್ಯಕ್ತಿ ಒಬ್ಬ ವಕೀಲ, ಹಾಗೂ ವಕೀಲರು ತನ್ನ ಕಕ್ಷಿದಾರರ

ಜೊತೆ ನಡೆಸಿದ ವ್ಯವಹಾರ ಖಾಸಗಿ, ಅದು ಸಾರ್ವಜನಿಕ ಮಾಹಿತಿಯಾಗುವುದಿಲ್ಲ ಎಂದು ಆದೇಶಿಸಿತು. ಇದರ ಜೊತೆಗೆ ಅರ್ಜಿದಾರನಿಗೆ ನೀಡಬೇಕಾದ ಎಲ್ಲಾ ಮಾಹಿತಿಯನ್ನು ನೀಡಿದ್ದು, ಮತ್ತಾವುದೇ ದಾಖಲೆ ನೀಡಬೇಕಾಗಿಲ್ಲವೆಂದು ಉಚ್ಚನ್ಯಾಯಾಲಯ ಆದೇಶಿಸಿತು. ಈ ತೀರ್ಮಾನ 2010 (1) ID 177 ರಲ್ಲಿ ಸ್ಥಿರೀಕರಣಗೊಂಡಿದೆ. ಅಂದರೆ ಸಾಕ್ಷಿ ಕಾಯಿದೆ ಕಲಂ.126ಕ್ಕೆ ಪ್ರಾದಾನ್ಯತೆ ಇರತಕ್ಕದ್ದು. ಮಾಹಿತಿ ಕಾಯಿದೆಯಲ್ಲವೆಂದು ತೀರ್ಮಾನಿಸಿತು. AIR 2010 (NOC) 699 P & H/(2010) 4 MLJ 828

62. ಸಾರ್ವಜನಿಕ ಅಭಿಯೋಗಕಾರ (public prosecutor) ಒಂದು ಪ್ರಕರಣವನ್ನು ವಾಪಸ್ ಪಡೆಯಲು ನೀಡಿದ ಸಲಹೆಯನ್ನು ಮಾಹಿತಿ ಕೇಳಿದಾತನಿಗೆ ನೀಡಬಹುದೇ ಎಂಬ ಪ್ರಶ್ನೆಗೆ, ಅಂತಹ ಮಾಹಿತಿ ನೀಡಲಾಗದು, ಆದರೆ ಸರ್ಕಾರದ ಬಳಿ ಈ ಮಾಹಿತಿ ಲಭ್ಯವಿರುವುದರಿಂದ, ಸಾರ್ವಜನಿಕ ಅಭಿಯೋಗಕಾರ, ಈ ಮಾಹಿತಿ, ಕಕ್ಷಿದಾರ ಮತ್ತು ವಕೀಲನ ಮದ್ಯ ನೀಡಲಾಗದು ಎಂಬ 2010 (1) ID 177/(2010) 4 MLJ 828/2010 (5) CTC 238 ರಲ್ಲಿನ ತೀರ್ಮಾನದಂತೆ ಅನ್ವಯಿಸತಕ್ಕದ್ದು. ಸರ್ಕಾರ ಮತ್ತು ಪೋಲೀಸ್ ಇಲಾಖೆ ನಡೆಸಿದ ಪತ್ರ ವ್ಯವಹಾರ ಕಲಂ.8(1)(e) ಅನ್ವಯವಾಗುತ್ತದೆ. ಈ ವಿನಾಯ್ತಿಯನ್ನು ಪಡೆಯಲು ಮಾಹಿತಿ ನೀಡಿದರೆ, ತನಿಖೆಗೆ ತೊಡಕಾಗುತ್ತದೆ ಎಂದರೆ ನೀಡತಕ್ಕದ್ದಲ್ಲ. ಮದ್ರಾಸ್ ಉಚ್ಚನ್ಯಾಯಾಲಯ ರಿಟ್ ಅರ್ಜಿಯನ್ನು ತಿರಸ್ಕರಿಸಿತು. 2010 (3) CTC 742/2010 (2) ID 445/(2010) 8 MLJ 927

63. ಒಬ್ಬ ನ್ಯಾಯಾದೀಶನ ಮನಸ್ಸಿನಲ್ಲಿ ಏನಿದೆ ಎಂಬುದು ದಾಖಲೆಯುಲ್ಲಿ ಅದನ್ನು ನೀಡಲಾಗದು/ಪಡೆಯಲಾಗದು. ಒಂದು ಪ್ರಕರಣದಲ್ಲಿ ಅರ್ಜಿ ದಾಖಲಿಸಿದ ವ್ಯಕ್ತಿ, ತಾನು ಪ್ರಕರಣದಲ್ಲಿ ನೀಡಿದ್ದ ದಾಖಲೆ ಮತ್ತು ವಾದ ವಿಚಾರ ಮಾಡಿದ ವಿಷಯವನ್ನು ತೀರ್ಪಿನಲ್ಲಿ ಏಕೆ ಉಲ್ಲೇಖಿಸಿಲ್ಲವೆಂಬ ಬಗ್ಗೆ, ಮೇಲ್ಮನವಿ ಮುಖಾಂತರ ಪರಿಹಾರ ಪಡೆಯಬೇಕು. ಅಂದರೆ ಪ್ರಕರಣ ತೀರ್ಮಾನಿಸಿದ ನ್ಯಾಯಾದೀಶನ ಮುಂದೆ ಸಲ್ಲಿಸಿದ ಅರ್ಜಿ, ಮೇಲ್ಮನವಿ ರೂಪದಲ್ಲಿದ್ದು – ಅದನ್ನು ತೀರ್ಮಾನಿಸಲಾಗದು ಮತ್ತು ಅಂತಹ ದಾಖಲೆ ಮತ್ತು ವಾದವನ್ನು ತೀರ್ಪಿನಲ್ಲಿ ಪರಿಗಣಿಸಲಾಗಿಲ್ಲವೆಂದು ನ್ಯಾಯಾದೀಶನ ಮನಸ್ಸಿನಲ್ಲಿ ಏನಿದೆ ಎಂಬುದು ಮಾಹಿತಿ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ. ಆಂಧ್ರಪ್ರದೇಶದ ಉಚ್ಚನ್ಯಾಯಾಲಯದ ಒಬ್ಬ ನ್ಯಾಯಾದೀಶರು ಅದೇ ತೀರ್ಮಾನ ತೆಗೆದುಕೊಂಡಿದ್ದು ಏಕೆ ಎಂಬುದನ್ನು ತಿಳಿಸುವ ಅವಶ್ಯಕತೆ ಇಲ್ಲ. ಕಲಂ.8 ಮತ್ತು 24 ರಲ್ಲಿನ ವಿನಾಯ್ತಿ ನ್ಯಾಯಾದೀಶರು, ತೀರ್ಪಿ ನೀಡುವಾಗ ಕಲಂ.4(1)(b) ಅಡಿ ಕಾರಣಗಳನ್ನು ನೀಡಬೇಕು ಎಂದಿದ್ದರೂ, ನ್ಯಾಯಾದೀಶರು ಕಾನೂನನ್ನು ಮಾರ್ಪಡಿಸಲಾಗದು. 2009 (2) ID 313

ಸೂಚನೆ : ಈ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ ದೃಡೀಕರಿಸಿದೆ AIR 2010 SC 615/2010 (1) CTC 355/(2010) 1 MLJ 1319/2010 (1) ID 287/2010-2-LW-136

64. ಒಬ್ಬ ನ್ಯಾಯಾದೀಶನನ್ನು ಖಾಯಂ ನಿವೃತ್ತಿಗೊಳಿಸಿದಾಗ, ಪೂರ್ವಭಾವಿ ವಿಚಾರಣ ವರದಿಯನ್ನು ಕೇಳಿದಾಗ ನೀಡಬೇಕು. ಪಂಜಾಬ್ ಮತ್ತು ಹರ್‍ಯಾಣ ಉಚ್ಚನ್ಯಾಯಾಲಯದಲ್ಲಿ ಮಾಹಿತಿ ಆಯುಕ್ತರು ವರದಿ ನೀಡಲು ಆದೇಶವನ್ನು ಪ್ರಶ್ನಿಸಿದಾಗ, ಅದನ್ನು ಗುಪ್ತತೆ ಆಧಾರದ ಮೇಲೆ ನೀಡಲಾಗದು ಎಂಬ

ವಾದವನ್ನು ತಿರಸ್ಕರಿಸಿ, ಮಾಹಿತಿ ಆಯೋಗದ ಆದೇಶವನ್ನು ಸಮರ್ಥಿಸಿತು. W.P. 7343/2010 - 26-04-2010

65. ಇಲಾಖಾ ವಿಚಾರಣೆಗೆ ಸಂಬಂಧಪಟ್ಟ ಪ್ರಕರಣದಲ್ಲಿ, ಕಛೇರಿ ಟಿಪ್ಪಣಿಯನ್ನು ನೀಡಲು ನಿರಾಕರಿಸಬಹುದು ಎಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಕೇಂದ್ರ ಮಾಹಿತಿ ಆಯೋಗ, ಇಲಾಖಾ ವಿಚಾರಣೆ ಸಂಬಂಧ ಕಛೇರಿಯ ಟಿಪ್ಪಣಿ ಹಾಳೆಗಳನ್ನು ನೀಡಲು ನಿರಾಕರಿಸಬಹುದು ಎಂಬ ಆದೇಶಕ್ಕೆ ದೆಹಲಿ ಉಚ್ಚನ್ಯಾಯಾಲಯ ಈ ಆದೇಶ ನೀಡಿತು. ಇದು ಕಲಂ.8(1)(j) ರಲ್ಲಿನ ವಿನಾಯ್ತಿಯಲ್ಲಿ ಬರುತ್ತಿದೆ, ಆದ್ದರಿಂದ ಮದ್ಯಪ್ರವೇಶ ಮಾಡಲಾಗದು ಎಂದು ಆದೇಶಿಸಿತು. W.P. 12367/2009 - 13-10-2009

66. ಸಾರ್ವಜನಿಕ ಕೆಲಸ ಮತ್ತು ಸಾರ್ವಜನಿಕ ಕಾರ್ಯಕ್ರಮದ ಕೆಲಸ ನಿರ್ವಹಣೆ ಬಗ್ಗೆ, ಇಲಾಖಾ ವಿಚಾರಣೆ ನಡೆದಾಗ, ಅದನ್ನು ವ್ಯಯಕ್ತಿಕ ಹಿತಾಸಕ್ತಿಗೆ ವಿರುದ್ದವೆಂದು ಕಲಂ.8(1)(j) ಅಡಿ ವಿನಾಯ್ತಿ ಇಲ್ಲ ಎಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಸಾರ್ವಜನಿಕ ಮಾಹಿತಿ ಅಧಿಕಾರಿ, ಅರ್ಜಿದಾರ ಕೇಳಿದ ಕಛೇರಿ ಟಿಪ್ಪಣಿ, ಕೈಬರಹ, ದಾಖಲೆ, ವರದಿಗಳು, ಕಛೇರಿ ಅಧಿಸೂಚನೆ, ಭಾಗಶಹ ಕಡತ, ಕಡತಗಳನ್ನು ಇಲಾಖಾ ವಿಚಾರಣೆಗೆ ಸಂಬಂಧಪಟ್ಟ ಮತ್ತು ದಂಡ ಮತ್ತು ಶಿಕ್ಷೆ ವಿಧಿಸಲು ವಿಚಾರಣೆಗೆ ಸಂಬಂಧಪಟ್ಟಂತೆ ಮತ್ತು ಶಿಸ್ತು ಕ್ರಮಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸಾರ್ವಜನಿಕ ಸೇವಾ ಆಯೋಗದ ತೀರ್ಮಾನದ ಮಾಹಿತಿ ನೀಡಲಾಗದು ಎಂದು ತೀರ್ಮಾನವನ್ನು ಕೇಂದ್ರ ಮಾಹಿತಿ ಆಯೋಗದ ಮುಂದೆ ಪ್ರಶ್ನಿಸಿದಾಗ, ಆ ಎಲ್ಲಾ ಮಾಹಿತಿ ನೀಡಲು ಆದೇಶಿಸಿದ ನಂತರ ಅದನ್ನು ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅಂತಹ ದಾಖಲೆ ನೀಡಬೇಕೆಂದು ಕೇಂದ್ರ ಮಾಹಿತಿ ಆಯೋಗದ ಆದೇಶವನ್ನು ಎತ್ತಿ ಹಿಡಿಯಿತು. W.P. 1243/2011 - 13-07-2012

ಸೂಚನೆ : ಈ ತೀರ್ಮಾನ ಶ್ರೇಷ್ಠ ನ್ಯಾಯಾಲಯದ 2012 (5) CTC 810/(2012) 8 MLJ 122 (SC) ತೀರ್ಮಾನದಲ್ಲಿ, **"ನೀಡಲಾಗದು"** ಎಂದು ಆದೇಶಿಸಿರುವುದರಿಂದ ಮೇಲ್ಕಂಡ ತೀರ್ಮಾನ, ಉರ್ಜಿತವಲ್ಲ.

67. ಮಂಡಳಿಯ ನಡವಳಿಕೆಗಳ ಪ್ರತಿಯನ್ನು, ಗುಪ್ತ ಮಾಹಿತಿ ಎಂದು ಕಲಂ.8(1)() ಅನ್ವಯ ನಿರಾಕರಿಸತಕ್ಕದ್ದಲ್ಲ ಎಂದು ಕರ್ನಾಟಕ ಉಚ್ಚನ್ಯಾಯಾಲಯ ಆದೇಶಿಸಿತು. ಸಾರ್ವಜನಿಕ ಮಾಹಿತಿ ಅಧಿಕಾರಿ, ಸಿಂಡಿಕೇಟ್ ಬ್ಯಾಂಕಿನ 18–12–2003 ರಂದು ಮಂಡಳಿ ತೆಗೆದುಕೊಂಡ ಒಂದು ವಾಣಿಜ್ಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ, ಗುಪ್ತ ಮಾಹಿತಿ ಆಗುತ್ತಿದೆ ಎಂಬ ಆದೇಶವನ್ನು ಕೇಂದ್ರ ಮಾಹಿತಿ ಆಯೋಗ ಸಮರ್ಥಿಸಿದಾಗ, ಅದನ್ನು ಕರ್ನಾಟಕ ಉಚ್ಚನ್ಯಾಯಾಲಯು, ಮಂಡಳಿಯ ಎಲ್ಲಾ ನಡವಳಿಕೆಗಳ ಪ್ರತಿ ಕೇಳಿಲ್ಲ, ಒಂದು ವಾಣಿಜ್ಯ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯದಲ್ಲಿ ತೀರ್ಮಾನದ ಪ್ರತಿ ಕೇಳಿರುವುದು ಗುಪ್ತ ಮಾಹಿತಿಯಲ್ಲಿ, ಅದನ್ನು ನೀಡಬೇಕೆಂದು ಆದೇಶಿಸಿತು. AIR 2012 NOC 303 (Karnataka)/W.P. 9197/2010 - 21-06-2011

68. ಒಬ್ಬ ಸರ್ಕಾರಿ ಅಧಿಕಾರಿ, ಅಧಿಕೃತ ಕಡತದಲ್ಲಿ ಬರೆದ ಟಿಪ್ಪಣಿ, ಸಾರ್ವಜನಿಕ ಕೆಲಸ ನಿರ್ವಹಿಸುವಾಗ ಮಾಡಿದ ಕೆಲಸ. ಒಂದು ಶಿಸ್ತು ಕ್ರಮದ ಪ್ರಕರಣದಲ್ಲಿ ಎಂಟು ವಿಷಯಗಳ ಬಗ್ಗೆ ದೊಡ್ಡ ಪ್ರಮಾಣದ ಶಿಕ್ಷೆ ನೀಡಿದಾಗ, ಮಾಹಿತಿಯನ್ನು ನಿರಾಕರಿಸಲಾಯಿತು. ಅಂದರೆ ಕೇಂದ್ರ ಸಾರ್ವಜನಿಕ ಮಾಹಿತಿ

ಅಧಿಕಾರಿ ಪ್ರತಿ ನೀಡುವುದನ್ನು ಕಲಂ.8(1)(e), 8(1)(q) ಮತ್ತು ಕಲಂ.8(1)(j) ಅಡಿ ವಿನಾಯ್ತಿ ಇದೆ ಎಂದು ನಿರಾಕರಿಸಿದಾಗ, ಅದನ್ನು ಕೇಂದ್ರ ಮಾಹಿತಿ ಆಯೋಗದ ಮುಂದೆ ಪ್ರಶ್ನಿಸಿದಾಗ, ಅದನ್ನು ಮತ್ತೂ ನಿರಾಕರಿಸಲಾಯಿತು. ಅದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಕಡತದಲ್ಲಿ ಅಧಿಕಾರಿ ದಾಖಲಿಸಿದ ಟಿಪ್ಪಣಿ ಸಾರ್ವಜನಿಕ ಕೆಲಸವಾಗಿದ್ದ, ಮಾಹಿತಿ ನೀಡಲು ಆದೇಶಿಸಿತು. AIR 2011 Delhi 50 / 2011 (1) ID 1

69. ರಾಜ್ಯ ಮಾಹಿತಿ ಆಯೋಗ, ರಾಜ್ಯ ಸರ್ಕಾರದ ಒಂದು ಸಂಸ್ಥೆಯ (ಡಿಆರ್‌ಡಿಎ) ನೌಕರನ್ನು ಜಿಲ್ಲಾ ಪರಿಷತ್‌ಗೆ ಕೊಡಿಸಿದರೆ ಆಗುವ ಆರ್ಥಿಕ ಹೊರೆಗೆ ಸಂಬಂಧಪಟ್ಟ ಆರ್ಥಿಕ ಇಲಾಖೆ ಟಿಪ್ಪಣಿಯನ್ನು ಕಲಂ.8 ರಲ್ಲಿ ವಿನಾಯ್ತಿ ಇದೆ ಎಂದು ನಿರಾಕರಿಸತಕ್ಕದ್ದಲ್ಲ. ಏಕೆಂದರೆ, ರಾಷ್ಟ್ರದ ಭದ್ರತೆ ದೃಷ್ಟಿಯಿಂದ ನೀಡಲಾಗದು ಎಂಬುದನ್ನು ಸಾಬೀತು ಪಡಿಸಲು ಆಗದಿದ್ದರೆ, ಅದಕ್ಕೆ ವಿನಾಯ್ತಿ ಇಲ್ಲ. ರಾಜ್ಯದ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂದಾ ಕ್ಷಣ ಅದಕ್ಕೆ ವಿನಾಯ್ತಿ ಇಲ್ಲ ಎಂದು ಪಂಜಾಬ್ ಮತ್ತು ಹರ್‍ಯಾನ ಉಚ್ಚನ್ಯಾಯಾಲಯ ಆದೇಶಿಸಿತು. W.P 7289/2009 – 14-07-2009

70. ಆದೇಶ ಮಾಡಿದ ಹಾಳೆ ಮತ್ತು ಟಿಪ್ಪಣಿಯನ್ನು ಸಾರ್ವಜನಿಕ ಪ್ರಾಧಿಕಾರ, ಅದು ವ್ಯಯಕ್ತಿಕ ಮಾಹಿತಿ ಎಂದು ನಿರಾಕರಿಸತಕ್ಕದ್ದಲ್ಲವೆಂದು ಚತ್ತೀಸಗಡ್ ಉಚ್ಚನ್ಯಾಯಾಲಯ ಆದೇಶಿಸಿದೆ. ಸಾರ್ವಜನಿಕ ಪ್ರಾಧಿಕಾರ ನಿರ್ವಹಿಸುವ ಕಡತದ ಆದೇಶ ಮತ್ತು ಟಿಪ್ಪಣಿ ಹಾಳೆಗಳನ್ನು ವ್ಯಯಕ್ತಿಕ ಮಾಹಿತಿ ಎಂದು ನಿರಾಕರಿಸತಕ್ಕದ್ದಲ್ಲ ಮತ್ತು ಅಂತಹ ಮಾಹಿತಿಯನ್ನು ನೀಡಿದರೆ ಅದು ಖಾಸಗೀತನದ ಅತಿಕ್ರಮಣ ಎನ್ನಲಾಗದು. ಏಕೆಂದರೆ ಸಾರ್ವಜನಿಕ ಕೆಲಸ ನಿರ್ವಹಿಸುವಾಗ, ಅದು ಮೂರನೇ ವ್ಯಕ್ತಿಗೆ ಗುಪ್ತ ಎಂದು ನಿರಾಕರಿಸಲಾಗದು. AIR 2011 Chh 128

71. ಒಂದು ಸಹಕಾರ ಸಂಘದ ಮಂಡಳಿ ಸಭಾ ನಡವಳಿಕೆಗಳ ಪ್ರತಿ ಕೇಳಿದಾಗ ಅದನ್ನು ನಿರಾಕರಿಸತಕ್ಕದ್ದಲ್ಲ. ಅಂತಹ ಮಾಹಿತಿಯನ್ನು ವಾಣಿಜ್ಯ ಮತ್ತು ಗುಪ್ತ ಮಾಹಿತಿ ಎಂದು ಹೇಳಲಾಗದು. ಏಕೆಂದರೆ ಅದು ಆಡಳಿತ ಮಂಡಳಿಯ ನಡವಳಿಕೆಗಳ ಪ್ರತಿ ಮಾತ್ರ. ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಿಲ್ಲ. ಆದ್ದರಿಂದ ಸಭಾ ನಡಾವಳಿಕೆಗಳನ್ನು ನೀಡಲು ಕೇರಳ ಉಚ್ಚನ್ಯಾಯಾಲಯ ಆದೇಶಿಸಿತು. 2006 (3) KLT 696/2009 (1) ID 98

72. ಒಂದು ಟೆಂಡರ್ ಪ್ರಕಟಣೆಯಲ್ಲಿ ಭಾಗವಹಿಸಿದ ಬಿಡ್‌ಗಳನ್ನು ಅಂತಿಮಗೊಳಿಸಿದ ನಂತರ ಅದು ಗುಪ್ತ ಮಾಹಿತಿ ಯಾಗುವುದಿಲ್ಲ. ಚತ್ತೀಸ್‌ಗಡ್ ಉಚ್ಚನ್ಯಾಯಾಲಯ, ಟೆಂಡರ್ ಪ್ರಕ್ರಿಯೆಯಲ್ಲಿ, ಕ್ರಮ ಮುಕ್ತಾಯವಾದ ಮೇಲೆ ಬಿಡ್‌ದಾರರು ಸಲ್ಲಿಸಿದ ಮಾಹಿತಿಯಾಗುವುದಿಲ್ಲ. ಒಂದು ಸಾರ್ವಜನಿಕ ಪ್ರಾಧಿಕಾರದ ಜೊತೆ ಮಾಡಿಕೊಂಡ ಒಪ್ಪಂದ, ಖಾಸಗಿ ಅಥವಾ ಗುಪ್ತ ಮಾಹಿತಿಯಾಗುವುದಿಲ್ಲ. AIR 2008 Jhar 19/2008 (1) ID 161

73. ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಮೇಲೆ ಮಾಡಿದ ಆರೋಪದ ವಿಚಾರಣೆ ನಡೆದಾಗ, ಅದರ ಮಾಹಿತಿ ಪಡೆಯಲು, ಅವನಿಗೆ ಆಂಗ್ಲಭಾಷೆ ಗೊತ್ತಿಲ್ಲದ್ದರಿಂದ, ಅವನಿಗೆ ಮತ್ತೊಬ್ಬನ ಸಹಾಯದಿಂದ ದಾಖಲೆ ಪಡೆಯಲು ನಿರಾಕರಿಸಲಾಗದು. ಇದು ಕಾಯಿದೆಗೆ ವಿರುದ್ಧ. ಆದ್ದರಿಂದ ಸಹಾಯಕನ ಜೊತೆ ಮಾಹಿತಿ ಪಡೆಯಲು ಅವಕಾಶ (ದೆಹಲಿ ಉಚ್ಚನ್ಯಾಯಾಲಯ) ಆದೇಶ ನೀಡಿತು. AIR 2008 (NOC) 1139 (Deh)/2008 (2) ID 77

74. ಒಂದು ಸಹಕಾರಿ ಸಂಘ ನಿರ್ವಹಿಸುತ್ತಿರುವ ರೇಷನ್ ಅಂಗಡಿ, ದಿನ ನಿತ್ಯದ ಮಾರಾಟದ ವಿವರ,

ನಿಗದಿ ಪಡಿಸಿದ ಅವಧಿಗೆ ನೀಡಲು ನಿರಾಕರಿಸಿದಾಗ, (ಮಾಹಿತಿ ಆಯೋಗದ ನಿರ್ದೇಶನದ ನಂತರವೂ,) ಅದನ್ನು ಮದ್ರಾಸ್ ಉಚ್ಚನ್ಯಾಯಾಲಯದಲ್ಲಿ ನೌಕರ ಪ್ರಶ್ನಿಸಿದಾಗ, ಅಂತಹ ಮಾಹಿತಿ ನೀಡಬೇಕೆಂದು ಮತ್ತು ಇತ್ತೀಚಿನ ದಿನಗಳಲ್ಲಿ ಅಗತ್ಯ ವಸ್ತುಗಳ ದುರುಪಯೋಗ ನೋಡಿದಾಗ, ಇಂತಹ ಮಾಹಿತಿಯನ್ನು, ಈ ಕಾಯಿದೆಯಲ್ಲಿ ನೀಡಬೇಕು ಎಂದು ಆದೇಶಿತು. 2008 (1) CTC 838/(2008) 2 MLJ 733/2008 (2) ID 177

75. ಟೆಂಡು ಎಲೆಗಳಿಗೆ ನಿಗದಿ ಪಡಿಸಿದ ರಿಸರ್ವ್ ದರಪಟ್ಟಿ 2002–2006 ರವರೆಗೆ ನೀಡಲು ನಿರಾಕರಿಸಿದಾಗ. ಅದನ್ನು ಜಾರ್‌ಖಂಡ್ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ರಾಜ್ಯ ಮಾಹಿತಿ ಆಯೋಗ ಮಾಹಿತಿ ನೀಡಲು ಆದೇಶಿಸಿದನ್ನು ಸಮರ್ಥಿಸಿ, ಮಾಹಿತಿ ನೀಡಲು ನಿರ್ದೇಶಿಸಿತು. 2008 (2) ID 219

76. ಅನುತ್ಪಾದಕ ಆಸ್ತಿ ಬಗ್ಗೆ ಕೇಳಿದ ಮಾಹಿತಿಯನ್ನು ಬ್ಯಾಂಕ್ ನಿರಾಕರಿಸಿದಾಗ ಮತ್ತು ಅದು ಕಲಂ.8(1)(d), (e) ಮತ್ತು (j) ಅಡಿ ವಿನಾಯ್ತಿ ಇದೆ ಎಂಬ ವಾದವನ್ನು ಮಾಹಿತಿ ಆಯೋಗದ ಆದೇಶವನ್ನು ಸಮರ್ಥಿಸಿ ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ ಆದೇಶಿಸಿತು. 2009 (1) ID 227

77. ಒಂದು ದಾಖಲೆ ನಿರಾಕರಿಸಲು ವಿಶೇಷಾಧಿಕಾರವಿದೆ ಎಂದು (privilage) ವಾದಿಸಿದರೂ, ಅದು ಕಲಂ.8(1) ರಲ್ಲಿ ವಿನಾಯ್ತಿ ಪಡೆಯದ ಹೊರತು ಮಾಹಿತಿ ನಿರಾಕರಿಸತಕ್ಕದ್ದಲ್ಲವೆಂದು ಆಂಧ್ರಪ್ರದೇಶ ಉಚ್ಚನ್ಯಾಯಾಲಯ ಆದೇಶಿಸಿದೆ. ಮುಂತಖಾಬ್ (mumtakhab) ಎನ್ನುವುದು ಕಂದಾಯ ಕಾಯಿದೆಯಲ್ಲಿ ಒಂದು ಆಸ್ತಿಯ ವಾರಸುದಾರರನ್ನು ಉಲ್ಲೇಖಿಸುವ ದಾಖಲೆ. ಸಾಕ್ಷಿ ಕಾಯಿದೆ ಕಲಂ.74 ರಲ್ಲಿ ದಾಖಲೆ ವಿಶೇಷಾಧಿಕಾರದ ದಾಖಲೆ ಮತ್ತು ಇದನ್ನು ನೀಡಲಾಗದು ಎಂಬುದನ್ನು ಕಲಂ.22 ರಲ್ಲಿ ಯಾವುದೇ ಕಾಯಿದೆಯಲ್ಲಿಯಾದರೂ, ಮಾಹಿತಿ ಹಕ್ಕು ಕಾಯಿದೆ ವಿರುದ್ಧ ಅಸಂಗತ (inconsistant) ಅಲ್ಲದಿದ್ದರೆ, ಅದನ್ನು ನೀಡಬೇಕು ಅಥವಾ ಅವು ಕಲಂ.8(1) ರಲ್ಲಿ ಸ್ಪಷ್ಟವಾಗಿ ವಿನಾಯ್ತಿ ಪಡೆದಿರಬೇಕು. AIR 2009 AP 73/2009 (1) ID 329

78. ಸಾರ್ವಜನಿಕ ಮಾಹಿತಿ ಅಧಿಕಾರಿ, ಒಬ್ಬ ಅರ್ಜಿದಾರ ಅವನ ಹೆಂಡತಿ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ ನಂತರ, ಅವಳು ಕೆಲಸ ನಿರ್ವಹಿಸುತ್ತಿದ್ದ ಸಂಸ್ಥೆಯಲ್ಲಿ ದಾಖಲಿಸಿದ್ದ ರಜಾ ಅರ್ಜಿ, ನಾಮ ನಿರ್ದೇಶನ ಮಾಡಿದ ಮಾಹಿತಿ, ಮತ್ತಿತರ ದಾಖಲೆಗಳನ್ನು ನೀಡಲು ನಿರಾಕರಿಸಿದಾಗ, ಮೇಲ್ಮನವಿಯಲ್ಲಿಯೂ ಅದನ್ನು ಪುರಸ್ಕರಿಸದೇ ಇದ್ದಾಗ, ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಅದಕ್ಕೆ ಅರ್ಜಿ ಪರಿಶೀಲಿಸುವಾಗ ಗಮನಿಸಬೇಕಾದ ಮೂರು ಅಂಶಗಳನ್ನು ಗುರುತಿಸಿತು. (1) ಮಾಹಿತಿ ವ್ಯಯಕ್ತಿಕ ಮಾಹಿತಿಯೇ? (2) ಅಂತಹ ಮಾಹಿತಿ ನೀಡಿದರೆ, ಆ ವ್ಯಕ್ತಿಯ ಕಾರ್ಯನಿರ್ವಹಣೆ ಮೇಲೆ ಆಗಬಹುದಾದ ಪರಿಣಾಮ (3) ಮಾಹಿತಿ ನೀಡುವುದರಿಂದ ಪಾರದರ್ಶಕತೆ ಮತ್ತು ಜವಾಬ್ದಾರಿ ನಿರ್ವಹಣೆ ಬಗ್ಗೆ ಸಾರ್ವಜನಿಕ ಸಂಪನ್ಮೂಲದಿಂದ ಖರ್ಚಾಗುತ್ತದೆಯೇ? ಈ ಅಂಶಗಳನ್ನು ಪರಿಶೀಲಿಸಿದಾಗ ಅದು ಕಲಂ.8(1)(j) ಅಡಿ ವಿನಾಯ್ತಿಗೆ ಬರುತ್ತಿರುವುದರಿಂದ ಮಾಹಿತಿ ನೀಡಲಾಗದು ಎಂದು ವಜಾ ಮಾಡಿತು. AIR 2010 Delhi 7 / 2009 (2) ID 384

79. ಕ್ಷೇತ್ರ ತಪಾಸಣಾ ವರದಿ, ವ್ಯವಹಾರಕ್ಕೆ ಸಂಬಂಧಿಸಿಲ್ಲ ಮತ್ತು ಅದು ಆರ್ಥಿಕ ಹಿತಾಸಕ್ತಿ ಮೇಲೆ

ಪ್ರಭಾವ ಬೀರುವುದಿಲ್ಲವಾದ್ದರಿಂದ ಮಾಹಿತಿ ನೀಡಬೇಕು ಎಂದು ತಮಿಳ್‌ನಾಡು ಉಚ್ಚನ್ಯಾಯಾಲಯ ಆದೇಶಿಸಿತು. ಈ ತೀರ್ಮಾನ ನೀಡುವಾಗ ಈ ಹಿಂದೆ ನೀಡಿದ್ದ 2007 (4) MLJ 394/2009 (1) ID 108 ನೀತಿಯನ್ನು ಅನ್ವಯಿಸಿ, ಮಾಹಿತಿ ಕೇಳಿರುವುದು ಕಲಂ.8(1)(d) ರ ವಿನಾಯ್ತಿ ಇಲ್ಲ. ಆದ್ದರಿಂದ ಮಾಹಿತಿ ನೀಡಲು ಆದೇಶಿಸಿತು. 2010 (1) ID 172 /(2010) 5 MLJ 402 /2010 (6) CTC 541

80. ಸಚಿವ ಸಂಪುಟದಲ್ಲಿ ಒಂದು ವರದಿಯನ್ನು ಮಂಡಿಸಿದ ನಂತರ, ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳದೆ ಇದ್ದಾಗ, ಅಂತಹ ಮಾಹಿತಿ ಕಲಂ.8(1) ರಲ್ಲಿ ವಿನಾಯ್ತಿ ಇದೆ. ರಾಜಾಸ್ತಾನ್ ಉಚ್ಚನ್ಯಾಯಾಲಯದ ಯತೀಂದ್ರ ಸಿಂಗ್ ಪ್ರಕರಣದಲ್ಲಿ, ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳದೇ ಇರುವುದರಿಂದ ಅದನ್ನು ನೀಡಲಾಗದು ಎಂದು ತೀರ್ಮಾನಿಸಿತು. ರಿಟ್ ವಜಾ ಮಾಡಿತು. 2012 (1) ID 342

81. ಒಬ್ಬ ವ್ಯಕ್ತಿ ಒಂದು ಆರೋಪ ಪತ್ರವನ್ನು ನೀಡಿದಾಗ, ಆ ಆರೋಪ ಪತ್ರದ ಮೇಲೆ ಕ್ರಮ ಪ್ರಾರಂಭವಾಗಿ, ಆರೋಪ ಮಾಡಿದಾತನು, ತನ್ನ ಆರೋಪ ಪತ್ರದ ಪ್ರತಿ ಕೇಳಿದಾಗ ನೀಡಬೇಕು ಎಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. ಅರ್ಜಿದಾರ ನೀಡಿದ ಆರೋಪ ಪಟ್ಟಿ ಸಾರ್ವಜನಿಕವಾಗಿ ಪ್ರಕಟವಾಗಿರುವುದರಿಂದ, ಅದರ ಪ್ರತಿ ನೀಡಲು ಕಲಂ.8(1) ರಲ್ಲಿ ವಿನಾಯ್ತಿ ಇಲ್ಲ ಎಂದು ತೀರ್ಮಾನಿಸಿತು. 2010 (2) ID 456

82. ಮುಖ್ಯ ಮಂತ್ರಿಗಳ ವಿವೇಚನಾ ಕೋಟದಡಿ ನೀಡಿದ ಫಲಾನುಭಾವಿಗಳ ಹೆಸರು ಮತ್ತು ವಿವರಗಳನ್ನು ನೀಡಬೇಕೆಂದು ಅಲಹಾಬಾದ್ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. ಮುಖ್ಯ ಮಂತ್ರಿಗಳ ವಿವೇಚನಾ ಕೋಟಾದ ನಿಧಿ ರಾಜ್ಯದ ಸಂಚಿತ ನಿಧಿಯಲ್ಲಿ ನೀಡಲಾಗುತ್ತದೆ. (consolidated fund of the state) ಅದಕ್ಕೆ ಸಂವಿಧಾನಾತ್ಮಕ ಒಪ್ಪಿಗೆ ಮತ್ತು ಶಾಸನಾತ್ಮಕ ಭದ್ದತೆ ಇರುವುದರಿಂದ, ಇಂತಹ ಮಾಹಿತಿಯನ್ನು ನೀಡಲು ನಿರಾಕರಿಸತಕ್ಕದ್ದಲ್ಲ ಎಂದು ಅಲಹಬಾದ್ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. 2008 (2) ID 97

83. ಜನಗಣತಿ ಅಧಿಕಾರಿಗೆ ನೀಡಿದ ಮಾಹಿತಿಯನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸತಕ್ಕದ್ದಲ್ಲವೆಂದು. ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ ವಿಭಾಗೀಯ ಪೀಠ ಆದೇಶಿಸಿತು. ಒಬ್ಬ ಗಣ್ಯವ್ಯಕ್ತಿ ಯಾವ ಧರ್ಮಕ್ಕೆ ಸೇರಿದ್ದಾರೆ ಎಂಬ ಮಾಹಿತಿ ಕೇಳಿದಾಗ, ಅದು ಕಲಂ.8(1)ರ ವಿನಾಯ್ತಿಯಲ್ಲಿ ಸೇರಿಸಬಹುದು. ಜನಗಣತಿ ಕಾಯಿದೆ 1948ರ ಕಲಂ.15, ಮಾಹಿತಿ ಹಕ್ಕು ಕಾಯಿದೆ ಕಲಂ.8(1)ಕ್ಕೆ ಅಸಂಗತವಲ್ಲ (ಪರಸ್ಪರ ವಿರೋದ) ಅಲ್ಲವೆಂದು. ಈ ಎರಡೂ ಕಾಯಿದೆ ಕಲಂಗಳನ್ನು ಸಾಮರಸ್ಥದಿಂದ (harmoniously) ಅರ್ಥೈಸಬೇಕು. ಆದ್ದರಿಂದ ಇಂತಹ ಮಾಹಿತಿಯನ್ನು ನೀಡಲಾಗದು ಎಂದು ತೀರ್ಪಿತ್ತಿತು. 2011 (1) ID 94/AIR 2011 P&H 137

84. ದೆಹಲಿ ಮೆಟ್ರೊ ರೈಲು ನಿಗಮ ಒಂದು "ರಾಜ್ಯ" ಆದ್ದರಿಂದ, ಸಾರ್ವಜನಿಕರಿಗೆ ಮಾಹಿತಿ ನೀಡಲು ನಿರಾಕರಿಸಲಾಗದು ಎಂದು ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. ಕೇಂದ್ರ

ಮಾಹಿತಿ ಆಯೋಗ, ಕೇಳಿದ ಮಾಹಿತಿ ನೀಡಲು ಆದೇಶಿಸಿರುವುದನ್ನು ಸಮರ್ಥಿಸಿತು. ಮತ್ತು ಮೆಟ್ರೊ ನಿಗಮದ ಒಂದು ರೂಪರೇಖೆ (design) ವಿಫಲವಾಗಿದ್ದು, ಅದನ್ನು ಉಪಯೋಗಿಸುತ್ತಿಲ್ಲವೆಂದು ತೀರ್ಮಾನದ ಆಧಾರದ ಮೇಲೆ ಅದಕ್ಕೆ ಕಲಂ.8(1) ರಲ್ಲಿ ವಿನಾಯ್ತಿ ಇಲ್ಲ. 2011 (1) ID 323

85. ಅನಿಲ ಕಂಪನಿಗಳು ಸರಬರಾಜು ಮಾಡುವ ಗೃಹ ಬಳಕೆ ಮತ್ತು ವಾಣಿಜ್ಯ ಅಡಿಗೆ ಅನಿಲದ ಮಾಹಿತಿಯನ್ನು ನೀಡಬಹುದು ಎಂದು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ತೀರ್ಮಾನಿಸಿತು. ಗ್ರಾಹಕರ ಹೆಸರು ಮತ್ತು ವಿಳಾಸ ಒಂದು ಗುಪ್ತ ಮಾಹಿತಿಯಲ್ಲ ಮತ್ತೆ ಅಂತಹ ಮಾಹಿತಿ ಗುಪ್ತವಾಗಿಡಲಾಗದು. ಕಲಂ.11 ನ್ನು ತಪ್ಪಾಗಿ ಅರ್ಥೈಸಲಾಗದು – ಅಂದರೆ ಮೂರನೆ ವ್ಯಕ್ತಿಗೆ ನೋಟೀಸ್ ಜಾರಿ ಮಾಡಲಾಗದೆ ಮಾಹಿತಿ ನೀಡಲಾಗದು ಎಂಬ ವಾದ ಸರಿಯಲ್ಲ ಎಂದು ವಿಭಾಗೀಯ ಪೀಠ ಆದೇಶಿಸಿತು. 2011 (1) ID 539

86. ಒಂದು ಕಂಪನಿಯ ಮಾಲೀಕರು/ಭಾಗೀದಾರರ ಹೆಸರು ಕಲಂ.8(1)(d) ನಡಿ ವಿನಾಯ್ತಿ ಇಲ್ಲ. ಅರ್ಜಿದಾರ ಕೇಳಿರುವುದು ಮಾಲೀಕರ/ಭಾಗೀದಾರರ ಹೆಸರು ಮತ್ತು ವಿಳಾಸ, ಇದರಲ್ಲಿ ವ್ಯವಹಾರದ ಗುಪ್ತ ಮಾಹಿತಿ ಅಥವಾ ಏಕ ಸೌಮ್ಯತೆಯ ಜ್ಞಾನ ಸಂಪತ್ತು ಅಲ್ಲ. (intellectual property) ಮತ್ತು ಇದು ಖಾಸಗಿತನವೂ ಅಲ್ಲ. ಆದ್ದರಿಂದ ಮಾಹಿತಿ ನೀಡಬೇಕೆಂದು ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ ಆದೇಶಿಸಿತು. AIR 2012 NOC 149/WP 2233/2011 – 04-04-2011

87. ಒಂದು ಧರ್ಮದ ಧಾರ್ಮಿಕ ಟ್ರಸ್ಟ್ ಮಾಹಿತಿ ನೀಡಲು ನಿರಾಕರಿಸತಕ್ಕದ್ದಲ್ಲ. ಏಕೆಂದರೆ ಇದರ ಆರ್ಥಿಕ ತಃಖ್ತೆ ಗಳನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಲಾಗುತ್ತದೆ. ಒಂದು ಟ್ರಸ್ಟ್ ಸಾರ್ವಜನಿಕ ಕೆಲಸದಲ್ಲಿ ತೊಡಗಿಸಿಕೊಂಡಿದ್ದು ಅದನ್ನು ನೀಡುವುದು ಕಲಂ.8(1)(e) ಮತ್ತು (j) ಅಡಿ ವಿನಾಯ್ತಿ ಇಲ್ಲವೆಂದು ಗುಜರಾತ್ ಉಚ್ಚನ್ಯಾಯಾಲಯ ಆದೇಶಿಸಿತು. AIR 2011 Gujarat 70/2011 (2) ID 361

88. ಸಾರ್ವಜನಿಕ ಪ್ರಾಧಿಕಾರಗಳು ಖಾಸಗಿ ವ್ಯಕ್ತಿಗಳ ಜೊತೆ ಮಾಡಿಕೊಂಡ ಒಪ್ಪಂದಗಳ ಪ್ರತಿಯನ್ನು ನೀಡತಕ್ಕದ್ದು ಎಂದು ಬಾಂಬೆ ಉಚ್ಚನ್ಯಾಯಾಲಯ ಆದೇಶಿಸಿತು. ಸಾರ್ವಜನಿಕ ಮಾಹಿತಿ ಅಧಿಕಾರಿ ವಾಹನ ಚಾಲನೆ ಲೈಸನ್ಸ್, ಸ್ಮಾಟ್ ಕಾರ್ಡ್, ನೋಂದಣಿ ಪ್ರಮಾಣ ಪತ್ರದಂತೆ ಐದು ಮಾಹಿತಿ ನೀಡಲಾಗದು, ಏಕೆಂದರೆ ಅದು ಕಲಂ.8(1)(d) ಅಡಿ ವಿನಾಯ್ತಿಯಲ್ಲಿ ಬರುತ್ತದೆಂದು ತಿಳಿಸಿದಾಗ, ಅದನ್ನು ಬಾಂಬೆ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಆ ಮಾಹಿತಿ ನೀಡಿದರೆ, ಅದು ವಾಣಿಜ್ಯ ಗುಪ್ತತೆ, ಮತ್ತು ಅದು ಏಕಸೌಮ್ಯ ಜ್ಞಾನ ಸಂಪತ್ತು ಅಲ್ಲ. (intellectual property) ಆದ್ದರಿಂದ ರಿಟ್ ವಜಾ ಮಾಡಿತು. WP 2912/2011 – 01-07-2011

89. ಒಂದು ನಗರ ಪಾಲಿಕೆ ನೀಡಿದ ನಿವೇಶನ ನಕ್ಷೆ ಖಾಸಗಿ/ವ್ಯಯಕ್ತಿಕ ಮಾಹಿತಿಯಲ್ಲ ಎಂದು ದೆಹಲಿ ಉಚ್ಚನ್ಯಾಯಾಲಯ ಈ ಹಿಂದೆ ನೀಡಿದ್ದ ತೀರ್ಪನ್ನು ಸಮರ್ಥಿಸಿತು – 2011 (1) ID 323. 2011 (2) ID 430

90. ಸಾರ್ವಜನಿಕ ಪ್ರಾಧಿಕಾರ, ಮಾಡಿದ/ಮಾಡಿಕೊಂಡ ಮಾರಾಟ ಕರಾರು ಪತ್ರ ನೀಡತಕ್ಕದ್ದು. ಕೇಂದ್ರ ಮಾಹಿತಿ ಆಯೋಗ ನೀಡಬೇಕೆಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅದು ಕಲಂ.8(1)(j) ನಡಿ ವಿನಾಯ್ತಿ ಇಲ್ಲವೆಂದು ಆದೇಶಿಸಿತು. AIR 2012 Delhi 39/2012 (1) ID 181

91. ಕೇಳಿದ ಮಾಹಿತಿ ಬೃಹದಾಕಾರವಾಗಿದೆ ಎಂದು ನಿರಾಕರಿಸತಕ್ಕದ್ದಲ್ಲವೆಂದು ಪಂಜಾಬ್ ಮತ್ತು ಹರ್ಯಾನ ಉಚ್ಚನ್ಯಾಯಾಲಯ ಆದೇಶಿಸಿದೆ. ಮಾಹಿತಿ ಕೇಳಿದಾಗ ಅದು ಭಾರಿ ಪ್ರಮಾಣದಲ್ಲಿದೆ ಎಂಬ ಒಂದೇ ಕಾರಣ ದಿಂದ ಮಾಹಿತಿ ನಿರಾಕರಿಸಲಾಗದು. WP 18694/2011 - 01-12-2011

92. ಪಶ್ಚಿಮಘಟ್ಟ ವನ ಸಂಪತ್ತಿನ (ecology) ತನಿಖೆ ವರದಿ ಸಾರಾಂಶ ನೀಡಲು ಕೇಂದ್ರ ಮಾಹಿತಿ ಆಯೋಗ ನೀಡಿದ ಆದೇಶವನ್ನು, ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅದು ಸಾರ್ವಜನಿಕರಿಗೆ ಒಳ್ಳೆಯದನ್ನು ಮಾಡಲು ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಮಾಡುತ್ತಿದ್ದು. ಇದನ್ನು ಆರ್ಥಿಕ, ವಿಜ್ಞಾನ ಮತ್ತು ಸೂಕ್ಷ್ಮತೆ (strategic) ಯಿಂದ ನಿರಾಕರಿಸಲಾಗದು. WP 2651/2012 - 17-05-2012

93. ಏರ್ ಇಂಡಿಯಾ ಉಚಿತವಾಗಿ ನೀಡಿದ ವಿಮಾನ ಟಿಕೆಟ್ ಮಾಹಿತಿ ನೀಡಬೇಕೆಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಉಚಿತ ವಿಮಾನ ಟಿಕೆಟ್ ನೀಡಿರುವುದು ಕಲಂ.8(1)(d) ಅಡಿ ವಿನಾಯ್ತಿ ಇಲ್ಲ. ಆದ್ದರಿಂದ ಮಾಹಿತಿ ನೀಡಬೇಕೆಂಬ ಕೇಂದ್ರ ಮಾಹಿತಿ ಆಯೋಗದ ಆದೇಶವನ್ನು ವಿಭಾಗೀಯ ಪೀಠ ಪುರಸ್ಕರಿಸಿ ಆದೇಶಿಸಿತು. LPA 205/2012 - 16-07-2012

<u>**ಸಾರ್ವಜನಿಕ ಪ್ರಾಧಿಕಾರದ ದಾಖಲೆಯಲ್ಲಿರುವ ಮಾಹಿತಿಯನ್ನು ನೀಡುವ ಬಗ್ಗೆ.**</u>

ಮಾಹಿತಿ ಹಕ್ಕು ಕಾಯಿದೆ ಕಲಂ.11 ರಲ್ಲಿ ಸಾರ್ವಜನಿಕ ಪ್ರಾಧಿಕಾರದಲ್ಲಿರುವ ಮಾಹಿತಿಯನ್ನು ದಾಖಲಿಸಿಕೊಂಡಿದ್ದು ಅಥವಾ ಸಾರ್ವಜನಿಕ ಪ್ರಾಧಿಕಾರ, ಅಂತಹ ಮಾಹಿತಿಯನ್ನು ಪಡೆದು, ನೀಡುವ ಸಂಬಂಧ ಕೆಲವು ನಿಯಮಗಳನ್ನು ಪಾಲಿಸಬೇಕು. (1) ದಾಖಲೆಯಲ್ಲಿರುವ ಮಾಹಿತಿ ಕಾಯಿದೆಯಡಿ, ಅದರ ನೌಕರರು, ಗ್ರಾಹಕರು ಸಲ್ಲಿಸದ ಮಾಹಿತಿ ಲಭ್ಯವಿದ್ದು, (ಸಲ್ಲಿಸಿದ್ದ/ಪಡೆದಿದ್ದ) (2) ಈ ರೀತಿ ಪಡೆದ ಮಾಹಿತಿ ಗುಪ್ತ ಮಾಹಿತಿ ಎಂದು ಪರಿಗಣಿಸಿದೆಯೇ ಎಂಬುದನ್ನು ಗಮನಿಸಬೇಕು. ಅಂದರೆ ಒಂದು ಸಾರ್ವಜನಿಕ ಪ್ರಾಧಿಕಾರದ ಮುಂದೆ, ಅದರ ನೌಕರು/ಗ್ರಾಹಕ ಸರಬರಾಜು ಮಾಡಿದ ದಾಖಲೆಯನ್ನು ಗುಪ್ತ ಮಾಹಿತಿ ಎಂದು ವರ್ಗೀಕರಿಸಿದ್ದರೆ, ಅಂತಹ ಮಾಹಿತಿ ನೀಡತಕ್ಕದ್ದಲ್ಲ.

ಕಲಂ.11 ರಲ್ಲಿ ಮೂರನೆ ವ್ಯಕ್ತಿ ಸಲ್ಲಿಸಿದ ಮಾಹಿತಿ ಎಲ್ಲವೂ ಗುಪ್ತವಲ್ಲ. ಅಂದರೆ ಅಂತಹ ಮಾಹಿತಿ ಗುಪ್ತ ಎಂದು ಸಾರ್ವಜನಿಕ ಪ್ರಾಧಿಕಾರ ತೀರ್ಮಾನಿಸಿದಾಗ ಮಾತ್ರ, ಅದು ಗುಪ್ತ ಮಾಹಿತಿಯಾಗುತ್ತದೆ. ಆದರೆ ಆ ರೀತಿ ತೀರ್ಮಾನ ಮಾಡುವ ಮೊದಲು, ಮೂರನೇ ವ್ಯಕ್ತಿ ಸಲ್ಲಿದ್ದ ಮಾಹಿತಿ ಕೇಳಿ, ಬಂದಿರುವ ಅರ್ಜಿಯನ್ನು ಪುರಸ್ಕರಿಸಬಾರದೇಕೆಂದು ಮೂರನೇ ವ್ಯಕ್ತಿಗೆ ನೋಟೀಸ್ ಜಾರಿ ಮಾಡಿದ ನಂತರವೇ ತೀರ್ಮಾನಿಸಬೇಕು. ನೋಟೀಸ್‌ಗೆ ಬಂದ ಉತ್ತರವನ್ನು ಪರಿಶೀಲಿಸಿ, ಕೇಳಿದ ಮಾಹಿತಿ ನೀಡಬೇಕೇ? ಬೇಡವೇ? ಎಂದು ಕೇಂದ್ರ/ರಾಜ್ಯ ಮಾಹಿತಿ ಅಧಿಕಾರಿ ತೀರ್ಮಾನ ತೆಗೆದುಕೊಳ್ಳಬೇಕು. ಮೂರನೇ ವ್ಯಕ್ತಿಗೆ ಅರ್ಥ ವಿವರಣೆಯಲ್ಲಿ (ಕಲಂ.2(n) ರಲ್ಲಿ) "ಮೂರನೇ ವ್ಯಕ್ತಿ"

ಎಂಬುದಕ್ಕೆ ಭಾರತದ ಪ್ರಜೆಯಲ್ಲದ ವ್ಯಕ್ತಿ ಕೇಳಿದ ಮಾಹಿತಿ ಮತ್ತು ಇದರಲ್ಲಿ ಸಾರ್ವಜನಿಕ ಪ್ರಾಧಿಕಾರವೂ ಸೇರುತ್ತದೆ. ಮಾಹಿತಿ ಹಕ್ಕು ಕಾಯಿದೆ ಸಾರ್ವಜನಿಕರು ಮಾಹಿತಿ ಕೇಳಿದಾಗ, ಅದನ್ನು ನೀಡಬೇಕು. ಮೂರನೇ ವ್ಯಕ್ತಿ ಒಂದು ಪ್ರಾಧಿಕಾರಕ್ಕೆ ನೀಡಿದ ಮಾಹಿತಿ ನೀಡಬಹುದೇ ಇಲ್ಲವೇ ಎಂಬುದನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ನಿರ್ಧರಿಸಬೇಕು. ಆ ರೀತಿ ಮಾಡುವಾಗ ಕಲಂ.8 ರಲ್ಲಿ ವಿನಾಯ್ತಿ ಇದೇಯೇ? ಎಂಬುದನ್ನು ನಿರ್ಧರಿಸಲು, ಕಲಂ.11 ರಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಸಾರ್ವಜನಿಕರು ಕೇಳಿದ ಮಾಹಿತಿ ನೀಡಬಾರದೇಕೆಂದು, ಆ ಮಾಹಿತಿ ಸಲ್ಲಿಸಿದ ವ್ಯಕ್ತಿಗೆ ನೋಟೀಸ್ ಜಾರಿ ಮಾಡಿ, ಅವನ ವಾದವನ್ನು (10 ದಿವಸದ ಅವಧಿಯಲ್ಲಿ) ಕೇಳಿ ಆ ನಂತರ, ಮಾಹಿತಿ ಗುಪ್ತವೇ/ವೈಯಕ್ತಿಕವೇ ಅಥವಾ ಮಾಹಿತಿ ನೀಡಬೇಕೇ ಎಂಬುದನ್ನು ನಿರ್ಧರಿಸಬೇಕು. ಮೊದಲನೇ ಮೇಲ್ಮನವಿ ಸಲ್ಲಿಸಲು 30 ದಿವಸಗಳ ಅವಧಿ ನಿಗದಿ ಪಡಿಸಿದೆ.

**<u>ಮಾಹಿತಿ ನೀಡಲು ಅನುಸರಿಸಬೇಕಾದ ನೀತಿ</u>**

ಕೇಳಿರುವ ಮಾಹಿತಿ, ಮೂರನೇ ವ್ಯಕ್ತಿಯಿಂದ ಸಾರ್ವಜನಿಕ ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿದೆಯೇ ಮತ್ತು ಅಂತಹ ಮಾಹಿತಿ ಕಲಂ.8(1) ಅಥವಾ ಕಲಂ.9 ರಲ್ಲಿನ ವಿನಾಯ್ತಿ ಇದೆಯೇ ಎಂಬುದನ್ನು ನಿರ್ಧರಿಸಬೇಕು. ಮಾಹಿತಿ ಕೇಳಿ ಸಲ್ಲಿಕೆ ಯಾದ ಐದು ದಿವಸದೊಳಿಗೆ, ಮಾಹಿತಿ ಸಲ್ಲಿಸಿದ ವ್ಯಕ್ತಿಗೆ ನೋಟೀಸ್ ನೀಡಬೇಕು. ಈ ನೋಟೀಸ್‌ನಲ್ಲಿ ಲಿಖಿತ ತಕರಾರು ಇಲ್ಲದಿದ್ದರೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿರಬೇಕು. ಉತ್ತರ ಸಲ್ಲಿಕೆಯಾದರೆ, ಅದನ್ನು ಪರಿಶೀಲಿಸಿ, ಕಲಂ.8(1) ರ ವಿನಾಯ್ತಿ ಇದೆಯೇ ಎಂಬುದನ್ನು ಪರಿಶೀಲಿಸಿ, ಅರ್ಜಿಯಲ್ಲಿ ಬೇಡಿದ ಮಾಹಿತಿ ನೀಡಬೇಕೇ? ಅಥವಾ ಬೇಡವೇ ಎಂದು ತೀರ್ಮಾನಿಸಬೇಕು. ನೋಟೀಸ್ ನೀಡದಿದ್ದಾಗ, ಅಂತಹ ವ್ಯಕ್ತಿ ಮಾಹಿತಿ ಗುಪ್ತವಾಗಿರಬೇಕು ಅಥವಾ ಕಲಂ.8(1) ರಡಿ ವಿನಾಯ್ತಿ ಇದೆ ಎಂದು ಸ್ಪಷ್ಟವಾಗಿ ನಮೂದಿಸಿರಬೇಕು. ಸಾರ್ವಜನಿಕ ಹಿತಾಸಕ್ತಿ ಮಾಹಿತಿ ನೀಡುವುದರಲ್ಲಿದೆ ಎಂದು ಸಾರ್ವಜನಿಕ ಮಾಹಿತಿ ಅಧಿಕಾರಿ ತೀರ್ಮಾನಿಸಿದರೆ, ಅದನ್ನು ನೀಡಬೇಕೆಂದು ಆದೇಶಿಸಬೇಕು. ಈ ತೀರ್ಮಾನ ತೆಗೆದುಕೊಳ್ಳಲು ಗರಿಷ್ಠ 40 ದಿವಸಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ತೀರ್ಮಾನ ತೆಗೆದುಕೊಳ್ಳಬೇಕು. ಮಾಹಿತಿ ನೀಡಲು ನಿರಾಕರಿಸಿದಾಗ, ಅರ್ಜಿದಾರ ಮೇಲ್ಮನವಿ ಸಲ್ಲಿಸಲು ಅವಕಾಶ ಇರುತ್ತದೆ ಮತ್ತು ಆ ಅರ್ಜಿಯೂ ಪುರಸ್ಕೃತವಾಗದಿದ್ದರೆ, ಎರಡನೇ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ.

**<u>ತೀರ್ಪುಗಳ ಸಾರಾಂಶ:–</u>**

1. ಸಾರ್ವಜನಿಕ ಮಾಹಿತಿ ಅಧಿಕಾರಿ ಕಲಂ.11 ರಲ್ಲಿ ನೋಟೀಸ್ ನೀಡಿದಾಗ – ಅದು ಸ್ವಭಾವಿಕ ನ್ಯಾಯದಡಿ ನೀಡಲಾದ ಒಂದು ಅವಕಾಶ – ಆದರೆ ಅದನ್ನು ಕಾಟಾಚಾರಕ್ಕೆ ನೀಡಿದಂತೆ ತಿಳಿಯಲಾಗದು. ಯಾವ ವ್ಯಕ್ತಿಯು ಮಾಹಿತಿಯನ್ನು ನೀಡಬೇಕಾಗಿದೆಯೋ, ಅಂತಹ ವ್ಯಕ್ತಿಯ ತಕರಾರನ್ನು ಕೇಳಿ ಪಡೆದು, ದೃಢೀಕರಿಸಿಕೊಂಡು ತೀರ್ಮಾನಿಸಬೇಕು. ಇಂತಹ ಅವಕಾಶ ನೀಡಲಾಗಿಲ್ಲವೆಂದು ರಾಜ್ಯ ಮಾಹಿತಿ ಆಯೋಗ ಮಾಡಿದ್ದ ಆದೇಶವನ್ನು ಕಿತ್ತು ಹಾಕಿ, ಸಂಬಂಧಪಟ್ಟ ವ್ಯಕ್ತಿಗೆ ಅವಕಾಶ ನೀಡಿ ಆದೇಶಿಸಬೇಕೆಂದು ಬಾಂಬೆ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. AIR 2007 Bam 12/ 2008 (1) ID 185

2. ಒಂದು ಪ್ರಕರಣದಲ್ಲಿ ಮಾಹಿತಿ ನೀಡಲು ನಿರಾಕರಿಸಿದಾಗ, ನಿರಾಕರಿಸಿದ ವ್ಯಕ್ತಿ ಒಂದು ಮತ್ತು ಎರಡನೇ ಮೇಲ್ಮನವಿ ಸಲ್ಲಿಸಿದಾಗ, ಯಾರ ಬಗ್ಗೆ ಮಾಹಿತಿ ಕೇಳಿದ್ದನೋ ಅವನನ್ನು ಕಕ್ಷಿದಾರನನ್ನಾಗಿ

ಮಾಡಲೇಬೇಕು. ಇಲ್ಲವಾದರೆ, ನ್ಯಾಯಾ ನೀಡಲಾಗದು ಎಂದು ಬಾಂಬೆ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ, ತನ್ನ ಆದೇಶದಲ್ಲಿ ಅಂತಹ ನ್ಯೂನತೆಯನ್ನು ಎರಡೂ ಪ್ರಾಧಿಕಾರಗಳಲ್ಲಿನ ಆದೇಶದಲ್ಲಿ ಗಮನಿಸಿ, ಕೊನೆಯ ಮೇಲ್ಮನವಿ ಆಯುಕ್ತರು/ಏಕಸದಸ್ಯ ಪೀಠ ಮಾಡಿದ ಆದೇಶವನ್ನು ಕಿತ್ತು ಹಾಕಿ, ಕೆಳಗಿನ ಎಲ್ಲಾ ಪ್ರಾಧಿಕಾರಗಳು ಮಾಡಿದ ನ್ಯೂನತೆಗಳನ್ನು ಸರಿಪಡಿಸಲು ಆಯುಕ್ತರು ಮತ್ತೊಮ್ಮೆ ವಿಚಾರಣೆ ನಡೆಸಿ ಆದೇಶಿಸಲು ನಿರ್ದೇಶಿಸಿತು. WP 9922/2009 - 30.11.2009

3. ಸಾರ್ವಜನಿಕ ದಾಖಲೆಗಳನ್ನು, ಮೂರನೇ ವ್ಯಕ್ತಿ, ಅಂದರೆ ಮಾಹಿತಿ ಸಲ್ಲಿಸಿದ್ದ ಅಧಿಕಾರಿ, ಜೊತೆ ಸಮಾಲೋಚಿಸಬೇಕಾಗಿಲ್ಲ ಎಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿದೆ. ರಾಜ್ಯ ಸರ್ಕಾರದ ವಶದಲ್ಲಿರುವ ಮಾಹಿತಿ, ಅಧಿಕಾರಿಗಳು ಸಲ್ಲಿಸಿದ್ದು ಅದು ಸಾರ್ವಜನಿಕ ಮಾಹಿತಿಯಾದ್ದರಿಂದ, ಅದಕ್ಕೆ ಖಾಸಗೀತನ ಅಥವಾ ಗುಪ್ತತೆ ಅನ್ವಯವಲ್ಲ. ಅಂತಹ ಮಾಹಿತಿ ನೀಡಿದರೆ, ಅದು ಖಾಸಗೀತನದ ಮದ್ಯಪ್ರವೇಶವಲ್ಲ. ಏಕೆಂದರೆ ಅಂತಹ ಮಾಹಿತಿ ಸರ್ಕಾರದ ವಶದಲ್ಲಿ ಇದ್ದು ಸಾರ್ವಜನಿಕರಿಗೆ ಲಭ್ಯವಾಗುತ್ತಿದೆ. ಅರ್ಜಿದಾರನ ಉದ್ದೇಶ ಏನೇ ಇದ್ದರೂ, ಅಂತಹ ಮಾಹಿತಿ ನೀಡಲು, ಆ ಮಾಹಿತಿ ಸರ್ಕಾರಕ್ಕೆ ನೀಡಿದ್ದ ವ್ಯಕ್ತಿ ವಿವರಣೆ, ತಕರಾರು ಕೇಳಬೇಕಾಗಿಲ್ಲವೆಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. ಇದಕ್ಕೆ ಪೂರಕವಾಗಿ ಈ ಹಿಂದೆ ನೀಡಿದ್ದ WP 3278/2009 - 27.11.2009 ರಲ್ಲಿ ಒಂದು ಸಹಕಾರಿ ಸಂಘಕ್ಕೆ ಸರ್ಕಾರ ಸಹಾಯ ಧನ ನೀಡಿದ್ದ ಮಾಹಿತಿ ಮುಚ್ಚಿಡಲಾಗದು ಎಂದು ತೀರ್ಮಾನಿಸಿದನ್ನು ಉಲ್ಲೇಖಿಸಿದೆ. (2007) 4 MLJ 394/2009 (1) ID 108

4. ಮೂರನೇ ವ್ಯಕ್ತಿಯ ಮಾಹಿತಿ ಸಲ್ಲಿಕೆಯಾದಾಗ, ಅದನ್ನು ಗುಪ್ತ ಎಂದು ದಾಖಲಿಸದಿದ್ದರೂ, ಮಾಹಿತಿ ಕೇಳಿ ಅರ್ಜಿ ನೀಡಿದಾಗ, ಕಲಂ.11(4) ರಡಿ, ಮಾಹಿತಿ ಸಲ್ಲಿಸಿದ ವ್ಯಕ್ತಿಗೆ ಕಾರಣ ಕೇಳುವ ನೋಟೀಸ್ ನೀಡಬೇಕೆಂದು ಗುಜರಾತ್ ಉಚ್ಚನ್ಯಾಯಾಲಯ ನಿರ್ದೇಶಿಸಿತು. ಮನವಿ ಸಲ್ಲಿಸಿದಾಗ ನಿಗದಿ ಪಡಿಸಿದ ಅವಧಿಯೊಳಗೆ ಸಾರ್ವಜನಿಕ ಮಾಹಿತಿ ಅಧಿಕಾರಿ ಕ್ರಮ ಜರುಗಿಸಬೇಕು. ಕಲಂ.11 ರಲ್ಲಿನ ನೋಟೀಸ್ ನೀಡಿ, ತಕರಾರು ಕೇಳದಿದ್ದರೆ, ಅದು ಕಾನೂನು ಪಾಲಿಸಿಲ್ಲವೆಂದು ಅರ್ಥೈಸಬೇಕು. ಆದ್ದರಿಂದ ನೋಟೀಸ್ ಅವಶ್ಯಕ. AIR 2007 Guj 203/2008 (2) ID 26

5. ಮಾಹಿತಿ ಸಲ್ಲಿಸಿದ ವ್ಯಕ್ತಿಯ ವಿವರಣೆ ಕೇಳದೆ, ಮಾಹಿತಿ ನೀಡತಕ್ಕದ್ದಲ್ಲವೆಂದು ಗುಜರಾತ್ ಉಚ್ಚನ್ಯಾಯಾಲಯ ಆದೇಶಿಸಿತು. ಅರ್ಜಿದಾರ ಕೇಳಿದ ಮಾಹಿತಿಯನ್ನು, ಮಾಹಿತಿ ಸಲ್ಲಿಸಿದ ವ್ಯಕ್ತಿಯ ತಕರಾರು ಕೇಳದೆ ನೀಡತಕ್ಕದ್ದಲ್ಲ. ರಾಜ್ಯ ಮಾಹಿತಿ ಆಯೋಗ ಮಾಡಿದ ಆದೇಶ ತಪ್ಪು ಎಂದು ತೀರ್ಮಾನಿಸಿತು. AIR 2008 Guj 37

6. ರಾಜ್ಯ ಮಾಹಿತಿ ಆಯೋಗ ನೋಟೀಸ್ ನೀಡಲಾರದೆ ಮಾಡಿದ ಆದೇಶ ಕಾನೂನಿನ ಉಲ್ಲಂಘನೆ. ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ರಾಜ್ಯ ಮಾಹಿತಿ ಆಯೋಗ ನೋಟೀಸ್ ನೀಡದೆ ಇದ್ದುದರಿಂದ ತಪ್ಪು ಎಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. W.P (MD)4425/2009 and W.P (MD) 4002/2009 -28-09-2009

7. ದೆಹಲಿ ಉಚ್ಚನ್ಯಾಯಾಲಯ ಕೇಂದ್ರ ಮಾಹಿತಿ ಆಯೋಗ ನೋಟೀಸ್ ನೀಡಲಾರದೆ, ಕಲಂ.8(1) ರ ವಿನಾಯ್ತಿಯಲ್ಲಿ ಬರುವುದಿಲ್ಲವೆಂದು ನೀಡಿದ ಆದೇಶವನ್ನು ಕಿತ್ತುಹಾಕಿ. ಕೇಂದ್ರ ಮಾಹಿತಿ ಆಯೋಗ ಕಲಂ.11 ಮತ್ತು 19(4) ನ್ನು ಕೇಂದ್ರ ಸರ್ಕಾರದ ಇಲಾಖೆಗೆ ಸಂಬಂಧಪಟ್ಟ ಮಾಹಿತಿ ನೀಡಲು

ಆದೇಶಿಸುವುದು ಸರಿಯಲ್ಲ. ನೋಟೀಸ್ ನೀಡಿದ ನಂತರವೇ ಆದೇಶಿಸಬೇಕಾಗಿತ್ತು. ಇದರ ಜೊತೆಗೆ ಕಲಂ.24(1) ರನ್ವಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಭದ್ರತೆ ದೃಷ್ಟಿಯಿಂದ ಮತ್ತು ಸೂಕ್ಷ್ಮ ಮಾಹಿತಿ ಎಂದು ಎರಡನೇ ಪಟ್ಟಿಯಲ್ಲಿ ಬರುತ್ತಿರುವುದನ್ನು ಗಮನಿಸದೆ ಆದೇಶಿಸಿರುವುದು ತಪ್ಪು. ನೋಟೀಸ್ ನೀಡಬೇಕು. 2010 (1) ID 593/ AIR 2010 Deh 132

8. ಒಬ್ಬ ವ್ಯಕ್ತಿಯನ್ನು ನೇಮಕ ಮಾಡುವಾಗ ಅವನ ನೇಮಕಾತಿ ಆದೇಶ ಮತ್ತು ವಿದ್ಯಾರ್ಹತೆ ಮಾಹಿತಿ ನೀಡಲು ಯಾವುದೇ ತಕರಾರು ಇರಬಾರದು. ಏಕೆಂದರೆ ಈ ಮಾಹಿತಿ ಸಾರ್ವಜನಿಕವಾಗಿ ಲಭ್ಯ. ಒಬ್ಬ ವ್ಯಕ್ತಿಯನ್ನು ಒಂದು ಹುದ್ದೆಗೆ ನೇಮಕ ಮಾಡುವಾಗ ನಿಗದಿ ಪಡಿಸಿದ ವಿದ್ಯಾರ್ಹತೆ ಮತ್ತಿತರ ವಿವರ ಖಾಸಗಿ ಮಾಹಿತಿಯಾಗುವುದಿಲ್ಲ. ವಿದ್ಯಾರ್ಹತೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಾಗ, ಅವನು ಗಳಿಸಿದ ವಿದ್ಯಾರ್ಹತೆ, ಸಾರ್ವಜನಿಕ ಮಾಹಿತಿಯಾಗುತ್ತದೆ. ಅದು ಕಲಂ.8(1) ರ ವಿನಾಯ್ತಿಯಲ್ಲಿ ಬರುವುದಿಲ್ಲವೆಂದು ಅಲಹಬಾದ್ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಸಿತು. 2009 (1) ID 208

9. ನೇಮಕಾತಿ ಸಮಯದಲ್ಲಿ, ವರ್ಗೀಕರಣ, ಗುಪ್ತ ವಿಚಾರಣೆ, ವಾರ್ಷಿಕ ಗುಪ್ತ ಮಾಹಿತಿ ನೀಡುವಾಗ ಕಲಂ.11 ರಲ್ಲಿ ನಿಗದಿ ಪಡಿಸಿದಂತೆ ನೋಟೀಸ್ ಜಾರಿ ಮಾಡಿ, ಮಾಹಿತಿ ನೀಡಬೇಕು. ಕಲಂ.11 ನ್ನು ಪಾಲಿಸದೆ ಇರುವುದನ್ನು ಸಮರ್ಥಿಸಲಾಗದು ಎಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. AIR 2012 Delhi 29 / 2011 (2) ID 499

ಈ ಮೇಲ್ಕಂಡ ತೀರ್ಮಾನವನ್ನು ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಸಮರ್ಥಿಸಿ ಆದೇಶಿಸಿತು. 2011 (2) ID 499/ AIR 2012 Delhi 29

10. ಮೂರನೆ ವ್ಯಕ್ತಿ ಇಲಾಖಾ ವಿಚಾರಣೆ ಬಗ್ಗೆ ಮಾಹಿತಿ ನೀಡಬೇಕಾದರೆ ಸಂಬಂಧಪಟ್ಟ ವ್ಯಕ್ತಿಗೆ ಅವಕಾಶ ನೀಡಲಾಗದೆ ಆದೇಶಿಸಲಾಗದು. ಸಂಬಂಧಪಟ್ಟ ವ್ಯಕ್ತಿಗೆ ಕಲಂ.19(1ಬಿ) ರನ್ವಯ ಅವಕಾಶ ನೀಡಿ ವಿವರಣೆ ಪಡೆದು, ಆ ನಂತರ ತೀರ್ಮಾನ ತೆಗೆದುಕೊಳ್ಳಬೇಕೆಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. 2011-2-LW-63/2011 (1) ID 284

11. ಒಂದು ಸಹಕಾರ ಬ್ಯಾಂಕ್‌ನ್ನು ರಿಜರ್ವ್ ಬ್ಯಾಂಕ್ ತಪಾಸಣೆ ಮಾಡಿದ್ದು. ಅದರ ಮಾಹಿತಿಯನ್ನು ನೀಡಲು ಆಯೋಗ, ಅವಕಾಶ ನೀಡದೆ ಆದೇಶಿಸಲಾಗದು. ಸಾರ್ವಜನಿಕ ಮಾಹಿತಿ ಅಧಿಕಾರಿ ಕಲಂ.11 ನ್ನು ಪಾಲಿಸದೇ ಇದ್ದು, ಕಾನೂನು ಪಾಲಿಸಿಲ್ಲವೆಂದು ಬಾಂಬೆ ಉಚ್ಚನ್ಯಾಯಾಲಯ ಆದೇಶ ನೀಡಿತು. AIR 2012 Bom 1

12. ದೆಹಲಿ ಉಚ್ಚನ್ಯಾಯಾಲಯದ ಮುಂದೆ AIR 2012 Delhi29/2011 (2) ID 499 ಅಂತರಿಕ ನ್ಯಾಯಾಲಯದ ಮೇಲ್ಮನವಿ ಪರಿಶೀಲಿಸುವಾಗ, ಏಕ ಸದಸ್ಯ ಪೀಠ 2010 (2) ID 485/AIR 2010 Delhi 216 ನಲ್ಲಿ "ಮೂರನೇ ವ್ಯಕ್ತಿ ಒದಗಿಸಿದ ಮಾಹಿತಿ ಗುಪ್ತ ಎಂದು ಕಲಂ.11(1) ರಡಿ" ಎಂದಿರುವುದು ಮೂರನೇ ವ್ಯಕ್ತಿ ಒದಗಿಸಿದ ಮಾಹಿತಿ, ಆ ಮೂರನೇ ವ್ಯಕ್ತಿ ಗುಪ್ತವೆಂದು ತೀರ್ಮಾನಿಸಿದಾಗ" ಎಂದು ಅರ್ಥೈಸಬೇಕು ಎಂದು. ಆದರೆ ನ್ಯಾಯಾಲಯ ಕಲಂ.8 ರಲ್ಲಿ ವಿನಾಯ್ತಿ ಪಡೆದ ಮಾಹಿತಿಯನ್ನು ಕಲಂ.11(1) ರಡಿ ಸರಿದೂಗಿಸಬೇಕು. ಖಾಸಗೀತನ ಅಥವಾ ಗುಪ್ತತೆಯನ್ನು

ಅಂತಹ ಮಾಹಿತಿ ಸಾರ್ವಜನಿಕವಾಗಿ ಪ್ರದರ್ಶಿಸಲಾಗಿದೆಯೇ ಅಥವಾ ಈಗಾಗಲೇ ಆ ಮಾಹಿತಿ ಪ್ರಕಟವಾಗಿದೆಯೇ ಎಂಬುದರ ಆಧಾರದ ಮೇಲೆ ನಿರ್ಧರಿಸಬೇಕು. ಇದಕ್ಕೆ ಪೂರಕವಾಗಿ ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಮೂರನೇ ವ್ಯಕ್ತಿಯ ವೈದ್ಯಕೀಯ ವರದಿ ಮತ್ತು ಔಷದಗಳ ಬಗ್ಗೆ ಮಾಹಿತಿ ಕೇಳಿದರೆ ಅದನ್ನು ನೀಡಲಾಗದು ಆದ್ದರಿಂದ ಕಲಂ.11(1) ರಲ್ಲಿ ಮಾಹಿತಿ ನೀಡಲಾಗದು. ಕಲಂ.11(1) ರಲ್ಲಿ ಮೂರನೇ ವ್ಯಕ್ತಿ ಸಲ್ಲಿಸಿದ ಮಾಹಿತಿ ಗುಪ್ತ ಮಾಹಿತಿ ಎಂದು ಮತ್ತು ಆ ಮಾಹಿತಿ ನೀಡಿದ ವ್ಯಕ್ತಿ ಅಂತಹ ಮಾಹಿತಿ ಗುಪ್ತ ಮಾಹಿತಿ ಎಂದು ತಿಳಿಸಿದ್ದರೆ. 2011 (2) ID 499/AIR 2012 Delhi 29/2010 (2) ID 485/AIR 2010 Delhi 216

13. ಟೆಂಡರ್ ಅನ್ನು ರದ್ದುಗೊಳಿಸಿದ್ದರೆ, ಅಂತಹ ಮಾಹಿತಿಯನ್ನು ನೀಡಲು ಅವಕಾಶ ನೀಡಿದ್ದರೆ ಒದಗಿಸಬೇಕು. ಬಿಎಸ್ಎನ್ಎಲ್ ಒಂದು ಟೆಂಡರ್ ಕರೆದಾಗ ಭಾಗವಹಿಸಿದ್ದ ಒಂದು ಕಂಪನಿ, ಈ ಟೆಂಡರ್‌ನ ವಿಮರ್ಷೆ ಮಾಡಿದ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಕೇಳಿದಾಗ, ಸಾರ್ವಜನಿಕ ಮಾಹಿತಿ ಅಧಿಕಾರಿ ಅದನ್ನು ನಿರಾಕರಿಸುತ್ತಾನೆ. ಅದರ ಮೇಲೆ ಕೇಂದ್ರ ಮಾಹಿತಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಅದನ್ನು ದೃಡೀಕರಿಸುತ್ತಾನೆ. ಅದನ್ನು ಏಕ ಸದಸ್ಯ ಪೀಠ ಮಾಹಿತಿ ಆಯೋಗದ ಆದೇಶವನ್ನು ದೃಡೀಕರಿಸುತ್ತದೆ. ಅದನ್ನು ವಿಭಾಗೀಯ ಪೀಠದ ಮುಂದೆ ಮನವಿ ಮಾಡಿದಾಗ ದೆಹಲಿ ಉಚ್ಚನ್ಯಾಯಾಲಯ ಗುಪ್ತ ಟೆಂಡರ್ ಮಾಹಿತಿಯನ್ನು ಭದ್ರಪಡಿಸಿದಾಗ ಅದು ಅವಶ್ಯಕ. ಆದರೆ ಟೆಂಡರ್ ರದ್ದು ಪಡಿಸಿದ ನಂತರ, ಟೆಂಡರ್ ಪ್ರಕ್ರಿಯೆ ನಿಷ್ಕ್ರಯ. ಆದ್ದರಿಂದ ಕೇಂದ್ರ ಮಾಹಿತಿ ಆಯೋಗ ಪುನಃ ಮರು ಪರಿಶೀಲಿಸಲು, ಪ್ರಕರಣವನ್ನು ಭಾಗಶಃ ಪುರಸ್ಕರಿಸಿ ವರ್ಗಾಯಿಸಿತು. 2012 (1) ID 257

14. ಕೇಂದ್ರ ಮಾಹಿತಿ ಆಯೋಗ, ಕಾರಣ ದಾಖಲಿಸದೆ ಆದೇಶ ಮಾಡಿರುವುದು ಕಾನೂನು ಬಾಹಿರವೆಂದು ಮತ್ತು ಅದು ಕಲಂ.11(1) ಕ್ಕೆ ವಿರುದ್ಧವೆಂದು ದೆಹಲಿ ಉಚ್ಚನ್ಯಾಯಾಲಯ ಕಿತ್ತುಹಾಕಿತು. ಕೇಂದ್ರ ಮಾಹಿತಿ ಆಯೋಗ ಆದೇಶ ಮಾಡುವಾಗ, ಚರ್ಚಿಸದೆ, ಕಾರಣ ನೀಡದೆ, ಮಾಹಿತಿ ಅಧಿಕಾರಿ ಕಲಂ.8(1) ರಡಿ ವಿಮರ್ಷಿಸದೆ ಮಾಹಿತಿ ಆಯೋಗ ಮಾಹಿತಿ ನೀಡಲು ಆದೇಶಿಸಿರುವುದು ಕಲಂ.4 ಕ್ಕೆ ಪೂರಕವಲ್ಲ. ಮರು ಪರಿಶೀಲನೆಗೆ ಮಾಹಿತಿ ಆಯೋಗಕ್ಕೆ ವರ್ಗಾಯಿಸಿತು. W.P 459/2012 ದಿನಾಂಕ 08-05-5012

## <u>ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗ</u>

1. **<u>ಕೇಂದ್ರ ಮಾಹಿತಿ ಆಯೋಗ</u> :**

ಮಾಹಿತಿ ಕಾಯ್ದೆ ಜಾರಿಗೆ, ನಿಯಂತ್ರಣಕ್ಕೆ ಕೇಂದ್ರ ಸರ್ಕಾರ, ಕೇಂದ್ರ ಮಾಹಿತಿ ಆಯೋಗವನ್ನು ರಚಿಸುತ್ತದೆ. ಈ ಆಯೋಗದಲ್ಲಿ ಒಬ್ಬ ಮುಖ್ಯ ಆಯುಕ್ತರು ಮತ್ತು ಹತ್ತು ಜನರಿಗೆ ಮೀರದಂತೆ, ಮಾಹಿತಿ ಆಯುಕ್ತರನ್ನು ಕೇಂದ್ರ ಸರ್ಕಾರ ನೇಮಿಸಬಹುದಾಗಿದೆ. ಈ ಆಯುಕ್ತರನ್ನು ನೇಮಕ ಮಾಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಅಂತಹ ವ್ಯಕ್ತಿಗಳು ಕಾನೂನು, ವಿಜ್ಞಾನ, ತಂತ್ರಜ್ಞಾನ, ಸಮಾಜ ಸೇವೆ, ಆಡಳಿತ ಮತ್ತಿತ್ತರ ವಿಷಯದಲ್ಲಿ ಪರಿಣಿತ ಯೊಂದಿದ್ದ ವ್ಯಕ್ತಿಗಳನ್ನು ಆಯ್ಕೆಮಾಡತಕ್ಕದ್ದು. ರಾಜಕೀಯ ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದಲ್ಲ ಮತ್ತು ಯಾವುದೇ ರಾಜಕೀಯ ಪಕ್ಷದ ಜೊತೆ ಸಂಪರ್ಕಯೊಂದಿರುವ ವ್ಯಕ್ತಿಯನ್ನು ನೇಮಿಸತಕ್ಕದ್ದಲ್ಲ. ಕೇಂದ್ರ ಮಾಹಿತಿ ಆಯೋಗದ ಕಛೇರಿಯು ದೆಹಲಿಯಲ್ಲಿರತಕ್ಕದ್ದು ಮತ್ತು ಅವಶ್ಯ ಬಿದ್ದರೆ ಕೇಂದ್ರ ಸರ್ಕಾರದ ಒಪ್ಪಿಗೆ

ಪಡೆದು, ಬೇರೆ ಸ್ಥಳಗಳಲ್ಲಿಯು ಕಛೇರಿ ತೆರೆಯಬಹುದು.

ಆಯುಕ್ತರನ್ನು ನೇಮಕ ಮಾಡುವ ಸಂದರ್ಭದಲ್ಲಿ ಸೇವೆಯಲ್ಲಿರುವ ಅಥವಾ ನಿವೃತ್ತಿ ಹೊಂದಿದ್ದ ನ್ಯಾಯಾದೀಶರು, ಸಂಶೋಧಕರು, ಸೇನೆಯಲ್ಲಿನ ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು ಮತ್ತು ಸರ್ಕಾರಿ ಸೇವೆಯಲ್ಲಿಲ್ಲದ ವ್ಯಕ್ತಿಗಳನ್ನು ನೇಮಕ ಮಾಡಬಹುದು. ಆಯೋಗದ ಕಾರ್ಯ ನಿರ್ವಹಣೆಯಲ್ಲಿ ಸ್ವಾಯತ್ತತೆ ನೀಡಲಾಗಿದ್ದು, ಆಯೋಗದ ಕೆಲಸವನ್ನು ನಿರ್ವಹಣೆ ಮಾಡುವ ಸಂದರ್ಭದಲ್ಲಿ ಮುಖ್ಯ ಮಾಹಿತಿ ಆಯುಕ್ತರ ನಿಯಂತ್ರಣ ಮತ್ತು ನಿರ್ದೇಶನದಡಿ ಕಾರ್ಯನಿರ್ವಯಿಸತಕ್ಕದ್ದು. ಇದರ ಜೊತೆಗೆ ಮುಖ್ಯ ಮಾಹಿತಿ ಆಯುಕ್ತರು ಆಯೋಗದ ಪರವಾಗಿ ಎಲ್ಲಾ ಅಧಿಕಾರಗಳನ್ನು ಚಲಾಹಿಸಲು, ಆಯೋಗದ ಆದೇಶಗಳನ್ನು ಮತ್ತು ನಿರ್ದೇಶನಗಳನ್ನು ಜಾರಿ ಮಾಡುವ ಅಧಿಕಾರ ಹೊಂದಿರತಕ್ಕದ್ದು.

ಮುಖ್ಯ ಮಾಹಿತಿ ಆಯುಕ್ತರು 5 ವರ್ಷದ ಅವಧಿಗೆ ಕೆಲಸ ನಿರ್ವಹಿಸುವರು ಮತ್ತು ಮರು ನೇಮಕಾತಿಗೆ ಅವಕಾಶ ಇರುವುದಿಲ್ಲ. ಆದರೆ ಯಾವುದೇ ಕಾರಣಕ್ಕೂ ಆಯುಕ್ತರ ವಯಸ್ಸು 65ಕ್ಕೆ ಮೀರತಕ್ಕದ್ದಲ್ಲ. ಆದರೆ ಆಯುಕ್ತರಾಗಿ ನೇಮಕಗೊಂಡ ವ್ಯಕ್ತಿ ಮುಖ್ಯ ಮಾಹಿತಿ ಆಯುಕ್ತರಾಗಿ ನೇಮಕವಾಗಲು ಅವಕಾಶ ಇರತಕ್ಕದ್ದು. ಆ ರೀತಿ ನೇಮಕವಾದ ಮುಖ್ಯ ಆಯುಕ್ತರ ಅವಧಿಯು ಅವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಮತ್ತೆ 5 ವರ್ಷಗಳಿರತಕ್ಕದ್ದು.

ಮುಖ್ಯ ಆಯುಕ್ತರನ್ನು ಮತ್ತು ಆಯುಕ್ತರನ್ನು ತೆಗೆದುಹಾಕುವ ಅಧಿಕಾರ ರಾಷ್ಟ್ರಪತಿಯವರಿಗೆ ಇರತಕ್ಕದ್ದು. ಆದರೆ ಈ ರೀತಿ ತೆಗೆದುಹಾಕುವಾಗ ಅಂತಹ ವ್ಯಕ್ತಿ ದೃಡೀಕರಿಸಲ್ಪಟ್ಟ ಶಿಸ್ತು ಕ್ರಮಕ್ಕೆ ಒಳಪಡುವಂತಿರಬೇಕು. ಇದರ ಜೊತೆಗೆ ರಾಷ್ಟ್ರಪತಿಗಳು ಮುಖ್ಯ ಮಾಹಿತಿ ಆಯುಕ್ತರು ಅಥವಾ ಮಾಹಿತಿ ಆಯುಕ್ತರನ್ನು ಅಮಾನತ್ತಿನಲ್ಲಿಡಬಹುದು ಹಾಗೂ ಅವರನ್ನು ಕಾರ್ಯನಿರ್ವಹಿಸದಂತೆ ನಿರ್ಭಂದಿಸಬಹುದು ಮತ್ತು ಭಾರತದ ಶ್ರೇಷ್ಠ ನ್ಯಾಯಾಲಯದ ಆದೇಶ ಬರುವ ತನಕ ರಾಷ್ಟ್ರಪತಿ ಆದೇಶ ಜಾರಿಯಲ್ಲಿರತಕ್ಕದ್ದು.

2. <u>**ರಾಜ್ಯ ಮಾಹಿತಿ ಆಯೋಗ**</u> :

ರಾಜ್ಯ ಸರ್ಕಾರಗಳು ರಾಜ್ಯ ಮಾಹಿತ ಆಯೋಗವನ್ನು ರಚಿಸುವ ಅಧಿಕಾರ ಹೊಂದಿದೆ. ಇದರ ಜೊತೆಗೆ ದೆಹಲಿ ಮತ್ತಿತ್ತರ ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಜ್ಯ ಮಾಹಿತಿ ಆಯೋಗ ರಚಿಸಲು ಅವಕಾಶ ಇರತಕ್ಕದ್ದಲ್ಲ. ಇಂತಹ ರಾಜ್ಯಗಳಲ್ಲಿ ಕೇಂದ್ರ ಮಾಹಿತಿ ಆಯೋಗದ ನಿಯಂತ್ರಣಕ್ಕೆ ಬರುತ್ತವೆ. ರಾಜ್ಯ ಮಾಹಿತಿ ಆಯೋಗದಲ್ಲಿ ಒಬ್ಬ ಮುಖ್ಯ ಮಾಹಿತಿ ಆಯುಕ್ತರು ಮತ್ತು ಹತ್ತು ಜನರಿಗೆ ಮೀರದಂತೆ ರಾಜ್ಯ ಆಯುಕ್ತರಂದು ನೇಮಕ ಮಾಡತಕ್ಕದ್ದು. ಈ ಆಯ್ಕೆ ಮಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ವಿರೋದ ಪಕ್ಷದ ನಾಯಕರು ಅಥವಾ ವಿರೋದ ಪಕ್ಷದ ಮುಖ್ಯಸ್ಥ ಮತ್ತು ಒಬ್ಬ ಸಂಪುಟ ದರ್ಜೆಯ ಮಂತ್ರಿಯನ್ನು ಮುಖ್ಯಮಂತ್ರಿಗಳು ಸೂಚಿಸಿದಂತೆ, ಒಂದು ಸಮಿತಿಯಲ್ಲಿ ಒಪ್ಪಿಗೆ ನೀಡಿದ ನಂತರ ಮುಖ್ಯ ರಾಜ್ಯ ಆಯುಕ್ತರು ಮತ್ತೆ ರಾಜ್ಯ ಆಯುಕ್ತರನ್ನು ರಾಜ್ಯಪಾಲರು ನೇಮಕ ಮಾಡತಕ್ಕದ್ದು. ಆಯೋಗದ ಸ್ವಾಯತ್ತತೆ ಮತ್ತು ಆಯುಕ್ತರ ವಿದ್ಯಾರ್ಹತೆ, ಅವಧಿ ಮತ್ತಿತ್ತರ ವಿಷಯಗಳ ಬಗ್ಗೆ ಕೇಂದ್ರ ಮಾಹಿತಿ ಆಯೋಗದ ರಚನೆಯಲ್ಲಿ ರೂಪಿಸಿದ ನೀತಿ ನಿಯಮಗಳೆ ಅನ್ವಯವಾಗತಕ್ಕದ್ದು. ರಾಜ್ಯ ಆಯೋಗದ ಸದಸ್ಯರನ್ನು ತೆಗೆದು ಹಾಕಲು ಅಥವಾ ಅಮಾನತ್ತಿನಲ್ಲಿಡಲು ರಾಜ್ಯದ ರಾಜ್ಯಪಾಲರಿಗೆ ಅಧಿಕಾರ ಇರತಕ್ಕದ್ದು.

## ಆಯೋಗದ ಅಧಿಕಾರಗಳು ಮತ್ತು ಅಧಿಕಾರದ ವ್ಯಾಪ್ತಿ ಬಗ್ಗೆ ನ್ಯಾಯಾಲಯಗಳು ನೀಡಿದ ತೀರ್ಪುಗಳ ಸಾರಾಂಶ

1. ಕಾಯ್ದೆ ಕಲಂ.12(6) ಮತ್ತು ಕಲಂ.15(6) ಸಂವಿದಾನಕ್ಕೆ ಪೂರಕವಾಗಿದ್ದು ಅದು ಅಸಂವಿಧಾನಿಕವಲ್ಲ ಎಂದು ಮಧ್ಯಪ್ರದೇಶದ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. ಕೇಂದ್ರ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರನ್ನು ನೇಮಕ ಮಾಡುವಾಗ ಸಾರ್ವಜನಿಕ ಜೀವನದಲ್ಲಿ ಹೆಸರು ಗಳಿಸಿರುವ ಮತ್ತು ಅನುಭವವಿರುವ ವ್ಯಕ್ತಿಗಳನ್ನು ನೇಮಕ ಮಾಡಬಹುದು. ಉಪ ಕಲಂ.12(6) ರಲ್ಲಿ ಸಂಸತ್ತಿನ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಳದ ಸದಸ್ಯರು ಲಾಭಧಾಯಕ ಹುದ್ದೆಗಳನ್ನು ಅಲಂಕರಿಸಿರುವುದರಿಂದ ಅವರು ಆಯುಕ್ತರಾಗಿ ಅವಕಾಶ ನೇಮಕ ಮಾಡಲಾಗದು. ಮಾಹಿತಿ ಕಾಯ್ದೆಯಲ್ಲಿ ಕೊಡಬಹುದಾದ ಮಾಹಿತಿ ಸೂಕ್ಷ್ಮತೆಯಿಂದ ಕುಡಿದ್ದು ಅಂತಹ ಮಾಹಿತಿಯ ಬಗ್ಗೆ ತೀರ್ಮಾನಿಸಲು ಪರಿಣಿತರನ್ನು ನೇಮಿಸಲು 12(6) ಮತ್ತು 15(6) ರಲ್ಲಿ ಅವಕಾಶ ಕಲ್ಪಿಸಿದ್ದು ಇಂತಹ ಅವಕಾಶಗಳು, ಅಂದರೆ ರಾಜಕೀಯ ಸಂಬಂಧವಿಲ್ಲದ ವ್ಯಕ್ತಿಗಳನ್ನು ನೇಮಕ ಮಾಡಲು ಸರಿಯಾದ ಕ್ರಮ ಮತ್ತು ಅದು ಅಸಂವಿಧಾನಿಕವಲ್ಲ. AIR 2007 MP 26/2008 (1) ID 175
2. ರಾಜ್ಯ ಮಾಹಿತಿ ಆಯೋಗವು ಬಹು ಸಂಖ್ಯೆಯ ಆಯೋಗವಾಗಿರತಕ್ಕದ್ದು. ಹಿಮಾಚಲ ಪ್ರದೇಶದ ಉಚ್ಚನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಲಾದ ಅಂಶವೆಂದರೆ, ರಾಜ್ಯ ಚುನಾವಣ ಆಯೋಗದಲ್ಲಿ ಏಕ ಸದಸ್ಯ ಪೀಠ ಇರಬಹುದೇ ಅಥವಾ ಬಹು ಸಂಖ್ಯೆಯ ಸದಸ್ಯರಿರಬೇಕೇ ಎಂಬುದು. ಇದನ್ನು ಪರಿಶೀಲಿಸುವಾಗ ನ್ಯಾಯಾಲಯವು ಮುಖ್ಯ ರಾಜ್ಯ ಮಾಹಿತಿ ಆಯುಕ್ತರ ಜೊತೆ ಕನಿಷ್ಠ ಒಬ್ಬ ಮಾಹಿತಿ ಆಯುಕ್ತರು ಇರಬೇಕು ಎಂದು ತೀರ್ಪಿತ್ತಿತು. ಮಾಹಿತಿ ಆಯೋಗವು ಒಂದು ಮೇಲ್ಮನವಿ ಪ್ರಾಧಿಕರಣದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು ಪಕ್ಷಗಳು ಮಂಡಿಸಿದ ವಾದವಿವಾದಗಳನ್ನು ಕೇಳಿ ನ್ಯಾಯಿಕ ಮತ್ತು ಅರೆ ನ್ಯಾಯಿಕ ಅಧಿಕಾರವನ್ನು ಹೊಂದಿದ್ದು, ಇದು ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳಿಗೆ ನೀಡಲಾಗಿರುವ ಅನುಚ್ಛೇದ 227ರ ಅಧಿಕಾರಕ್ಕೆ ಸಮಾನವಾಗಿರುತ್ತದೆ. AIR 2007 HP 63/2008 (1) ID 1
3. ಉತ್ತರಖಂಡ್ ಉಚ್ಚನ್ಯಾಯಾಲಯದ ಮುಂದೆ ಪ್ರಶ್ನಿಸಲಾದ ವಿಷಯ, ರಾಜ್ಯ ಮಾಹಿತಿ ಆಯೋಗವು ಬಹು ಸಂಖ್ಯೆ ಇರಬೇಕೆ ಎಂಬುದರ ಬಗ್ಗೆ. ಇದಕ್ಕೆ ಉತ್ತರಖಂಡ್ ಉಚ್ಚನ್ಯಾಯಾಲಯ ಮಾಹಿತಿ ಕಾಯ್ದೆ ಕಲಂ.15(2) ಅನ್ವಯ ಒಂದಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರಬೇಕು ಮತ್ತು ಕಲಂ.15(2)(ಎ)(ಬಿ) ಅನ್ವಯ ಒಂದು ಮುಖ್ಯ ಮಾಹಿತಿ ಆಯುಕ್ತರ ಜೊತೆಗೆ ಕನಿಷ್ಠ ಒಂದು ರಾಜ್ಯ ಮಾಹಿತಿ ಆಯುಕ್ತರು ಇರಬೇಕೆಂಬುದನ್ನು ಉಲ್ಲೇಖಿಸಿ, ಮಾಹಿತಿ ಆಯೋಗವು ಏಕ ಸದಸ್ಯ ಪೀಠವಾಗಿರತಕ್ಕದ್ದಲ್ಲ ಎಂಬು ತೀರ್ಪಿತಿತು AIR 2010 Uttarakhand 114/2011 (1) ID 225
4. ಬಾಂಬೆ ಉಚ್ಚನ್ಯಾಯಾಲಯದ ಮುಂದೆ ಮಂಡಿಸಲಾದ ವಾದ ಎಂದರೆ, ರಾಜ್ಯ ಮಾಹಿತಿ ಆಯೋಗದ ಒಬ್ಬ ಸದಸ್ಯನೆ ನೇಮಕವಾಗಬಹುದೆ ಎಂದು. ಎಂದರೆ ಆಯೋಗದಲ್ಲಿ ಬಹು ಸಂಖ್ಯೆಯ ಸದಸ್ಯರು ಹುದ್ದೆಗಳು ಖಾಲಿಯಾದಾಗ ಒಬ್ಬ ಸದಸ್ಯನೆ ಉಳಿದಿದ್ದು ಅದು ಕಾರ್ಯನಿರ್ವಹಿಸಬಹುದೇ? ಕಾಯ್ದೆ ಕಲಂ.15(2)(ಎ) ಮತ್ತು (ಬಿ) ರಡಿಯಲ್ಲಿ ವಿಮರ್ಷಿಸುವಾಗ ರಾಜ್ಯ ಮಾಹಿತಿ ಆಯೋಗವು ಕನಿಷ್ಠ ಇಬ್ಬರು ಸದಸ್ಯರನ್ನು ನೇಮಿಸಿರಬೇಕು. ಕಾಯ್ದೆಯಲ್ಲಿ ಮುಖ್ಯ

ರಾಜ್ಯ ಮಾಹಿತಿ ಆಯುಕ್ತರ ಜೊತೆ ಗರಿಷ್ಠ ಹತ್ತು ಆಯುಕ್ತರನ್ನು ನೇಮಿಸಲು ನಿಗದಿ ಪಡಿಸಿದ್ದರೂ, ಅದರ ಅರ್ಥ ಒಬ್ಬ ಆಯುಕ್ತರನ್ನೆ ನೇಮಿಸಬಹುದೆಂದು ಅರ್ಥೈಸತಕ್ಕದ್ದಲ್ಲ ಎಂದು ಬಾಂಬೆ ಉಚ್ಚನ್ಯಾಯಾಲಯ ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ ಹಿಮಾಚಲ್‌ಪ್ರದೇಶ್ ಉಚ್ಚನ್ಯಾಯಾಲಯದ AIR 2007 HP 63/2008 (1) ID 1 ಮತ್ತು ಕಲ್ಕತಾ ಉಚ್ಚನ್ಯಾಯಾಲಯದ 2011 (2) ID 325 ನ್ನು ಉಲ್ಲೇಖಿಸಿವೆ. 2012 (1) ID 22/ AIR 2012 Bom 71.

5. ಮಾಹಿತಿ ಆಯೋಗದ ಆದೇಶಗಳು ಉಚ್ಚನ್ಯಾಯಾಲಯದ ಮುಂದೆ ಪ್ರಶ್ನಿಸಬಹುದಾಗಿದೆ ಎಂದು ಕರ್ನಾಟಕ ಉಚ್ಚನ್ಯಾಯಾಲಯ ಪೂರ್ಣಪ್ರಜ್ಞಾ ಗೃಹ ನಿರ್ಮಾಣ ಸಹಕಾರಿ ಸಂಘದ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಆಯೋಗವನ್ನು ಸಿವಿಲ್ ನ್ಯಾಯಾಲಯದ ಜೊತೆ ಹೋಲಿಕೆ ಮಾಡತಕ್ಕದ್ದಲ್ಲ. ಆಯೋಗವು ನೇರವಾಗಿ ಉಚ್ಚನ್ಯಾಯಾಲಯದ ಕೆಳ ನ್ಯಾಯಾಲಯವಲ್ಲ ಅಥವಾ ಆಯೋಗವು ಮಾಡಿದ ಆದೇಶಗಳಿಗೆ ಮೇಲ್ಮನವಿ ಅಥವಾ ಪುನರ್‌ವಿಮರ್ಷನ ಪ್ರಾಧಿಕಾರವಲ್ಲ. ಮಾಹಿತಿ ಆಯೋಗವು ಉಚ್ಚನ್ಯಾಯಾಲಯದ ಆಡಳಿತ ನಿಯಂತ್ರಣಕ್ಕೆ ಒಳಪಡುವುದಿಲ್ಲ. ಮಾಹಿತಿ ಆಯೋಗದ ಆದೇಶವನ್ನ ಪ್ರಶ್ನಿಸುವಾಗ ಆಯೋಗವನ್ನು ಕಕ್ಷಿದಾರನಾಗಿ ಮಾಡಬೇಕು. ಏಕೆಂದರೆ ಆಯೋಗವನ್ನು ಕಕ್ಷಿದಾರರನ್ನಾಗಿ ಮಾಡದಿದ್ದರೆ ಉಚ್ಚನ್ಯಾಯಾಲಯ ಮಾಡಿದ ಆದೇಶವನ್ನು ಜಾರಿ ಮಾಡಲು ಸಾಧ್ಯವಾಗುವುದಿಲ್ಲ. AIR 2007 KAR 136/2008 (1) ID 300

6. ಕರ್ನಾಟಕ ಮಾಹಿತಿ ನಿಯಮ 2005ರ, ನಿಯಮ 9 ರನ್ವಯ ಮೇಲ್ಮನವಿಯನ್ನು ತೀರ್ಮಾನಿಸುವಾಗ ರಾಜ್ಯ ಮಾಹಿತಿ ಆಯೋಗವು ಮೌಖಿಕ ಮತ್ತು ಲಿಖಿತ ದಾಖಲೆಗಳನ್ನು ಪ್ರಮಾಣೀಕರಿಸಿ ಅಥವಾ ಅಫಿಡವಿಟ್ ಪಡೆಯಲು ತೀರ್ಮಾನಿಸಬೇಕು. ಈ ಪ್ರಕರಣದಲ್ಲಿ ಕಕ್ಷಿದಾರರಿಗೆ ಅವಕಾಶವನ್ನು ಕಲ್ಪಿಸಿದ ಬಗ್ಗೆ ಅಥವಾ ಸಂಬಂಧಪಟ್ಟ ಸಾಕ್ಷಿದಾರರಿಗೆ ಲಿಖಿತ ಅಥವಾ ಮೌಖಿಕ ಅವಕಾಶ ಕಲ್ಪಿಸಿದ ಬಗ್ಗೆ ದಾಖಲಿಸಿಲ್ಲ ಇದು ನಿಯಮಕ್ಕೆ ವಿರುದ್ಧ ಎಂದು ಕರ್ನಾಟಕ ಉಚ್ಚನ್ಯಾಯಾಲಯ ತೀರ್ಮಾನಿಸಿ ಪ್ರಕರಣವನ್ನು ಆಯೋಗದ ಪುನರ್ ಪರಿಶೀಲನೆಗಾಗಿ ಕಳುಹಿಸಿತು. 2008 (2) ID 399

7. ಗುಜರಾತ್ ಉಚ್ಚನ್ಯಾಯಾಲಯದ ಮುಂದೆ ಪ್ರಶ್ನಿಸಲಾದ ವಿಷಯವೆಂದರೆ, ಮುಖ್ಯ ಮಾಹಿತಿ ಆಯುಕ್ತರು ದಾಖಲೆಗಳ ಮೇಲೆ ತೆಗೆದುಕೊಂಡ ತೀರ್ಮಾನದ ನಂತರ, ವರ್ಗಾವಣೆ ಆದೇಶವನ್ನು ರದ್ದು ಪಡಿಸಬೇಕೆ ಅಥವಾ ಬೇಡವೆ ಎಂಬ ಅಧಿಕಾರವಿಲ್ಲ. ಇದಕ್ಕೆ ಪೂರವಾಗಿ ಹಿಂದೆ ತೀರ್ಮಾನಿಸಿದ ಗೋಕಲ್ ಬಾಯ್ ನಾನು ಬಾಯ್ ಪಟೇಲ್ ಪ್ರಕರಣದಲ್ಲಿ ( AIR 2008 Guj 2/2008 (1) ID 325) ನೀಡಿದ್ದ ಆಯುಕ್ತರ ಅಧಿಕಾರವು ಮಾಹಿತಿ ಸರಿಯಿದೆಯೇ ಇಲ್ಲವೇ ಎಂಬುದನಷ್ಟೆ ಆದೇಶಿಸಬೇಕು ಮತ್ತು ಅದಕ್ಕೆ ಮುಂದಿನ ಆದೇಶ ನೀಡುವ ಅಧಿಕಾರವಿಲ್ಲವೆಂದು ತೀರ್ಮಾನಿಸಿದನ್ನು ಉಲ್ಲೇಖಿಸಿತು. ಅಂದರೆ ಮಾಹಿತಿ ಆಯೋಗದ ಕಾರ್ಯ ಮಾಹಿತಿ ನೀಡುವ ಬಗ್ಗೆ ತೆಗೆದುಕೊಂಡ ತೀರ್ಮಾನ ಬಗ್ಗೆ. AIR 2009 Guj 12/2009 (1) ID 213

8. ಗುಜರಾತ್ ಉಚ್ಚನ್ಯಾಯಾಲಯ ಮಾಹಿತಿ ಆಯೋಗ ವಿಚಾರಣೆ ಮಾಡಿ ತಪ್ಪಿಸ್ತನಿಗೆ ದಂಡವಿದಿಸುವ ಅಧಿಕಾರವಿದೆ ಮತ್ತು ಮೂರನೇ ಕಕ್ಷಿದಾರನಿಗೆ ಫೀ ವಾಪಸ್ಸು ನೀಡಲು ಆದೇಶಿಸುವ ಅಧಿಕಾರವಿಲ್ಲ ಹಾಗೂ ಸಂಬಂಧಪಟ್ಟ ವ್ಯಕ್ತಿಗೆ ಅವಕಾಶ ನೀಡದೆ ಆದೇಶಿಸತಕ್ಕದ್ದಲ್ಲ. ಏಕೆಂದರೆ ಈ

ಪ್ರಕರಣದಲ್ಲಿ ಮೂರನೇ ಕಕ್ಷಿದಾರನಿಗೆ ಸಮನ್ಸ ನೀಡದೆ ಆದೇಶಿಸತಕ್ಕದ್ದಲ್ಲ. ಹಣ ವಾಪಸ್ಸಾತಿಗೆ ಸಿವಿಲ್ ನ್ಯಾಯಾಲಯವೆ ಸಕ್ಷಮ ಪ್ರಾಧಿಕಾರವಾಗುತ್ತದೆ ಎಂದು ಗುಜರಾತ್ ನ್ಯಾಯಾಲಯ ಆದೇಶಿಸಿತು. AIR 2008 Guj 42/2008 (1) ID 420

9. ಕೇಂದ್ರ ಮಾಹಿತಿ ಆಯೋಗ ಉಚ್ಚನ್ಯಾಯಾಲಯದ ಆದೇಶವನ್ನು ಅರ್ಥೈಸತಕ್ಕದ್ದಲ್ಲ ಎಂದು ದೆಹಲಿ ಪಟ್ಟಣ ಪಾಲಿಕೆ ಪ್ರಕರಣದಲ್ಲಿ ತೀರ್ಮಾನಿಸಿದೆ. ಕೇಂದ್ರ ಮಾಹಿತಿ ಆಯೋಗದ ಜವಾಬ್ದಾರಿಯು ಅರ್ಜಿದಾರನಿಗೆ ಅವನು ಕೇಳಿದ ಮಾಹಿತಿಯನ್ನು ಕೊಡಿಸುವುದಷ್ಟೆ ಜವಾಬ್ದಾರಿ ಮತ್ತು ಮಾಹಿತಿ ಕಾಯ್ದೆಯಲ್ಲಿರುವ ಅಂಶಗಳನ್ನು ಪಾಲಿಸಬೇಕು ಎಂದು ದೆಹಲಿ ಉಚ್ಚನ್ಯಾಯಾಲಯ ಅಜಯ್‌ಕುಮಾರ್ ಗೋಯಲ್ ಪ್ರಕರಣದಲ್ಲಿ ತೀರ್ಮಾನಿಸಿತು. 2009 (1) ID 307

10. ಕೇಂದ್ರ ಮಾಹಿತಿ ಆಯೋಗವು ಒಂದು ಪಾಸ್‌ಪೋರ್ಟ್ ನೀಡುವಲ್ಲಿ ಆದ 9 ತಿಂಗಳ ವಿಳಂಬಕ್ಕೆ ಪರಿಹಾರವಾಗಿ ರೂ.5,000/– ವನ್ನು ಆದೇಶಿಸಿದ್ದು ಸರಿಯಲ್ಲ. ಮಾಹಿತಿಯನ್ನು ಅವಧಿಯೊಳಗೆ ಕೊಡಿಸುವ ಜವಾಬ್ದಾರಿ ಮತ್ತು ಕಾಯ್ದೆ ಕಲಂ.19 ಅಥವಾ 20 ರಲ್ಲಿ ಪರಿಹಾರದ ರೂಪದಲ್ಲಿ ಅಥವಾ ದಂಡದ ರೂಪದಲ್ಲಿ ನೀಡಬೇಕೆಂದು ಅವಕಾಶ ಇಲ್ಲ. ಇದಕ್ಕೆ ಪೂರಕವಾಗಿ ಈ ಹಿಂದೆ 2009 (1) ID 551 ರಲ್ಲಿ ಯುನಿಯನ್ ಬ್ಯಾಂಕ್ ಪ್ರಕರಣದಲ್ಲಿ ಆದೇಶಿಸಿದ ಪ್ರಕರಣವನ್ನು ಉಲ್ಲೇಖಿಸಿ ಕೇಂದ್ರ ಮಾಹಿತಿ ಆಯೋಗಕ್ಕೆ ಈ ರೀತಿ ಅಧಿಕಾರ ನೀಡುವುದಾದರ ಪರಿಣಾಮವನ್ನು ಊಹಿಸತಕ್ಕದ್ದಲ್ಲ ಇದು ಕಾಯ್ದೆಯ ಉದ್ದೇಶವಲ್ಲ ಎಂದು ತೀರ್ಮಾನಿಸಿತು ಮತ್ತು ರೂ.5,000/– ಪರಿಹಾರವನ್ನು ನೀಡಲು ಆದೇಶಿಸಿದನ್ನು ಕಿತ್ತು ಹಾಕಿ, ಯುನಿಯನ್ ಬ್ಯಾಂಕ್ ಎರಡನೇ ಎದುರು ಅರ್ಜಿದಾರನಿಗೆ ರೂ.50,000/– ವನ್ನು ಪಾವತಿ ಮಾಡಲು ಆದೇಶಿಸಿತು. 2009 (1) ID 551

11. ಮಾಹಿತಿ ಆಯುಕ್ತರು ಸ್ವತಂತ್ರವಾಗಿರುತ್ತಾರೆ ರಾಜ್ಯಪಾಲರು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಆಯುಕ್ತರು, ದುರ್ನಡತೆಯಿಂದ ಅಥವಾ ನಿಶ್ಯಕ್ತರಾದಾಗ, ಶ್ರೇಷ್ಠ ನ್ಯಾಯಾಲಯದ ವಿಚಾರಣ ವರದಿಯನ್ನು ಆಧರಿಸಿ ಕಿತ್ತು ಹಾಕಬಹುದು. ರಾಜ್ಯಪಾಲರು ನೇಮಕ ಮಾಡಿರುವ ಪ್ರಸಂಗದಲ್ಲಿ, ರಾಜ್ಯ ಸರ್ಕಾರ ಕ್ರಮ ಜರುಗಿಸತಕ್ಕದ್ದಲ್ಲ. ಅಂದರೆ ಆಯುಕ್ತರು ಸ್ವತಂತ್ರವಾಗಿ ಮತ್ತು ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ನೇಮಕವಾಗಿದ್ದು, ರಾಜ್ಯಪಾಲರೆ ತೆಗೆದು ಹಾಕಬೇಕು. ಆ ರೀತಿ ತೆಗೆದು ಹಾಕುವಾಗ ಅದೇ ಉದ್ದೇಶಕ್ಕಾಗಿ ನೇಮಕ ಮಾಡಿದ ಸಮಿತಿಯ ವರದಿಯನ್ನು ಆಧರಿಸಿ ಮಾಹಿತಿ ಕಾಯ್ದೆ ಅನ್ವಯ ತೆಗೆದು ಹಾಕುವ ಅಧಿಕಾರ ರಾಜ್ಯಪಾಲರಿಗೆ ಮಾತ್ರ. ರಾಜ್ಯಪಾಲರಿಂದ ನೇಮಕವಾದ ವ್ಯಕ್ತಿ ಪ್ರತಿಯೊಬ್ಬ ವ್ಯಕ್ತಿ ಕರ್ನಾಟಕ ರಾಜ್ಯ ಸರ್ಕಾರದ ನೌಕರನಾಗಬೇಕಾಗಿಲ್ಲ. AIR 2009 (NOC) 1921/2010 (2) ID 232

12. ಮುಖ್ಯ ಮಾಹಿತಿ ಆಯುಕ್ತರು ಯಾವ ಮೇಲ್ಮನವಿಯನ್ನು ಯಾರ ಮುಂದೆ ವಿಚಾರಣೆಗೆ ಬರಬೇಕೆಂದು ತೀರ್ಮಾನಿಸುವ ಅಧಿಕಾರ ಇದೆ ಎಂದು ಬಾಂಬೆ ಉಚ್ಚನ್ಯಾಯಾಲಯ ಲೋಕೇಶ್ ಪ್ರಕರಣದಲ್ಲಿ ತೀರ್ಮಾನಿಸಿತು. ಕಲಂ.15(4) ರಲ್ಲಿ ಮುಖ್ಯ ಮಾಹಿತಿ ಆಯುಕ್ತರು ನಿರ್ವಹಿಸಬೇಕಾದ ಕೆಲಸವನ್ನು ನಿಗದಿ ಪಡಿಸಿದೆ. ಇದು ಒಂದು ಆಡಳಿತಾತ್ಮಕ ಕೆಲಸ. ಇದರಲ್ಲಿ ಮೇಲ್ವಿಚಾರಣೆ, ನಿರ್ದೇಶನ, ನಿರ್ವಹಣೆ ರಾಜ್ಯ ಮಾಹಿತಿ ಆಯೋಗದ ಕೆಲಸ. ಇದು ರಾಜ್ಯದ ಮುಖ್ಯ ಮಾಹಿತಿ ಆಯುಕ್ತರು ನಿರ್ವಹಿಸುತ್ತಾರೆ. ಆದರೆ ಪ್ರತಿ ಆಯುಕ್ತರು ಪ್ರಕರಣವನ್ನು ವಿಚಾರಣೆ ಮಾಡುವಾಗ ವ್ಯಕ್ತಿಯವಾಗಿ ಮತ್ತು ಸ್ವತಂತ್ರವಾಗಿ ಪ್ರಕರಣವನ್ನು ಇತ್ಯರ್ಥ ಪಡಿಸಬೇಕು. AIR 2009 Bom

147/2009 (2) ID 586

13. ಮಾಹಿತಿ ಆಯೋಗದ ಮೇಲೆ, ಉಚ್ಚನ್ಯಾಯಾಲಯದಲ್ಲಿ ರಿಟ್ ದಾಖಲಿಸಿದಾಗ, ಆಯೋಗವು ಕಕ್ಷಿದಾರನಾಗಬೇಕಾಗಿಲ್ಲ ಎಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. ಆಯೋಗವು ಮೇಲ್ಮನವಿ ಪ್ರಾಧಿಕಾರದಂತೆ ಮಾಹಿತಿ ಹಕ್ಕು ಕಾಯಿದೆಯಡಿ ಕಾರ್ಯನಿರ್ವಹಿಸಬೇಕು. ಆದರೆ ಆಯೋಗವನ್ನು ಪ್ರಶ್ನಿಸಿದಾಗ ಆಯೋಗವು ಕಕ್ಷಿದಾರನಾಗಿ ಮಾಡಿ ಸಮರ್ಥಿಸಿಕೊಳ್ಳಬೇಕೆಂದು ಅವಕಾಶವಿಲ್ಲ. ಆದೇಶದ ಆಧಾರದ ಮೇಲೆ ಆಯೋಗವನ್ನು ಕಕ್ಷಿದಾರನಾಗಿ ಮಾಡಿದರೆ ಅದು ಒಂದು ಅನುಚಿತ ವೆಚ್ಚವಾಗುತ್ತದೆ. ಆಯೋಗದ ಆದೇಶವನ್ನು ಸರ್ಕಾರದ ಇಲಾಖೆಗಳು, ಸರ್ಕಾರ ಖರ್ಚಿನಲ್ಲಿ ಮೇಲ್ಮನವಿ ಸಲ್ಲಿಸುತ್ತಾರೆ ಮತ್ತು ಅಂತಹ ಪ್ರಸಂಗದಲ್ಲಿ ಆಯೋಗಕ್ಕೆ ವೆಚ್ಚ ತಗಲುವುದಿಲ್ಲ ಮತ್ತು ಆಯೋಗವು ತನ್ನ ಆದೇಶವನ್ನು ಸಮರ್ಥಿಸಿಕೊಳ್ಳಲು ಕಕ್ಷಿದಾರನಾಗಬೇಕಾಗಿಲ್ಲ. W.P No.8068 and 8069 /2008 - 12-02-2010

14. ಈ ಮೇಲ್ಕಂಡ ತೀರ್ಪಿಗೆ ಪೂರಕವಾಗಿ ಕನಕರಾಜ್ ಪ್ರಕರಣದಲ್ಲಿ ಮದ್ರಾಸ್ ಉಚ್ಚನ್ಯಾಯಾಲಯ ತಮಿಳುನಾಡು ಮಾಹಿತಿ ಆಯೋಗದ ಆದೇಶವನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅರ್ಜಿದಾರರು ಆಯೋಗವನ್ನು ಕಕ್ಷಿದಾರನಾಗಿ ಮಾಡಿದ್ದರೂ ಅಂತಹ ಪ್ರಕರಣದಲ್ಲಿ ಆಯೋಗದ ಹೆಸರಿನಲ್ಲಿ ಕಿತ್ತು ಹಾಕಿ, ಪ್ರಕರಣವನ್ನು ಇತ್ಯರ್ಥ ಪಡಿಸುವ ಅಧಿಕಾರ ಉಚ್ಚನ್ಯಾಯಾಲಯಕ್ಕೆ ಇದೇ ಎಂದು ಮದ್ರಾಸ್ ನ್ಯಾಯಾಲಯ ತೀರ್ಮಾನಿಸಿತು. 2011 (1) ID 274

15. ಈ ಮೇಲ್ಕಂಡ ತೀರ್ಮಾನಕ್ಕೆ ದೆಹಲಿ ಉಚ್ಚನ್ಯಾಯಾಲಯ ಕೇಂದ್ರ ಮಾಹಿತಿ ಆಯುಕ್ತರನ್ನು ಕಕ್ಷಿದಾರನಾಗಿ ಮಾಡಬೇಕಾಗಿಲ್ಲವೆಂದು ಈಗಾಗಲೇ ತೀರ್ಮಾನಿಸಿದ್ದನು ಸಮರ್ಥಿಸಿತು. 2012 (1) ID 325

16. ರಾಜ್ಯ ಮಾಹಿತಿ ಆಯೋಗದ ಕಾರ್ಯನಿರ್ವಾಹಣೆಯಲ್ಲಿ ಮೇಲ್ವಿಚಾರಣೆಯನ್ನು ನಡೆಸುವ ಅಧಿಕಾರ ರಾಜ್ಯ ಮಾಹಿತಿ ಆಯುಕ್ತರಿಗೆ ಇದೆ ಎಂದು ಸಯ್ಯದ್ ಹುಸೇನ್ ಅಬ್ಬಾಸ್ ರಿಜ್‌ವಾಯ್ ಪ್ರಕರಣದಲ್ಲಿ ಪಟ್ನಾ ಉಚ್ಚನ್ಯಾಯಾಲಯ ತೀರ್ಮಾನಿಸಿತು. ಕಲಂ.15(4) ರಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಆಯೋಗದ ಸಾಮಾನ್ಯ ಆಡಳಿತ, ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿರ್ವಹಣೆಯ ಜವಾಬ್ದಾರಿ ಇರುವುದನ್ನು ಸಮರ್ಥಿಸಿತು. ರಾಜ್ಯ ಮಾಹಿತಿ ಆಯುಕ್ತರುಗಳು, ರಾಜ್ಯ ಮುಖ್ಯ ಮಾಹಿತಿ ಆಯುಕ್ತರಿಗೆ ಸಹಕಾರಿಯಾಗಬೇಕೆಂದು ಉಲ್ಲೇಖಿಸಿತು AIR 2010 Pattan 57 / 2010 91) ID 531

17. ಕೇಂದ್ರ ಮಾಹಿತಿ ಆಯುಕ್ತರು, ಕೇಂದ್ರ ಮಾಹಿತಿ ಆಯೋಗದ (ಆಡಳಿತ) ನಿಬಂಧನೆಗಳು 2007 ರಲ್ಲಿ, ಉಪಸಮಿತಿಯನ್ನು ರಚಿಸುವ ಅಧಿಕಾರ ಹೊಂದಿಲ್ಲ (ಮಾಹಿತಿ ಆಯುಕ್ತರಲ್ಲದ ವ್ಯಕ್ತಿಗಳನ್ನು) ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಮುಂದೆ ಪ್ರಶ್ನಿಸಿದ ವಿಷಯಗಳೆಂದರೆ (1) ಕೇಂದ್ರ ಮಾಹಿತಿ ಆಯೋಗವು, ಮಾಹಿತಿ ಹಕ್ಕು ಕಾಯ್ದೆ ಮತ್ತು ನಿಯಮಗಳಡಿ ಆಯೋಗದ ಸದಸ್ಯರಲ್ಲದ ವ್ಯಕ್ತಿಗಳಿಂದ ಕೂಡಿದ ಸಮಿತಿಯನ್ನು ಮಾಡಬಹುದೆ (2) ಮುಖ್ಯ ಮಾಹಿತಿ ಆಯುಕ್ತರು 2007ರ ನಿಬಂಧನೆ ಮತ್ತು ಕಾಯ್ದೆ ಕಲಂ.12(4) ರನ್ವಯ ನೋಂದಾವಣೆ ಅಥವಾ ಮೇಲ್ಮನವಿಯನ್ನು ವಾಪಸ್ಸು ಮಾಡಬಹುದೇ (3) ಕೇಂದ್ರ ಮಾಹಿತಿ ಆಯೋಗವು ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರನ್ನು ಹಾಜರಾಗಲು ನಿರ್ದೇಶನ ನೀಡಬಹುದೆ.

ಮೊದಲನೇ ಪ್ರಶ್ನೆಗೆ ಆಯೋಗದ ಅಧಿಕಾರವನ್ನು ಪ್ರಾಧಿಕಾರದ ಸದಸ್ಯನಲ್ಲದ ವ್ಯಕ್ತಿಗೆ ಅಧಿಕಾರ

ನೀಡತಕ್ಕದ್ದಲ್ಲ. ಆಯೋಗದ ಸದಸ್ಯರಲ್ಲಿಯೇ ಸಮಿತಿಯನ್ನು ಮಾಡಬಹುದೆ ಹೊರತು, ಆಯೋಗದ ಸದಸ್ಯನಲ್ಲದ ವ್ಯಕ್ತಿಗೆ ಆಯೋಗದ ಅಧಿಕಾರವನ್ನು ಹಂಚಿಗೆ ಮಾಡುವ ಅಥವಾ ನೀಡುವ ಅಧಿಕಾರ ನೀಡತಕ್ಕದ್ದಲ್ಲ. ಎರಡನೇ ಪ್ರಶ್ನೆಗೆ ಕಾಯ್ದೆಯಲ್ಲಿ ಮರುಪರಿಶೀಲನೆ ಮಾಡುವ ಅಧಿಕಾರ ಮುಖ್ಯ ಆಯುಕ್ತರಿಗೆ ನೀಡಿಲ್ಲ ಮತ್ತು ಆ ಅಧಿಕಾರವನ್ನು ಮುಖ್ಯ ಮಾಹಿತಿ ಅಧಿಕಾರಿಗಳು ಚಲಾಯಿಸತಕ್ಕದ್ದಲ್ಲ. ಇದರ ಜೊತೆಗೆ ಮುಖ್ಯ ಮಾಹಿತಿ ಆಯುಕ್ತರು ನಿಬಂಧನೆಗಳನ್ನು ರೂಪಿಸಲು ಅಧಿಕಾರ ಹೊಂದಿಲ್ಲ. ಮೂರನೇ ಪ್ರಶ್ನೆಗೆ ಕೇಂದ್ರ ಮಾಹಿತ ಆಯೋಗಕ್ಕೆ ಯಾವುದೆ ಒಬ್ಬ ವ್ಯಕ್ತಿಯನ್ನು ಹಾಜರಾಗುವಂತೆ ನಿರ್ದೇಶಿಸತಕ್ಕದ್ದಲ್ಲ. ಆದರೆ ಪ್ರಕರಣದಲ್ಲಿ ಮೌಖಿಕ ಸಾಕ್ಷಿ ಹೇಳಲು ಅಥವಾ ಲಿಖಿತ ಸಾಕ್ಷಿ ಮಂಡಿಸಲು ಅಥವಾ ದಾಖಲೆಗಳನ್ನು ಸಲ್ಲಿಸಲು ನಿರ್ದೇಶನ ನೀಡಬಹುದೆ ಹೊರತು ಮತ್ತಾವುದೇ ಉದ್ದೇಶದಿಂದಲ್ಲ ಎಂದು ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. 2010 (2) ID 383

18. ಬಾಂಬೆ ಉಚ್ಚನ್ಯಾಯಾಲಯದ ಮುಂದೆ ರಿಟ್ ದಾಖಲಿಸಿ ಒಂದು ಉಪಸಮಿತಿಯನ್ನು ಆಯ್ಕೆಯ ಸಮಿತಿಗೆ ಸಹಾಯ ನೀಡಲು ರಚಿಸುವುದರ ಬಗ್ಗೆ ಪ್ರಶ್ನಿಸಿದಾಗ, ಅದಕ್ಕೆ ನ್ಯಾಯಾಲಯಗಳು ಕಾಯಿದೆಯನ್ನು ರೂಪಿಸುವುದಿಲ್ಲ ಹಾಗೂ ಕಾಯಿದೆಯಲ್ಲಿನ ಅಂಶಗಳನ್ನು ವಿಮರ್ಶಿಸುತ್ತದೆ. ಅಂದರೆ ಕಾಯಿದೆ ರೂಪಿಸಿರುವುದು ಸಂವಿದಾನಾತ್ಮಕವೇ ಅಥವಾ ಅಸಂವಿಧಾನಾತ್ಮಕವೇ ಎಂಬುದು ಮಾತ್ರ. ಈ ಪ್ರಕರಣದಲ್ಲಿ ಆಯ್ಕೆ ಸಮಿತಿಗೆ ಸಹಾಯ ಮಾಡಲು ಒಂದು ತಾತ್ಪೂರ್ವಿಕ ಉಪಸಮಿತಿ ರಚಿಸುವ ಪ್ರಸ್ಥಾವನೆ ತಪ್ಪು ಮಾಹಿತಿಯಿಂದ ಕೂಡಿದೆ ಎಂದು ಪ್ರಕರಣವನ್ನು ಸ್ವಿಕರಿಸಲಿಲ್ಲ. 2008 (1) ID 310

19. ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಯವರನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರನ್ನಾಗಿ ನೇಮಕ ಮಾಡಿರುವುದು ಸರಿ ಎಂದು ಉತ್ತರಾನಂಚಲ್ ಉಚ್ಚನ್ಯಾಯಾಲಯ ಆದೇಶಿಸಿತು. ಕಲಂ.15(6) ರಲ್ಲಿ ಸಾರ್ವಜನಿಕ ಸೇವೆಯಲ್ಲಿ ಅನುಭವ ಮತ್ತು ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ಆಡಳಿತ, ಪತ್ರಿಕೋದ್ಯಮದಲ್ಲಿ ಅಂತಹ ಜ್ಞಾನ ಹೊಂದಿದ ವ್ಯಕ್ತಿಗಳನ್ನು ನೇಮಕ ಮಾಡುವ ಅವಕಾಶ ಇರುವುದನ್ನು ಗಮನಿಸಿ ನಿವೃತ್ತ ಮುಖ್ಯ ಕಾರ್ಯದರ್ಶಿಯವರನ್ನು ನೇಮಕ ಮಾಡಿರುವುದು ಅಸಿಂದುವಲ್ಲ. 2008 (2) ID 186

20. ಮುಖ್ಯ ಮಾಹಿತಿ ಆಯುಕ್ತರಿಗೆ ಎರಡನೇ ಮೇಲ್ಮನವಿ ಪ್ರಾಧಿಕಾರವೆಂದು ನೀಡಿರುವ ಪ್ರಾಧಿಕಾರ, ಮಾಹಿತಿಯನ್ನು ನೀಡಬೇಕೆ ಅಥವಾ ನೀಡಬಾರದೆ ಎಂಬುದಕ್ಕೆ ಸೀಮಿತವಾಗಿರಬೇಕು. ಕಟ್ಟಡವನ್ನು ಕೆಡುವಲು ಅಥವಾ ಇನ್ನಿತರ ಕಾರ್ಯಗಳಿಗೆ ಮನವಿ ಸಲ್ಲಿಸಿದಾಗ, ಅಂತಹ ಆದೇಶವನ್ನು ನೀಡುವ ಅಧಿಕಾರ ಮುಖ್ಯ ಮಾಹಿತಿ ಆಯುಕ್ತರಿಗೆ ನೀಡಲಾಗಿಲ್ಲ. ಈ ಪ್ರಕರಣದಲ್ಲಿ ಮುಖ್ಯ ಮಾಹಿತಿ ಆಯುಕ್ತರು ಮೂರನೇ ವ್ಯಕ್ತಿ (ಅರ್ಜಿದಾರ) ಕಕ್ಷಿದಾರನಲ್ಲದಿದ್ದರೂ, ಅವಕಾಶವನ್ನು ನೀಡಲಾರದೆ ಆದೇಶ ಮಾಡಿರುವುದು ತಪ್ಪು ಎಂದು ನಿರ್ದೇಶಿಸಿತು ಮತ್ತು ಮುಖ್ಯ ಮಾಹಿತಿ ಆಯುಕ್ತರ ಆದೇಶವನ್ನು ಕಿತ್ತು ಹಾಕಿತು. AIR 2008 Guj 2 / 2008 (1) ID 352

21. ಒಂದು ರಾಜ್ಯದ ರಾಜ್ಯಪಾಲರು ಯಾವುದೇ ನ್ಯಾಯಾಲಯದ ಮುಂದೆ ಉತ್ತರಿಸಬೇಕಾಗಿಲ್ಲ ಮತ್ತು ಯಾವುದೇ ಪ್ರಕರಣದಲ್ಲಿ ರಾಜ್ಯಪಾಲರನ್ನು ಕಕ್ಷಿದಾರನಾಗಿ ಮಾಡತಕ್ಕದ್ದಲ್ಲ ಎಂದು ಕೆರಳ ಉಚ್ಚನ್ಯಾಯಾಲಯ ಬಿನೂ ಪ್ರಕರಣದಲ್ಲಿ ಆದೇಶಿಸಿತು. ರಾಜ್ಯ ಮಾಹಿತಿ ಆಯೋಗವನ್ನು ರಚನೆ ಮಾಡುವಾಗ ರಾಜ್ಯಪಾಲರು ಕಕ್ಷಿದಾರರೆಂದು ಸೇರಿಸಲಾಗಿತ್ತು. ಈ ಪ್ರಕರಣದಲ್ಲಿ

ಉಚ್ಚನ್ಯಾಯಾಲಯದ ನಿಬಂಧಕರು, ಸಂವಿಧಾನದ ಅನುಚ್ಛೇದ 361 ರನ್ವಯ ರಾಜ್ಯಪಾಲರನ್ನು ಕಕ್ಷಿದಾರರನಾಗಿ ಮಾಡಬಾರದೆಂದು ತಿಳಿಸಿದ್ದರೂ, ಪ್ರಕರಣ ವಿಚಾರಣೆಗೆ ಬಂದಾಗ, ರಾಜ್ಯಪಾಲರು ಕಲಂ.15 ರನ್ವಯ ಅಧಿಕಾರ ಚಲಾಯಿಸಿ ಸದಸ್ಯರನ್ನು ನೇಮಕ ಮಾಡುತ್ತಾರೆ ಮತ್ತು ರಾಜ್ಯಪಾಲರನ್ನು ಸಂವಿಧಾನದ ಅನುಚ್ಛೇದ 361ರ ಅನ್ವಯ ಕಕ್ಷಿದಾರನಾಗಿ ಮಾಡತಕ್ಕದ್ದಲ್ಲವೆಂದು ತೀರ್ಪಿತಿತು. 2010 (4) KLT 115/2010 (1) ID 237

ಸೂಚನೆ : ಈ ತೀರ್ಪನ್ನು ಕೇರಳ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಸಮರ್ಥಿಸಿ ಆದೇಶಿಸಿತು. 2010 (4) KLT 859/ AIR 2011 Keral 5

22. ರಾಜ್ಯ ಮಾಹಿತಿ ಆಯೋಗ ನ್ಯಾಯಾಲಯವಲ್ಲ ಆದ್ದರಿಂದ ನ್ಯಾಯಾಲಯ ನಿಂದನೆ ಊರ್ಜಿತವಲ್ಲ. ಮಾಹಿತಿ ನೀಡುವಾಗ ಅಸಮರ್ಥ ದಾಖಲೆ/ತಪ್ಪು ಮಾಹಿತಿ ಅಥವಾ ದುರುದ್ದೇಶದಿಂದ ನೀಡಿದ ಮಾಹಿತಿ ಬಗ್ಗೆ ಕಲಂ.20 ರಲ್ಲಿ ದಂಡ ವಿಧಿಸುವ ಅಧಿಕಾರ ನೀಡಿದೆ. ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಆಯೋಗಕ್ಕೆ ನೀಡಿದ್ದು, ಇದರಲ್ಲಿ ಹಾಜರಾತಿ, ಸಾಕ್ಷಿ ನೀಡಲು, ದಾಖಲೆ ಸಲ್ಲಿಸಲು, ಪ್ರಮಾಣ ಪತ್ರ ನೀಡಲು, ಸಾರ್ವಜನಿಕ ದಾಖಲೆಗಳನ್ನು ಸಲ್ಲಿಸಲು, ಸಮನ್ಸ್ ನೀಡಲು ಅಧಿಕಾರವನ್ನು ಮಾತ್ರ ನೀಡಲಾಗಿದೆ. ಇದನ್ನು ಆಯೋಗ ಅಧಿಕಾರವೆಂದು ನ್ಯಾಯಾಲಯ ನಿಂಧನೆ ವ್ಯಪ್ತಿಗೆ ಬರುವುದಿಲ್ಲ ಎಂದು ಗುಜರಾತ್ ಉಚ್ಚನ್ಯಾಯಾಲಯ ವಿಷ್ಣುಭಾಯ್ ಪಾರೆಕ್ ಪ್ರಕರಣದಲ್ಲಿ ತೀರ್ಮಾನಿಸಿತು. 2011 (1) ID 330

23. ರಾಜ್ಯ ಮಾಹಿತಿ ಆಯೋಗ ಕಾಯ್ದೆ ಕಲಂ.18ರ ಅಧಿಕಾರವನ್ನು ಚಲಾಯಿಸುವಾಗ ಕಲಂ.19ರಲ್ಲಿರುವ ಅವಕಾಶವೆಂದು ತಿಳಿದಿರುಬೇಕು. ಗೌಹಾತಿ ಉಚ್ಚನ್ಯಾಯಾಲಯ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ನಿಗದಿ ಪಡಿಸಿದ ಅವಧಿಯೊಳಗೆ ಯಾವುದೇ ಕಾರಣ ನೀಡದೆ ಮಾಹಿತಿ ನೀಡದಿದ್ದಾಗ, ರಾಜ್ಯ ಮಾಹಿತಿ ಆಯೋಗವು, ಕಲಂ.8, 9, 10, 24 ಮತ್ತು ಎರಡನೇ ಶೇಡೂಲ್ ಪರಿಶೀಲಿಸಲಾಗದು. ಏಕೆಂದರೆ ರಾಜ್ಯ ಸಾರ್ವಜನಿಕ ಮಾಹಿತ ಅಧಿಕಾರಿ ಅವನಿಗೆ ಸಲ್ಲಿಸಿದ ಅರ್ಜಿಯ ಅನ್ವಯ ಮಾಹಿತಿಯನ್ನು ನೀಡುವ ಬಗ್ಗೆ ತೀರ್ಮಾನವನ್ನೆ ತೆಗೆದುಕೊಂಡಿಲ್ಲ. ಆದ್ದರಿಂದ ರಾಜ್ಯ ಮಾಹಿತಿ ಆಯೋಗವು ಮುಂದುವರಿಯುವ ಅವಶ್ಯಕತೆ ಇರುವುದಿಲ್ಲ. ಮೇಲ್ಮನವಿಯನ್ನು ಗೌಹಾತಿ ಉಚ್ಚನ್ಯಾಯಾಲಯ ವಿಭಾಗೀಯ ಪೀಠ ಪುರಸ್ಕರಿಸಿ ರಾಜ್ಯ ಮಾಹಿತಿ ಆಯೋಗದ ಕ್ರಮವನ್ನು ಕಾನೂನು ಬಾಹಿರ ಮತ್ತು ಅಧಿಕಾರಿಯ ವ್ಯಾಪ್ತಿಗೆ ನೀಡಿದ್ದು ಎಂಬ ಆದೇಶವನ್ನು ಕಿತ್ತು ಹಾಕಿತು. AIR 2010 Gauhati 183/2011 (1) ID 251

ಸೂಚನೆ : ಈ ವಿಭಾಗೀಯ ಪೀಠದ ಆದೇಶವನ್ನು ಭಾರತೀಯ ಶ್ರೇಷ್ಠ ನ್ಯಾಯಾಲಯ 2011 (3) SCALE 460/2012 (1) KLT SN 18/2012 (1) ID 1 /2012-1-LW-209/ AIR 2012 SE 864 ನಲ್ಲಿ ಮಾಹಿತಿ ನೀಡುವಂತೆ ಯಾವುದೇ ನಿರ್ದೇಶನವನ್ನು ನೀಡತಕ್ಕದ್ದಲ್ಲವೆಂದು ಮೇಲ್ಕಂಡ ಉಲ್ಲೇಖದಲ್ಲಿ ಇರುವುದನ್ನು ಸಮರ್ಥಿಸಿತು.

24. ಮಾಹಿತಿ ಆಯೋಗವು ತನಗೆ ನೀಡಲಾದ ಮಧ್ಯಸ್ಥಗಾರರ ಕಾರ್ಯನಿರ್ವಹಿಸಬೇಕೆ ಹೊರತು, ಅದಕ್ಕೆ ಮುಂದಲ್ಲ ತಮಿಳುನಾಡು ಉಚ್ಚನ್ಯಾಯಾಲಯದ ಮುಂದೆ ಮೂಲ ಅರ್ಜಿಯಲ್ಲಿ ಗೆಜೆಟ್ ಕಾಫಿ ನೀಡಲು ಕೇಳಿದಾಗ ಯಾವುದೇ ಉತ್ತರ ಬಾರದೇ ಇದ್ದಿದರಿಂದ, ಮೇಲ್ಮನವಿಯನ್ನು ರಾಜ್ಯ ಮಾಹಿತಿ ಆಯೋಗದ ಮುಂದೆ ಮೇಲ್ಮನವಿ ಸಲ್ಲಿಸಲಾಗಿತ್ತು. ರಿಟ್ ಅರ್ಜಿಯನ್ನು 2006 ರಲ್ಲಿ

ಸಲ್ಲಿಕೆಯಾಗಿದ್ದರೂ, ಆದೇಶವನ್ನು ಆಯೋಗವು 2010 ರಲ್ಲಿ ನೀಡಿತ್ತು. ಅದರಲ್ಲಿ ಸಾರ್ವಜನಿಕ ಪ್ರಾಧಿಕಾರದ ವಶದಲ್ಲಿದ್ದ ನಕಲನ್ನು ಕೊಡಲು ಆದೇಶಿಸಬಹುದು ಮತ್ತು ಅದಕ್ಕೆ ಜವಾಬ್ದಾರನಾಗಿ ಮಾಡತಕ್ಕದ್ದಲ್ಲವೆಂದು ತಿಳಿಸಿತ್ತು. ಆದರೆ ಈ ಪ್ರಕರಣದಲ್ಲಿ ಮೂಲ ಮಾಹಿತಿ ನೀಡುವ ಅಧಿಕಾರಿ ಯಾವುದೇ ಆದೇಶವನ್ನು ಮಾಡಿರಲಿಲ್ಲ. ಆಯುಕ್ತರು ಈ ಪ್ರಕರಣವನ್ನು ನೇರವಾಗಿ ತಮಿಳುನಾಡು ರಾಜ್ಯ ಆಯೋಗದ ಮುಂದೆ ಹೋಗಿರುವುದು ಮಧ್ಯಸ್ಥಾರನೆಂಬ ಅಧಿಕಾರಿಯ ಮೀರಿ. ಇದಕ್ಕೆ ಪೂರಕಾಗಿ ಆದೇಶದ ಅಂತಿಮ ಕಂಡಿಕೆಯನ್ನು ನೋಡಿದಾಗ ಅತಿ ದೀರ್ಘಾವಧಿಯ ನಂತರ ಜವಾಬ್ದಾರಿ ರಹಿತ ಆದೇಶ ನೀಡಲಾಗಿದೆ ಎಂದಿರುವುದನ್ನು ಮೇಲ್ಮನವಿಯನ್ನು ಸೂಕ್ತ ನಿರ್ದೇಶನದ ಜೊತೆ ತೀರ್ಮಾನಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸೂಕ್ತ ಆದೇಶವನ್ನು ನೀಡಲು ಆದೇಶಿಸಿತು. 2010-5-LW-523/(2011) 1 MLJ 503/2011 (1) ID 219

25. ಉಚ್ಚನ್ಯಾಯಾಲಯ ಮಾಹಿತಿ ಆಯೋಗಕ್ಕೆ ನಿರ್ದೇಶನ ನೀಡಲು, ಆಯೋಗಕ್ಕೆ ನೋಟೀಸ್ ಕಳುಹಿಸಿರಬೇಕು. ರಿಟ್ ಅರ್ಜಿದಾರ ಮಾಹಿತಿ ಆಯೋಗಕ್ಕೆ ತನ್ನ ಮೇಲ್ಮನವಿ ಪ್ರಕರಣವನ್ನು ಇತ್ಯರ್ಥ ಪಡಿಸಲು ನಿರ್ದೇಶನ ನೀಡಬೇಕೆಂದು ದಾಖಲಿಸಿದ್ದರು ಆಯೋಗವು ಬಹು ಸಂಖ್ಯೆಯ ಸದಸ್ಯರಾಗಿದ್ದು ಬಹಳಷ್ಟು ಪ್ರಕರಣಗಳನ್ನು ವಿಚಾರಣೆ ಮಾಡಬೇಕಾಗಿದ್ದು, ಉದ್ದೇಶ ಪೂರಕವಾಗಿ ಸಾರ್ವಜನಿಕ ಪ್ರಾಧಿಕಾರ ಅಥವಾ ಅರೆ ನ್ಯಾಯಿಕ ನ್ಯಾಯಾಲಯಗಳು ಶಾಶನಬದ್ಧ ಕಾರ್ಯನಿರ್ವಹಣೆಯಲ್ಲಿ ವಿಳಂಬವಾಗುತ್ತಿದ್ದರೆ, ಅಂತಹ ಪ್ರಕರಣಗಳಲ್ಲಿ ಆ ಪ್ರಾಧಿಕಾರಕ್ಕೆ ನೋಟೀಸ್ ಕಳುಹಿಸಿದ ನಂತರವೇ, ಪ್ರಕರಣ ಇತ್ಯರ್ಥ ಪಡಿಸಲು ತಿಳಿಸಬಹುದು ಅಥವಾ ಅವಧಿಯನ್ನು ನಿಗದಿ ಪಡಿಸಬಹುದು. 2011 (1) ID 274

26. ಕೇಂದ್ರ ಮಾಹಿತಿ ಆಯೋಗ, ಸಿವಿಲ್ ನ್ಯಾಯಾಲಯಕ್ಕೆ ನೀಡಿಲಾದ ಎಲ್ಲಾ ಅಧಿಕಾರಗಳನ್ನು ಪಡೆಯುವುದಿಲ್ಲ ಅಂದರೆ ದಂಡ ವಿದಿಸಲು ಸಿವಿಲ್ ನ್ಯಾಯಾಲಯಕ್ಕೆ ಹೋಗಬೇಕು. ಕಲಂ.20 ರನ್ವಯ ಕೇಂದ್ರ ಮಾಹಿತಿ ಆಯೋಗ ಸಾರ್ವಜನಿಕ ಆಯೋಗ ಮಾಹಿತಿ ನೀಡಲು ವಿಳಂಬವಾದಾಗ ವೆಚ್ಚವನ್ನು ಬರಿಸಲು ಅವಕಾಶವಿದೆ. ಕಲಂ.20(2) ರನ್ವಯ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿ ನೀಡಿದಿದ್ದರೆ ಶಿಸ್ತು ಕ್ರಮ ಜರುಗಿಸುವಂತೆ ಸೂಚಿಸಬಹುದೆ ಹೊರತು, ನಿರ್ದೇಶನವನಲ್ಲ ಎಂದು ದೆಹಲಿ ಉಚ್ಚನ್ಯಾಯಾಲಯ ಪ್ರವೀಣ ಕುಮಾರ್ ಪ್ರಕರಣದಲ್ಲಿ ಆದೇಶಿಸಿತು. 2011 (1) ID 288

27. ತೊಂದರೆಗೊಳಗಾದ ವ್ಯಕ್ತಿ ಆರೋಪ ಹೊರಿಸಿ ಪ್ರಕರಣ ದಾಖಲಿಸಬಹುದು ಅಥವಾ ಮೇಲ್ಮನವಿ ಸಲ್ಲಿಸಬಹುದು. ಈವೆರಡನ್ನು ಸಮವರ್ತಿಯಾಗಿ ಜರುಗಿಸಬಹುದು. ಕಲಂ.18 ರಲ್ಲಿ ರಾಜ್ಯ ಮಾಹಿತಿ ಆಯೋಗ ಆರೋಪವನ್ನು ವಿಚಾರಣೆ ಮಾಡಿ ಯಾವುದೇ ಹಿಂಬರಹ ಬರದೆ ಇದ್ದರೆ (30 ದಿವಸದೊಳಗೆ) ಮಾಹಿತಿಯನ್ನು ತಿರಸ್ಕರಿಸಲಾಗಿದೆ ಎಂದು ಕಲಂ.7(1) ಮತ್ತು ಕಲಂ.7(2) ರನ್ನು ಉಲ್ಲೇಖಿಸಿತು. ಮೇಲ್ಮನವಿ ಸಲ್ಲಿಸಲು 30 ದಿನಗಳ ನಂತರ ಅವಕಾಶವಿದೆ ಎಂದು ರಾಜ್ಯ ಚುನಾವಣಾ ಆಯೋಗವು ಕಲಂ.18 ರನ್ವಯ ಅಧಿಕಾರ ಚಲಾಯಿಸತಕ್ಕದ್ದಲ್ಲ ಎಂದು ಕೆರಳ ಉಚ್ಚನ್ಯಾಯಾಲಯ ಆದೇಶಿಸಿತು. 2011 (2) ID 211

ಸೂಚನೆ : ಈ ಮೇಲ್ಕಂಡ ತೀರ್ಮಾನವು, ಶ್ರೇಷ್ಠ ನ್ಯಾಯಾಲಯದ ತೀರ್ಮಾನ 2011 (3) SCALE 460/2012 (1) KLT SN /2012 (1) ID 1 /2012 -1-LW-209/AIR 2012 SE

864 ಅನ್ವಯ ಕೇರಳ ಉಚ್ಚನ್ಯಾಯಾಲಯದ ತೀರ್ಮಾನವು ಊರ್ಜಿತವಾಗುವುದಿಲ್ಲ.

28. ಮಾಹಿತಿ ಆಯೋಗವು ಸಾರ್ವಜನಿಕ ಮಾಹಿತಿ ಅಧಿಕಾರಿಗೆ, ಮಾಹಿತಿ ನೀಡಲು ಅವನ ನಿಷ್ಕ್ರಿಯತೆ ಬಗ್ಗೆ ವಿವರಣೆ ಕೇಳಲಾಗದು ಎಂದು ಚತ್ತೀಸ್‌ಗಢ್ ಉಚ್ಚನ್ಯಾಯಾಲಯ ಆದೇಶಿಸಿತು. ಮುಖ್ಯ ಮಾಹಿತಿ ಆಯುಕ್ತರು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ತಡೆಯಾಜ್ಞೆ ತೆರವುಗೊಳಿಸಿದ ನಂತರವೂ, ಕ್ರಮ ಜರುಗಿಸಿಲ್ಲವೆಂದು ನಿರ್ದೇಶಿಸತಕ್ಕದ್ದಲ್ಲ. ಇದರ ಜೊತೆಗೆ ಮಾಹಿತಿ ಆಯುಕ್ತರು ಸಾರ್ವಜನಿಕ ಮಾಹಿತಿ ಆಯುಕ್ತರಿಗೆ 1 ತಿಂಗಳೊಳಗಾಗಿ ತೀರ್ಮಾನ ತೆಗೆದುಕೊಂಡು ತಿಳಿಸಲು ಆದೇಶಿಸಿದ್ದರು. ಇಂತಹ ಆದೇಶ ನೀಡುವ ಅಧಿಕಾರ ಮಾಹಿತಿ ಆಯುಕ್ತರ ಅಧಿಕಾರ ಮೀರಿದ್ದು ಎಂದು ಆದೇಶಿಸಿತು. AIR 2011 Chh 128/2011 (2) ID 397

29. ಮಾಹಿತಿ ಆಯೋಗವು ಒಬ್ಬ ಕೆಲಸಗಾರನನ್ನು ಮರು ನೇಮಕ ಮಾಡಲು ಆದೇಶಿಸಿರುವುದು ತಪ್ಪು ಎಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಕೇಂದ್ರ ಮಾಹಿತಿ ಆಯುಕ್ತರು ಅರ್ಜಿದಾರನನ್ನು ಪುನಹ ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ನೀಡಿದ ಆದೇಶ ಅಧಿಕಾರದ ವ್ಯಾಪ್ತಿಗೆ ಮೀರಿದ್ದು ಎಂದು ದೆಹಲಿ ಉಚ್ಚನ್ಯಾಯಾಲಯ ಮಾಹಿತಿ ಆಯುಕ್ತರ ಆದೇಶವನ್ನು ಕಿತ್ತು ಹಾಕಿತು. W.P. No.10386/2009 dated 01.08.2011

30. ಮಾಹಿತಿ ಆಯುಕ್ತರನ್ನು ವಿರೋದ ಪಕ್ಷದ ನಾಯಕರ ಶಿಪಾರಸ್ಸಿಲ್ಲದೆ ನೇಮಕ ಮಾಡಿದ್ದು ಕಲಂ.15(3)ರ ಉಲ್ಲಂಘನೆಯಲ್ಲವೆ ಎಂಬುದನ್ನು ತಮಿಳುನಾಡು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನ್ಯಾಯಾಲಯವು ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದಾಗ 01.03.2011 ಕ್ಕೆ 33 ಅಭ್ಯರ್ಥಿಗಳ ಹೆಸರನ್ನು ಪಟ್ಟಿ ಮಾಡಲಾಗಿತ್ತು. ಆದರೆ ಫೆಬ್ರವರಿ 28.02.2011 ರಂದು ಹೆಚ್ಚುವರಿಯಾಗಿ ಎರಡು ಹೆಸರುಗಳನ್ನು ಸೇರಿಸಲಾಗಿತ್ತು ಮತ್ತು ಇದನ್ನು ವಿರೋದ ಪಕ್ಷದ ನಾಯಕರಿಗೆ ತಿಳಿಸಿರಲಿಲ್ಲ. ಇದು ಪಾರದರ್ಶಕ ನೀತಿಗೆ ವಿರುದ್ಧ. ಈ ಹಿಂದೆ ಶ್ರೇಷ್ಠ ನ್ಯಾಯಾಲಯ ಒಂದು ಸಾರ್ವಜನಿಕ ಅರ್ಜಿ ವಿಚಾರಣೆ ಸಂದರ್ಭದಲ್ಲಿ ನೀಡಿದ ತೀರ್ಪು (2011) 4 SCC 1 ಅನ್ವಯ ವಿರೋದ ಪಕ್ಷದ ನ್ಯಾಯಕರ ಗಮನಕ್ಕೆ ತರಲಾಗದೆ ಎರಡು ಹೆಸರನ್ನು ಸೇರಿಸಿರುವುದು ತಪ್ಪು ಎಂದು ನೇಮಕಾತಿಯನ್ನು ಅಸಿಂದು ಗೊಳಿಸಿತು. 2012 (1) CTC 113/2012-1-LW-743/AIR 2012 MAD 50

31. ರಾಜ್ಯ ಮುಖ್ಯ ಮಾಹಿತಿ ಆಯುಕ್ತರನ್ನು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ಮೊದಲೇ, ನೇಮಕ ಮಾಡಿರುವುದನ್ನು ಮದ್ರಾಸ್ ಉಚ್ಚನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ಕಲಂ.15(3) ರನ್ವಯ ಮುಖ್ಯ ಮಾಹಿತಿ ಆಯುಕ್ತರನ್ನು ನೇಮಕ ಮಾಡುವಾಗ ಪಾರದರ್ಶಕ ನೀತಿಯನ್ನು ಅನುಸರಿಸಬೇಕು ಮತ್ತು ವಿರೋದ ಪಕ್ಷದ ನಾಯಕರ ಒಪ್ಪಿಗೆ ಇರಬೇಕು. ಈ ಪ್ರಕರಣದಲ್ಲಿ ಶ್ರೇಷ್ಟ ನ್ಯಾಯಾಲಯದ ತೀರ್ಪು (2011) 4 SCC 1 ನನ್ವಯ ನೇಮಕಾತಿ ಪ್ರಕ್ರಿಯೆಗೆ ಮೂವರ ಸಮಿತಿ ಇರತಕ್ಕದೆಂದು, ಆ ಪ್ರಕರಣದಲ್ಲಿ ವಿರೋದ ಪಕ್ಷದ ನ್ಯಾಯಕರಿಗೆ 23.08.2010 ರಂದು ಸಭೆ ಕರೆದ ಬಗ್ಗೆ ಹಿಂಬರಹ ಪಡೆಯಲಾಗಿದ್ದು ಹೆಚ್ಚುವರಿ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಬೇಕೆಂದು ತಿಳಿಸಿದ ನಂತರ, ವಿರೋದ ಪಕ್ಷದ ನ್ಯಾಯಕರು ಸಭೆಗೆ ಗೈರು ಹಾಜರಾಗಿದ್ದು, ಬಹುಮತದ ತೀರ್ಮಾನ ತೆಗೆದುಕೊಂಡು ನೇಮಕ ಮಾಡಿರುವುದು ಶಾಸನಬದ್ಧವಾಗಿದೆ ಎಂದು ಮದ್ರಾಸ್ ಉಚ್ಚನ್ಯಾಯಾಲಯ ತೀರ್ಮಾನಿಸಿತು. 2012 (1) CTC 1/2012-1-LW-6N3

32. ಮಾಹಿತಿ ಆಯೋಗವು ಸಾರ್ವಜನಿಕ ಮಾಹಿತ ಅಧಿಕಾರಿಗೆ ದಾಖಲೆಗಳಿಗೆ ಮರು ವಿಂಗಡಿಸಿ

ಅರ್ಜಿದಾರನಿಗೆ ನೀಡಿದ ಆದೇಶವು ಸೂಕ್ತವೇ ಎಂಬ ವಿಷಯ ಜಾರ್ಖಂಡ್ ಉಚ್ಚನ್ಯಾಯಾಲಯದ ಪರಿಶೀಲನೆಗೆ ಬಂದಾಗ, ಮಾಹಿತಿಯನ್ನು ಪುನರ್ ಸೃಷ್ಟಿ ಮಾಡಲು, ಪುನರ್ ವರ್ಗೀಕರಿಸಲು ಅರ್ಜಿದಾರನಿಗೆ ಮಾಹಿತಿ ನೀಡುವ ಉದ್ದೇಶದಿಂದ ಇಂತಹ ಪ್ರಕರಣದಲ್ಲಿ ಅರ್ಜಿದಾರನು ಸಹ ಇಲಾಖೆ ಜೊತೆ ಸಹಕರಿಸಬೇಕು. ಅದಕ್ಕಾಗಿ ಹೆಚ್ಚುವರಿ ಸಮಯಬೇಕಾಗುತ್ತದೆ. ಆದ್ದರಿಂದ ಸೂಕ್ತ ಸಮಯವನ್ನು ನೀಡಿ ದಾಖಲೆಗಳನ್ನು ಪುನರ್‌ವರ್ಗೀಕರಿಸಲು ಸೂಚಿಸಿ ಅರ್ಜಿ ವಜಾ ಮಾಡಿತು. 2012 (1) ID 199

33. ಉಚ್ಚನ್ಯಾಯಾಲಯ ರಾಜ್ಯ ಮಾಹಿತಿ ಅಯುಕ್ತರ ಹುದ್ದೆಯನ್ನು ಭರ್ತಿ ಮಾಡಲು ನಿರ್ದೇಶನ ನೀಡಬಹುದೇ ಎಂಬ ಪ್ರಶ್ನೆ ಪಂಜಾಬ್ ಉಚ್ಚನ್ಯಾಯಾಲಯ ವಿಭಾಗೀಯ ಪೀಠದ ಮುಂದೆ ಬಂದಾಗ. ಉಚ್ಚನ್ಯಾಯಾಲಯ ಈ ಜವಾಬ್ದಾರಿಯು ರಾಜ್ಯ ಸರ್ಕಾರಗಳಿಗೆ ಸೇರಿದ್ದು, ಇದು ರಾಜ್ಯ ಸರ್ಕಾರವೇ ತೆಗೆದುಕೊಳ್ಳಬೇಕಾದ ತೀರ್ಮಾನ. ಇದಕ್ಕೆ ಉಚ್ಚನ್ಯಾಯಾಲಯದಲ್ಲಿ ರಿಟ್ ಸಲ್ಲಿಸುವ ಅವಶ್ಯಕತೆ ಇಲ್ಲ. ಏಕೆಂದರೆ ರಾಜ್ಯ ಸರ್ಕಾರ ಪ್ರಜೆಗಳ ಅವಶ್ಯಕತೆಯನ್ನು ಪೂರೈಸಲು ಜವಾಬ್ದಾರಿಯನ್ನು ಹೊಂದಿದೆ ಎಂದು ತೀರ್ಮಾನಿಸಿತು. W.P. No.14107/2011 dated 09.01.2012

34. ಮಾಹಿತಿ ಆಯೋಗವು ಎಫ್.ಐ.ಆರ್ ಸಲ್ಲಿಸಲು ನೀಡಿದ ನಿರ್ದೇಶನ, ಅಧಿಕಾರ ವ್ಯಾಪ್ತಿಗೆ ಮೀರಿದ್ದು. ಹಣ ದುರುಪಯೋಗವಾಗಿದೆ ಎಂಬ ಕಾರಣದಿಂದ ಎಫ್.ಐ.ಆರ್ ಸಲ್ಲಿಸಿಲ್ಲವೆಂದು ಪರಿಗಣಿ ಎಫ್.ಐ.ಆರ್ ಸಲ್ಲಿಸುವಂತೆ ಸೂಚಿಸಿರುವುದು ತಪ್ಪು. ಮಾಹಿತಿ ಆಯುಕ್ತರು ಇಂತಹ ಆದೇಶ ನೀಡಲು ಕಾಯಿದೆ ಮತ್ತು ನಿಯಮದಲ್ಲಿ ಅವಕಾಶವಿಲ್ಲ. ಆದ್ದರಿಂದ ಈ ಆದೇಶವನ್ನು ಪಾಲಿಸುವ ಜವಾಬ್ದಾರಿ ಇಲ್ಲ. Special appeal 2/2012 dated 09.01.2012

35. ರಾಜ್ಯ ಮಾಹಿತಿ ಆಯುಕ್ತರು ಕಲಂ.18(1) ರಲ್ಲಿ ಮಾಡಿದ ಆದೇಶಕ್ಕೆ ಕಲಂ.19(1) ರನ್ವಯ ಮೇಲ್ಮನವಿ ಸಲ್ಲಿಸಲಾಗದ್ದು, ಏಕ ಸದಸ್ಯ ಪೀಠ ನೀಡಿದ ಆದೇಶವನ್ನು ಕಿತ್ತು ಹಾಕಿ, ಅರ್ಜಿದಾರ ಮೊದಲನೇ ಮೇಲ್ಮನವಿ ಪ್ರಾಧಿಕಾರದ ಮುಂದೆ 19(1) ರಲ್ಲಿ ಅರ್ಜಿ ಸಲ್ಲಿಸಿಲ್ಲ. ಅರ್ಜಿದಾರ ಕಲಂ.18(1) ರಲ್ಲಿ ರಾಜ್ಯ ಮಾಹಿತಿ ಆಯುಕ್ತರ ಮುಂದೆ ಸಲ್ಲಿಸಿದಾಗ, ಅದನ್ನು ರಾಜ್ಯ ಮಾಹಿತಿ ಆಯುಕ್ತರು ವಿಚಾರಣೆ ಮಾಡಿ ಯಾವುದೆ ವ್ಯಕ್ತಿಯ ಮುಖಾಂತರ ಆದೇಶ ಮಾಡಬೇಕು ಮತ್ತು ಅದು ಅಂತಿಮ ಆದೇಶ. ಆದರೆ ಈ ಪ್ರಕರಣದಲ್ಲಿ ಉಚ್ಚನ್ಯಾಯಾಲಯದಲ್ಲಿ ಏಕ ಸದಸ್ಯ ಪೀಠ ರಿಟ್ ಅರ್ಜಿಯನ್ನು ತಿರಸ್ಕರಿಸಲು ನೀಡಿದ ಕಾರಣ ರಾಜ್ಯ ಮಾಹಿತಿ ಆಯುಕ್ತರ ಆದೇಶ ಮೇಲೆ ಮೇಲ್ಮನವಿ ಕಲಂ.19(1) ರಡಿ ಸಲ್ಲಿಕೆಯಾಗಿದ್ದು, ಅದು 18(1) ರಡಿ ಅರ್ಜಿ ಸಲ್ಲಿಕೆಯಾಗಿದ್ದರೆ ಅದು ರಾಜ್ಯ ಮಾಹಿತಿ ಆಯೋಗ ಸ್ವೀಕರಿಸಿ, ವಿಚಾರಣೆ ಮಾಡಿ ಆದೇಶಿಸಬೇಕಾಗಿತ್ತು. ಕರ್ನಾಟಕ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಕಲಂ.19(1) ರ ಮೊದಲನೇ ಮೇಲ್ಮನವಿ ಸಲ್ಲಿಕೆಯಾಗಿಲ್ಲವಾದ್ದರಿಂದ ಏಕ ಸದಸ್ಯ ಪೀಠದ ಆದೇಶವನ್ನು ಕಿತ್ತು ಹಾಕಿತು. AIR 2012 NOC 302 (KAR)

## ಪಿರ್ಯಾದು/ಅರ್ಜಿಗಳು ಮತ್ತು ಮೇಲ್ಮನವಿ

1. ಮಾಹಿತಿ ಹಕ್ಕು ಕಾಯಿದೆಯಡಿ ಭಾರತದ ಪ್ರತಿಯೊಬ್ಬ ಪ್ರಜೆಗೂ ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಪಡೆಯಲು ಅಧಿಕಾರ ನೀಡುವ ಒಂದು ಕಾಯಿದೆ. ಈ ಕಾಯಿದೆಯಡಿ

ಮಾಹಿತಿ ಪಡೆಯಲು ಅತಿ ಸುಲಭವಾಗಿ, ಕಡಿಮೆ ಹಣದಿಂದ ಸಮರ್ಪಕವಾದ ಮಾಹಿತಿಯನ್ನು ನಿಗದಿತ ಅವದಿಯೊಳಗೆ ಪಡೆಯಲು ಕಲ್ಪಿಸಿದೆ. ಈ ಮಾಹಿತಿಯನ್ನು ಕೊಡಲು ಸಾರ್ವಜನಿಕ ಅಧಿಕಾರಿ ನಿರಾಕರಿಸಿದರೆ ಅಥವಾ ಅವದಿಯೊಳಗೆ ನೀಡದಿದ್ದರೆ, ಅಂತಹ ಪ್ರಸಂಗದಲ್ಲಿ ಆ ಅಧಿಕಾರಿಯ ಮೇಲಾಧಿಕಾರಿಗೆ, ಮೇಲ್ಮನವಿ ಸಲ್ಲಿಸಲು ಮತ್ತು ಎರಡನೇ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಿದೆ. ಅಂದರೆ ಮೊದಲನೇ ಮೇಲ್ಮನವಿ ಯಾವ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿಯನ್ನು ನೀಡಲು ನಿರಾಕರಿಸುತ್ತಾನೋ ಅಥವಾ ಅವಧಿಯೊಳಗೆ ನೀಡುವುದಿಲ್ಲವೋ, ಅಂತಹ ಅಧಿಕಾರಿಯ ಮೇಲಾಧಿಕಾರಿಗೆ ಮತ್ತು ಎರಡನೇ ಮೇಲ್ಮನವಿಯನ್ನು ಕ್ರೇಂದ್ರ/ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಿ ಮಾಹಿತಿ ಪಡೆಯಬಹುದಾಗಿದೆ. ಇದರ ಜೊತೆಗೆ ನೇರವಾಗಿ ಕ್ರೇಂದ್ರ ಮತ್ತು ರಾಜ್ಯ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಅಂದರೆ ಮೊದಲನೇ ಮೇಲ್ಮನವಿ ಪ್ರಾಧಿಕಾರದ ಅವಕಾಶವನ್ನು ಉಪಯೋಗಿಸಿಕೊಳ್ಳದೆ ನೇರವಾಗಿ ಕೇಂದ್ರ/ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಬಹುದು.

ಫಿರ್ಯಾದು/ಅರ್ಜಿ : ಕಾಯಿದೆ ಕಲಂ.18ರಲ್ಲಿ ಮಾಹಿತಿ ಆಯೋಗದ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿಗದಿ ಪಡಿಸಿದೆ ಮತ್ತು ಕಲಂ.19 ರಡಿ ಮೇಲ್ಮನವಿ ಸಲ್ಲಿಸಲು ಅವಕಾಶ ಸಲ್ಲಿಸಿದೆ. ಈ ಎರಡೂ ಕಲಂಗಳನ್ನು ಒಟ್ಟಾಗಿ ಓದಬೇಕು. ಮೊದಲನೆಯದ್ದು ಒಬ್ಬ ಭಾರತದ ಪ್ರಜೆ ನೇರವಾಗಿ ಮಾಹಿತಿ ಆಯೋಗದ ಮುಖಾಂತರ ಮಾಹಿತಿ ಪಡೆಯಬಹುದು ಮತ್ತು ಎರಡನೆಯದಾಗಿ ಮೊದಲನೇ ಮೇಲ್ಮನವಿಯನ್ನು ಸಲ್ಲಿಸಿ ಮಾಹಿತಿಯನ್ನು ಪಡೆಯಬಹುದು. ಅಂದರೆ ಮಾಹಿತಿ ಆಯೋಗವು ಮೇಲ್ಮನವಿಯನ್ನೂ ಸ್ವೀಕರಿಸಬಹುದು ಮತ್ತು ನೇರವಾಗಿ ಅರ್ಜಿಯನ್ನು ಸ್ವೀಕರಿಸಿ ಮಾಹಿತಿಯನ್ನು ನೀಡುವ ವ್ಯವಸ್ಥೆ ಮಾಡಬಹುದು.

ಕೇಂದ್ರ/ರಾಜ್ಯ ಮಾಹಿತಿ ಆಯೋಗವು ಯಾವುದೇ ವ್ಯಕ್ತಿಯಿಂದ ಆರೋಪಗಳನ್ನು/ಅರ್ಜಿಗಳನ್ನು ಸ್ವೀಕರಿಸಿ,

1) ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿ ನೀಡದಿದ್ದಾಗ 2) ಮಾಹಿತಿಯನ್ನು ನಿರಾಕರಿಸಿದಾಗ 3) ನೀಡಿರುವ ಮಾಹಿತಿ ಸಮರ್ಪಕವಿಲ್ಲದಿದ್ದಾಗ 4) ನಿಗದಿ ಪಡಿಸಿರುವ ಶುಲ್ಕವು ಸಮರ್ಪವಿಲ್ಲದಿದ್ದಾಗ (ಹೆಚ್ಚಿಗೆ ಕೇಳಿದಾಗ) 5) ನೀಡಿರುವ ಮಹಿತಿ ತಪ್ಪಿದ್ದರೆ ಅಥವಾ ಕೇಳಿದಕ್ಕಿಂತ ಕಡಿಮೆ ಮಾಹಿತಿ ನೀಡಿದಾಗ 6) ಆಯೋಗವು ಮಾಹಿತಿ ನೀಡಿದಾಗ ಅದು ಸಮರ್ಪಕವಾಗಿಲ್ಲವೆಂದು ತೀರ್ಮಾನಕ್ಕೆ ಬಂದು ಆ ಬಗ್ಗೆ ವಿಚಾರಣೆ ಮಾಡಬಹುದು.

ಈ ಮೇಲ್ಕಂಡ ವಿಚಾರಣೆ ಮಾಡುವಾಗ ಸಿವಿಲ್ ಪ್ರೋಸಿಜರ್ ಕೋಡ್‌ನಲ್ಲಿ ನಿಗದಿ ಪಡಿಸಿರುವ ಈ ನಿಯಮಗಳನ್ನು ಅನುಸರಿಸತಕ್ಕದ್ದು.

1. ಸಾಕ್ಷಿಗಳನ್ನು ಹಾಜರಾಗಲು ಸಮನ್ಸ್ ನೀಡುವುದು
2. ದಾಖಲೆಗಳನ್ನು ಪಡೆಯುವುದು ಮತ್ತು ತಪಾಸಣೆ ಮಾಡುವುದು
3. ಸಾಕ್ಷಿ ಹೇಳಿಕೆಯನ್ನು ಆಫಿಡವಿಟ್ ಮೂಲಕ ಪಡೆಯುವುದು
4. ಸಾರ್ವಜನಿಕ ದಾಖಲೆಗಳನ್ನು ಸಲ್ಲಿಸುವಂತೆ ನಿರ್ದೇಶಿಸುವುದು.
5. ಸಾಕ್ಷಿಗಳಿಗೆ ಸಮನ್ಸ್ ಜಾರಿಮಾಡಿ ದಾಖಲೆಗಳನ್ನು ಸಲ್ಲಿಸುವಂತೆ ಆದೇಶಿಸುವುದು
6. ಮತ್ತಾವುದೇ ನಿಗದಿ ಪಡಿಸಿ ಕ್ರಮಗಳನ್ನು ಜರುಗಿಸುವುದು.

ಮಾಹಿತಿ ಆಯೋಗವು ಆಯೋಗವು, ಅರ್ಜಿಯನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಸಾರ್ವಜನಿಕ ಪ್ರಾಧಿಕಾರದಲ್ಲಿ ನಿರ್ವಹಿಸುವ ಮಾಹಿತಿಯನ್ನು ಪಡೆದು ಪರಿಶೀಲಿಸಬಹುದು. ಈ ರೀತಿ ಪರಿಶೀಲಿಸುವಾಗ ಕಲಂ.8 ರನ್ವಯ ವಿನಾಯಿತಿ ಪಡೆದ ಮಾಹಿತಿಯನ್ನು ನಿರ್ದೇಶನದ ಮೂಲಕ ನೀಡತಕ್ಕದ್ದಲ್ಲ. ಅಂದರೆ ಸೂಕ್ಷ್ಮ ಮತ್ತು ಗುಪ್ತ ಮತ್ತು ಲಂಚ ಮತ್ತು ಮಾನವ ಹಕ್ಕು ಉಲ್ಲಂಘನೆಗೆ ಸಂಭಂದಪಟ್ಟಂತೆ ವಿಚಾರಣೆ ಮಾಡತಕ್ಕದ್ದಲ್ಲ.

**ಮೇಲ್ಮನವಿ** : ಸಾರ್ವಜನಿಕ ಮಾಹಿತಿ ಅಧಿಕಾರಿಯ ಅರ್ಜಿದಾರನಿಗೆ 30 ದಿವಸದೊಳಗಾಗಿ ಮಾಹಿತಿ ನೀಡದಿದ್ದರೆ ಅಂತಹ ಅಧಿಕಾರಿಯು ಮೇಲಾಧಿಕಾರಿ ಮೊದಲನೇ ಮೇಲ್ಮನವಿ ಪ್ರಾಧಿಕಾರವಾಗಿರತಕ್ಕದ್ದು. ಈ ಮಾಹಿತಿ ಲಭ್ಯವಾಗದಿದ್ದಾಗ ಅಥವಾ ಮಾಹಿತಿ ನಿರಾಕರಿಸಿದಾಗ 90 ದಿವಸದೊಳಗಾಗಿ ಎರಡನೇ ಮೇಲ್ಮನವಿಯನ್ನು ಕೇಂದ್ರ/ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಬಹುದಾಗಿದೆ. ವಿಶೇಷ ಕಾರಣಗಳಿಂದ ಮೇಲ್ಮನವಿಯನ್ನು ಅವಧಿಯೊಳಗೆ ದಾಖಲಿಸಲು ವಿಳಂಬವಾದರೆ ವಿಳಂಬಕ್ಕೆ ವಿನಾಯಿತಿ ನೀಡಲು ಆಯೋಗಕ್ಕೆ ಅಧಿಕಾರ ಇರತಕ್ಕದ್ದು. ಆದರೆ ವಿಳಂಬಕ್ಕೆ ಮೇಲ್ಮನವಿ ಸಲ್ಲಿಸಲಾಗದಂತಹ ಕಾರಣಗಳನ್ನು ದಾಖಲಿಸಿದಾಗ ವಿನಾಯಿತಿ ನೀಡಬಹುದು. ಮೂರನೇ ವ್ಯಕ್ತಿ, ಮೊದಲನೇ ಮತ್ತು ಎರಡನೇ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವಿದೆ (ಗುಪ್ತ ಮಾಹಿತಿ ನೀಡಲು ಆದೇಶಿಸಿದಾಗ).

ಮೊದಲನೇ ಮೇಲ್ಮನವಿ ಪ್ರಾಧಿಕಾರವು, ಮೇಲ್ಮನವಿ ಸಲ್ಲಿಕೆಯಾದ 30 ದಿವಸದೊಳಗಾಗಿ ತೀರ್ಮಾನಿಸಬೇಕು. ಈ ಅವಧಿಯನ್ನು 45 ದಿವಸಗಳ ತನಕ ಮಾಹಿತಿ ನೀಡಲು ಅವಕಾಶ ವಿಸ್ತರಿಸಬಹುದು. ಮೊದಲನೇ ಮೇಲ್ಮನವಿ ಪ್ರಾಧಿಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಯ ಆದೇಶವನ್ನು ಮಾರ್ಪಡಿಸಬಹುದು ಮತ್ತು ಆ ಮಾಹಿತಿಗೆ ಸಂಬಂಧಪಟ್ಟಂತೆ ಸಾರ್ವಜನಿಕ, ಮಾಹಿತಿ ಅಧಿಕಾರಿಗೆ ಮಾಹಿತಿ ನೀಡಲು ಆದೇಶಿಸಬಹುದು ಅಥವಾ ಮಾಹಿತಿ ನೀಡಲು ನಿರಾಕರಿಸುವಂತೆ ಹಿಂಬರಹ ನೀಡುವಂತೆ ಸೂಚಿಸಬಹುದು. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ನಿರಾಕರಿಸಲು ಸಾರ್ವಜನಿಕ ಅಧಿಕಾರಿ ನೀಡಿದ ಕಾರಣಗಳಿಗೆ ಪೂರಕವಾಗಿ ಅಥವಾ ವಿರುದ್ಧವಾಗಿ ಮತ್ತಾವುದೇ ಕಾರಣಗಳನ್ನು ನೀಡಿ ಆದೇಶಿಸಬಹುದು. ಮೊದಲನೇ ಮೇಲ್ಮನವಿ ಪ್ರಾಧಿಕಾರವು, ಸಾರ್ವಜನಿಕ ಮಾಹಿತಿ ಅಧಿಕಾರಿಗೆ ದಂಡ ವಿಧಿಸಲು ಸಹ ಅಧಿಕಾರ ಇರುತ್ತದೆ.

ಎರಡನೇ ಮೇಲ್ಮನವಿ ಪ್ರಾಧಿಕಾರ, ಸಾರ್ವಜನಿಕ ಮಾಹಿತಿ ಅಧಿಕಾರ ತೀರ್ಮಾನಗಳಿಗೆ ಕೇಂದ್ರ/ರಾಜ್ಯ ಮಾಹಿತಿ ಆಯೋಗವಾಗಿರತಕ್ಕದ್ದು. ಎರಡನೇ ಮೇಲ್ಮನವಿಯನ್ನು ಮಾಹಿತಿ ಅಧಿಕಾರಿಯು ನಿಗದಿ ಪಡಿಸಿ ಅವಧಿಯೊಳಗೆ ತೀರ್ಮಾನವಾಗದಿದ್ದರೆ ನೇರವಾಗಿ ಸಲ್ಲಿಸಬಹುದು. ಮಾಹಿತಿ ಆಯೋಗದ ಮುಂದೆ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವನ್ನು ನಿಗದಿ ಪಡಿಸಿಲ್ಲ. ನೇರವಾಗಿ ಮಾಹಿತಿ ಆಯೋಗದ ಮುಂದೆ ಅರ್ಜಿ ಸಲ್ಲಿಸುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಅರ್ಜಿ ಸಲ್ಲಿಸಿರಬೇಕು. ಅಂತಹ ಸಂದರ್ಭದಲ್ಲಿ ಮಾಹಿತಿ ನೀಡದಿದ್ದಾಗ ಮಾಹಿತಿ ಆಯೋಗದ ಮುಂದೆ ಮೇಲ್ಮನವಿ ಸಲ್ಲಿಸಬಹುದಾಗಿದೆ.

ಮಾಹಿತಿ ಆಯೋಗವು ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಈ ಕೆಳಕಂಡ ನೀತಿಯನ್ನು ಅನುಸರಿಸತಕ್ಕದ್ದು.

1. ಸಾರ್ವಜನಿಕ ಪ್ರಾಧಿಕಾರವನ್ನು ಸಾರ್ವಜನಿಕ ಮಾಹಿತಿ ಆಯೋಗವೂ, ಕಾಯಿದೆಯಲ್ಲಿ ನಿಗದಿಪಡಿಸಿರುವಂತೆ ಕ್ರಮ ಜರುಗಿಸಲು ಸೂಚಿಸತಕ್ಕದ್ದು.

2. ಸಾರ್ವಜನಿಕ ಪ್ರಾಧಿಕಾರವನ್ನು ಅರ್ಜಿದಾರನಿಗೆ ನಷ್ಟ ತುಂಬಿ ಕೊಡಲು ಪರಿಹಾರ ನೀಡಬಹುದು.

3. ದಂಡವನ್ನು ವಿಧಿಸಬಹುದು.

4. ಆ ಅರ್ಜಿಯನ್ನು ಸ್ಥಿರೀಕರಿಸಬಹುದು.

ಮಾಹಿತಿ ಆಯೋಗವು, ಈ ಮೇಲ್ಕಂಡ ನೀತಿಯನ್ವಯ, ಅರ್ಜಿದಾರರಿಗೆ ಮಾಹಿತಿ ನೀಡಲು ಸಾರ್ವಜನಿಕ ಪ್ರಾಧಿಕಾರಗಳಿಗೆ ಜವಾಬ್ದಾರಿ ಇರುವುದನ್ನು ಸೂಚಿಸಬಹುದು. ಬೇರೆ ಪ್ರಾಧಿಕಾರಗಳಿಂದ ಸಾರ್ವಜನಿಕರು ಮಾಹಿತಿ ಪಡೆಯಬಹುದಾಗಿದ್ದರೆ, ಮಾಹಿತಿ ಹಕ್ಕು ಕಾಯಿದೆಯಡಿ ಯಾವುದೇ ಪರಿಹಾರ ಸಿಗುವುದಿಲ್ಲ ಎಂಬುದನ್ನು ತಿಳಿದಿರತಕ್ಕದ್ದು.

ಮೇಲ್ಕಂಡ ಅರ್ಜಿ ಮತ್ತು ಮೇಲ್ಮನವಿ ಬಗ್ಗೆ ನ್ಯಾಯಾಲಯಗಳ ತೀರ್ಪಿನ ಸಾರಾಂಶ :

1. ಅರ್ಜಿದಾರ ಸಾರ್ವಜನಿಕ ಮಾಹಿತಿ ಅಧಿಕಾರಿಯ ಮುಂದೆ ಮಾಹಿತಿ ಕೇಳಿ ಅರ್ಜಿ ಸಲ್ಲಿಸಿರಬೇಕು. ನೇರವಾಗಿ ಕೇಂದ್ರ ಮಾಹಿತಿ ಆಯೋಗದ ಮುಂದೆ ಅರ್ಜಿ ಸಲ್ಲಿಸತಕ್ಕದ್ದೆಂದು ದೆಹಲಿ ಉಚ್ಚನ್ಯಾಯಾಲಯ ಪ್ರಿಯಾಂಕ ಸರ್‌ಪಾಲ್ ಪ್ರಕರಣದಲ್ಲಿ ತೀರ್ಮಾನಿಸಿತು 2011 (1) ID 77

2. ಸಾರ್ವಜನಿಕ ಮಾಹಿತಿ ಅಧಿಕಾರಿ ನೀಡಿದ ಹಿಂಬರಹ/ಉತ್ತರವನ್ನು ಆದೇಶವೆಂದು ತಿಳಿಯತಕ್ಕದ್ದು ಎಂದು ಕೇರಳ ಉಚ್ಚನ್ಯಾಯಾಲಯ ಪ್ರಭಾಕಾರ್ ಪಣಿಕರ್ ಪ್ರಕರಣದಲ್ಲಿ ತೀರ್ಮಾನಿಸಿತು. ಸಾರ್ವಜನಿಕ ಮಾಹಿತಿ ಅಧಿಕಾರಿ ಕಲಂ.7 ರಲ್ಲಿ ನೀಡಿದ ಉತ್ತರವನ್ನು ಆದೇಶವೆಂದು ತಿಳಿಯತಕ್ಕದ್ದು. ಕಲಂ.19 ರಲ್ಲಿ ಉಲ್ಲೇಖಿಸಿರುವ ತೀರ್ಮಾನ ಮತ್ತು ಆದೇಶ ಮೇಲ್ಮನವಿಗೆ ಸಂಬಂಧಪಟ್ಟಿದೆ. ಸಾರ್ವಜನಿಕ ಮಾಹಿತಿ ಅಧಿಕಾರಿ ನೀಡಿದ ಉತ್ತರವನ್ನು ಆದೇಶವೆಂದು ತಿಳಿಯತಕ್ಕದ್ದು. 2010 (3) KLT 209/2010 (2) ID 464

3. ಎರಡನೇ ಮೇಲ್ಮನವಿ ಪ್ರಾಧಿಕಾರ, ಅಂದರೆ ರಾಜ್ಯ ಮಾಹಿತಿ ಆಯೋಗವು, ಮೇಲ್ಮನವಿಗೆ ಸಮರ್ಪಕ ಮಾಹಿತಿ ನೀಡುವ ಪ್ರಾಧಿಕಾರ ಎಂದು ಮದ್ರಾಸ್ ಉಚ್ಚನ್ಯಾಯಾಲಯ ವಿವಿ ಮಿನರಲ್ ಪ್ರಕರಣದಲ್ಲಿ ತೀರ್ಮಾನಿಸಿತು. ಎರಡನೇ ಮೇಲ್ಮನವಿಯೂ ಒಂದು ವಿಸ್ಕೃತ ಪ್ರಾಧಿಕಾರವಾಗಿದ್ದು, ಅದಕ್ಕೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ನೀಡಿದ್ದು ಅದು ಒಂದು ಸಮರ್ಪಕ ವ್ಯವಸ್ಥೆ. ಆದ್ದರಿಂದ ನೇರವಾಗಿ ರಿಟ್ ಅರ್ಜಿ ಸಲ್ಲಿಸತಕ್ಕದ್ದಲ್ಲವೆಂದು ಮತ್ತು ರಾಜ್ಯ ಮಾಹಿತಿ ಆಯೋಗದ ಮುಂದೆ ಅರ್ಜಿ ಸಲ್ಲಿಸಲು ಸೂಚಿಸಿತು. (2007) 4 MLJ 394/2009 (1) ID 108

4. ಮೊದಲನೇ ಮತ್ತು ಎರಡನೇ ಮೇಲ್ಮನವಿ ಅವಕಾಶ ಉಪಯೋಗಿಸಿದರೆ ಪರಿಹಾರ ಸಿಗಲು ವಿಳಂಬವಾಗುವುದರಿಂದ ನೇರವಾಗಿ ರಿಟ್ ಅರ್ಜಿ ದಾಖಲಿಸಿದರೆ ತುರ್ತು ಪರಿಹಾರ ಪಡೆಯಬಹುದಾಗಿದೆ ಎಂಬ ವಾದವನ್ನು ಅಲಹಾಬಾದ್ ಉಚ್ಚನ್ಯಾಯಾಲಯ ತಿರಸ್ಕರಿಸಿತು. ಪ್ರತಿಯೊಬ್ಬ ಪ್ರಜೆ ಮೂಲಭೂತ ಹಕ್ಕಿಗೆ ಅನುಸಾರವಾಗಿ ರಿಟ್ ಅರ್ಜಿ ಸಲ್ಲಿಸಬಹುದಾಗಿರುವುದನ್ನು ಸಮರ್ಥಿಸಿದರೂ, ಮಾಹಿತಿ ಕಾಯಿದೆಯಲ್ಲಿರುವ ಪರಿಹಾರಗಳನ್ನು ಉಪಯೋಗಿಸಿಕೊಳ್ಳದೆ ರಿಟ್ ದಾಖಲಿಸಲು ಸೂಕ್ತವಲ್ಲವೆಂದು ತೀರ್ಮಾನಿಸಿತು. ಮತ್ತು ಕಾಯಿದೆಯಲ್ಲಿನ ಮೇಲ್ಮನವಿ ಅವಕಾಶವನ್ನು ಉಪಯೋಗಿಸಿಕೊಳ್ಳಲು ರಿಟ್ ಅರ್ಜಿ ವಜಾ ಮಾಡಿತು. 2010 (1) ID 475

5. ರಾಜ್ಯ ಮಾಹಿತಿ ಆಯೋಗದ ಮುಂದೆ ಎದುರು ಅರ್ಜಿದಾರರು ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಜಾರಿಗೆ

ಕೊಡಲಾರದೆ ಉಲ್ಲಂಘಿಸಿರುವುದರಿಂದ, ಅದು ರಾಜ್ಯ ಮಾಹಿತಿ ಆಯೋಗದ ಆದೇಶವನ್ನು ಉಲ್ಲಂಘಿಸಿದಂತೆ. ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ಆಯೋಗದ ಆದೇಶವನ್ನು ಗಮನಿಸಿರುವುದರ ಜೊತೆಗೆ ಸಂಬಂಧಪಟ್ಟ ವ್ಯಕ್ತಿಗಳಿಗೆ ಮಾಹಿತಿ ನೀಡಲಾರದೆ ರಿಟ್ ದಾಖಲಿಸಿರುವುದು ಸರಿಯಾದ ಕ್ರಮವಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯ ಕೃಷ್ಣಪ್ಪ ಹೊಸಮನಿ ಪ್ರಕರಣದಲ್ಲಿ ತೀರ್ಮಾನಿಸಿತು. ಕಾಯಿದೆಯಲ್ಲಿ ನೀಡಿರುವ ಮೇಲ್ಮನವಿ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗದೆ ನೇರವಾಗಿ ರಿಟ್ ಅರ್ಜಿ ಮೂಲಕ ಪರಿಹಾರ ಪಡೆಯಲಾಗದು. W.P. No.15530/2008 dated 24.10.2009

6. ರಾಜ್ಯ ಮಾಹಿತಿ ಆಯೋಗವು ಒಂದು ಮೇಲ್ಮನವಿಯನ್ನು ವಿಚಾರಣೆ ಮಾಡುವಾಗ ಮೌಖಿಕ ಮತ್ತು ಲಿಖಿತ ಸಾಕ್ಷಿಗಳನ್ನು ಪ್ರಮಾಣ ಅಥವಾ ಅಫಿಡವಿಟ್ ಮೂಲಕ ಪಡೆಯಬೇಕು ಎಂದು ಕರ್ನಾಟಕ ಉಚ್ಚನ್ಯಾಯಾಲಯ ಕೆಪಿಎಸ್‌ಸಿ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಆಯೋಗವು ಸಂಬಂಧಪಟ್ಟವರಿಗೆ ಅವಕಾಶವನ್ನು ನೀಡಿ ಲಿಖಿತ ದಾಖಲೆ ಅಥವಾ ಮೌಖಿಕ ಹೇಳಿಕೆ ಅಥವಾ ಪ್ರಮಾಣ ಪತ್ರದ ಮೂಲಕ ಮಾಹಿತಿ ಪಡೆದಿಲ್ಲ. ಲಿಖಿತ ವಾದಗಳನ್ನು ಮಂಡಿಸಲು ಮಾತ್ರ ಸಂಬಂಧಪಟ್ಟ ವ್ಯಕ್ತಿಗಳಿಗೆ ಅವಕಾಶ ನೀಡಿರುವುದು ಕಾನೂನು ಪಾಲನೆಯಾಗಿರುವುದಿಲ್ಲ ಎಂದು ತೀರ್ಮಾನಿಸಿ ಪ್ರಕರಣವನ್ನು ಆಯೋಗಕ್ಕೆ ವರ್ಗಾಹಿಸಿತು. 2008 (2) ID 399

7. ಕೇಂದ್ರ ಮಾಹಿತಿ ಆಯೋಗ ಅರ್ಜಿದಾರನಿಗೆ ವರದಿಯ ಪ್ರತಿಯನ್ನು ನೀಡಲು ಆದೇಶಿಸಿದಾಗ, ಅದನ್ನು ದೆಹಲಿ ಉಚ್ಚನ್ಯಾಯಾಲಯದ ಮುಂದೆ ಜೆ.ಪಿ.ಮಾರ್ಗನ್ ಪ್ರಕರಣದಲ್ಲಿ ದಾಖಲಿಸಿತು. ರಿಟ್ ಅರ್ಜಿದಾರನಿಗೆ ನೋಟೀಸ್ ನೀಡಲಾಗದೆ ವರದಿಯನ್ನು ನೀಡಲು ಆದೇಶಿಸಿರುವುದು ತಪ್ಪು. ಕೇಂದ್ರ ಮಾಹಿತಿ ಆಯೋಗವು ರಿಟ್ ಅರ್ಜಿದಾರನಿಗೆ ಅವಕಾಶ ನೀಡಿ ನೋಟೀಸ್ ನೀಡಿದ ನಂತರ ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಲು ಸೂಚಿಸಿತು ಮತ್ತು ಪ್ರಕರಣದ ಮೇಲೆ ಯಾವುದೇ ಅಭಿಪ್ರಾಯವನ್ನು ವ್ಯಕ್ತ ಪಡಿಸಲಿಲ್ಲ. W.P. No.6054/2007 dated 08.04.2009

8. ರಾಜ್ಯ ಮಾಹಿತಿ ಆಯೋಗವು ರಿಟ್ ಅರ್ಜಿದಾರನಿಗೆ ಪ್ರಕರಣದಲ್ಲಿ ಹಾಜರಾಗುವಂತೆ ನೋಟೀಸ್ ಜಾರಿ ಮಾಡಲಾಗದೆ ಮಾಡಿರುವ ಆದೇಶವನ್ನು ಸರಿಯಾದ ಕ್ರಮವಲ್ಲವೆಂದು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ಎಸ್.ಎಸ್.ಜೋಹಲ್ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಅರ್ಜಿದಾರನಿಗೆ ಬೇಕಾದ ಮಾಹಿತಿಯನ್ನು ಪ್ರಕರಣ ದಾಖಲಿಸುವ ಪೂರ್ವದಲ್ಲಿಯೇ ನೀಡಲಾಗಿತ್ತು ಎಂದು ಅಂಶವನ್ನು ಗಮನಿಸಿತು. W.P. No.1785/2008 Dated 28.07.2009

9. ಮಾಹಿತಿ ಹಕ್ಕು ಕಾಯಿದೆ ಒಂದು ಸಂಪೂರ್ಣ ಕಾಯಿದೆ. ಇದರಲ್ಲಿ ಮಾಹಿತಿ ಆಯೋಗಕ್ಕೆ ಸಿವಿಲ್ ನ್ಯಾಯಾಲಯಕ್ಕಿರುವ ಅಧಿಕಾರಗಳನ್ನು ನೀಡಲಾಗಿದೆ ಎಂದು ಶಾಂತನಮೂರ್ತಿ ಪ್ರಕರಣದಲ್ಲಿ ಮದ್ರಾಸ್ ಉಚ್ಚನ್ಯಾಯಾಲಯ ತೀರ್ಮಾನಿಸಿತು. ಕಲಂ.25 ರನ್ವಯ ಮಾಹಿತಿ ಆಯುಕ್ತರು ಪ್ರಕರಣಗಳ ಬಗ್ಗೆ ಮಾರ್ಗದರ್ಶನ ನೀಡುವ ಮತ್ತು ವರದಿ ಮಾಡುವ ಅಧಿಕಾರ ಇದೆ. ಕಲಂ.18 ರಲ್ಲಿ ಆಯುಕ್ತರು ಸಿವಿಲ್ ನ್ಯಾಯಾಲಯದ ಅಧಿಕಾರಗಳಾದ ಸಮನ್ಸ್ ಜಾರಿ ಮಾಡುವುದು, ಹಾಜರಾತಿಗೆ ನಿರ್ದೇಶನ ನೀಡುವುದು, ಮಾಹಿತಿ, ದಾಖಲೆ ನೀಡಲು ಮತ್ತು ಸಾಕ್ಷಿಗಳನ್ನು ಪರೀಶಿಲಿಸುವ ಅಧಿಕಾರಹೊಂದಿದೆ ಮತ್ತು ಇಂತಹ ಆದೇಶಗಳನ್ನು ಪಾಲಿಸದಿದ್ದರೆ ದಂಡ ವಿಧಿಸುವ ಅಧಿಕಾರವು

ಇದೆ. ನ್ಯಾಯಾಲಯವು ಮಾಹಿತಿ ಕಾಯಿದೆ ಅಡಿ, ಮಾಹಿತಿ ನೀಡಲು ನಿರಾಕರಿಸಿದಾಗ ಅಥವಾ ಆಯೋಗವು ಅಥವಾ ಆದೇಶವು ಕಾನೂನು ಬದ್ದವಾಗಿಲ್ಲದಿದ್ದರೆ ಮಾತ್ರ, ರಿಟ್ ಅರ್ಜಿ ಮೂಲಕ ಪರಿಹಾರ ಪಡೆಯಬಹುದು. W.P No.23075/2009 dated 12.11.2009

10. ಯಾವನೇ ಒಬ್ಬ ಅರ್ಜಿದಾರ ಪರಿಹಾರವನ್ನು ನೇರವಾಗಿ ರಿಟ್ ಮುಖಾಂತರ ಪಡೆಯತಕ್ಕದ್ದಲ್ಲವೆಂದು ಅಲಹಾಬಾದ್ ಉಚ್ಚನ್ಯಾಯಾಲಯ ಆನಂದ್ ಪ್ರಕಾಶ್ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಹಕ್ಕು ಕಾಯಿದೆಯಲ್ಲಿ ಕಲಂ.19(1) ರಡಿ ಮೊದಲನೇ ಮೇಲ್ಮನವಿ ಮುಖಾಂತರ ಮತ್ತು ಕಲಂ.19(3) ರಲ್ಲಿ ಎರಡನೇ ಮೇಲ್ಮನವಿ ಮುಖಾಂತರ ಪರಿಹಾರ ಪಡೆಯಬಹುದಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರ, ಅರ್ಜಿಯನ್ನು ಮಾಹಿತಿ ಅಧಿಕಾರಿಯ ಮುಂದೆ ದಾಖಲಿಸಿ ಅದು ತೀರ್ಮಾನವಾಗುವ ಮೊದಲೇ ರಿಟ್ ಅರ್ಜಿ ದಾಖಲಿಸಿರುವುದು ತಪ್ಪು. ಅರ್ಜಿದಾರ ಒಂದೇ ಸಮಯದಲ್ಲಿ ಎರಡು ಪ್ರಾಧಿಕಾರಿಗಳಿಂದ ಪರಿಹಾರ ಪಡೆಯಲು ಪ್ರಯತ್ನಿಸಿರುವುದು ತಪ್ಪು ಎಂದು ಪ್ರಕರಣವನ್ನು ವಜಾ ಮಾಡಿತು. 2010 (1) ID 473

11. ಮಾಹಿತಿ ಹಕ್ಕು ಕಾಯಿದೆಯ ನಿಯಮ 2006 ರನ್ವಯ, ನಿಯಮ 3 ಮತ್ತು 4 ರಲ್ಲಿ ರಾಜ್ಯ ಮಾಹಿತಿ ಆಯುಕ್ತರು ಒಂದು ಪ್ರಕರಣದಲ್ಲಿ ಪೂರ್ಣ ಪೀಠ ವಿಚಾರಣೆ ಮಾಡಬೇಕೆಂದು ತೀರ್ಮಾನಿಸಿ ಅದನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರಿಗೆ ಕಳುಹಿಸಿದರು. ಈ ಪ್ರಕರಣ ಬಾಕಿ ಇರುವಾಗ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಪೂರ್ಣ ಪೀಠವನ್ನು ರಚಿಸದೆ, ತಾನೆ ಪೀಠವನ್ನು ರಚಿಸಿಕೊಂಡು ವಿಚಾರಣೆ ಮಾಡುವುದು ತಪ್ಪು ಮತ್ತು ಈ ಪ್ರಕರಣದಲ್ಲಿ ಪೂರ್ಣ ಪೀಠಕ್ಕೆ ವಿಚಾರಣೆಗಾಗಿ ಕಳುಹಿಸಿಬೇಕು ಎಂದು ಕರ್ನಾಟಕ ಉಚ್ಚನ್ಯಾಯಾಲಯ ಬೆಂಗಳೂರು ಅಂತರ ರಾಷ್ಟ್ರಿಯಾ ವಿಮಾನ ನಿಲ್ದಾಣದ ಪ್ರಕರಣದಲ್ಲಿ ತೀರ್ಮಾನಿಸಿತು. W.P No.8127/2008 dated 21.07.2008

12. ಏಕ ಸದಸ್ಯ ಪೀಠ ಪೂರ್ಣ ಪೀಠವನ್ನು ರಚಿಸಲು ವಿನಂತಿಸಿದಾಗ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರಿಗೆ, ಪೂರ್ಣ ಪೀಠ ರಚಿಸಿದ ಬೇರೆ ಮಾರ್ಗವಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯ ಶಿವರಾಮ ರೆಡ್ಡಿ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಆದೇಶದಲ್ಲಿ ಏಕ ಸದಸ್ಯ ಪೀಠ ಪೂರ್ಣ ಪೀಠ ರಚಿಸಲು ಆದೇಶ ನೀಡತಕ್ಕದ್ದಲ್ಲವೆಂಬ ವಾದವನ್ನು ಒಪ್ಪಲಿಲ್ಲ. W.P. No.10837/2008 dated 11.08.2008

13. ಮಾಹಿತಿ ಆಯೋಗವು ರಿಟ್ ಅರ್ಜಿದಾರನಿಗೆ ಹಾಜರಾಗುವಂತೆ ನೀಡಿದ ನೋಟೀಸ್‌ನ್ನು ರದ್ದುಗೊಳಿಸಲು ರಿಟ್ ಅರ್ಜಿ ದಾಖಲಿಸಿರುವುದನ್ನು ವಜಾ ಮಾಡಿ, ಕರ್ನಾಟಕ ಉಚ್ಚನ್ಯಾಯಾಲಯ ಗ್ರೈನ್‌ಮರ್ಚೆಂಟ್ಸ್ ಕೋಆಪರೇಟಿವ್ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ಅಂದರೆ ಮಾಹಿತಿ ಆಯೋಗವು ಹಾಜರಾಗುವಂತೆ ನೀಡಿದ ನೋಟೀಸ್‌ನ್ನು ಆ ಪ್ರಾಧಿಕಾರದ ಮುಂದೆಯೇ ಪ್ರತಿಪಾದಿಸಬೇಕು ಎಂದು ಸೂಚಿಸಿತು. 2009 (2) ID 148

14. ಮಾಹಿತಿ ಆಯೋಗವು ತನಗೆ ನೀಡಿದ ಕಾರ್ಯ ವ್ಯಾಪ್ತಿಯೊಳಗೆ ಕಾರ್ಯ ರೂಪಿಸಬೇಕು ಎಂದು ಕರ್ನಾಟಕ ಉಚ್ಚನ್ಯಾಯಾಲಯ ಗೋವಿಂದಯ್ಯ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಮಾಹಿತಿ ಆಯುಕ್ತರು ಅವರಿಗೆ ನೀಡಿದ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸಬೇಕು ಮತ್ತು ಅವನ ಅಧಿಕಾರದ ವ್ಯಾಪ್ತಿಗೆ ಮೀರಿ ಕಾರ್ಯನಿರ್ವಹಿಸಬೇಕೆಂಬ ಅವಕಾಶ ಮಾಹಿತಿ ಕಾಯಿದೆಯಲಿಲ್ಲವೆಂದು ತೀರ್ಮಾನಿತು. W.P No.14507/2008 dated 25.11.2008

15. ಕೇಂದ್ರ ಮಾಹಿತಿ ಆಯೋಗವು ರೂ.25,000/– ವನ್ನು ದಂಡವೆಂದು ವಿಧಿಸಿ ಆದೇಶಿಸಿರುವುದನ್ನು ಪ್ರಶ್ನಿಸಿ ದೆಹಲಿ ಉಚ್ಚನ್ಯಾಯಾಲಯದ ಮುಂದೆ ಎಲ್‌ಐಸಿ ಪ್ರಕರಣ ದಾಖಲಿಸಿದಾಗ, ಈ ಪ್ರಕರಣದಲ್ಲಿ ಮಾಹಿತಿ ಹಕ್ಕು ಕಾಯಿದೆ ಅನ್ವಯ ಕೇಂದ್ರ ಮಾಹಿತಿ ಆಯೋಗ ಶಿಸ್ತು ಕ್ರಮಕ್ಕೆ ಮತ್ತು ದಂಡ ಆದೇಶ ತಪ್ಪು ಎಂದು ರದ್ದು ಪಡಿಸಿತು. W.P No.8078/2008 dated 27.04.2008

16. ಮಾಹಿತಿ ಆಯೋಗದಡಿ ಮೇಲ್ಮನವಿ ಪ್ರಾಧಿಕಾರಯು ಕಲಂ.19 ರಲ್ಲಿ ನೀಡಿದ ಅಧಿಕಾರದ ವ್ಯಾಪ್ತಿಯೊಳಗೆಕಾರ್ಯನಿರ್ವಹಿಸತಕ್ಕದೆಂದು ಕರ್ನಾಟಕ ಉಚ್ಚನ್ಯಾಯಾಲಯ ಬಿಬಿಎಂಪಿ ಪ್ರಕರಣದಲ್ಲಿ ತೀರ್ಮಾನಿಸಿತು. ಕೆವಿಯಟ್ ದಾಖಲಿಸಲು ಕಾನೂನು ಕೋಶಕ್ಕೆ ಸೂಚಿಸಿ, ಮುಂದಿನ ಕ್ರಮ ಜರುಗಿಸಿದ ಬಗ್ಗೆ ವಿವರಿಸಲು ಕೇಳಿದಾಗ ಮತ್ತು ಅದಕ್ಕೆ ಅರ್ಜಿದಾರನು ಕೆಲವು ಮಾರ್ಪಾಡುಗಳನ್ನು ಸೂಚಿಸಿದಾಗ ಮತ್ತು ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳಿಗೆ ಹಾಜರಾಗುವಂತೆ ನೀಡಿದ ಆದೇಶ ತಪ್ಪು ಎಂದು ಆದೇಶಿಸಿತು. W.P No.35456/2009 dated 03.12.2009

17. ಮಾಹಿತಿ ಆಯೋಗವು ಮೇಲ್ಮನವಿಯನ್ನು ತೀರ್ಮಾನಿಸುವಾಗ ಕಾಯಿದೆ ಕಲಂ8(1)(ಜೆ) ವಿನಾಯಿತಿ ಇದೆ ಎಂದು ಕಾರಣ ನೀಡಿ ತೀರ್ಮಾನಿಸತಕ್ಕದ್ದಲ್ಲ. ಅದಕ್ಕೆ ಸಕಾರಣಗಳನ್ನು ನೀಡಬೇಕೆಂದು ಆಡಳಿತ ನೀತಿ. ಕಾರಣ ನೀಡದೆ ವಿನಾಯಿತಿ ಇದೆ ಎಂದು ಆದೇಶ ನೀಡತಕ್ಕದ್ದಲ್ಲವೆಂದು ದೀಪ ಪಬ್ಲಿಕ್ ಶಾಲೆ ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯ ತೀರ್ಮಾನಿಸಿತು. W.P No.8363/2008 dated 15.09.2009

18. ಮಾಹಿತಿ ಹಕ್ಕು ಕಾಯಿದೆ ನಿಯಮದಡಿ ನಿಯಮ 5 ರಲ್ಲಿ ಮೇಲ್ಮನವಿಯನ್ನು ತೀರ್ಮಾನಿಸಲು ನಿಯಮಗಳನ್ನು ರೂಪಿಸಿದೆ ನಿಯಮ 6 ರಲ್ಲಿ ನೋಟೀಸ್ ನೀಡುವ ಬಗ್ಗೆ ಉಲ್ಲೇಖವಿದೆ ಮತ್ತು ನಿಯಮ 7 ರಲ್ಲಿ ಅರ್ಜಿದಾರರನ್ನು/ ಮೇಲ್ಮನವಿದಾರರನ್ನು ವೈಯಕ್ತಿಕ ಹಾಜರಾತಿ ಆದೇಶವಿದೆ. ಈ ಪ್ರಕರಣದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಪ್ರಕರಣವು ವಿಚಾರಣೆ ಮಾಡುವಾಗ ಅರ್ಜಿದಾರನ ಹಾಜರಾತಿ ಅವಶ್ಯಕ ಎಂದಿದೆ. ರಾಜ್ಯ ಮಾಹಿತಿ ಆಯೋಗವು ಆದೇಶವನ್ನು ಪರಿಶೀಲಿಸಿದಾಗ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮತ್ತು ಮೂರನೇ ವ್ಯಕ್ತಿಗೆ ನೋಟೀಸ್ ಜಾರಿ ಮಾಡಿ ವ್ಯಕ್ತಿಗೆ ನೋಟೀಸ್ ನೀಡಿದ ಬಗ್ಗೆ ದಾಖಲೆ ಇಲ್ಲ. ಮತ್ತು ಮಾಹಿತಿಯನ್ನು ನಿಗದಿ ಪಡಿಸಿದ ದಿನಾಂಕದಂದು ನೀಡದಿದ್ದರೆ ವೈಯಕ್ತಿವಾಗಿ ಹಾಜರಾಗುವಂತೆ ನೀಡಿದ ಆದೇಶವನ್ನು ಉಲ್ಲೇಖಿಸಿದೆ. ಈ ಪ್ರಕರಣದಲ್ಲಿ ಮೇಲ್ಕಂಡ ನಿಯಮಕ್ಕೆ ವಿರುದ್ದವಾಗಿ ಪ್ರಕರಣ ತೀರ್ಮಾನಿಸಲಾಗಿದೆ ಎಂದು ಸ್ವಯಂಭುಲಿಂಗಂ ಪ್ರಾಥಮಿಕ ಶಾಲೆ ಪ್ರಕರಣದಲ್ಲಿ ಮದ್ರಾಸ್ ಉಚ್ಚನ್ಯಾಯಾಲಯ ತೀರ್ಮಾನಿಸಿತು. W.P No.4002/2009 & 4425/2009 dated 18.09.2005

19. ಮಾಹಿತಿ ಹಕ್ಕು ಕಾಯಿದೆ ಕಲಂ.15(2) ರಲ್ಲಿ ಉಪಯೋಗಿಸಿದ ಶಬ್ದ "shall" ಪದವನ್ನು "May" ಎಂದು ಅರ್ಥೈಸಬಹುದೆ ಎಂಬುದನ್ನು ಕಲ್ಕತ್ತ, ಉಚ್ಚನ್ಯಾಯಾಲಯ ಟಾಟಾ ಮೋಟಾರ್ಸ್ ಪ್ರಕರಣದಲ್ಲಿ "ಷಲ್" ಎಂಬ ಪದವನೇ ಅರ್ಥೈಸಬೇಕು ಎಂದು ತೀರ್ಮಾನಿಸಿತು. ರಾಜ್ಯ ಮಾಹಿತಿ ಆಯುಕ್ತರು ಜೊತೆಗೆ ಮುಖ್ಯ ಆಯುಕ್ತರು ಇರಬೇಕೆಂದು ವಿವರಿಸಿ ಪದದ ಅರ್ಥವನ್ನು ವಿಸ್ತರಿಸಿತು. ಅಂದರೆ ಕಲಂ.15(2) ರಲ್ಲಿ ಉಪಯೋಗಿಸಿರುವ ಪದ ಒಬ್ಬ ಮುಖ್ಯ ಆಯುಕ್ತರ ಜೊತೆಗೆ ಮತ್ತೊಬ್ಬ ಆಯುಕ್ತರುನ್ನು ನೇಮಿಸಲೇಬೇಕೆಂದು ತೀರ್ಮಾನಿಸಿತು. 2011 (2) ID 325

20. ಮಾಹಿತಿ ಹಕ್ಕು ಕಾಯಿದೆಯ ಕಲಂ.19(1) ರಲ್ಲಿ ಮೇಲ್ಮನವಿ ಸಲ್ಲಿಸಲು ನಿಗದಿ ಪಡಿಸಿರುವ ಕಲಂ.7 ರಲ್ಲಿ

ಅರ್ಜಿಯನ್ನು ತೀರ್ಮಾನಿಸುವ ಅವಧಿ ಕಲಂ.19(6) ರಲ್ಲಿ ಮೇಲ್ಮನವಿ ಉಪಕಲಂ.1 ರಲ್ಲಿ ಅರ್ಜಿ ಸ್ವೀಕರಿಸಿದ 30 ದಿನಗಳೊಳಗಾಗಿ ಮೇಲ್ಮನವಿ ತೀರ್ಮಾನಿಸಬೇಕೆಂದು ನಿಗದಿ ಪಡಿಸಿದ್ದು ಇದು ಕಾನೂನು ರಚನೆಕಾರರ ಉದ್ದೇಶ. ಇದನ್ನು ಎಷ್ಟಾದರು ಅವಧಿ ತೆಗೆದುಕೊಂಡು ತೀರ್ಮಾನಿಸಬಹುದು ಎಂದು ಅರ್ಥೈಸತಕ್ಕದ್ದಲ್ಲ. ಕಲಂ.7(1) ರಲ್ಲಿ ನಿಗದಿ ಪಡಿಸಿರುವ ಅವಧಿ ಶಾಶನಬ್ದ ನಿರ್ದೇಶನ ಇದರಂತೆ ಕಲಂ.19(1 ಮತ್ತು 3) ರಲ್ಲಿ ನಿಗದಿ ಪಡಿಸಿರುವ ಅವಧಿಯೂ ಒಂದು ಶಾಶನಬ್ದ ನಿರ್ದೇಶನ ಎಂದು ಕಲ್ಕತ್ತ, ಉಚ್ಚನ್ಯಾಯಾಲಯ ಟಾಟಾ ಮೋಟಾರ್ಸ್ ಪ್ರಕರಣದಲ್ಲಿ ತೀರ್ಮಾನಿಸಿತು. 2011 (2) ID 325 Calcutta

21. ಸಾರ್ವಜನಿಕ ಮಾಹಿತಿ ಅಧಿಕಾರಿವು, ಮಾಹಿತಿ ಕೇಳಿದ ಅರ್ಜಿದಾರನಿಗೆ ಮಾಹಿತಿ ನೀಡಲು ನಿರಾಕರಿಸಿದಾಗ, ಅದಕ್ಕೆ ಮೇಲ್ಮನವಿ ಕಲಂ.19 ರಲ್ಲಿ ಸಲ್ಲಿಸಬೇಕು ಎಂದು ಬಾಂಬ್ ಉಚ್ಚನ್ಯಾಯಾಲಯ ರಿಸರ್ವ್ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ರಾಜ್ಯ ಮಾಹಿತಿ ಆಯೋಗವು ನೇರವಾಗಿ ಒಂದು ಅರ್ಜಿಯನ್ನು ಸ್ವೀಕರಿಸಬೇಕಾದರೆ, ಸಾರ್ವಜನಿಕ ಮಾಹಿತಿ ಅಧಿಕಾರಿಯು ಲಭ್ಯವಿಲ್ಲವೆಂದು ಅಥವಾ ನೇಮಕ ಮಾಡಿಲ್ಲವೆಂದು ಕಾರಣ ನೀಡಿ ನೇರವಾಗಿ ಅರ್ಜಿ ಸಲ್ಲಿಸಬಹುದು. ಲೋಕಸಭೆ ಕಾನೂನು ರಚಿಸುವಾಗ ಅದರ ಉದ್ದೇಶ ಮೇಲ್ಮನವಿ ಅವಕಾಶವನ್ನು ಉಪಯೋಗಿಸಿಕೊಳ್ಳದೇ (ಕಲಂ.19 ರಡಿ) ನೇರವಾಗಿ ಅರ್ಜಿ ಸಲ್ಲಿಸತಕ್ಕದ್ದಲ್ಲ ಎಂದು ಈ ಪ್ರಕರಣದಲ್ಲಿ ರಾಜ್ಯ ಮಾಹಿತಿ ಆಯೋಗವು ಮೊದಲನೇ ಅರ್ಜಿದಾರರನ್ನು ಕಲಂ.18 ರಡಿ ಸ್ವೀಕರಿಸಿದ್ದು ತಪ್ಪು ಎಂದು ತೀರ್ಮಾನಿಸಿತು. AIR 2012 Bom 1

22. ಸಾರ್ವಜನಿಕ ಮಾಹಿತಿ ಅಧಿಕಾರಿ ಒಂದು ಅರ್ಜಿಯನ್ನು ತಿರಸ್ಕರಿಸಿದಾಗ ಅಥವಾ ಆ ಅರ್ಜಿಯ ಮೇಲೆ ಯಾವುದೇ ಕ್ರಮ ಜರುಗಿಸದೇ ಇದ್ದಾಗ (ನಿಗದಿತ ಅವಧಿಯೊಳಗೆ) ಅಂತಹ ಅರ್ಜಿದಾರನಿಗೆ ಮೇಲ್ಮನವಿ ಸಲ್ಲಿಸಲು ಎರಡು ಅವಕಾಶಗಳು ಇವೆ. ಒಂದನೇ ಅವಕಾಶವೆಂದರೆ ಕಲಂ.19(1) ರಡಿ ಮೇಲ್ಮನವಿ ಪ್ರಾಧಿಕಾರಕ್ಕೆ ಮತ್ತು ಎರಡನೆಯದಾಗಿ ರಾಜ್ಯ ಮಾಹಿತಿ ಆಯೋಗದ ಮುಂದೆ ಅರ್ಜಿ ಸಲ್ಲಿಸಿ ಮಾಹಿತಿಯನ್ನು ಕೇಳುವುದು. ಮಾಹಿತಿ ನೀಡಲು ನಿರಾಕರಿಸಿದಾಗ ರಾಜ್ಯ ಮಾಹಿತಿ ಆಯೋಗವು, ಈ ಪ್ರಕರಣದಲ್ಲಿ ವಿಚಾರಣೆಗೆ ಮುಂದಾಗಿರುವ ಕಲಂ.18(1) ರನ್ವಯ ಸಮರ್ಥನಿಯವೆಂದು ಟಾಟಾ ಮೋಟಾರ್ಸ್ ಪ್ರಕರಣದಲ್ಲಿ ಕಲ್ಕತ್ತ; ಉಚ್ಚನ್ಯಾಯಾಲಯ ತೀರ್ಮಾನಿಸಿತು. 2011 (2) ID 325 Calcutta

ಸೂಚನೆ : ಈ ತೀರ್ಮಾನವು ಶ್ರೇಷ್ಟ ನ್ಯಾಯಾಲಯದ ಮುಖ್ಯ ಮಾಹಿತಿ ಆಯುಕ್ತರು ಪ್ರಕರಣದಲ್ಲಿ ನೀಡಿದ ತೀರ್ಪು 2011 (3) SCALE 460/2012 (1) KLT SN18/2012 (1) ID 1/2012-1-LW-209/AIR 2012 SE 864 ರನ್ವಯ ಊರ್ಜಿತವಾಗುವುದಿಲ್ಲ.

23. ಮಾಹಿತಿ ಹಕ್ಕು ಕಾಯಿದೆಯಡಿ ಎರಡನೇ ಮೇಲ್ಮನವಿಯನ್ನು 45 ದಿವಸದೊಳಗಾಗಿ ತೀರ್ಮಾನಿಸಬೇಕೆಂದು ಕಲ್ಕತ್ತ ಉಚ್ಚನ್ಯಾಯಾಲಯ ಅಖಿಲ್‌ಕುಮಾರ್ ರಾಯ್ ಪ್ರಕರಣದಲ್ಲಿ ತೀರ್ಮಾನಿಸಿತು. ಕಲಂ.19(6) ರಲ್ಲಿ ಮೇಲ್ಮನವಿ ತೀರ್ಮಾನಿಸಲು ಅವಧಿಯನ್ನು ತೀರ್ಮಾನಿಸಿದೆ. ಮೇಲ್ಮನವಿಯನ್ನು 30 ದಿವಸದೊಳಗಾಗಿ ಮತ್ತು ಗರಿಷ್ಠ 45 ದಿವಸದೊಳಗಾಗಿ ಕಾರಣಗಳನ್ನು ದಾಖಲಿಸಿ ತೀರ್ಮಾನಿಸಬೇಕು. ಎರಡನೇ ಮೇಲ್ಮನವಿಯನ್ನು ಸಹ 45 ದಿವಸದೊಳಗೆ ತೀರ್ಮಾನಿಸಬೇಕು. W.P. No.11933/2010 dated 07.07.2010

24. ಮಾಹಿತಿ ಹಕ್ಕು ಕಾಯಿದೆಯಡಿ, ಮಾಹಿತಿಯನ್ನು ನಿರಾಕರಿಸಿದಾಗ, ಗ್ರಾಹಕರ ನ್ಯಾಯಾಲಯದಲ್ಲಿ

ಅರ್ಜಿ ಸಲ್ಲಿಸಬಹುದೇ ಎಂಬುದನ್ನು ಮದ್ರಾಸ್ ಉಚ್ಚನ್ಯಾಯಾಲಯ ಅರಂತಂಗ್ಯ ಕೆಮಿಕಲ್ಸ್ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಹಕ್ಕು ಕಾಯಿದೆಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿಯನ್ನು ನೀಡಲು ನಿರಾಕರಿಸಿದಾಗ ಕಲಂ.19 ರಡಿ ಮೇಲ್ಮನವಿ ಸಲ್ಲಿಸಬಹುದಾಗಿದೆ. ಮತ್ತು ಅದರಲ್ಲಿ ಸಫಲನಾಗದಿದ್ದರೆ, ಎರಡನೇ ಮೇಲ್ಮನವಿ ರೂಪದಲ್ಲಿ ರಾಜ್ಯ ಮಾಹಿತಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಕಲಂ.23 ರಲ್ಲಿ ನ್ಯಾಯಾಲಯಗಳು ಇಂತಹ ಪ್ರಕರಣದಲ್ಲಿ ಮಧ್ಯೆ ಪ್ರವೇಶ ಮಾಡಬಾರದೆಂದು ನಿರ್ಬಂದ ವಿಧಿಸುತ್ತದೆ. ಅಂದರೆ ಮೇಲ್ಮನವಿ ರೂಪದಲ್ಲಿ ಮಾಹಿತಿ ಕಾಯಿದೆ ಯಡಿಯಲ್ಲಿಯೇ ಪರಿಹಾರ ಪಡೆಯಬೇಕು. ಈ ಪ್ರಕರಣದಲ್ಲಿ ಮಾಹಿತಿ ಕೇಳಿರುವುದು ಒಂದು ಖಾಸಗಿ ಸಂಸ್ಥೆಯ ಬಗ್ಗೆ ಮತ್ತು ಈ ಮಾಹಿತಿಯನ್ನು ಖಾಸಗಿ ಸಂಸ್ಥೆಯಿಂದ ಪಡೆಯಬಹುದೇ ಇಲ್ಲವೆ ಎಂಬುದನ್ನು ಮಾಹಿತಿ ಕಾಯಿದೆಯಡಿಯಲ್ಲಿಯೇ ಪರಿಹಾರ ಪಡೆಯಬೇಕೆ ಹೊರತು ಬೇರೆ ಪ್ರಾಧಿಕಾರದಿಂದಲ್ಲ. W.P. No.8084/2010 date 28.10.2011

ಸೂಚನೆ : ಇದಕ್ಕೆ ಪೂರಕವಾಗಿ ಹೊಸ ತಿರುಪೂರ್ ಏರಿಯಾ ಅಭಿವೃದ್ಧಿ ನಿಗಮದ ಪ್ರಕರಣದಲ್ಲಿ ತಮಿಳುನಾಡು ಉಚ್ಚನ್ಯಾಯಾಲಯ ಒಂದು ಖಾಸಗಿ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆಯಡಿ ಬರುವುದರ ಬಗ್ಗೆ ಪರಿಶೀಲಿಸಬೇಕು. ಎದುರು ಅರ್ಜಿದಾರರು ಒಂದು ಸಂಸ್ಥೆ ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತದೆಂದು ತೀರ್ಮಾನಿಸುವ ಪೂರ್ವದಲ್ಲಿಯೇ ನೇರವಾಗಿ ಗ್ರಾಹಕರ ನ್ಯಾಯಾಲಯಕ್ಕೆ, ಗ್ರಾಹಕನೆಂದು, ಅರ್ಜಿಸಲ್ಲಿಸಿರುವುದು ಸರಿಯಲ್ಲವೆಂದು ಮದ್ರಾಸ್ ಉಚ್ಚನ್ಯಾಯಾಲಯ ತೀರ್ಮಾನಿಸಿತು. 2010 (4) MLJ 1110/2010 (5) CTC 98/2011 (2) ID 27

**<u>ದಂಡಗಳು</u>**

1. ಮಾಹಿತಿ ಹಕ್ಕು ಕಾಯಿದೆಯಲ್ಲಿ ಮಾಹಿತಿಯನ್ನು ನೀಡಲು, ನೀಡುವ ಬಗ್ಗೆ ಅವಧಿಯೊಳಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ, ಕೇಂದ್ರ ಮಾಹಿತಿ ಆಯೋಗ ಅಥವಾ ರಾಜ್ಯ ಮಾಹಿತಿ ಆಯೋಗ, ಪ್ರಕರಣವನ್ನು ತೀರ್ಮಾನಿಸುವಾಗ ದಂಡದ ರೂಪದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ದಿನಕ್ಕೆ ರೂ.250 ರಂತೆ ದಂಡ ವಿಧಿಸಲು ಮತ್ತು ಗರಿಷ್ಠ ರೂ.25,000 ನಿಗದಿ ಪಡಿಸಿದೆ. ಈ ತೀರ್ಮಾನ ತೆಗೆದುಕೊಳ್ಳುವಾಗ ಗಮನಿಸಬೇಕಾದ ಅಂಶಗಳೆಂದರೆ 1) ಮಾಹಿತಿ ಕೇಳಿದ ಅರ್ಜಿಯನ್ನು ಸ್ವೀಕರಿಸದೇ ಇರುವುದು ಅಥವಾ ನಿರಾಕರಿಸುವುದು. 2) ಮಾಹಿತಿಯನ್ನು ಕಲಂ.7(1) ರಲ್ಲಿ ನಿಗದಿ ಪಡಿಸಿದ ಅವದಿಯೊಳಗೆ ನೀಡದಿದ್ದರೆ 3) ದುರುದ್ದೇಶದಿಂದ ಮಾಹಿತಿ ನೀಡದಿದ್ದರೆ 4) ಮಾಹಿತಿ ತಪ್ಪೇಂದು, ಅಪೂರ್ಣವೆಂದು ಗೊತ್ತಿದ್ದರೂ ಅಂತಹ ಮಾಹಿತಿ ನೀಡುವುದು ಮತ್ತು 5) ಮಾಹಿತಿ ನೀಡದಂತೆ ಒತ್ತಡ ತರುವುದು. ಈ ಮೇಲ್ಕಂಡ ಕಾರಣಗಳನ್ನು ವಿಮರ್ಶಿಸುವಾಗ ಸಮರ್ಪಕ ಕಾರಣಗಳಿಲ್ಲದೆ ಮೇಲ್ಕಂಡ ತೊಡಕು ಉಂಟು ಮಾಡಿದಾಗ, ಸಾರ್ವಜನಿಕ ಮಾಹಿತಿ ಅಧಿಕಾರಿಗೆ, ದಂಡದ ರೂಪದಲ್ಲಿ ನಿಗದಿ ಪಡಿಸುವ ಅಧಿಕಾರ ಕೇಂದ್ರ/ರಾಜ್ಯ ಮಾಹಿತಿ ಆಯೋಗಕ್ಕೆ ಇರತಕ್ಕದ್ದು. ಕಾಯಿದೆ ಕಲಂ.19(5) ರಲ್ಲಿ ಮಾಹಿತಿ ನೀಡಲು ನಿರಾಕರಿಸುವ ಜವಾಬ್ದಾರಿ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಇದ್ದು, ಅದನ್ನು ಸಮರ್ಥಿಸಿಕೊಳ್ಳದಿದ್ದರೆ, ಅಂದರೆ, ಸಕಾರಣಕ್ಕೆ ಪೂರಕವಲ್ಲದ ಮಾಹಿತಿಯನ್ನು ನೀಡದಿದ್ದರೆ, ಮಾಹಿತಿ ಆಯೋಗವು ಪ್ರತಿ ದಿನ ರೂ.250 ದಂಡವನ್ನು ವಿಧಿಸುವುದು ಆಯೋಗದ ಜವಾಬ್ದಾರಿ.

ಸಕಾರಣಗಳಿಲ್ಲದೆ ಮಾಹಿತಿ ನೀಡಿಲ್ಲವೆಂದು ಆಯೋಗ ತೀರ್ಮಾನಿಸದ ಹೊರತು ದಂಡ ವಿಧಿಸುವುದನ್ನು ತಪ್ಪಿಸಬಾರದು. ಕಲಂ.20(1) ರಲ್ಲಿ ಆಯೋಗಕ್ಕೆ ದಂಡ ವಿದಿಸುವುದರಿಂದ ವಿನಾಯಿತಿ ಇಲ್ಲ. ಸಾರ್ವಜನಿಕ ಮಾಹಿತಿ ಅಧಿಕಾರಿ ಸತತವಾಗಿ ಸಕಾರಣಗಳಿಲ್ಲದೆ ಮಾಹಿತಿ ನೀಡದಿದ್ದರೆ, ಅಂತಹ ವ್ಯಕ್ತಿಗಳ ಮೇಲೆ ಸೇವಾ ನಿಯಮಗಳನ್ವಯ ಶಿಸ್ತು ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸೂಚಿಸುವ ಜವಾಬ್ದಾರಿ ಇದೆ. ಇದರ ಜೊತೆಗೆ ದಂಡವನ್ನು ವಿಧಿಸುವ ಪೂರ್ವದಲ್ಲಿ ಸಂಬಂಧಪಟ್ಟ ವ್ಯಕ್ತಿಗೆ, ಮಾಹಿತಿ ನೀಡುವ/ನಿರಾಕರಿಸುವ ಬಗ್ಗೆ ಸಾರ್ವಜನಿಕ ಮಾಹಿತಿ ಅಧಿಕಾರಿ ಸಮರ್ಪಕ ಕಾರ್ಯ ನಿರ್ವಹಿಸದ ಬಗ್ಗೆ ಆಯೋಗವು ದೃಡೀಕರಿಸಿಕೊಳ್ಳಬೇಕು ಮತ್ತು ಇದಕ್ಕೆ ಪೂರಕವಾಗಿ ನೋಟೀಸ್ ಜಾರಿ ಮಾಡಬೇಕು.

ಸಾರ್ವಜನಿಕ ಮಾಹಿತಿ ಅಧಿಕಾರಿ, ಅರ್ಜಿ ಸ್ವೀಕರಿಸಿದ ನಂತರ, ಆ ಅರ್ಜಿಯಲ್ಲಿ ಕೇಳಿರುವ ಮಾಹಿತಿ ಮತ್ತೊಬ್ಬ ಅಧಿಕಾರಿಯ ವಶದಲ್ಲಿದೆ ಎಂದು, ಅಂತಹ ಅಧಿಕಾರಿಯಿಂದ ಮಾಹಿತಿ ಕೇಳಿದ್ದರೆ, ಆ ಮಾಹಿತಿಯನ್ನು ಆ ಮೂರನೇ ಅಧಿಕಾರಿ ನೀಡದಿದ್ದರೆ, ಅಂತಹ ಅಧಿಕಾರಿಗೂ ದಂಡ ವಿಧಿಸುವ ಅಧಿಕಾರ ಇರತಕ್ಕದ್ದು. ಇದರ ಜೊತೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸಹಕರಿಸುವ ಮತ್ತಿತ್ತರ ಅಧಿಕಾರಿಗಳು ದಂಡದ ವ್ಯಾಪ್ತಿಗೆ ಬರುತ್ತಾರೆ.

ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿದಾರ ಕೇಳಿದ ಮಾಹಿತಿ ವಿನಾಯಿತಿ ಪಡೆದಿದೆ ಎಂದು ತೀರ್ಮಾನಿಸಿದಾಗ, ಅದನ್ನು ನಿಗದಿ ಪಡಿಸಿದ ಅವಧಿಯೊಳಗೆ ತಿಳಿಸಬೇಕು. ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂಬ ತೀರ್ಮಾನವನ್ನು ಸಹ ನಿಗದಿ ಪಡಿಸಿದ ಅವಧಿಯೊಳಗೆ ತೆಗೆದುಕೊಳ್ಳಬೇಕು.

<u>**ದಂಡ ವಿಧಿಸುವ ಬಗ್ಗೆ ನ್ಯಾಯಾಲಯಗಳ ತೀರ್ಪಿನ ಸಾರಾಂಶ :**</u>

1. ಮಾಹಿತಿ ಆಯೋಗವು, ಉದ್ದೇಶ ಪೂರಕವಾಗಿ ಮಾಹಿತಿ ನೀಡಿಲ್ಲವೆಂದು ತೀರ್ಮಾನಕ್ಕೆ ಬಂದಾಗ ಪ್ರಕರಣದಲ್ಲಿ ಮುಂದುವರಿಯಬಹುದು. ಅಂದರೆ ಮಾಹಿತಿ ಸಾರ್ವಜನಿಕ ಅಧಿಕಾರಿ ಸಕಾರಣಗಳಿಂದ ಅವಧಿಯೊಳಗೆ ಮಾಹಿತಿ ನೀಡದಿದ್ದಾಗ, ಅದನ್ನು ಸಮರ್ಪಕ ಕಾರಣವೆಂದು ಪರಿಗಣಿಸಬೇಕು ಮತ್ತು ದುರುದ್ದೇಶದಿಂದ ಮಾಹಿತಿಯನ್ನು ನಿರಾಕರಿಸಿಲ್ಲವೆಂದು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ರಾಜಬಾಲ ಪ್ರಕರಣದಲ್ಲಿ ತೀರ್ಮಾನಿಸಿತು. 2008 (2) ID 362

2. ಒಂದು ಪ್ರಕರಣವನ್ನು ಕಲಂ.20 ರಲ್ಲಿ ಕೈಬಿಡುವಾಗ, ನೋಟೀಸ್ ಜಾರಿ ಮಾಡದೆ, ಕೈಬಿಡತಕ್ಕದ್ದಲ್ಲವೆಂದು ದೆಹಲಿ ಉಚ್ಚನ್ಯಾಯಾಲಯ ಜಯಕಾಂತ್‌ಗುಪ್ತ ಪ್ರಕರಣದಲ್ಲಿ ತೀರ್ಮಾನಿಸಿತು. ಕೇಂದ್ರ ಮಾಹಿತಿ ಆಯೋಗವು ಒಂದು ಪ್ರಕರಣವನ್ನು ವಿಚಾರಣೆ ಮಾಡುವಾಗ, ಅದನ್ನು ಕೈಬಿಡಬೇಕೆಂದು ಮತ್ತು ಪರಿಹಾರವನ್ನು ಅಥವಾ ದಂಡವನ್ನು ಪಾವತಿಸುವ ಬಗ್ಗೆ ತೀರ್ಮಾನಿಸದೆ ಕಡತವನ್ನು ಕೈದು ಮಾಡಿರುವುದು ತಪ್ಪು. ಕೇಂದ್ರ ಮಾಹಿತಿ ಆಯೋಗವು ಪ್ರಕರಣವನ್ನು ತೀರ್ಮಾನಿಸುವಾಗ, ಅದು ಒಂದು ಅರೆ ನ್ಯಾಯಿಕ ಪ್ರಾಧಿಕಾರವಾಗಿದ್ದು, ಪ್ರಕರಣವನ್ನು ತೀರ್ವಾನ ಮಾಡುವಾಗ ಪಾರದರ್ಶಕ ನೀತಿಯನ್ನು ಅನುಸರಿಸಿ ತೀರ್ಮಾನಿಸಬೇಕು. ಕಡತದಲ್ಲಿ ಟಿಪ್ಪಣಿ ಬರೆದು ಮುಕ್ತಾಯ ಮಾಡತಕ್ಕದ್ದಲ್ಲ ಎಂದು ಸೂಚಿಸಿ ಯಾವ ಸ್ಥಿಯಲ್ಲಿ ಖೈದು ಮಾಡಲಾಗಿತ್ತೋ ಆ ಸ್ಥಿತಿಯಿಂದ ಮತ್ತೆ ಪ್ರಕರಣ ಪ್ರಾರಂಭಿಸಲು ಸೂಚಿಸಿತು. 2008 (2) ID 430

3. ದಂಡವನ್ನು ವಿಧಿಸುವಾಗ, ಸಕಾರಣಗಳಿಲ್ಲದೆ ವಿಧಿಸತಕ್ಕದ್ದಲ್ಲ. ದಂಡವನ್ನು ವಿಧಿಸುವಾಗ ಸಕಾರಣಗಳಿಲ್ಲದೆ ನಿಗದಿತ ಅವಧಿಯೊಳಗೆ, ಅಂದರೆ 30 ದಿವಸದೊಳಗೆ, ಮಾಹಿತಿ ನೀಡದಿದ್ದರೆ, ದಂಡವನ್ನು ವಿಧಿಸತಕ್ಕದ್ದು. ಮಾಹಿತಿ ಲಭ್ಯವಿಲ್ಲವೆಂಬ ಮತ್ತು ಮಾಹಿತಿ ಪಡೆಯಲು ತೆಗೆದುಕೊಂಡ ಕ್ರಮಗಳ ಪೂರಕವಾಗಿ ಮಾಹಿತಿಯನ್ನು ನೀಡಿದಾಗ ಅದು ಸಕಾರಣವಾಗುತ್ತದೆ ಎಂದು ಎಸ್.ಪಿ.ಅರೋರ ಪ್ರಕರಣದಲ್ಲಿ ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ತೀರ್ಮಾನಿಸಿತು. 2009 (1) ID 1/ AIR 2009 P&H 53

4. ಮಾಹಿತಿ ಆಯೋಗ ಒಂದು ಅರೆ ನ್ಯಾಯಿಕ ನಡವಳಿಕೆಯಾಗಿದ್ದು ದಂಡ ವಿಧಿಸುವ ಅಧಿಕಾರವನ್ನು ಪಡೆದಿದೆ. ಈ ಪ್ರಕರಣದಲ್ಲಿ ಮಾಹಿತಿ ಆಯೋಗವು ಮಾಹಿತಿ ನಿರಾಕರಿಸಲು ಸಹಕಾರಣಗಳಿವೆ ಎಂಬುದನ್ನು ದಾಖಲಿಸಿಲ್ಲ. ಕಾರಣಗಳಿಗೆ ಮತ್ತು ತೀರ್ಮಾನಕ್ಕೆ ವ್ಯತ್ಯಾಸವನ್ನು ಗಮನಿಸಿಲ್ಲ ಪ್ರಾಧಿಕಾರವೂ ತನ್ನ ಅಭಿಪ್ರಾಯವನ್ನು ದಾಖಲಿಸುವಾಗ ಯಾವ ಕಾರಣಗಳಿಂದ ತೀರ್ಮಾನಿಸಲಾಗಿದೆ ಎಂಬುದನ್ನು ದಾಖಲಿಸಬೇಕು. ಸಕಾರಣಗಳಿಂದ ಮಾಹಿತಿಯನ್ನು ನೀಡಲಾಗಿಲ್ಲ ಎಂಬ ತೀರ್ಮಾನವನ್ನು ಕಾರಣಗಳೆಂದು ತಿಳಿಯಲಾಗದು. ಕಾರಣಗಳನ್ನು ಸ್ಪಷ್ಟವಾಗಿ ದಾಖಲಿಸಬೇಕು ಕಲಂ.20 ರಲ್ಲಿ ಕೇಂದ್ರ ಮಾಹಿತಿ ಆಯೋಗಕ್ಕೆ ಮುಲಾಜಿಲ್ಲದೆ ದಂಡವಿಧಿಸುವ ಅಧಿಕಾರ ನೀಡಿದೆ. ಅಂತಹ ತೀರ್ಮಾನ ತೆಗೆದುಕೊಳ್ಳುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿ ಸಕಾರಣಗಳಿಲ್ಲದೆ ಮಾಹಿತಿಯನ್ನು ನಿರಾಕರಿಸಲಾಗಿದೆ ಅಥವಾ ನೀಡಲಾಗಿಲ್ಲ ಎಂಬುದನ್ನು ಸ್ಪಷ್ಟವಾಗಿ ದಾಖಲಿಸಬೇಕು. ಆ ರೀತಿ ದಾಖಲಿಸುವಾಗ ಯಾರೆ ಆ ದಾಖಲೆಯನ್ನು ನೋಡಿದರೂ ಅದೆ ಅರ್ಥ ಬರುವಂತೆ ಇರಬೇಕು ಮತ್ತು ಅದಕ್ಕೆ ದಾಖಲೆಗಳನ್ನು ಉಲ್ಲೇಖಿಸಬೇಕು. ಸಾರ್ವಜನಿಕ ಮಾಹಿತಿ ಅಧಿಕಾರಿ ಉದ್ದೇಶ ಪೂರಕವಾಗಿ ಅಥವಾ ದುರುದ್ದೇಶದಿಂದ ತಪ್ಪು ಮಾಡಿದರೆ ಅದನ್ನು ಸ್ಪಷ್ಟವಾಗಿ ದಂಡ ವಿಧಿಸುವ ಮೊದಲು ದಾಖಲಿಸಬೇಕು ಎಂಬು ಅಲಹಾಬಾದ್ ಉಚ್ಚನ್ಯಾಂಯಾಲಂಯು ಡಾ. ಕಲ್ಪನಾತ್ ಜೌಬೆ ಪ್ರಕರಣದಲ್ಲಿ ತೀವರ್ಾನಿಸಿತು. 2010 (1) ID 608

5. ಮಾಹಿತಿ ಪ್ರಾಧಿಕಾರವು ತನ್ನ ಅಧಿಕಾರವನ್ನು ಚಲಾಯಿಸಿ, ಕಲಂ.20 ರಲ್ಲಿ ದಂಡ ವಿಧಿಸುವಾಗ ಕಾರಣಗಳನ್ನು ಸ್ಪಷ್ಟವಾಗಿ ದಾಖಲಿಸಬೇಕು ಮತ್ತು ಸಕಾರಣಗಳಿಂದ ಮಾಹಿತಿ ನೀಡಲಾಗಿಲ್ಲವೆಂದು ಮನದಟ್ಟು ಮಾಡಿಕೊಳ್ಳಬೇಕು. ಅಂದರೆ ಮಾಹಿತಿಯನ್ನು ನೀಡಲು ಸಾರ್ವಜನಿಕ ಮಾಹಿತಿ ಅಧಿಕಾರಿ, ಕಲಂ.7 ರನ್ವಯ ಮಾಹಿತಿ ನಿರಾಕರಿಸಿದ ಆಧಾರದ ಮೇಲೆ ದಾಖಲೆಗಳ ಸಮೇತ ಆದೇಶಿಸಬೇಕು. ಮಾಹಿತಿ ನೀಡಲಾಗಿಲ್ಲವೆಂಬ ಒಂದು ವಾಕ್ಯದಿಂದ ದಂಡ ವಿಧಿಸಲಾಗದು ಶಾಸನಬದ್ದ ಅಧಿಕಾರವನ್ನು ಚಲಾಯಿಸುವಾಗ, ಕಾನೂನಿನ ಅವಕಾಶವನ್ನು ಸಮರ್ಪಕವಾಗಿ ಪಾಲಿಸಬೇಕು ಎಂಬ ಪಾಟ್ನಾ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಅರಬಿಂದ್ ಪ್ರಸಂಗ್ ಸಿಂಗ್ ಪ್ರಕರಣದಲ್ಲಿ ತೀರ್ಮಾನಿಸಿತು. 2010 (1) ID 535/ AIR 2010 Patna 75

6. ಪ್ರತಿಯೊಂದು ಪ್ರಕರದಲ್ಲಿಯೂ ದಂಡ ವಿಧಿಸುವಬೇಕೆಂಬ ಷರತ್ತಿಲ್ಲ. ಮಾಹಿತಿ ನೀಡಲು ವಿಳಂಬವಾದಾಗ, ಯಾವ ವ್ಯಕ್ತಿಯಿಂದ ವಿಳಂಬವಾಗಿದೆ ಎಂದು ಪರಿಗಣಿಸಬೇಕು. ಈ ಪ್ರಕರಣದಲ್ಲಿ ಒಬ್ಬ ಸೂಪರಿಂಟೆಂಡೆಂಡ್ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮಾಹಿತಿ ನೀಡದಿದ್ದಾಗ ಮತ್ತು ಅದು ಸಕಾರಣಗಳಿಂದ ಎಂಬುದನ್ನು ದಾಖಲಿಸಿಬೇಕು. ಈ ಪ್ರಕರಣದಲ್ಲಿ ಮಾಹಿತಿ ನೀಡಲು ಸಕಾರಣಗಳಿತ್ತು ಎಂಬುದನ್ನು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ಪಂಜಾಬ್

ಸರ್ಕಾರ ಮತ್ತು ರಾಜ್ಯ ಮಾಹಿತಿ ಆಯೋಗದ ಪ್ರಕರಣದಲ್ಲಿ ತೀರ್ಮಾನಿಸಿತು. 2010 (1) ID 489

7. ಮುಖ್ಯ ಮಾಹಿತಿ ಆಯುಕ್ತರು 63 ದಿನಗಳ ವಿಳಂಬವನ್ನು ಸ್ಪಷ್ಟವಾಗಿ ದಾಖಲಿಸಿ, ಆ ವಿಳಂಬ ಉದ್ದೇಶ ಪೂರಕವಾಗಿ ಅಲ್ಲವೆಂದು ತೀರ್ಮಾನಿಸಿತು ಮತ್ತು ದಂಡ ವಿಧಿಸುವ ಅವಶ್ಯಕವಿಲ್ಲವೆಂದು ದಾಖಲಿಸಿತು. ಈ ಪ್ರಕರಣವನ್ನು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಿದಾಗ, ಮುಖ್ಯ ಮಾಹಿತಿ ಆಯುಕ್ತರು ನೀಡಿದ ಆದೇಶಕ್ಕೆ ಮಧ್ಯೆ ಪ್ರವೇಶ ಮಾಡುವ ಅವಶ್ಯಕವಿಲ್ಲವೆಂದು ತೀರ್ಮಾನಿಸಿತು. ಅಂದರೆ ಸಕಾರಣಗಳಿಂದ ಮಾಹಿತಿ ನೀಡಲಾಗಿಲ್ಲ ಮತ್ತು ಮುಖ್ಯ ಮಾಹಿತಿ ಆಯುಕ್ತರ ಆದೇಶ ಸಮರ್ಪಕವಾಗಿದೆ ಎಂದು ತೀರ್ಮಾನಿಸಿತು. 2008 (1) ID 493

8. ಮುಖ್ಯ ಮಾಹಿತಿ ಆಯುಕ್ತರು ಪ್ರತಿಯೊಂದು ಪ್ರಕರಣದಲ್ಲಿಯೂ ದಂಡವನ್ನು ವಿಧಿಸಿ, ಇಲಾಖಾ ವಿಚಾರಣೆ ಮಾಡಬೇಕೆಂದು ಆದೇಶಿಸಬೇಕಾಗಿಲ್ಲ. ಆದರೆ ಮಾಹಿತಿ ನೀಡಲು ವಿಳಂಬವಾಗಿರುವುದನ್ನು ಗಮನಿಸಿ ಸಕಾರಣಗಳಿಲ್ಲದೆ ತೀರ್ಮಾನಕ್ಕೆ ಬಂದು ದಂಡ ಮತ್ತು ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿರುವುದನ್ನು ಕಿತ್ತು ಹಾಕಿ ಉತ್ತರಖಾಂಡ್ ಉಚ್ಚನ್ಯಾಯಾಲಯ ಚಂಪಾ ಉಪ್ರೇತಿ ಪ್ರಕರಣದಲ್ಲಿ ತೀರ್ಮಾನಿಸಿತು. 2011 (1) ID 99

9. ಕಲಂ.20 ಮಾಹಿತಿಯನ್ನು ನೀಡದೆ ಇದ್ದಾಗ, ಅದು ಒಂದು ದಂಡ ವಿಧಿಸುವ ಪ್ರಕ್ರಿಯೆ. ಈ ಪ್ರಕರಣದಲ್ಲಿ ಒಬ್ಬ ಸಹಾಯಕ ಸಾರ್ವಜನಿಕ ಅಧಿಕಾರಿ ಎರಡನೇ ಅರ್ಜಿದಾರರಿಂದ ಬಂದ ಮಾಹಿತಿ ಅರ್ಜಿಯನ್ನು ಕೇಲವು ಕೆಟ್ಟ ಪದಗಳನ್ನು ಉಪಯೋಗಿಸಿ ವಾಪಸ್ ನೀಡಿದಾಗ, ಅದನ್ನು ನಿರಾಕರಿಸಲಾಗಿದೆ ಎಂದು ತೀರ್ಮಾನಿಸಬೇಕು. ಮಾಹಿತಿಯನ್ನು ನೀಡಲು ಸಕಾರಣಗಳಿಲ್ಲ ಮತ್ತು ಆ ನಂತರ ಮತ್ತೆ ಅರ್ಜಿ ಸಲ್ಲಿಸಿದಾಗ 7 ತಿಂಗಳು ವಿಳಂಬವಾಗಿತ್ತು. ಅದಕ್ಕಾಗಿ ರೂ.10,000/– ದಂಡವನ್ನು ವಿಧಿಸಲಾಗಿತ್ತು. ಇದನ್ನು ಪ್ರಶ್ನಿಸಿ ಕೇರಳ ಉಚ್ಚನ್ಯಾಯಾಲಯದ ಏಕ ಸದಸ್ಯ ಪೀಠದ ಮುಂದೆ ಬಂದಾಗ ಅದನ್ನು ಪುರಸ್ಕರಿಸಲಿಲ್ಲ ಮತ್ತು ಅದನ್ನು ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಿದಾಗ ಯಾವುದೇ ತಪ್ಪು ಆಗಿಲ್ಲವೆಂದು ತೀರ್ಮಾನಿಸಿತು. ಆದರೂ ರೂ.10,000/– ದಂಡವನ್ನು ವಿಭಾಗೀ ಪೀಠ ರೂ.5,000/– ಕ್ಕೆ ಇಳಿಸಿತು. W.A 1553/2008 dated 11.06.2012

10. ದಂಡವನ್ನು ವಿಧಿಸುವ ಪೂರ್ವದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ನೋಟೀಸ್ ಜಾರಿ ಮಾಡುವುದು ಅವಶ್ಯಕ. ಈ ಪ್ರಕರಣದಲ್ಲಿ ಮಾಹಿತಿ ಅಧಿಕಾರಿಯೂ 30 ದಿನಗಳ ಅವಧಿಯೊಳಗೆ ವರ್ಗಾವಣೆ ಹೊಂದಿದ್ದರಿಂದ ಆ ಅವಧಿ ಪೂರ್ಣವಾಗುವ ಸಮಯದಲ್ಲಿ ಆ ಅಧಿಕಾರಿ ಕೆಲಸದಲ್ಲಿರಲ್ಲಿಲ್ಲ. ಆದರೆ ಕಾರಣ ಕೇಳುವ ನೋಟೀಸನ್ನು ಆ ವ್ಯಕ್ತಿ ಕಾರ್ಯನಿರ್ವಹಿಸುತ್ತಿದ್ದ ಹುದ್ದೆಗೆ ನೀಡಲಾಗಿತ್ತು. ಅಂದರೆ ತಪ್ಪು ವ್ಯಕ್ತಿಗೆ ಆ ನೋಟೀಸ್ ನೀಡಲಾಗಿರುವುದರಿಂದ, ಅದಕ್ಕೆ ಉತ್ತರ ನೀಡಲಾಗಿರುವುದಿಲ್ಲ. ಆದರೂ ಈ ಪ್ರಕರಣದಲ್ಲಿ ದಂಡವನ್ನು ವಿಧಿಸಲಾಗಿತ್ತು. ಇದು ತಪ್ಪು ಕ್ರಮವೆಂದು ಪಾಟ್ನಾ ಉಚ್ಚನ್ಯಾಯಾಲಯ ವಿಜಯ ನಾರಾಯಣ್ ಸಾವು ಪ್ರಕರಣದಲ್ಲಿ ತೀರ್ಮಾನಿಸಿತು. AIR 2009 (NOC)2985 (patna)

11. ಕಲಂ.20 ರಡಿ ದಂಡ ವಿಧಿಸುವ ಅವಕಾಶದಡಿ 5 ಪ್ರಕರಣಗಳನ್ನು ಒಟ್ಟು ಗೂಡಿಸಿ ಮದ್ರಾಸ್

ಉಚ್ಚನ್ಯಾಯಾಲಯ ಪರಿಶೀಲಿಸುವಾಗ, ಈ 5 ಪ್ರಕರಣಗಳಲ್ಲಿ ದಂಡ ಮತ್ತು ಶಿಸ್ತು ಕ್ರಮಕ್ಕೆ ಆದೇಶಿಸಿರುವುದನ್ನು ಪರಿಶೀಲಿಸುತು. ಕಲಂ.20 ರನ್ವಯ ಸಂಬಂಧಪಟ್ಟವರಿಗೆ ಅವಕಾಶ ನೀಡಿ ಆದೇಶಿಸಬೇಕು ಎಂದಿದೆ. ಇಂತಹ ಸಂದರ್ಭದಲ್ಲಿ ಆಯೋಗವು ನೋಟೀಸ್ ಜಾರಿ ಮಾಡಿದಾಗ, ಅವರು ತಮ್ಮನ್ನ ರಕ್ಷಿಸುಕೊಳ್ಳಲು ಸದುದ್ದೇಶದಿಂದ ಕನಿಷ್ಠ ದಂಡವನ್ನು ವಿಧಿಸುವಂತೆ ಮನವಿ ಸಲ್ಲಿಸಬಹುದು ಮತ್ತು ಪ್ರತಿ ಪ್ರಕರಣದಲ್ಲಿಯೂ ದಂಡ ವಿಧಿಸುವಾಗ ಸಂಬಂಧಪಟ್ಟ ವ್ಯಕ್ತಿಯ ಜವಾಬ್ದಾರಿ ಅನುಗುಣವಾಗಿ ದಂಡವನ್ನು ನಿಗದಿ ಪಡಿಸಬೇಕು ಮತ್ತು ಇದರ ಜೊತೆಗೆ ಶಿಸ್ತು ಕ್ರಮ ಜರುಗಿಸುವಂತೆ ಮತ್ತು ದಂಡ ವಿಧಿಸಿರುವುದನ್ನು ಕಾನೂನು ಬದ್ಧವಲ್ಲವೆಂದು ಮದ್ರಾಸ್ ಉಚ್ಚನ್ಯಾಯಾಲಯ ಸಾರ್ವಜನಿಕ ಮಾಹಿತಿ ಅಧಿಕಾರಿ, ವಿಲ್ಲುಪುರಂ ಜಿಲ್ಲಾ ಸಹಕಾರಿ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. 2010 (1) ID 241/(2010) 2 MLJ 14

ಸೂಚನೆ : ಇದೇ ಪ್ರಕರಣದ ತೀರ್ಮಾನವನ್ನು ಕೆ.ಷಣ್ಮುಗನ್ ಪ್ರಕರಣದಲ್ಲಿಯೂ ತೀರ್ಮಾನಿಸಿತು. 2011 (1) ID 267

12. ಕಲಂ.20 ರನ್ವಯ ನಿಗದಿ ಪಡಿಸಿದಂತೆ ಸಂಬಂಧಪಟ್ಟ ವ್ಯಕ್ತಿಗೆ ಕಾರಣ ಕೇಳುವ ನೋಟೀಸ್ ನೀಡಿ ಆದೇಶಿಸಬೇಕು ಮತ್ತು ಈ ಪ್ರಕರಣದಲ್ಲಿ ಮಾಹಿತಿ ಆಯೋಗದ ಆದೇಶವನ್ನು ಕಿತ್ತು ಹಾಕಿ ಕರ್ನಾಟಕ ಉಚ್ಚನ್ಯಾಯಾಲಯ ಶಂಕರಮೂರ್ತಿ ಪ್ರಕರಣದಲ್ಲಿ ತೀರ್ಮಾನಿಸಿತು. W.P. No.4868/2009 dated 03.04.2009

13. ದೆಹಲಿ ಉಚ್ಚನ್ಯಾಯಾಲಯ ಕೇಂದ್ರ ಸರ್ಕಾರದ ಪ್ರಕರಣದಲ್ಲಿ ಕಲಂ.20 ರನ್ವಯ ಸಾಕಷ್ಟು ಅವಕಾಶವನ್ನು ನೀಡದೆ ಮಾಹಿತಿ ಆಯೋಗ ನೀಡಿದ ಆದೇಶವನ್ನು ಕಿತ್ತು ಹಾಕಿತ್ತು. 2010 (1) ID 79

14. ಕಲಂ.19(8)(ಬಿ) ಅನ್ವಯ ಪರಿಹಾರವನ್ನು ಆದೇಶಿಸಲು ಅವಕಾಶ ಕಲ್ಪಿಸಿದೆ. ಈ ರಿಟ್ ಅರ್ಜಿಯಲ್ಲಿ ದಾಖಲಿಸಿರುವ ಪ್ರಕರಣದಲ್ಲಿ ಪರಿಹಾರವನ್ನು ಮೇಲ್ಕಂಡ ಕಲಂನಡಿ ಮಂಜೂರಿ ಮಾಡಿರುವುದನ್ನು ವಿಮರ್ಷಿಸಬೇಕು. ಈ ಪರಿಹಾರದಲ್ಲಿ ಕೇಳಿದ ಮಾಹಿತಿಯನ್ನು ನೀಡಲಾಗಿಲ್ಲವೆಂದು ತಿಳಿದ ನಂತರ ಅಥವಾ ಅರ್ಜಿದಾರನು ಸತತವಾಗಿ ಕೇಂದ್ರ ಮಾಹಿತಿ ಆಯುಕ್ತರಿಗೆ ಅರ್ಜಿ ಸಲ್ಲಿಸುತ್ತಾನೆಂದು ಅವನಿಗೆ ತೊಡಕು ಉಂಟು ಮಾಡಲು ಎಂಬ ಕಾರಣವನ್ನು ದಾಖಲಿಸದೆ ರೂ.15,000/- ವನ್ನು ಪರಿಹಾರವನ್ನು ಆದೇಶಿಸಿರುವುದು ಪುನರ್ ವಿಮರ್ಶಿಸಬೇಕಾಗಿದೆ ಎಂದು ದೆಹಲಿ ಉಚ್ಚನ್ಯಾಯಾಲಯ ಮಾಹಿತಿ ಆಯೋಗಕ್ಕೆ ವರ್ಗಾಯಿಸಿತು. 2010 (1) ID 304

15. ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸಾಕಷ್ಟು ಅವಕಾಶ ನೀಡದೆ ದಂಡ ವಿಧಿಸಿರುವುದನ್ನು ಸರಳ ರಾಜ್‌ಪುತ್ ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ನೋಟೀಸ್ ಜಾರಿ ಮಾಡಲಾಗದೆ, ಅಂದರೆ ಮಾಹಿತಿ ಅಧಿಕಾರಿಗೆ ಮಾಹಿತಿ ನೀಡದಿರುವುದಕ್ಕೆ ಕಾರಣಗಳನ್ನು ದಾಖಲಿಸುವಂತೆ ಕೇಳದೆ, ದಂಡ ವಿಧಿಸಿರುವುದು ಸರಿಯಲ್ಲ ಎಂದು ದೆಹಲಿ ಉಚ್ಚನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ದಂಡ ವಿಧಿಸುವುದು ಒಂದು ಪ್ರಕ್ರಿಯೆ ಅಲ್ಲ ಅದನ್ನು ಕಾರಣ ಕೇಳುವ ನೋಟೀಸ್ ನೀಡಿಬೇಕು ಮತ್ತು ವಿವರಣೆ ಪಡೆದ ನಂತರ ತೀರ್ಮಾನಕ್ಕೆ ಬರಬೇಕು ಎಂದು ಪ್ರಕರಣವನ್ನು ಕೇಂದ್ರ ಮಾಹಿತಿ ಆಯೋಗಕ್ಕೆ ವರ್ಗಾಯಿಸಿತು. W.P. No.5204/2008 dated 02.07.2009

16. ಕಾರಣ ಕೇಳುವ ನೋಟೀಸ್ ನೀಡಲಾರದೆ ಮತ್ತು ನೌಕರ ನಿವೃತ್ತಿಯಾದ ನಂತರ ಅವನ ಹೇಳಿಕೆಯನ್ನು ಪಡೆಯಲಾಗದೆ ರೂ.7,000/- ದಂಡವನ್ನು ವಿಧಿಸಿರುವುದನ್ನು ಜಗಜಿತ್‌ಸಿಂಗ್ ಪ್ರಕರಣದಲ್ಲಿ ಪಂಜಾಬ್ ಮತ್ತು ಹರ್‍ಯಾಣ ಉಚ್ಚನ್ಯಾಯಾಲಯದ ಮುಂದೆ ರಾಜ್ಯ ಮಾಹಿತಿ ಆಯೋಗದ ಆದೇಶವನ್ನು ಪ್ರಶ್ನಿಸಿತು. ಕಾರಣ ಕೇಳುವ ನೋಟೀಸ್ ನೀಡಲಾರದೆ ದಂಡ ವಿಧಿಸಿರುವುದು ಸ್ವಾಬಾವಿಕ ನ್ಯಾಯ ನೀತಿಗೆ ವಿರುದ್ಧ ಎಂದು ದಂಡವನ್ನು ರದ್ದು ಪಡಿಸಿತು. 2011 (1) ID 461

17. ಮಾಹಿತಿ ಆಯೋಗವು ದಂಡವನ್ನು ವಿಧಿಸುವ ಪೂರ್ವದಲ್ಲಿ, ಅರ್ಜಿದಾರ ಸಲ್ಲಿಸಿದ ದಾಖಲೆಗಳನ್ನು ನೋಡಬೇಕು ಎಂದು ಚಿಕ್ಕಬೆಟ್ಟಯ್ಯ ಪ್ರಕರಣದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯ ಆದೇಶಿಸಿತು. ದಂಡವನ್ನು ವಿಧಿಸುವ ಪೂರ್ವದಲ್ಲಿ ಅರ್ಜಿದಾರನು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸುವುದು ಸಾರ್ವಜನಿಕ ಮಾಹಿತಿ ಅಧಿಕಾರಿ ಜವಾಬ್ದಾರಿ W.P No.5427/2008 dated 26.03.2009

18. ಮಾಹಿತಿ ಹಕ್ಕು ಕಾಯಿದೆ ಒಂದು ಪರಿಪೂರ್ಣ ಕಾಯಿದೆ ಮತ್ತು ಪ್ರತಿಯೊಂದು ಪ್ರಕರಣದಲ್ಲಿಯೂ ಅವಧಿಯನ್ನು ನಿಗದಿ ಪಡಿಸಿದ್ದು, ಮಾಹಿತಿ ಆಯೋಗವು ಆಗಿಂದಾಗ್ಗೆ ಸೂಕ್ತ ನಿರ್ದೇಶನಗಳನ್ನು ಮಾಹಿತಿ ನೀಡಲು ಆದೇಶಿಸಬಹುದು. ಕಾಯಿದೆಯಲ್ಲಿ ಪರಿಹಾರವನ್ನು ಅಧಿಕಾರಿಗಳಿಂದ ಕೊಡಿಸಿರುವುದರಿಂದ ಶಿಸ್ತು ಕ್ರಮಕ್ಕೂ ಅಧಿಕಾರವಿದೆ. ಉಚ್ಚನ್ಯಾಯಾಲಯವು ನಿರ್ದೇಶನ ನೀಡುವ ಅವಶ್ಯಕತೆ ಇಲ್ಲ ಎಂದು ಪರಿಮಳ ಪ್ರಕರಣದಲ್ಲಿ ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. W.P. No.2288/2009 dated 09.10.2010

19. ಒಬ್ಬ ಪಿರ್ಯಾದುದಾರ ತಾನು ಕೊಟ್ಟ ಅರ್ಜಿಯನ್ನು ವಾಪಸ್ ಪಡೆದಾಗ, ಆ ಪ್ರಕರಣದಲ್ಲಿ ಪ್ರಕರಣ ಬಾಕಿ ಇಲ್ಲವೆಂದು ಅರ್ಥೈಸಬೇಕು ಎಂದು ಒರಿಸ್ಸಾ ಉಚ್ಚನ್ಯಾಯಾಲಯ ಸಾರ್ವಜನಿಕ ಮಾಹಿತಿ ಅಧಿಕಾರ ಪ್ರಕರಣದಲ್ಲಿ ಆದೇಶಿಸಿತು. ಒಬ್ಬ ಪಿರ್ಯಾದುದಾರ ಪ್ರಕರಣವನ್ನು ದಾಖಲಿಸಿದಾಗ ಅದನ್ನು ಮುಂದುವರಿಸಿಕೊಂಡು ಹೋಗಲು ಹಾಜರಾಗುತ್ತಿರಲಿಲ್ಲ. ಮಾಹಿತಿ ಆಯೋಗವು ಪಿರ್ಯಾದುದಾರನ ಗೈರು ಹಾಜರಿಯಲ್ಲಿ ಪ್ರಕರಣವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಮತ್ತು ಅರ್ಜಿ ವಾಪಸ್ಸ್ ಪಡೆಯುತ್ತೇನೆಂದು ತಿಳಿಸಿದ ನಂತರವೂ ಪ್ರಕರಣವನ್ನು ಮುಂದುವರಿಸತಕ್ಕದ್ದಲ್ಲ. 2010 (1) ID 296/AIR 2010 Orissa 74

20. ಮಾಹಿತಿ ಆಯೋಗವು ಕಲಂ.20 ರಲ್ಲಿ ದಂಡವನ್ನು ವಿಧಿಸುವ ಪೂರ್ವದಲ್ಲಿ ಅವನದೆ ಸ್ವಂತ ಅಭಿಪ್ರಾಯಕ್ಕೆ ಬರಬೇಕಾದರೆ ಅರ್ಜಿದಾರನ, ದಾಖಲೆ ಪರಿಶೀಲಿಸಿ ಮಾಹಿತಿ ನೀಡಲು ಸಕಾರಣಗಳಿಲ್ಲದೆ ಇದ್ದರೆ ಅಥವಾ ಮಾಹಿತಿ ತಿರಸ್ಕರಿಸಿದಾಗ ಅಥವಾ ಅಂತಹ ಮಾಹಿತಿ ನೀಡದಿದ್ದಾಗ, ಸಂಬಂಧಪಟ್ಟ ವ್ಯಕ್ತಿಗೆ ನೋಟೀಸ್ ನೀಡಿದ ನಂತರವೇ ದಂಡ ವಿಧಿಸಬೇಕು ಎಂದು ಸಾಧನ ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಈ ಪ್ರಕರಣದಲ್ಲಿ ಕೆಲವು ನ್ಯೂನತೆಗಳಿಂದ ಮಾಹಿತಿ ಕೊಡದಿದ್ದರೆ ಹಾಗೂ ಕೆಲವು ದಾಖಲೆಗಳು ಸುಟ್ಟುಹೋಗಿದ್ದು, ಅಂತಹ ಪ್ರಕರಣದಲ್ಲಿ ಮಾಹಿತಿ ನೀಡಲಾಗದಿದ್ದರೆ ಅದು ಸಕಾರಣವಾಗುತ್ತದೆ. ಮಾಹಿತಿ ಆಯೋಗದ ಆದೇಶಕ್ಕೆ ಮಧ್ಯೆ ಪ್ರವೇಶ ಮಾಡಲಿಲ್ಲ ಮತ್ತು ಅನುಚ್ಛೇದ 226 ರಡಿ ರಿಟ್ ದಾಖಲಿಸುವ ಅಗತ್ಯವಿಲ್ಲವೆಂದು ತೀರ್ಮಾನಿಸಿತು. W.P. No.6637/2007 dated 30.01.2009

21. ಮೂರು ಪ್ರಸಂಗದಲ್ಲಿ ದಂಡವನ್ನು ವಿಧಿಸಬಹುದಾಗಿದೆ ಎಂದು ದೆಹಲಿ ಉಚ್ಚನ್ಯಾಯಾಲಯ

ಮುಜಿಬುರ್ ರೆಹಮಾನ್ ಪ್ರಕರಣದಲ್ಲಿ ತೀರ್ಮಾನಿಸಿತು. ಇದಕ್ಕೆ ನೀಡಿದ ಮೂರು ಕಾರಣಗಳು 1) ಮಾಹಿತಿಯನ್ನು ನೀಡದಿದ್ದಾಗ 2) ನಿಗದಿ ಪಡಿಸಿದ ಅವಧಿಯೊಳಗೆ ಮಾಹಿತಿಯನ್ನು ಕೊಡದಿದ್ದಾಗ ಮತ್ತು 3) ಮಾಹಿತಿಯನ್ನು ದುರುದ್ದೇಶದಿಂದ ಅಥವಾ ತಿಳಿದೂ ಅಪೂರ್ಣ ಮಾಹಿತಿ, ತಪ್ಪು ಮಾಹಿತಿ ನೀಡಿದಾಗ ದಂಡವನ್ನು ವಿಧಿಸಬಹುದಾಗಿದೆ ಎಂದು ದೆಹಲಿ ಉಚ್ಚನ್ಯಾಯಾಲಯ ಸೂಚಿಸಿತು. ಇದರಲ್ಲಿ **"ಸಾಕಷ್ಟು ಕಾರಣಗಳಿಲ್ಲದೆ"** ಎಂಬ ಪದಕ್ಕೆ ಕೇಂದ್ರ ಮಾಹಿತಿ ಆಯೋಗವು ಸಾಕಷ್ಟು ಕಾರಣಗಳಿಲ್ಲದೆ ಅವಧಿಯೊಳಗೆ ನೀಡದಿದ್ದುದನ್ನು ದೃಡೀಕರಿಸಿಕೊಂಡಿತ್ತು. ಈ ಕಾರಣದಿಂದ ಕಲಂ.20(1) ರಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ದಂಡ ವಿಧಿಸುವುದನ್ನು ಸಮರ್ಥಿಸಲಿಲ್ಲ. ಈ ಪ್ರಕರಣದಲ್ಲಿ ರೂ.25,000/– ನ್ನು ದಂಡವನ್ನು ವಿಧಿಸಿದ್ದು ಅದನ್ನು ಸಂಬಳದಲ್ಲಿ ಮುರಿದು ಆಯೋಗದ ಖಾತೆಗೆ ಜಮಾ ಮಾಡಲು ತೀರ್ಮಾನಿಸಿತ್ತು. 2010 (1) ID 502

22. ಕಾಯಿದೆ ಕಲಂ.20(1) ರಡಿ ಆಯೋಗವು ಮಾಹಿತಿಯನ್ನು ನೀಡದಿದ್ದಾಗ ಅಥವಾ ಮಾಹಿತಿ ನೀಡಲು ವಿಳಂಬವಾದಾಗ ದಂಡ ವಿಧಿಸುವ ಅಧಿಕಾರ ಹೊಂದಿದೆ. ಕಲಂ.7 ರಲ್ಲಿ ಮಾಹಿತಿ ನೀಡಲು 30 ದಿವಸಗಳ ಅವಧಿಯನ್ನು ನಿಗದಿ ಪಡಿಸಿದ್ದು, ಆ ಅವಧಿಯಲ್ಲಿ ಮಾಹಿತಿ ನೀಡದಿದ್ದರೆ ಸಾರ್ವಜನಿಕ ಪ್ರಾಧಿಕಾರವನ್ನು ದಂಡದ ರೂಪದಲ್ಲಿ ಶಿಕ್ಷಿಸಬಹುದು. ಕಲಂ.20(1) ರಲ್ಲಿ ಸತತವಾಗಿ ಮಾಹಿತಿಯನ್ನು ನೀಡದಿದ್ದರೆ ಹಾಗೂ ಅವಕಾಶಗಳನ್ನು ನೀಡಿದರೂ ಮಾಹಿತಿ ನೀಡದಿದ್ದರೆ ಎಂಬ ವಾದವನ್ನು ತಿರಸ್ಕರಿಸಲಾಗಿತ್ತು. ಅರ್ಜಿದಾರರು ತರಬೇತಿಯಲ್ಲಿ ಭಾಗವಿಸುತ್ತಿದ್ದರು ಎಂಬ ಕಾರಣದಿಂದ ಕ್ಷಮಿಸಲು ಬರುವುದಿಲ್ಲ. ಅರ್ಜಿದಾರ ಕಲಂ.19(3) ರಡಿ 90 ದಿವಸಗಳ ಅವಧಿಯಲ್ಲಿ ಮಾಹಿತಿ ನೀಡಲು ಅವಕಾಶವಿದೆ. ಆ ಅವಕಾಶದಂತೆ ಎರಡನೇ ಮೇಲ್ಮನವಿ ಸಲ್ಲಿಸಲು ಅಧಿಕಾರ ಹೊಂದುತ್ತಾನೆ. 2008 (2) ID 133

23. ನಿಗದಿ ಪಡಿಸಿದ ಅವಧಿಯೊಳಗೆ ಮಾಹಿತಿಯನ್ನು ನೀಡದಿದ್ದಾಗ ತಹಸೀಲ್‌ದಾರ್ ಕಛೇರಿಯ ನೌಕರರಿಗೆ ರೂ.25,000/– ವನ್ನು ದಂಡ ರೂಪದಲ್ಲಿ ವಿಧಿಸಿ, ಆ ಹಣವನ್ನು ಸಂಬಳದಿಂದ ಮುರಿದುಕೊಂಡು ಜಮಾ ಮಾಡಲು ಮಾಹಿತಿ ಆಯೋಗದ ಆದೇಶಕ್ಕೆ ರಿಟ್ ದಾಖಲಿಸಿ, ಮಾಹಿತಿ ನೀಡಲು ತಹಸೀಲ್‌ದಾರರೂ ಜವಾಬ್ದಾರರಿದ್ದಾರೆಂದು ವಾದಿಸಿದಾಗ, ಆಯೋಗದ ಆದೇಶದಲ್ಲಿ ಮಧ್ಯ ಪ್ರವೇಶ ಮಾಡಬೇಕಾಗಿಲ್ಲವೆಂದು ಮತ್ತು ಜವಾಬ್ದಾರಿಯನ್ನು ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೂ ವಿದಿಸಿರುವುದರಿಂದ ಮಧ್ಯ ಪ್ರವೇಶ ಮಾಡಬೇಕಾಗಿಲ್ಲವೆಂದು ಬಾಂಬೆ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ತೀರ್ಮಾನಿಸಿತು. W.P No.1869/2008 date 24.03.2008

24. ಮಾಹಿತಿ ನೀಡಲು ಉದ್ದೇಶಪೂರಕವಾಗಿ ಎಂದು ಅರ್ಥೈಸುವ ಬದಲು, ನಿಗದಿ ಪಡಿಸಿದ ಅವಧಿಯೊಳಗೆ ಸಕಾರಣವಿಲ್ಲದೆ ಮಾಹಿತಿ ನೀಡಲಾಗಿಲ್ಲ ಎಂಬ ಕಾರಣದಿಂದಲೆ ಕಲಂ.20(1) ರಡಿ ದಂಡವನ್ನು ವಿಧಿಸಬಹುದಾಗಿದೆ ಎಂದು ಎಂ.ಕೆ.ತ್ಯಾಗಿ ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯ ಈ ಪ್ರಕರಣದಲ್ಲಿ ಮುಖ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿ ನೀಡಲು ಕ್ರಮಕೈಗೊಂಡಿರುವುದನ್ನು ವಿವರಿಸಿ, ಮುಖ್ಯ ವಿಚಕ್ಷಣ ಆಯುಕ್ತರು (CVC) ವಿಳಂಬಕ್ಕೆ ಕಾರಣಗಳಿದ್ದವೂ ಎಂಬುದನ್ನು ಒಪ್ಪಲಾರದೆ ರೂ.22,500.00 ಅನ್ನು ಮುಖ್ಯ ವಿಚಕ್ಷಣ ಆಯುಕ್ತರು

(CVC) ಅರ್ಜಿದಾರನಿಗೆ ನೀಡಬೇಕೆಂದು ಮತ್ತು ಪರಿಹಾರ ರೂಪದಲ್ಲಿ ರೂ.30,000/– ಪಾವತಿಸಲು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು 2010 (2) ID 349

25. ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಅರ್ಜಿದಾರನಿಗೆ ಮಾಹಿತಿ ನೀಡಲಿಲ್ಲ. ಕಾರಣ ಕೇಳುವ ನೋಟೀಸ್ ನಂತರವೂ ಅದರ ಬಗ್ಗೆ ತಕರಾರು ಮಾಡಲಿಲ್ಲ. ಇಂತಹ ಸಂದರ್ಭದಲ್ಲಿ ದಂಡ ವಿಧಿಸುವ ಆದೇಶವನ್ನು ಮಾಡಲಾಗಿದೆ. ಅರ್ಜಿಯಲ್ಲಿ ಕೇಳಿದ ಮಾಹಿತಿಯನ್ನು ಆದೇಶ ಮಾಡಿದ ನಂತರ ನೀಡಲಾಗಿದೆ. ಆದೇಶ ಮಾಡಿರುವುದು ಸರಿಯೆಂದು ದಂಡದ ರೂಪದಲ್ಲಿ ವಿಧಿಸಿದ್ದ ರೂ.25,000/– ನ್ನು ರೂ.10,000/– ಕ್ಕೆ ಇಳಿಸಿ ಡಿ.ನಾಗರಾಜು ಪ್ರಕರಣದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯ ಆದೇಶಿಸಿತು. W.P No.2015/2010 date 09.11.2010

26. ರಿಟ್ ಅರ್ಜಿದಾರನ ಪಿರ್ಯಾದು ಸಲ್ಲಿಸಿದ ಅರ್ಜಿಯನ್ನು ತಡೆಹಿಡಿದ್ದು ಅವನ ವರ್ಗಾವಣೆಯ ನಂತರೂ ಮಾಹಿತಿ ನೀಡದಂತೆ ಕ್ರಮ ಜರುಗಿಸಿದ್ದು, ಇಂತಹ ಅಧಿಕರಿಯು ತಾನು ನಿರ್ವಹಿಸುವ ಜವಾಬ್ದಾರಿಯನ್ನು ಉದ್ದೇಶ ಪೂರಕವಾಗಿ ನಿರ್ವಹಿಸದೆ ಇರುವುದು ಮತ್ತು ಅರ್ಜಿಯನ್ನು ಗುಪ್ತವಾಗಿ ಇಟ್ಟಿರುವುದನ್ನು ಗಮನಿಸಿ ರೂ.25,000/– ವನ್ನು ದಂಡದ ರೂಪದಲ್ಲಿ ಆದೇಶಿಸಿತು. ಅರ್ಜಿದಾರನಿಗೆ ಸಾಕಷ್ಟು ಅವಕಾಶ ನೀಡಿದ್ದರೂ ಹಾಜರಾಗದೆ ಅವನ ಮೇಲಾಧಿಕಾರಿಯ ಮುಖಾಂತರ ನೋಟೀಸ್‌ನ್ನು ಸ್ವೀಕರಿಸಿ ಹಾಜರಾದಾಗ, ಅವನಿಗೆ ರೂ.25,000/– ದಂಡವನ್ನು ವಿಧಿಸಲಾಗಿದೆ ಎಂದು ನಾಗಭೂಷಣಂ ಪ್ರಕರಣದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯ ಆದೇಶಿಸಿತು. ಈ ಪ್ರಕರಣದಲ್ಲಿ ಅರ್ಜಿದಾರನಿಗೆ ವಿಧಿಸಿರುವ ದಂಡ ಸಮರ್ಥನೀಯ ಎಂದು ರಿಟ್ ಅರ್ಜಿಯನ್ನು ರೂ.10,000/– ವೆಚ್ಚವೆಂದು ಆದೇಶಿಸಿ ಅರ್ಜಿ ವಜಾ ಮಾಡಿತು. W.P No.35249/2009 date 23.10.2010

27. ಸಾರ್ವಜನಿಕ ಮಾಹಿತಿ ಅಧಿಕಾರಿ ಕಾನೂನಿನಲ್ಲಿ ನಿಗದಿ ಪಡಿಸಿದ ಕಾರ್ಯವನ್ನು ನಿರ್ವಹಿಸದೆ ಇದ್ದಾಗ ಅವನಿಗೆ ದಂಡ ವಿಧಿಸುವುದು ಸಮರ್ಥನೀಯವೆಂದು ಪಂಜಾಬ್ ಮತ್ತು ಹರ್‍ಯಾಣ ಉಚ್ಚನ್ಯಾಯಾಲಯ ಷಹೀದ್ ಕಾನ್ಷರಾಮ್ ಪ್ರಕರಣದಲ್ಲಿ ತೀರ್ಮಾನಿಸಿತು. ರಾಜ್ಯ ಮಾಹಿತಿ ಆಯೋಗವು ಅರ್ಜಿದಾರನ ಮೇಲೆ ಮಾಡಿದ ಆದೇಶವನ್ನು ಪ್ರಶ್ನಿಸದೆ ಇದ್ದಾಗ, ಅದು ಅಂತಿಮ ಆದೇಶವಾಗುತ್ತದೆ. ಆಯೋಗವು ದಂಡವನ್ನು ವಿಧಿಸಿ ಆದೇಶಿಸಿದ್ದು ಅದು ಸಮರ್ಥನೀಯ ವಾಗಿದೆ. ಸಾರ್ವಜನಿಕ ಮಾಹಿತಿ ಅಧಿಕಾರಿ ಸರಿಯಾದ ಮಾಹಿತಿಯನ್ನು ನಿಗದಿ ಪಡಿಸಿದ ಅವಧಿಯೊಳಗೆ ನೀಡಲೇಬೇಕು. ಮಾಹಿತಿ ಆಯೋಗವು ಕಾನೂನಿನಲ್ಲಿ ನಿಗದಿ ಪಡಿಸಿದ ನಿಯಮದಂತೆ ಕ್ರಮ ಜರುಗಿಸಿಲ್ಲವೆಂದು ತೀರ್ಮಾನಕ್ಕೆ ಬಂದು ದಂಡ ವಿಧಿಸಿದಕ್ಕೆ ಮಧ್ಯ ಪ್ರವೇಶ ಮಾಡಬೇಕಾಗಿಲ್ಲವೆಂದು ನ್ಯಾಯಾಲಯ ಆದೇಶಿಸಿತು. W.P No.141461/2009 date 10.09.2009

28. ಮಾಹಿತಿಯನ್ನು ಮಾಹಿತಿ ಅಧಿಕಾರಿ ನಿಗದಿ ಪಡಿಸಿದ ಅವಧಿಯೊಳಗೆ ನೀಡಬೇಕೆಂದು ಅವಕಾಶ ಕಲ್ಪಿಸಿದೆ. ಈ ಪ್ರಕರಣದಲ್ಲಿ ಮಾಹಿತಿ ನೀಡಲು ಕಾರಣವಿಲ್ಲದೆ ವಿಳಂಬವಾಗಿದೆ ಎಂದು ಆದೇಶಿಸಿರುವುದನ್ನು ಸಮರ್ಥನೀಯವೆಂದು ಮಾಹಿತಿ ಆಯೋಗದ ಆದೇಶದ ಮೇಲೆ ಮಧ್ಯೆ ಪ್ರವೇಶ ಮಾಡುವ ಅವಶ್ಯಕತೆವಿಲ್ಲವೆಂದು ಬಾಂಬೆ ಉಚ್ಚನ್ಯಾಯಾಲಯ ಜಾನ್‌ಸನ್ ಫರ್ನಾಂಡಿಸ್ ಪ್ರಕರಣದಲ್ಲಿ ತೀರ್ಮಾನಿಸಿತು. AIR 2012 Bom 56

29. ರಿಟ್ ಅರ್ಜಿದಾರನು ಮಾಹಿತಿ ಕೇಳಿ ಸಲ್ಲಿಸಿದ್ದ ಅರ್ಜಿಯಲ್ಲಿ ವಿನಂತಿಸಿದ ಮಾಹಿತಿ ಇದ್ದರೂ, (7

ತಿಂಗಳ ಅವಧಿಗಿಂತ ಹೆಚ್ಚು ಸಮಯ ಆ ಮಾಹಿತಿ ಆ ಸಾರ್ವಜನಿಕ ಅಧಿಕಾರಿಯ ವಶದಲ್ಲಿತ್ತು.) ಮಾಹಿತಿ ನೀಡದಿದ್ದಾಗ ವಿಚಾರಣೆಯ ನಂತರ ಮಾಹಿತಿ ಅಧಿಕಾರಿಗೆ ರೂ.10,000/– ನ್ನು ಕಲಂ.20 ರಲ್ಲಿ ದಂಡವಾಗಿ ವಿಧಿಸಿದ್ದನ್ನು ಪ್ರಶ್ನಿ ರಿಟ್ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಮಧ್ಯ ಪ್ರವೇಶ ಮಾಡಬೇಕಾಗಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯ ಡಿ.ಕೆ.ಶ್ರೀನಿವಾಸಮೂರ್ತಿ ಪ್ರಕರಣದಲ್ಲಿ ಆದೇಶಿಸಿತು. 2011 (2) ID 256

30. ಮಾಹಿತಿ ಆಯೋಗವು ಸ್ಪಷ್ಟ ಮಾಹಿತಿಯನ್ನು ನೀಡಲು 7 ನೇ ಅರ್ಜಿದಾರರಿಗೆ ಆದೇಶ ನೀಡಿದಾಗ (ಶಿಕ್ಷಕರ ನೇಮಕಾತಿಯಲ್ಲಿ ಅಂಗವಿಕಲರಿಗೆ ಮೀಸಲಾದ ಹುದ್ದೆಗಳಿಗೆ ಮಾಹಿತಿ) ಆ ಆದೇಶವನ್ನು ಪಾಲಿಸಲಿಲ್ಲ ಮತ್ತು ಪ್ರಕರಣವನ್ನು ನಿಗದಿ ಪಡಿಸಿದ ದಿನಾಂಕದಂದು ಹಾಜರಾಗಲಿಲ್ಲ ಹಾಗೂ ಈ ಆದೇಶದಲ್ಲಿ ಕಾಣಿಸಿದ ಎಲ್ಲಾ ಮಾಹಿತಿಯು ಅರ್ಜಿದಾರ ಅವಶ್ಯಕತೆಯಲ್ಲಿ ಇದ್ದುದ್ದನ್ನು ಗಮನಿಸಿ ಆಯೋಗದ ಆದೇಶಕ್ಕೆ ಮಧ್ಯ ಪ್ರವೇಶ ಮಾಡಲಾಗುವುದಿಲ್ಲವೆಂದು ಪಾಟ್ನಾ ಉಚ್ಚನ್ಯಾಯಾಲಯ ಲಕ್ಷ್ಮಿನಾರಾಯಣಸಿಂಗ್ ಪ್ರಕರಣದಲ್ಲಿ ತೀರ್ಮಾನಿಸಿತು. 2010 (2) ID 498/AIR 2011 Patna 32

31. ಒಂದು ಸಾರ್ವಜನಿಕ ಪ್ರಾಧಿಕಾರ ಮಾಹಿತಿಯನ್ನು ನೀಡಲು ವಿಳಂಬಿಸಿದಾಗ ಅಥವಾ ಉದ್ದೇಶ ಪೂರಕವಾಗಿ ನೀಡಬಾರದೆಂದು ತೀರ್ಮಾನಿಸಿರುವುದು ಕಲಂ.20 ರನ್ವಯ ದಂಡವನ್ನು ವಿಧಿಸದೆ ಬೇರೆ ದಾರಿ ಇಲ್ಲವೆಂದು ಪಂಜಾಬ್ ಮತ್ತು ಹರ್ಯಾಣ ಉಚ್ಚನ್ಯಾಯಾಲಯ ಕುಶಾಲ್‌ಸಿಂಗ್ ಪ್ರಕರಣದಲ್ಲಿ ಆದೇಶಿಸಿತು. ನೌಕರ ಶಾಹಿ ತನ್ನ ಮನಸ್ಥಿತಿಯನ್ನು ಬದಲಾವಣೆ ಮಾಡಿಕೊಳ್ಳದೆ, ಉದ್ದಟತನ ತೋರಿಸುವುದರಿಂದ ಅವರಿಗೆ ದಂಡದ ರೂಪದಲ್ಲಿ ಶಿಕ್ಷೆ ವಿಧಿಸಬಹುದು. W.P No.588/2010 date 14.01.2010

32. ಕಲಂ.19(8)(ಬಿ) ಅಡಿ ಪರಿಹಾರವನ್ನು ನೀಡಲು ಕಾನೂನಿನಲ್ಲಿ ಅವಕಾಶವಿದೆ. ಈ ಅವಕಾಶವನ್ನು ಉಪಯೋಗಿಸುವಾಗ ಅರ್ಜಿದಾರನಿಗೆ ಆಗಿರುವ ನಷ್ಟವನ್ನು ಪರಿಹಾರದ ರೂಪದಲ್ಲಿ ನೀಡಬಹುದು. ಆದರೆ ಈ ಪ್ರಕರಣದಲ್ಲಿ ರೂ.50,000/– ನ್ನು ಪರಿಹಾರವೆಂದು ಕೇಂದ್ರ ಮಾಹಿತಿ ಆಯೋಗ ನೀಡಿದ ಆದೇಶವನ್ನು ಕಿತ್ತು ಹಾಕಿ ಪುನರ್ ಪರಿಶೀಲನೆಗೆ ಮಾಹಿತಿ ಆಯೋಗಕ್ಕೆ ದೆಹಲಿ ಉಚ್ಚನ್ಯಾಯಾಲಯ ಡಿ.ಡಿ.ಎ ಪ್ರಕರಣದಲ್ಲಿ ಆದೇಶಿಸಿತು. W.P No.5563/2007 date 06.07.2009

33. ಮಾಹಿತಿ ಆಯೋಗದ ಆದೇಶವನ್ನು ಪಾಲಿಸದಿದ್ದರೆ, ಆಯೋಗದ ನ್ಯಾಯಾಲಯ ನಿಂದನೆ ಪ್ರಕರಣ ದಾಖಲಿಸಲು ಬರುವುದಿಲ್ಲ. ಕರ್ನಾಟಕ ಮಾಹಿತಿ ಆಯೋಗವು ಕಲಂ.18 ಮತ್ತು 19 ರಡಿ ಮಾಡಿದ ಆದೇಶವನ್ನು ಜಾರಿ ಮಾಡದಿದ್ದಾಗ ಅದು ನ್ಯಾಯಾಲಯ ನಿಂದನೆ ಕಾಯಿದೆಯಡಿ ಊರ್ಜಿತವಾಗುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಜಿ.ಬಸವರಾಜ ಪ್ರಕರಣದಲ್ಲಿ ತೀರ್ಮಾನಿಸಿತು. ಕಲಂ.20 ರನ್ವಯ ಕೇಂದ್ರ ಮಾಹಿತಿ ಆಯೋಗ ಅಥವಾ ರಾಜ್ಯ ಮಾಹಿತಿ ಆಯೋಗ ದಂಡವನ್ನು ವಿಧಿಸುವಾಗ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ರಾಜ್ಯ ಮಾಹಿತಿ ಅಧಿಕಾರಿಗೆ ದಂಡ ವಿಧಿಸಬಹುದು. ಆದರೆ ಮೇಲ್ಮನವಿ ಪ್ರಾಧಿಕಾರದ ಮೇಲೆ ದಂಡ ವಿಧಿಸುವ ಅವಕಾಶವಿಲ್ಲ. ಅಂದರೆ ಮೊದಲನೇ ಮೇಲ್ಮನವಿ ಪ್ರಾಧಿಕಾರ ಮೇಲೆ ಇಲಾಖಾ ವಿಚಾರಣೆ ಮಾಡಲು ಕಲಂ.20 ರಲ್ಲಿ ಅವಕಾಶವಿಲ್ಲ. ಮುಖ್ಯ ಮಾಹಿತಿ ಆಯುಕ್ತರ ಆದೇಶವನ್ನು ಉತ್ತರಖಾಂಡ ಉಚ್ಚನ್ಯಾಯಾಲಯ, ಇಲಾಖೆ ಮೇಲ್ಮನವಿ ಅಧಿಕಾರಿ ಪ್ರಕರಣದಲ್ಲಿ

ದಂಡ/ಇಲಾಖಾ ವಿಚಾರಣೆ ಮಾಡುವ ಅವಕಾಶವಿಲ್ಲವೆಂದು ತೀರ್ಮಾನಿಸಿತು. ಆದರೆ ಈಗ ಮಾಡಿರುವ ಆದೇಶವನ್ನು ಪುನರ್ ಪರಿಶೀಲಿಸಿ ಪರಿಹಾರ ರೂಪದಲ್ಲಿ ಸಾರ್ವಜನಿಕ ಪ್ರಾಧಿಕಾರಕ್ಕೆ ವಿವರಣೆ ನೀಡಲು ಅವಕಾಶ ನೀಡಿದ ನಂತರ ಪರಿಹಾರವನ್ನು ಆದೇಶಿಸಬಹುದು ಎಂದು ಉತ್ತರಖಾಂಡ ಉಚ್ಚನ್ಯಾಯಾಲಯ ಆದೇಶಿಸಿತು. 2011 (1) ID 315

34. ಅರ್ಜಿದಾರ ಮೇಲ್ಮನವಿ ಪ್ರಾಧಿಕಾರ ಹೊರಡಿಸಿದ ಆದೇಶವನ್ನು ಪಾಲಿಸಬೇಕು, ಪಾಲಿಸದಿದ್ದರೆ ಅವನಿಗೆ ದಂಡ ವಿಧಿಸುವ ಅವಕಾಶವಿದೆ ಎಂದು ಗುಜರಾತ್ ಉಚ್ಚನ್ಯಾಯಾಲಯ ಉರ್ಮಿಷ್ ಎಂ. ಪಟೇಲ್ ಪ್ರಕರಣದಲ್ಲಿ ತೀರ್ಮಾನಿಸಿತು. ಅರ್ಜಿದಾರ ಮೇಲ್ಮನವಿ ಪ್ರಾಧಿಕರಣ ಆದೇಶಿಸಿದ ನಂತರ ಮಾಹಿತಿಯನ್ನು ನೀಡಲಿಲ್ಲ. ಆ ಆದೇಶ ಯಾವುದೆ ಇರಲಿ, ಮೇಲ್ಮನವಿ ಪ್ರಾಧಿಕಾರದ ಆದೇಶವನ್ನು ಪಾಲಿಸಲೇಬೇಕು. ಈ ಪ್ರಕರಣದಲ್ಲಿ ಆದೇಶವನ್ನು ಪಾಲಿಸಲಿಲ್ಲವೆಂದು ಮಾಹಿತಿ ಆಯುಕ್ತರು ದಂಡವನ್ನು ವಿಧಿಸಿದ್ದಾರೆ, ಆ ದಂಡವನ್ನು ವಿಧಿಸುವಾಗ ಕಾನೂನನ್ನು ಅರ್ಥೈಸಿಕೊಂಡಿಲ್ಲವೆಂದು ಗಮನಿಸಿ ದಂಡವನ್ನು ರೂ.10,000/–ಕ್ಕೆ ಇಳಿಸಿ ಗುಜರಾತ್ ಉಚ್ಚನ್ಯಾಯಾಲಯ ಆದೇಶಿಸಿತು. 2011 (1) ID 318

35. ಮಾಹಿತಿ ಆಯೋಗವು ಅದರ ಅಧಿಕಾರದ ವ್ಯಾಪ್ತಿಯಲ್ಲಿ ದಂಡವನ್ನು ವಿಧಿಸಿದಾಗ, ಆ ಆದೇಶದ ಮೇಲೆ ಮಧ್ಯ ಪ್ರವೇಶ ಮಾಡಬೇಕಾಗಿಲ್ಲವೆಂದು ಪಂಜಾಬ್ ಮತ್ತು ಹರ್ಯಾಣ ನ್ಯಾಯಾಲಯ ದರಮ್‌ಬೀರ್‌ಸಿಂಗ್ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಪಡೆಯಲು ಯಾವುದೇ ಕಾರಣ ನೀಡಬೇಕಾಗಿಲ್ಲವೆಂದು ಕಾಯಿದೆ ಸ್ಪಷ್ಟ ಪಡಿಸಿದ್ದರೂ ಕೇಳಿದ ಮಾಹಿತಿಯನ್ನು ನೀಡದೆ ಇದ್ದಾಗ, ರಾಜ್ಯ ಮಾಹಿತಿ ಆಯೋಗ ರೂ.10,000/– ದಂಡವನ್ನು ವಿಧಿಸಿರುವುದು ಸರಿಯಾದ ಕ್ರಮ. ಇದಕ್ಕೆ ಉಚ್ಚನ್ಯಾಯಾಲಯುದ ಮಧ್ಯ ಪ್ರವೇಶ ಅವಶ್ಯಕವಿಲ್ಲವೆಂದು ಆದೇಶಿಸಿತು W.P No.7905/2010 date 10.05.2010

36. ಮಾಹಿತಿ ನೀಡಲು ವಿಳಂಬವಾದುದ್ದಕ್ಕೆ ಸಕಾರಣಗಳನ್ನು ನೀಡಿದಾಗ ದಂಡವನ್ನು ವಿಧಿಸುವ ಅವಶ್ಯಕತೆ ಇಲ್ಲವೆಂದು ದೆಹಲಿ ಉಚ್ಚನ್ಯಾಯಾಲಯ ಕರ್ನಲ್ ರಾಜೇಂದ್ರಸಿಂಗ್ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಆಯೋಗವು ಮಹಿತಿ ನೀಡದಿರಲು ಸಾಕಷ್ಟು ಕಾರಣಗಳಿದ್ದವೂ ಎಂದು ಮನದಟ್ಟಾದಾಗ ಮತ್ತು ಮಾಹಿತಿ ನೀಡಲು ದುರುದ್ದೇಶದಿಂದ ನೀಡಲಾಗಿಲ್ಲವೆಂದು ಆರೋಪಿಸದಿದ್ದರೆ ಮತ್ತು ಮಾಹಿತಿಯನ್ನು ಕೇಂದ್ರ ಮಾಹಿತಿ ಆಯೋಗ ನಿಗದಿ ಪಡಿಸಿದ ಅವಧಿಯೊಳಗೆ ನೀಡಿದ್ದರೆ, ದಂಡ ವಿಧಿಸುವ ಅವಶ್ಯಕತೆ ಇಲ್ಲವೆಂದು ಉಚ್ಚನ್ಯಾಯಾಲಯ ತೀರ್ಮಾನಿಸಿತು. 2010 (1) ID 495

37. ರಾಜ್ಯ ಮಾಹಿತಿ ಆಯೋಗವು ದಂಡವನ್ನು ವಿಧಿಸುವಾಗ ಮಾಹಿತಿ ಅಧಿಕಾರಿಯೂ ಉದ್ದೇಶ ಪೂರಕವಾಗಿ ಮಾಹಿತಿ ನೀಡಲು ನಿರಾಕರಿಸಿದ್ದಾನೆ ಎಂದು ದಾಖಲೆಯಲ್ಲಿ ಇಲ್ಲ ಮತ್ತು ಮಾಹಿತಿಯನ್ನು ಉದ್ದೇಶ ಪೂರಕವಾಗಿ ಮತ್ತು ದುರುದ್ದೇಶದಿಂದ ಎಂದೂ ದಾಖಲಿಸಿಲ್ಲ. ಆದ್ದರಿಂದ ರಾಜ್ಯ ಮಾಹಿತಿ ಆಯೋಗ ವಿಧಿಸಿದ ದಂಡ ಹೆಚ್ಚಾಯಿತೆಂದು ಗಮನಿಸಿ, ಮಾಹಿತಿ ಅಧಿಕಾರಿಗೆ ಇನ್ನು ಮುಂದೆ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿತು. CWP 10806/2011 dated 02.12.2011

38. ಕೇಂದ್ರ ಮಾಹಿತಿ ಆಯೋಗವು ಮೊದಲನೇ ಆದೇಶದಲ್ಲಿ ಮಾಹಿತಿ ನೀಡಲು 8 ದಿವಸದ

ವಿಳಂಬವನ್ನು ವಿಚಾರಣೆ ಮಾಡಲು ಅಥವಾ ದಂಡ ವಿಧಿಸಲು ಪರಿಗಣಿಸಲಿಲ್ಲ. ಮತ್ತೊಂದು ಆದೇಶದಲ್ಲಿ ಅರ್ಜಿದಾರರನ್ನು ವಿಚಾರಣೆ ಮಾಡಿ ಅವಳು ವಿಳಂಬಕ್ಕೆ ಕಾರಣಳು ಎಂದು ತೀರ್ಮಾನಿಸಿ ರೂ.13,000/– ನ್ನು ದಂಡವೆಂದು ಠೇವಣಿ ಮಾಡಲು ಆದೇಶಿಸಿತು. ಈ ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯ ಡಾ. ಮಧು ಜೈನ್ ಪ್ರಕರಣದಲ್ಲಿ, ಮೊದಲನೇ ಆದೇಶವನ್ನು ಗಮನಿಸದೆ ಎರಡನೇ ಆದೇಶದಲ್ಲಿ ದಂಡ ವಿಧಿಸಿರುವುದು ತಪ್ಪು ಎಂದು ತೀರ್ಮಾನಿಸಿತು. 2012 (1) ID 315

39. ಮಾಹಿತಿ ಆಯೋಗವು ಸಾರ್ವಜನಿಕ ಮಾಹಿತಿ ಅಧಿಕಾರಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಮಾಡಿರುವ ಆದೇಶ ಊರ್ಜಿತವಾಗುವುದಿಲ್ಲ. ಕಲಂ.20 ರಲ್ಲಿ ದಂಡ ವಿಧಿಸುವ ಅಧಿಕಾರ ನೀಡಲಾಗಿದೆ. ಮಾಹಿತಿ ಆಯೋಗವು ದಂಡದ ಜೊತೆ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಬಹುದೆ ಹೊರತು ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸುವ ಅಧಿಕಾರವಿಲ್ಲವೆಂದು ವೀರನ್ ಝಾ ಪ್ರಕರಣದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯ ಆದೇಶಿಸಿತು. 2011 (2) ID 252

40. ಕೇಂದ್ರ ಮಾಹಿತಿ ಆಯೋಗವು ಕಲಂ.20 ರಲ್ಲಿ ದಂಡವನ್ನು ವಿಧಿಸುವಾಗ ಮಾಹಿತಿ ಕೇಳಿದ ಅರ್ಜಿದಾರನ ಅವಹಾಲು ಕೇಳಬೇಕಾಗಿಲ್ಲ. ಅರ್ಜಿ ಸಲ್ಲಿಕೆಯಾದ ನಂತರ, ಕಾಯಿದೆಯಲ್ಲಿ ನಿಗದಿ ಪಡಿಸಿದ ಮಾಹಿತಿಯನ್ನು ನೀಡದಿದ್ದರೆ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ನೋಟೀಸ್ ಜಾರಿ ಮಾಡಿ ಸಮರ್ಪಕ ಕಾರಣಗಳಿಲ್ಲದೆ ಇದ್ದರೆ, ದಂಡ ವಿಧಿಸು ಅಧಿಕಾರ ಮೇಲ್ಮನವಿ ಪ್ರಾಧಿಕಾರಕ್ಕೆ ಇರುತ್ತದೆ. ಮಾಹಿತಿ ಕೇಳಿದ ಅರ್ಜಿದಾರನಿಗೆ, ಈ ದಂಡದಲ್ಲಿ ಯಾವುದೇ ಭಾಗವನ್ನು ಪಾವತಿ ಮಾಡತಕ್ಕದ್ದಲ್ಲವೆಂದು ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಅಂಕುರ್ ಮುತ್ರೇಜ ಪ್ರಕರಣದಲ್ಲಿ ತೀರ್ಮಾನಿಸಿದೆ. 2011 (1) ID 292

41. ಮಾಹಿತಿ ಕೇಳಿ ಸಲ್ಲಿಸಿದ ಅರ್ಜಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿ 30 ದಿವಸದೊಳಗಾಗಿ ಮಾಹಿತಿ ನೀಡಲಿಲ್ಲ. ಮೊದಲನೇ ಮೇಲ್ಮನವಿ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದಾಗ ಉಚಿತವಾಗಿ ನೀಡಲು ಆದೇಶಿಸಿದರು. ಇದನ್ನು ಪ್ರಶ್ನಿಸಿ ರಾಜ್ಯ ಮಾಹಿತಿ ಆಯೋಗದ ಮುಂದೆ ಸಲ್ಲಿಸಿದ ಎರಡನೇ ಮೇಲ್ಮನವಿಯನ್ನು ವಜಾ ಮಾಡಲಾಗಿತ್ತು ಮತ್ತು ರೂ.25,000/– ನ್ನು ದಂಡದ ರೂಪದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಪಾವತಿಸಲು ಸೂಚಿಸಲಾಗಿತ್ತು. ಇದಕ್ಕೆ ಏಕ ಸದಸ್ಯ ಪೀಠದ ಮುಂದೆ ರಿಟ್ ಅರ್ಜಿ ಸಲ್ಲಿಸಿದಾಗ, ಉಚಿತವಾಗಿ ಮಾಹಿತಿ ನೀಡಲು 10 ದಿವಸಗಳ ಅವಧಿಯನ್ನು ನೀಡಿ ರೂ.2,000/– ನ್ನು ರಿಟ್ ಅರ್ಜಿದಾರರಿಗೆ ದಂಡದ ರೂಪದಲ್ಲಿ ನೀಡಲು ಆದೇಶಿಸಿತು. ಇದನ್ನು ವಿಭಾಗೀಯ ಪೀಠದ ಮುಂದೆ ಪ್ರಶ್ನಿಸಿದಾಗ ಬಾಂಬೆ ಉಚ್ಚನ್ಯಾಯಾಲಯ ರಾಜ್ಯ ಮಾಹಿತಿ ಆಯೋಗದ ಪ್ರಕರಣದಲ್ಲಿ ಅರ್ಜಿದಾರ ಕೇಳಿರುವ ಮಾಹಿತಿಯನ್ನು (3419 ಪುಟಗಳು) 30 ದಿವಸದೊಳಗಾಗಿ ಸರಬರಾಜು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇದರ ಜೊತೆಗೆ ಮಾಹಿತಿ ಕೇಳಿರುವುದು ಸ್ಪಷ್ಟವಾಗಿರುವುದಿಲ್ಲ ಮತ್ತು ಇದು ದುರುದ್ದೇಶದಿಂದ ಕೂಡಿದ್ದು ಕಾಯಿದೆಯನ್ನು ಸ್ವಾರ್ಥ ಸಾಧನೆಗಾಗಿ ಉಪಯೋಗಿಸಿಕೊಂಡಂತಾಗುತ್ತದೆ ಮತ್ತು ರೂ.2,000/– ದಂಡ ವಿದಿಸಿರುವುದು ಸಮರ್ಥನೀಯವಲ್ಲವೆಂದು ಆದೇಶಿಸುವುದರ ಜೊತೆಗೆ ಮಾಹಿತಿಯನ್ನು ಉಚಿತವಾಗಿ ನೀಡಿರುವುದರಿಂದ ಮಧ್ಯ ಪ್ರವೇಶಿಸುವ ಅವಶ್ಯಕತೆ ಇಲ್ಲವೆಂದು ದಂಡದ ರೂಪದಲ್ಲಿ ವಿದಿಸಿದ್ದ ರೂ.2,000/– ನ್ನು ಕಿತ್ತು ಹಾಕಿ ಏಕ ಸದಸ್ಯ ಪೀಠ ಆದೇಶವನ್ನು ಮಧ್ಯೆ ಪ್ರವೇಶಿಸುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿತು. LPA No.276/2012 dated 30.07.2012

42. ಮಾಹಿತಿ ಆಯೋಗವು ಕಲಂ.20 ರಲ್ಲಿ ನಿಗದಿ ಪಡಿಸಿದ ದಂಡದ ಹೊರತಾಗಿ ಮತ್ತಾವುದೇ ಆದೇಶ ನೀಡತಕ್ಕದ್ದಲ್ಲ ಎಂದು ಸಂಜಯ್ ಹಿಂದ್‌ವಾನ್ ಪ್ರಕರಣದಲ್ಲಿ ಹಿಮಾಚಲ್ ಉಚ್ಚನ್ಯಾಯಾಲಯ ಆದೇಶಿಸಿತು. ಕೇಂದ್ರ ಮಾಹಿತಿ ಆಯೋಗ ಅಥವಾ ರಾಜ್ಯ ಮಾಹಿತಿ ಆಯೋಗ ಕಲಂ.20 ರಲ್ಲಿ ನಿಗದಿ ಪಡಿಸಿರುವ ದಂಡವನ್ನು ವಿಧಿಸುವ ಹೊರತಾಗಿ ಮತ್ತಾವುದೇ ಅಧಿಕಾರ ಹೊಂದಿಲ್ಲ. ಮಾಹಿತಿ ಆಯೋಗ ನಿಗದಿತ ಅವಧಿಯೊಳಗೆ ನೀಡಿಲ್ಲವೆಂದು ತೀರ್ಮಾನಕ್ಕೆ ಬಂದಾಗ ಒಂದು ದಿನಕ್ಕೆ ರೂ.250/– ರಂತೆ ದಂಡವನ್ನು ವಿಧಿಸಲು ಅವಕಾಶವಿದೆ. ಇದಕ್ಕೆ ಒಂದು ಷರತ್ತಿರುವುದೆಂದರೆ, ದಂಡದ ಗರಿಷ್ಠ ಪ್ರಮಾಣ ರೂ.25,000/– ಕ್ಕೆ ಮೀರತಕ್ಕದ್ದಲ್ಲ. ರೂ.250/– ಪ್ರತಿ ದಿನವೆಂದರೆ ಅದನ್ನು ಮನಸ್ಸಿಗೆ ಬಂದತೆ ಹೆಚ್ಚಿಸಲಾಗದು. CWP No.640/2012 dated 24.08.2012

**ಇತರೆ**

ಮಾಹಿತಿ ಹಕ್ಕು ಕಾಯಿದೆ ಒಂದು ಶಕ್ತಿಯುತ ಕಾಯಿದೆ. ಈ ಕಾಯಿದೆ ಬೇರೆ ಕಾಯಿದೆಯಲ್ಲಿರುವ ನಿರ್ಬಂಧಗಳಿಗೆ ಹೊರತಾಗಿ ರೂಪಿಸಿದೆ, ಈ ಕಾಯಿದೆಯಲ್ಲಿ ಎಲ್ಲಾ ರೀತಿಯ ಪರಿಹಾರಗಳನ್ನು ಪಡೆಯುವ ಅವಕಾಶವನ್ನು ನೀಡುತ್ತದೆ. ಇದರಲ್ಲಿ ಅಧಿಕೃತ ಗುಪ್ತ ಕಾಯಿದೆ 1923 (Official secrets Act 1923). ಅಂದರೆ ಯಾವುದೇ ಕಾಯಿದೆಯಲ್ಲಿ ಪಡೆಯಲಾರದ ಮಾಹಿತಿಯನ್ನು, ಈ ಕಾಯಿದೆಯಲ್ಲಿ ಸಾರ್ವಜನಿಕರು ಪಡೆಯಬಹುದಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೂಪಿಸಿದ ಕಾಯಿದೆಗಳು ಮಾಹಿತಿ ಹಕ್ಕು ಕಾಯಿದೆಗೆ ಪೂರಕವಾಗಿರುವಂತೆ ನೋಡಿಕೊಳ್ಳಬೇಕು. ಅಂದರೆ ವಿರೋದಬಾಸಗಳ ಅವಕಾಶಗಳು ಬೇರೆ ಕಾಯಿದೆಯಲ್ಲಿದ್ದರೆ, ಆ ನಿರ್ಬಂಧನಗಳನ್ನು ತೆಗೆದು ಹಾಕಲು ಕ್ರಮ ಜರುಗಿಸಬೇಕು.

ಮಾಹಿತಿ ಹಕ್ಕು ಕಾಯಿದೆ ಜಾರಿಗೆ ಬಂದ ನಂತರ ಅಧಿಕೃತ ಗುಪ್ತ ಕಾಯಿದೆ 1923 (Official secrets Act 1923) ಕೈಬಿಟ್ಟಿಲ್ಲ ಅಥವಾ ಮಾರ್ಪಡಿಸಿಲ್ಲ. ಅಂದರೆ ಸಾರ್ವಜನಿಕರಿಗೆ ಅಗತ್ಯವಾದ ಮಾಹಿತಿಯನ್ನು, ಮಾಹಿತಿ ಹಕ್ಕು ಕಾಯಿದೆಯಲ್ಲಿ ಪಡೆಯಲು ಅವಕಾಶ ಕಲ್ಪಿಸಿದೆ. ಈ ಕಾಯಿದೆ ಬೇರೆ ಕಾಯಿದೆಗಳಲ್ಲಿ ಏನೇ ನಿರ್ಬಂಧವಿದ್ದರೂ ಅದು ಈ ಕಾಯಿದೆಯಲ್ಲಿ ಮಾಹಿತಿ ಪಡೆಯಲು ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ. ಅಧಿಕಾರಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಬೇಕೇ ಅಥವಾ ನೀಡಬಾರದೆ ಎಂಬುದನ್ನು ಮಾಹಿತಿ ಕಾಯಿದೆಯಲ್ಲಿ ನೀಡಿದ ಅವಕಾಶದಂತೆ, ತೀರ್ಮಾನಿಸಬೇಕು. ಅಂದರೆ ಕಲಂ.8ರಲ್ಲಿ ಇರುವ ವಿನಾಯಿತಿಗೆ ಬರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು.

ಭಾರತದ ಪ್ರಜೆ ಕೆಲವು ಕಾಯಿದೆಗಳಲ್ಲಿರುವ ನಿರ್ಬಂಧಗಳನ್ವಯ ಮಾಹಿತಿ ಪಡೆಯಲಾಗುವುದಿಲ್ಲ ಎಂಬುದನ್ನು ಅಧಿಕೃತ ಗುಪ್ತ ಕಾಯಿದೆ 1923 (Official secrets Act 1923) ಅಡಿ ನಿರಾಕರಿಸಲು ಅವಕಾಶ ಕಲ್ಪಿಸಿದೆ. ಇದರ ಜೊತೆಗೆ ನೌಕರರ ಸೇವಾ ನಿಯಮ 1968 ರನ್ವಯ ಯಾವುದೇ ಸರ್ಕಾರಿ ನೌಕರ ಅಧಿಕೃತ ದಾಖಲೆಯನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ವ್ಯಕ್ತಿಗೆ ನೀಡಬಾರದೆಂದು ಇರುವ ಅವಕಾಶದಂತೆ, ನೀಡಬೇಕಾಗಿದ್ದರೂ ನಿಯಮದಲ್ಲಿ ನಿಗದಿ ಪಡಿಸಿದ ಜವಾಬ್ದಾರಿಯನ್ನು ನಿರ್ವಹಿಸುವಾಗ ಅಧಿಕೃತವಾಗಿ ನೀಡಬಹುದಾದ ಮಾಹಿತಿಯನ್ನು ಹೊರತು ಪಡಿಸಿ, ಮತ್ತಾವುದೆ ಮಾಹಿತಿಯನ್ನು ಹಂಚಿಕೊಳ್ಳಲು ನಿರ್ಬಂಧವಿದೆ.

ಭಾರತ ಸಾಕ್ಷಿ ಕಾಯಿದೆ 1872 ರ ಕಲಂ.123, 124 ರನ್ವಯ ಯಾವನೇ ಒಬ್ಬ ಅಧಿಕಾರಿ ಸಾಕ್ಷಿ ನೀಡುವಾಗ ಮೇಲಧಿಕಾರಿಯ ಲಿಖಿತ ಒಪ್ಪಿಗೆ ಪಡೆಯಲಾರದೆ ಸಾಕ್ಷಿ ನೀಡಬಾರದೆಂದು, ಅಂದರೆ ಯಾವುದೇ ಮಾಹಿತಿ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ದವಾಗಿದೆ ಎಂದು ಮನದಟ್ಟಾದಾಗ.

ನ್ಯಾಯಾಲಯಗಳ ಕಾರ್ಯ ವ್ಯಾಪ್ತಿಯ ನಿರ್ವಹಿಸುವ ಬಗ್ಗೆ ಕಲಂ.27ರಲ್ಲಿ ತಿಳಿಸಲಾಗಿದೆ. ಆದರೆ ಉಚ್ಚ ನ್ಯಾಯಾಲಯ ಮೂಲ ಅಧಿಕಾರವನ್ನು ಚಲಾಯಿಸಿ ಅನುಚ್ಛೇದ 226ರಲ್ಲಿ ರಿಟ್ ಸ್ವೀಕರಿಸುವಾಗ, ಅಂತಹ ಅರ್ಜಿದಾರ ಬೇರೆ ಕಾಯಿದೆಯಲ್ಲಿರುವ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡು ಬಂದಿದ್ದಾನೆಂದು ದೃಡೀಕರಿಸಿಕೊಂಡ ನಂತರವೇ ರಿಟ್ ಅರ್ಜಿಯನ್ನು ಪರಿಶೀಲಿಸಬಹುದಾಗಿದೆ.

ಮಾಹಿತ ಹಕ್ಕು ಕಾಯಿದೆ ಕಲಂ.8 ರನ್ವಯ ಕೆಲವು ಪ್ರಾಧಿಕಾರಗಳನ್ನು ಹೆಸರಿಸಿ (ಅನುಭಂದದಲ್ಲಿ ನಮೂದಿಸಿದಂತೆ) ಅಂತಹ ಸಂಸ್ಥೆಗಳ ಮಾಹಿತಿಯನ್ನು ನಿರ್ಬಂಧಿಸುವ ಅವಕಾಶವನ್ನು ಕಲ್ಪಿಸಿದೆ. ಈ ವಿನಾಯಿತಿಯನ್ನು ನಿರಾಕರಿಸಲು ಸಕಾರಣಗಳಿರುವ ಬಗ್ಗೆ ದೃಡೀಕರಿಸಿಕೊಳ್ಳುವುದು ಅವಶ್ಯಕ. ಲಂಚಗುಳಿತನ ಅಥವಾ ಮಾನವ ಹಕ್ಕು ಉಲ್ಲಂಘನೆ ಬಗ್ಗೆ ಮಾಹಿತಿ ಕೇಳಿದಾಗ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕೇಳಬಹುದು ಮತ್ತು ಮಾನವ ಹಕ್ಕು ಉಲ್ಲಂಘನೆ ಬಗ್ಗೆ ಮಾಹಿತಿ ಕೇಳಿದಾಗ ಮಾಹಿತ ಆಯೋಗದ ಒಪ್ಪಿಗೆ ಪಡೆದು ಮಾಹಿತಿ ನೀಡಬೇಕು. ಕೇಂದ್ರ ಸರ್ಕಾರವು ಕಲಂ.8ರಲ್ಲಿ ನೀಡದ ವಿನಾಯಿತಿಗಳ ಪಟ್ಟಿಯನ್ನು ಹೆಚ್ಚುವರಿಯಾಗಿ ಸೇರಿಸಲು ಅಥವಾ ಹಾಲಿ ಪಟ್ಟಿಯಿಂದ ಕೈಬಿಡಲು ಅಧಿಕಾರ ಹೊಂದಿರತಕ್ಕದ್ದು. ಈ ಬಗ್ಗೆ ಹೊರಡಿಸಿದ ಪ್ರಕಟಣೆಯನ್ನು/ಅಧಿಸೂಚನೆಯನ್ನು ಲೋಕಸಭೆಗೆ ಮತ್ತು ರಾಜ್ಯಸಭೆಗೆ ಮಂಡಿಸಬೇಕು.

ಮಾಹಿತಿ ಹಕ್ಕು ಕಾಯಿದೆಯಲ್ಲಿ ವಿನಾಯಿತಿ ನೀಡುವ ಬಗ್ಗೆ ಸರ್ಕಾರಕ್ಕೆ ಇರುವ ಅಧಿಕಾರದ ಬಗ್ಗೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯ ತೀರ್ಪಿನ ಸಾರಾಂಶ :

1. ಒಂದು ಪ್ರಕರಣದಲ್ಲಿ ಮಾಹಿತಿಗಾಗಿ ದಾಖಲಿಸಿದ ಅರ್ಜಿಯಲ್ಲಿ ಕೇಳಿದ ಕೆಲವು ಮಾಹಿತಿಗಳನ್ನು ನೀಡಿ, ಮತ್ತೆ ಕೆಲವು ಮಾಹಿತಿಯನ್ನು ನೀಡಲು ನಿರಾಕರಿಸಿರುವುದು ಕಾಯಿದೆ ಪೂರಕವೆಂದು ಮದ್ರಾಸ್ ಉಚ್ಚನ್ಯಾಯಾಲಯ ವಿಶ್ವನಾಥಸ್ವಾಮಿ ಪ್ರಕರಣದಲ್ಲಿ ತೀರ್ಮಾನಿಸಿತು. ಅಂದರೆ ಅರ್ಜಿದಾರನು ಕೇಳಿದ ಎಲ್ಲಾ ಮಾಹಿತಿಯನ್ನು ನೀಡಬೇಕಾಗಿಲ್ಲವೆಂದು, ವಿನಾಯಿತಿ ಪಡೆದ ಕಲಂ. ರನ್ವಯ ಮಾಹಿತಿ ಆಯೋಗ/ಮಾಹಿತಿ ಅಧಿಕಾರಿ ನಿರಾಕರಿಸಬಹುದು. (2007) 6 MLJ 1141/2009 (1) ID 70/AIR 2008 (NOC) 544
2. ಮಾಹಿತಿ ಹಕ್ಕು ಕಾಯಿದೆಯನ್ನು ದುರುಪಯೋಗ ಪಡಿಸಿಕೊಳ್ಳಬಹುದಾದ ಪ್ರಸಂಗವನ್ನು ಆಂದ್ರಪ್ರದೇಶ ಉಚ್ಚನ್ಯಾಯಾಲಯ ಸುದಾಕರ್ ರಡ್ಡಿ ಪ್ರಕರಣದಲ್ಲಿ ಉಲ್ಲೇಖಿಸಿದೆ. ಜಗಟೈಲ್ ಪುರಸಭೆಯಲ್ಲಿ ಒಂದು ಜಮೀನಿನ ಮಾಹಿತಿಯನ್ನು ಕೇಳಿದಾಗ, ಅವನು ಪಾವತಿಸಿದ ಹಣ ರೂ.10/– ಮಾತ್ರ. ಈ ಮಾಹಿತಿಯನ್ನು ನೀಡದೆ ಇದ್ದಾಗ ಮೇಲ್ಮನವಿಗಳ ನಂತರವೂ ಪರಿಹಾರ ಸಿಗಲಿಲ್ಲವೆಂದು, ರಿಟ್ ದಾಖಲಿಸಿದ ಸಂದರ್ಭದಲ್ಲಿ ಉಚ್ಚನ್ಯಾಯಾಲಯ, ಕಾಯಿದೆಯಲ್ಲಿ ಮಾಹಿತಿ ಕೇಳುವಾಗ, ಯಾವುದೇ ಕಾರಣವನ್ನು ನೀಡಬೇಕಾಗಿಲ್ಲವೆಂದು ಸ್ಪಷ್ಟೀಕರಿಸಿರುವುದರ ಪ್ರಸ್ತುತತೆ ಬಗ್ಗೆ ಕಾಯಿದೆ ರಚನೆಕಾರರು ಚಿಂತಿಸಬೇಕಾಗಿತ್ತು. ಈ ಮಾಹಿತಿಯಿಂದ ಅರ್ಜಿದಾರನಿಗೆ ಆಗುವ ಪ್ರಯೋಜನೆಗಳ ಬಗ್ಗೆ ಉಲ್ಲೇಖಿಸುವ ಅವಶ್ಯಕತೆ ಇಲ್ಲವೆಂದು ತಿಳಿದಾಗ, ಇಂತಹ ಪ್ರಸಂಗದಲ್ಲಿ ಪುರಸಭೆಯ ಅಧಿಕಾರಗಳನ್ನು ಯಾವ ರೀತಿ ಹೆದರಿಸಬಹುದು. ಈ ಬಗ್ಗೆ ಮಾಹಿತಿ ಕಾಯಿದೆಯಡಿ

ನೀಡಿರುವ ಅಧಿಕಾರ ದುರುಪಯೋಗವಾಗುವ ಪ್ರಸಂಗಗಳು ಇರುತ್ತವೆ. ಈ ಮಾಹಿತಿಯನ್ನು ನೀಡುವ ಅಧಿಕಾರ ಕಂದಾಯ ವಿಭಾಗಕ್ಕೆ ಸಂಬಂಧಪಟ್ಟಿದ್ದು ನ್ಯಾಯಾಲಯಗಳು ಇದನ್ನು ದೃಡೀಕರಿಸಬಹುದಾಗಿದೆ ಹಾಗೂ ಮಾಹಿತಿಯನ್ನು ನೀಡಿದಿದ್ದರೆ ಅಂತಹ ಪ್ರಸಂಗದಲ್ಲಿ ಅದು ಕರ್ತವ್ಯ ಚ್ಯುತಿಯಾಗುತ್ತದೆ. ಆದ್ದರಿಂದ ಮಾಹಿತಿ ಹಕ್ಕು ಕಾಯಿದೆ ದುರುಪಯೋಗವಾಗುತ್ತಿರುವುದನ್ನು ಆಂದ್ರಪ್ರದೇಶ ಉಚ್ಚನ್ಯಾಯಾಲಯ ಅಭಿಪ್ರಾಯ ವ್ಯಕ್ತಪಡಿಸಿತು. 2009 (2) ID 311

3. ಮಾಹಿತಿ ಕಾಯಿದೆ ಅಡಿ, ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ, ಯಾವುದೇ ವ್ಯಕ್ತ ತನಗೆ ತೋಚಿದಂತೆ ಮಾಹಿತಿ ಕಾಯಿದೆಯಡಿ ಮಾಹಿತಿ ಕೇಳುವ ಅಧಿಕಾರ ನೀಡುತ್ತದೆ. ಆ ವ್ಯಕ್ತಿ ಯಾವುದಕ್ಕೂ ಅಥವಾ ಯಾರಿಗೂ ಜವಾಬ್ದಾರನಲ್ಲ. ಒಬ್ಬ ವ್ಯಕ್ತ ಕನ್ಯಾಕುಮಾರಿಯಲ್ಲಿದ್ದು, ಜಮ್ಮುಕಾಶೀಕ್ಮರದಲ್ಲಿನ ಯಾವುದೇ ಪ್ರಾಧಿಕಾರದ/ಕಛೇರಿಯ ಮಾಹಿತಿಯನ್ನು ಕೇಳುವ ಹಕ್ಕನ್ನು ಪಡೆಯುತ್ತಾನೆ. ಇಂತಹ ಹಕ್ಕು, ಭಾರತದ ಯಾವುದೇ ಕಾಯಿದೆಯಲ್ಲಿ, ಒಬ್ಬ ಸಾಮಾನ್ಯ ಪ್ರಜೆಗೆ ಅಧಿಕಾರ ನೀಡುವುದಿಲ್ಲ. ಆದರೆ ಮಾಹಿತಿ ನೀಡದೆ ಇದ್ದ ಪ್ರಂಗದಲ್ಲಿ, ಅಂತಹ ವ್ಯಕ್ತಿಗೆ/ಅಧಿಕಾರಿಗೆ/ಸಾರ್ವಜನಿಕ ಮಾಹಿತಿ ಅಧಿಕಾರಿಗೆ ದಂಡ ಮತ್ತು ಶಿಕ್ಷೆ ವಿಧಿಸುವ ಅಧಿಕಾರ ಪ್ರಾಪ್ತವಾಗುತ್ತದೆ. ಇಂತಹುದೇ ಪ್ರಕರಣದಲ್ಲಿ ಆಂದ್ರಪ್ರದೇಶ ಉಚ್ಚನ್ಯಾಯಾಲಯ ಧರಂಮ್ ರವಿರಾಜ್ ಪ್ರಕರಣದಲ್ಲಿ ತೀರ್ಮಾನಿಸಿತು. ಅರ್ಜಿದಾರನು ಸಲ್ಲಿಸಿದ ಅರ್ಜಿಯು ಪ್ರಾಧಿಕಾರವನ್ನು ಭಯಹುಟ್ಟಿಸಿ/ಹೆದರಿಸಿ ಯಾವುದೆ ಮಾಹಿತಿಯನ್ನು ಕೇಳಬಹುದು. ಈ ಪ್ರಕರಣದಲ್ಲಿ ಕೇಳಿದ ಮಾಹಿತಿ ಯಾರಿಗೂ ಉಪಯೋಗಬಾರದಂತಹ ಮಾಹಿತಿ. ಅರ್ಜಿದಾರ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮಾಡಿದ ಪ್ರಯತ್ನ. ಆದ್ದರಿಂದ ಇಂತಹ ವ್ಯಕ್ತಿಗಳಿಗೆ ಉತ್ತೇಜನ ನೀಡಬಾರದೆಂದು ರಿಟ್ ಅರ್ಜಿಯನ್ನು ವಜಾ ಮಾಡಿ ರೂ.10,000/– ಗಳ ನ್ಯಾಯಾಲಯದ ವೆಚ್ಚವೆಂದು ಆದೇಶಿಸಿತು. 2012 (1) ID 379

4. ಜಾಗೃತ ಸಂಸ್ಥೆಗಳ ಅಂಕಿ ಅಂಶಗಳನ್ನು ಮಾಹಿತಿ ಹಕ್ಕು ಕಾಯಿದೆಯಲ್ಲಿ ನೀಡಬಹುದು ಎಂದು ಮದ್ರಾಸ್ ಉಚ್ಚನ್ಯಾಯಾಲಯ ಆದೇಶಿಸಿತು. ಕಲಂ.24(4) ರಲ್ಲಿ ನೀಡಿದ ವಿನಾಯಿತಿ ಸರಿಯಾದ ಕ್ರಮವೆಂದು ಭ್ರಷ್ಟತೆ ಮತ್ತು ಮಾನವನ ಹಕ್ಕು ಉಲ್ಲಂಘನೆ ಬಗ್ಗೆ ವಿನಾಯಿತಿ ಪಡೆಯುವುದಿಲ್ಲವೆಂದು ಉಲ್ಲೇಖಿಸಿರುವುದನ್ನು ತಿಳಿಸಿ, ಅರ್ಜಿದಾರ ಕೇಳಿದ ಮಾಹಿತಿ ಅಂಕಿ ಸಂಖ್ಯೆಗಳಿಗೆ ಸಂಬಂಧಿಸಿರುವುದರಿಂದ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ, ಅದರಲ್ಲಿ ರುಜುವಾತಾದ ಪ್ರಕರಣಗಳ ಸಂಖ್ಯೆ ಮತ್ತು ಶಿಕ್ಷೆಗೊಳಗಾದ ಅಧಿಕಾರಿಗಳ ಸಂಖ್ಯೆ, ಕೇಳಿರುವುದರಿಂದ ಇದು ಸರ್ಕಾರದ ಪಾರದರ್ಶಕ ನೀತಿಗೆ ಪೂರಕವಾಗಿದ್ದು ಇಂತಹ ಮಾಹಿತಿಯನ್ನು ನೀಡಬಹುದೆಂದು ಆದೇಶಿಸಿತು. 2010 (1) ID 253 / (2010) 5 MLJ 426

5. ಮಾಹಿತಿ ಹಕ್ಕು ಕಾಯಿದೆಯಡಿ ನ್ಯಾಯಾಲಯಗಳ ಮಧ್ಯಪ್ರವೇಶದ ನಿರ್ಬಂಧಕ್ಕೆ ಕ್ರಿಮಿನಲ್ ಪ್ರಕರಣಗಳಲೂ ಅನ್ವಯಿಸುತ್ತದೆ ಎಂದು ಕೇರಳ ಉಚ್ಚನ್ಯಾಯಾಲಯ ಪ್ರಭಾಕರ್ ಪಣೀಕರ್ ಪ್ರಕರಣದಲ್ಲಿ ತೀರ್ಮಾನಿಸಿತು. ಕಲಂ.23 ರಲ್ಲಿ ಪದಗಳನ್ನು ಉಪಯೋಗಿಸುವಾಗ ಸಿವಿಲ್ ನ್ಯಾಯಾಲಯಗಳು ಮಾತ್ರ ಎಂದು ನಮೂದಿಸಿಲ್ಲ. ಆದ್ದರಿಂದ ಕ್ರಿಮಿನಲ್ ಪ್ರಕರಣಗಳಲ್ಲಿ ಮಧ್ಯಪ್ರವೇಶ ಮಾಡತಕ್ಕದ್ದಲ್ಲ ಎಂದು ಕೇರಳ ಉಚ್ಚನ್ಯಾಯಾಲಯ ತೀರ್ಮಾನಿಸಿತು.2010 (3) KLT 209

6. ಮಾಹಿತಿ ಹಕ್ಕು ಕಾಯಿದೆಯಡಿ, ಉಚ್ಚನ್ಯಾಯಾಲಯ ಮಾಹಿತಿ ಹಕ್ಕು ಕಾಯಿದೆಯನ್ನು ತಿದ್ದುಪಡಿ ಮಾಡಲು ನಿರ್ದೇಶಿಸತಕ್ಕದ್ದಲ್ಲವೆಂದು ಒರಿಸ್ಸಾ ಉಚ್ಚನ್ಯಾಯಾಲಯ ನಂದಿತಾ ಗಿರಿ ಪ್ರಕರಣದಲ್ಲಿ ತೀರ್ಮಾನಿಸಿತು. ಮಾಹಿತಿ ಹಕ್ಕು ಕಾಯಿದೆಯ ಕಲಂ.18 ರಲ್ಲಿ ನ್ಯಾಯಾಲಯವು ನಿರ್ದೇಶನ ನೀಡಿ ಕಾಯಿದೆ ತಿದ್ದುಪಡಿ ಮಾಡಿ ಅರ್ಜಿಗಳನ್ನು ನಿಗದಿತ ಸಮಯದಲ್ಲಿ ವಿಲೇಮಾರಿ ಮಾಡಲು ತಿದ್ದುಪಡಿ ಮಾಡುವಂತೆ ಸೂಚಿಸಲಾಗದು ಎಂದು ಶ್ರೇಷ್ಠ ನ್ಯಾಯಾಲಯ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ [(2002) 5 SCC 294/2009 (2) ID 439] ತೀರ್ಮಾನಿಸಿರುವುದನ್ನು ಉಲ್ಲೇಖಿಸಿ ಪ್ರಕರಣವನ್ನು ವಜಾ ಮಾಡಿತು. 2008 (2) ID 149

7. ಮಾಹಿತಿ ಹಕ್ಕು ಕಾಯಿದೆಯಡಿ ಪ್ರಕರಣ ದಾಖಲಿಸಬೇಕೆಂದು ತೀರ್ಮಾನವಾಗದೆ ಇದ್ದ ಪ್ರಸಂಗದಲ್ಲಿ ಕಲಂ.24(1) ನ್ನು ಅನ್ವಯಿಸತಕ್ಕದ್ದಲ್ಲವೆಂದು ದೆಹಲಿ ಉಚ್ಚನ್ಯಾಯಾಲಯ ಆದೇಶಿಸಿತು. ಕೇಂದ್ರ ಮಾಹಿತಿ ಆಯೋಗವು ಕಲಂ.24(1) ನ್ನು ವಿಮರ್ಶಿಸುವಾಗ ಕೇಂದ್ರ ಸಂಸ್ಥೆಯಾದ RAW ಮಾನವನ ಹಕ್ಕು ಕಾಯಿದೆ ಉಲ್ಲಂಘನೆ ಮಾಡಿದೆ ಎಂದು ಪ್ರಶ್ನಿಸಿಲ್ಲ ಆದರೆ ಕ್ರಿಮಿನಲ್ ಪ್ರಕರಣದಲ್ಲಿ ಆರೋಪ ಪಟ್ಟಿಯನ್ನು ಇನ್ನೂ ಸಲ್ಲಿಸಿಲ್ಲವೆಂದು ಕೇಳಲಾಗಿದ್ದು ಮತ್ತು ನ್ಯಾಯಾಲಯವು ಆರೋಪವನ್ನು ಹೊರಿಸಿಲ್ಲವಾದರಿಂದ ನ್ಯಾಯಾಲಯವು ಯಾವುದೇ ತೀರ್ಮಾನಕ್ಕೆ ಬರುವುದಿಲ್ಲ. ಈ ಹಂತದಲ್ಲಿ ಇದು ಮಾನವನ ಹಕ್ಕು ಉಲ್ಲಂಘನೆಯೇ ಎಂಬುದರ ಬಗ್ಗೆ ಕಲಂ.24(1) ರಡಿ ತೀರ್ಮಾನಿಸಲಾಗದು ಎಂದು ನ್ಯಾಯಾಲಯ ಆದೇಶಿಸಿತು. AIR 2011 (NOC) 50

8. ಕಂದಾಯ ವಿಚಕ್ಷಣ ನಿರ್ದೇಶನಾಲಯ ಕಲಂ.24 ರಡಿ ವಿನಾಯಿತಿ ಪಡೆದ ಪ್ರಾಧಿಕಾರವೆಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ ಆದೇಶಿಸಿತು. ಈ ಪ್ರಕರಣದಲ್ಲಿ ಲಂಚಗುಳಿತನ ಅಥವಾ ಮಾನವ ಹಕ್ಕು ಉಲ್ಲಂಘನೆ ಹೊರತು ಪಡಿಸಿ, ಈ ನಿರ್ದೇಶನಾಲಯದ ಮತ್ತಾವುದೆ ವಿಷಯ, ಮಾಹಿತಿ ಹಕ್ಕು ಬರುವುದಿಲ್ಲವೆಂದು ತೀರ್ಮಾನಿಸಿತು. ಈ ಪ್ರಕರಣದಲ್ಲಿ ಪುರುಷೋತಮ್ ಲಾಲ್ ಸೋಂದಿ ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆ ಪಡೆಯುವ ಸಂದರ್ಭದಲ್ಲಿ ಪ್ರಶ್ನಿಸಬಹುದಾಗಿದ್ದು, ಮಾಹಿತಿ ನೀಡದಿರುವುದಕ್ಕೆ ಕಲಂ.24(1) ರಲ್ಲಿ ವಿನಾಯಿತಿಯನ್ನು ಉಲ್ಲೇಖಿಸಿ ಮಾಹಿತಿ ನಿರಾಕರಿಸಿರುವುದು ತಪ್ಪಲ್ಲವೆಂದು ತೀರ್ಮಾನಿಸಿತು. W.P No.13211/2010 dated 28.07.2010

9. ವಿಮಾನಯಾನ ಇಲಾಖೆ ವಿಚಕ್ಷಣ ಅಥವಾ ಭದ್ರತೆ ಸಂಸ್ಥೆಯಾಗಿಲ್ಲದಿರುವುದರಿಂದ ಕಲಂ.24(4) ರಲ್ಲಿ ವಿನಾಯಿತಿ ಪಡೆಯುವುದಿಲ್ಲ ಎಂದು ಅಲಹಾಬಾದ್ ಉಚ್ಚನ್ಯಾಯಾಲಯ ನ್ಯಾಷಿನಲ್ ಅಲೇಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್ ಪ್ರಕರಣದಲ್ಲಿ ತೀರ್ಮಾನಿಸಿತು. ರಾಜ್ಯ ಸರ್ಕಾರ ಅಧಿಸೂಚನೆ ಮುಖಾಂತರ ಕಲಂ.24 ರಡಿ ಆದೇಶ ಹೊರಡುಸಲು ಬರುವುದಿಲ್ಲ. ವಿಮಾನ ನಿರ್ವಹಣೆ ಮಾಡುವ ಮತ್ತು ವಿಮಾನ ಭದ್ರತೆಯು, ವಿಮಾನಯಾನ ಸಿಬ್ಬಂದಿಯ ಕೆಲಸ. ಇದು ಮಾಹಿತಿ ಹಕ್ಕು ಕಾಯಿದೆ ವಿನಾಯಿತಿಗೆ ಬರುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ನೀಡಿದ ಅಧಿಕಾರವನ್ನು ಚಲಾಯಿಸಿ ಹೊರಡಿಸಿದ ಅಧಿಸೂಚನೆಯನ್ನು ಕಿತ್ತು ಹಾಕಿತು. W.P No.6993/2009 dated 25.01.2012

10. ರಾಜ್ಯ ಸರ್ಕಾರಕ್ಕೆ ವಿಚಕ್ಷಣ ಮತ್ತು ಭದ್ರತಾ ಸಂಸ್ಥೆಗಳಿಗೆ ಮಾಹಿತಿ ಕಾಯಿದೆಯಲ್ಲಿ ವಿನಾಯಿತಿ ನೀಡಿ ಆದೇಶಿಸಲು ಬರುವುದಿಲ್ಲ. ಅಂದರೆ ಭ್ರಷ್ಟತೆ ಮತ್ತು ಮಾನವನ ಹಕ್ಕು ಉಲ್ಲಂಘನೆಗೆ

ಸಂಬಂಧಪಟ್ಟಂತೆ ಆದೇಶ ಮಾಡಲು ಬರುವುದಿಲ್ಲ ಎಂದು ಮದ್ರಾಸ್ ಉಚ್ಚನ್ಯಾಯಾಲಯ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಪ್ರಕರಣದಲ್ಲಿ ತೀರ್ಮಾನಿಸಿತು. ರಾಜ್ಯ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಮಾಹಿತಿ ಹಕ್ಕು ಕಾಯಿದೆ ವಿಚಕ್ಷಣ ಮತ್ತು ಭದ್ರತಾ ಸಂಸ್ಥೆ ಕಲಂ.24(4) ರಲ್ಲಿ ವಿನಾಯಿತಿಗೊಳಪಡುತ್ತದೆ ಎಂಬ ಆದೇಶವನ್ನು ರದ್ದು ಪಡಿಸಿತು. ಈ ಪ್ರಕರಣದಲ್ಲಿ ವಿಚಾರಣೆಗೊಳಪಟ್ಟ ಪ್ರಕರಣಗಳು, ಎಷ್ಟು ಅಧಿಕಾರಿಗೆ ಶಿಕ್ಷೆಯಾಯಿತು, ಅವರ ಹೆಸರುಗಳೇನು ಮತ್ತು ಪೋಲೀಸ್ ಕೇಂದ್ರಗಳ ಸಂಖ್ಯೆ, ಎಷ್ಟು ಪ್ರಕರಣಗಳಲ್ಲಿ ಜಪ್ತಿಮಾಡಲಾಗಿತ್ತು. (Raids) ಎಷ್ಟು ಪ್ರಕರಣಗಳಲ್ಲಿ ವಿಚಾರಣೆ ಮಾಡಲಾಗಿತ್ತು, ಎಷ್ಟು ಪ್ರಸಂಗಗಳಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಯಿತು ಹಾಗೂ ಲಂಚದ ಆರೋಪಗಳ ಮಾಹಿತಿ ನೀಡಬೇಕು ಎಂದು ಮದ್ರಾಸ್ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ, ಏಕ ಸದಸ್ಯ ಪೀಠದ ಆದೇಶ ಮತ್ತು ಮುಖ್ಯ ಮಾಹಿತಿ ಆದೇಶವನ್ನು ರದ್ದು ಪಡಿಸಿತು. 2011 (3) CTC 241/2011 (2) ID 866/AIR 2012 Madras 84

11. ಮಾಹಿತಿ ಹಕ್ಕು ಕಾಯಿದೆಯ ಕಲಂ.24(4) ಮತ್ತು ಪರಂತುಕದಲ್ಲಿ ವಿನಾಯಿತಿ ನೀಡಿರುವುದು ವಿಚಕ್ಷಣ ಮತ್ತು ಭದ್ರತೆ, ಆ ರಾಜ್ಯದ ಸಂಸ್ಥೆಗೆ ಸಂಬಂಧಪಟ್ಟಂತೆ ಎಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ, ಮೊದಲನೇ ಮೇಲ್ಮನವಿ ಪ್ರಾಧಿಕರಣದ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಕೇಳಿರುವ ಮಾಹಿತಿ ಒಂದು ಸಾಮಾನ್ಯ ಮಾಹಿತಿ. ಅಂದರೆ ಹುದ್ದೆಗಳ ಸಂಖ್ಯೆ, ಬರ್ತಿ ಮಾಡಿದ ವ್ಯಕ್ತಿಗಳು, ಖಾಲಿ ಇರುವ ಹುದ್ದೆಗಳು ಮತ್ತು ಹೊಂದಾಣಿಕೆ ಮಾಡಿದ ವ್ಯಕ್ತಿಗಳು. ಈ ಮಾಹಿತಿಯನ್ನು ನೀಡಲಾಗದೆಂದು ತಿಳಿಸಿರುವುದು ಸರಿಯಲ್ಲವೆಂದು ಇದಕ್ಕೆ ಕಲಂ.24(4) ರ ವಿನಾಯಿತಿ ಇಲ್ಲವೆಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ ಆದೇಶಿಸಿತು. 2011 (2) ID 207

12. ಮಾಹಿತಿ ಹಕ್ಕು ಕಾಯಿದೆಯಡಿ ಕೇಳಿದ ಮಾಹಿತಿಯು, ಹುದ್ದೆಗಳ ಸಂಖ್ಯೆ, ಯಾವ ಶ್ರೇಣಿಯ ಹುದ್ದೆಗಳು ಮತ್ತು ಎಷ್ಟು ಹುದ್ದೆಗಳನ್ನು ಅರ್ಹ ಅಭ್ಯರ್ತಿಗಳನ್ನು ಬರ್ತಿ ಮಾಡಿದೆ, ಎಂಬ ಮಾಹಿತಿ ಪಾರದರ್ಶಕ ನೀತಿಯನ್ನು ತೋರಿಸುತ್ತದೆ. ಇದರಲ್ಲಿ ಲಂಚಗುಳಿತನ ಮತ್ತಿತ್ತರ ಮಾಹಿತಿ ಕೇಳಿರುವುದು ವಿನಾಯಿತಿಗೊಳಪಡುವುದಿಲ್ಲ ಆದ್ದರಿಂದ ಮಾಹಿತಿ ನೀಡಬೇಕೆಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಆದೇಶಿಸಿತು. AIR 2011 P & H 168/2011 (2) ID 168

13. ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಕೇಳಿರುವ ಮಾಹಿತಿಯು ಕಾನೂನಿಗೆ ವಿರುದ್ಧವಾಗಿ ಸರ್ಕಾರಿ ಭೂಮಿಯಲ್ಲಿ ಕಟ್ಟಡ ನಿರ್ಮಾಣ ಮಾಡಿ ಮತ್ತು ಲಂಚಗುಳಿತನದ ಪ್ರಕರಣವಾಗಿದ್ದು ಪಾರದರ್ಶಕ ನೀತಿಯಂತೆ ಮಾಹಿತಿ ನೀಡಬೇಕೆಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ ಮೊದಲನೇ ಮೇಲ್ಮನವಿ ಪ್ರಾಧಿಕಾರದ ಪ್ರಕರಣದಲ್ಲಿ ತೀರ್ಮಾನಿಸಿತು. ವಿನಾಯಿತಿ ಇರುವ ವಿಷಯವೆಂದರೆ ರಾಜ್ಯದ ಸೂಕ್ಷ್ಮ ಮಾಹಿತಿಗೆ ಸಂಬಂಧಪಟ್ಟಿದ್ದರೆ ಮಾತ್ರ ಅದಕ್ಕೆ ವಿನಾಯಿತಿ ಇದೆಯೇ ಹೊರತು ಮತ್ತಾವುದೆ ವಿಷಯಗಳಿಗೆ ಸಂಬಂಧಪಟ್ಟಂತಲ್ಲವೆಂದು ತೀರ್ಮಾನಿಸಿತು. AIR 2011 P & H 173

14. ಸಾರ್ವಜನಿಕ ಸೇವಾ ಆಯೋಗವು ದಾಖಲೆಗಳ ಪ್ರತಿ ಮತ್ತಿತ್ತರ ಮಾಹಿತಿ ನೀಡಲು ನಿಯಮಗಳನ್ನು

ರೂಪಿಸಿದೆ. ಆದರೆ ಆ ನಿಯಮಗಳು ಮಾಹಿತಿ ಕಾಯಿದೆಗೆ ವಿರುದ್ಧವಾಗಿರತಕ್ಕದ್ದಲ್ಲವೆಂದು ಕೇರಳ ಉಚ್ಚನ್ಯಾಯಾಲಯ ಕೇರಳ ಸಾರ್ವಜನಿಕ ಸೇವಾ ಆಯೋಗದ ಪ್ರಕರಣದಲ್ಲಿ ತೀರ್ಮಾನಿಸಿತು. ಸಾರ್ವಜನಿಕ ಸೇವಾ ಆಯೋಗವು ತಾನು ರೂಪಿಸಿದ ನೀತಿಗೆ ವಿರುದ್ದವಾಗಿ ಮಾಹಿತಿ ನೀಡಲು ನಿರ್ದೇಶನಕೊಳಪಡುವುದಿಲ್ಲವೆಂಬ ವಾದವನ್ನು ಕೇರಳ ಉಚ್ಚನ್ಯಾಯಾಲಯ ನಿರಾಕರಿಸಿತು. ವಿಧಾನ ಸಭೆ ರೂಪಿಸಿದ ಕಾಯಿದೆಗೆ ವಿರುದ್ದವಾಗಿ ನಿಯಮಗಳನ್ನು ರೂಪಿಸತಕ್ಕದ್ದಲ್ಲವೆಂದು, ಮತ್ತು ಅದರ ವ್ಯಾಪ್ತಿಗಿಂತ ಮೀರಿ ರೂಪಿಸತಕ್ಕದ್ದಲ್ಲವೆಂದು ಸೂಚಿಸಿತು. 2011 (2) KLT 88/2011 (1) ID 504

15. ಕೇಂದ್ರ ವಿಚಕ್ಷಣ ಸಂಸ್ಥೆ (CBI) ಮಾಹಿತಿ ಹಕ್ಕು ಕಾಯಿದೆಯಲ್ಲಿ ವಿನಾಯಿತಿ ಪಡೆದ ಸಂಸ್ಥೆಯೆಂದು ಮದ್ರಾಸ್ ಉಚ್ಚನ್ಯಾಯಾಲಯ ವಿಭಾಗೀಯ ಪೀಠ ಎಸ್.ವಿಜಯಲಕ್ಷ್ಮಿ ಪ್ರಕರಣದಲ್ಲಿ ತೀರ್ಮಾನಿಸಿತು. ಸಿಬಿಐ ಎರಡನೇ ಅಡಕದಲ್ಲಿ ಬರುವುದರಿಂದ ಇದು ಸೂಕ್ಷ್ಮ ಮಾಹಿತಿಯನ್ನು ವಿಚಾರಣೆ ಮಾಡುವ ಸಂಸ್ಥೆಯಾಗಿದ್ದು ರಾಷ್ಟ್ರದ ಭದ್ರತೆಯ ಮೇಲೆ ನೇರ ಸಂಬಂಧ ವಿರುವುದರಿಂದ ಕಲಂ.8(1) ರಲ್ಲಿ ನೀಡಿರುವ ವಿನಾಯಿತಿ ಸರಿಯಾಗಿದೆ ಎಂದು ಮದ್ರಾಸ್ ಉಚ್ಚನ್ಯಾಯಾಲಯ ತೀರ್ಮಾನಿಸಿತು. 2011 (5) CTC 376/2011 (2) ID 461/2011 -5-LW-151/AIR 2011 Madras 275

**<u>ಸಹಕಾರಿ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಮಾಹಿತಿ ಹಕ್ಕು ಕಾಯಿದೆಯಲ್ಲಿ ಉಚ್ಚನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯಗಳು ನೀಡಿದ ತೀರ್ಪುಗಳ ಸಾರಾಂಶ :</u>**

ಸಹಕಾರ ಎಂಬ ವಿಷಯ ಪೂರ್ವದಿಂದಲೂ ಒಂದು ಪದ್ದತಿ. ಅಂದರೆ ಸಮಾಜದಲ್ಲಿ ಸಹಬಾಳ್ವೆ ನಡೆಸಲು ಅನುಸರಿಸುವ ನೀತಿಯೇ ಸಹಕಾರ. ಸಮಾನ ಮನಸ್ಕರು, ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಡೀಕರಿಸಿ ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡು ಒಂದು ಸಂಸ್ಥೆ. ಸಹಕಾರ ಒಂದು ಕುಟುಂಬ ವ್ಯವಸ್ಥೆಯಿಂದ ಪ್ರಾರಂಭವಾಗಿ ಗ್ರಾಮ, ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅನುಸರಿಸಲಾಗುತ್ತಿದೆ. ಭಾರತ ದೇಶದಲ್ಲಿ ಪೂರ್ವದಿಂದಲೂ ಗ್ರಾಮಾಂತರ ಪ್ರದೇಶದಲ್ಲಿ ಸಹಬಾಳ್ವೆ ತತ್ವದನ್ವಯ ಕುಟುಂಬ ವ್ಯವಸ್ಥೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಸಹಕಾರಿ ಆಂದೋಲನವು ರಾಜ್ಯ ಮತ್ತು ಖಾಸಗಿ ಸಂಸ್ಥೆಗಳ ಮಧ್ಯೆ ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕ ಸಂಸ್ಥೆಗಳಾಗಿದ್ದರೂ, ಲಾಭದ ದೃಷ್ಟಿಯಿಂದಲೇ ಕಾರ್ಯನಿರ್ವಹಿಸುವುದಿಲ್ಲ. ಸದಸ್ಯರ ಅಗತ್ಯಗಳನ್ನು ಪೂರೈಸುವ ಒಂದು ಸೇವಾ ಸಂಸ್ಥೆ.

ಭಾರತದ ಸಂವಿಧಾನದನ್ವಯ 'ಸಹಕಾರ' ಎಂಬ ವಿಷಯ ರಾಜ್ಯ ಪಟ್ಟಿಯಲ್ಲಿ ಬರುತ್ತಿದ್ದು, ಕಾಯಿದೆ ರೂಪಿಸುವ ಅವಕಾಶ ರಾಜ್ಯ ವಿಧಾನ ಮಂಡಳದ ಹಕ್ಕು. ಇದಕ್ಕೆ ಪೂರಕವಾಗಿ, 1904 ರಲ್ಲಿ ಸಹಕಾರಿ ಕಾಯಿದೆಯನ್ನು ರೂಪಿಸಿ ರಾಜ್ಯಗಳ ಪುನರ್ ವಿಂಗಡಣೆಯ ನಂತರ ಒಂದು ಕ್ರೋಡೀಕೃತ ಸಹಕಾರಿ ಕಾಯಿದೆಯನ್ನು 1959 ರಲ್ಲಿ ರೂಪಿಸಿತು. ಇದಕ್ಕೆ ಪೂರ್ವದಲ್ಲಿ ದಕ್ಷಿಣದ 5 ರಾಜ್ಯದಿಂದ ಹೊಸದಾಗಿ ಸೇರ್ಪಡೆಗೊಂಡ ಭೂಪ್ರದೇಶಕ್ಕೆ ಅನುಗುಣವಾಗಿ ಈ ಕ್ರೋಡೀಕೃತ ಕಾಯಿದೆಯನ್ನು ರೂಪಿಸಿತು. ಮುಂಬೈ ಪ್ರಾಂತ್ಯದಿಂದ ಬೆಳಗಾವಿ, ಉತ್ತರಕನ್ನಡ, ದಾರವಾಡ, ಬಿಜಾಪುರ (ಭಾಗಲಕೋಟೆ, ಗದಗ್, ಹಾವೇರಿ ಜಿಲ್ಲೆಗಳನ್ನು ಹೊಸದಾಗಿ ಪುನರ್ ವಿಂಗಡಿಸಿದೆ) ಮತ್ತು ಹೈದ್ರಾಬಾದ್ ಕರ್ನಾಟಕದಿಂದ ಬೀದರ್, ಗುಲ್ಬರ್ಗ, ರಾಯಚೂರು (ಯಾದಿಗಿರ್, ಕೊಪ್ಪಳ ಜಿಲ್ಲೆಗಳನ್ನು

ಹೊಸದಾಗಿ ಪುನರ್ ವಿಂಗಡಿಸಿದೆ). ಮದ್ರಾಸ್ ಪ್ರಾಂತ್ಯದಿಂದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಹಾಗೂ ಮಡಿಕೇರಿ ರಾಜ್ಯವನ್ನು ಜಿಲ್ಲೆಯೆಂದು ಪರಿವರ್ತಿಸಿದೆ. ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕವೆಂದು ಮರು ನಾಮಕರಣ ಮಾಡಲಾಗಿದೆ. ಯೋಜನಾ ಆಯೋಗದ ಕರಡು ಸಹಕಾರಿ ಕಾಯಿದೆ ಪೂರಕವಾಗಿ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಒಂದು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯನ್ನು 1997 ರಲ್ಲಿ ರೂಪಿಸಿ ಜಾರಿ ಮಾಡಿದೆ. ಇದಾದ ನಂತರ ಸಂವಿಧಾನಕ್ಕೆ 97ನೇ ತಿದ್ದುಪಡಿ ರೂಪದಲ್ಲಿ ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಏಕ ರೀತಿಯ ಸಹಕಾರಿ ಕಾಯಿದೆ ರೂಪಿಸುವಂತೆ ತಿದ್ದುಪಡಿ ಮಾಡಲಾಗಿದ್ದನ್ನು ಅನುಸರಿಸಿ, ಸಹಕಾರಿ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಕ್ಕೆ ಮಾರ್ಪಾಡುಗಳನ್ನು ಮಾಡಲಾಗಿದೆ.

97ನೇ ಸಂವಿಧಾನ ತಿದ್ದುಪಡಿ ಪೂರ್ವದಲ್ಲಿ. ಕೇಂದ್ರ ಸರ್ಕಾರ ಮಾಹಿತಿ ಹಕ್ಕು ಕಾಯಿದೆಯನ್ನು ರೂಪಿಸಿ, ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು, ಸಾರ್ವಜನಿಕರಿಗೆ ಬೇಕಾದ ಎಲ್ಲಾ ಮಾಹಿತಿಯನ್ನು ಪಡೆಯಲು 2005 ರಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು ರೂಪಿಸಿದೆ. ಸಹಕಾರಿ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಯ ವ್ಯಾಪ್ತಿಯ ಬಗ್ಗೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳು ನೀಡುತ್ತಿವೆ. ಸಂವಿಧಾನ ತಿದ್ದುಪಡಿಯಲ್ಲಿ ಪ್ರತಿಯೊಬ್ಬ ಸಹಕಾರಿ ಸಂಸ್ಥೆಯ ಸದಸ್ಯ ಪಡೆಯಬಹುದಾದ ಮಾಹಿತಿ ಬಗ್ಗೆ (ಸದಸ್ಯನಿಗೆ ಸಂಬಂಧಪಟ್ಟಂತೆ) ಅವಕಾಶ ಕಲ್ಪಿಸಿದೆ.

ಮಾಹಿತಿ ಪಡೆಯುವುದು ಒಂದು ಮೂಲ ಭೂತ ಹಕ್ಕು ಎಂಬುದನ್ನು ಪ್ರತಿಯೊಬ್ಬ ಪ್ರಜೆ ತನ್ನ ಮಾತುಗಳಿಂದ, ಭಾವನೆಗಳಿಂದ ಅನುಚ್ಛೇದ 19(ಎ) ಅಡಿ ಪ್ರಾಪ್ತವಾಗುತ್ತದೆ. ಇದಕ್ಕೆ ಪೂರಕವಾಗಿ ಪ್ರತಿಯೊಬ್ಬ ಭಾರತದ ಪ್ರಜೆಯು ರಾಷ್ಟ್ರದ ಯಾವುದೇ ಭಾಗದ ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿ ಪಡೆಯುವ ಹಕ್ಕನ್ನು ನೀಡುತ್ತದೆ. ಇದರ ಜೊತೆಗೆ ಯಾವನೇ ಒಬ್ಬ ಪ್ರಜೆ ಮಾಹಿತಿ ಪಡೆಯಲು ಕಾರಣ ನೀಡಲು ಅವಶ್ಯಕವಿಲ್ಲವೆಂದು ಕಲ್ಪಿಸಿರುವ ಅವಕಾಶವನ್ನು ನ್ಯಾಯಾಲಯಗಳು ಆಗಿಂದಾಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಇದರ ದುರುಪಯೋಗವಾಗುವ ಪ್ರಸಂಗಗಳನ್ನು ಉಲ್ಲೇಖಿಸಿವೆ. ಆದರೆ ಒಂದು ಪ್ರಾಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪಾರದರ್ಶಕ ನೀತಿಯನ್ವಯ, ಮಾಹಿತಿ ಪಡೆಯುವ ಹಕ್ಕನ್ನು ನೀಡಲು ಈ ಕಾಯಿದೆಯನ್ನು ರೂಪಿಸಿದೆ. ಸಾರ್ವಜನಿಕ ಪ್ರಾಧಿಕಾರಗಳು ಗೌಪ್ಯತೆ ಮತ್ತು ಗುಪ್ತತೆ ಆಧಾರದಲ್ಲಿ ಮಾಹಿತಿ ನೀಡಲು ನಿರಾಕರಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳನ್ನು ಕಾಯಿದೆಯಲ್ಲಿ ವಿನಾಯಿತಿ ನೀಡಲಾಗಿದೆ. ವಿನಾಯಿತಿ ನೀಡಿದ್ದನ್ನು ಹೊರತು ಪಡಿಸಿ ಮತ್ತಾವುದೇ ಮಾಹಿತಿಯನ್ನು ಪಡೆಯಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿದೆ.

ಈ ಕಾಯಿದೆಯ ಮೂಲ ಉದ್ದೇಶ ಪ್ರಜಾಪ್ರಭುತ್ವವನ್ನು ಬಲಗೊಳಿಸುವುದು, ಪಾರದರ್ಶಕ ನೀತಿಯನ್ನು ಅನುಸರಿಸುವುದು ಮತ್ತು ಸಾರ್ವಜನಿಕ ಪ್ರಾಧಿಕಾರಗಳನ್ನು ಜವಾಬ್ದಾರರನ್ನಾಗಿ ಮಾಡಲು ರೂಪಿಸಿದ ಕಾಯಿದೆ. ಈ ಕಾಯಿದೆ ಜಾರಿಯಿಂದ ಸಾರ್ವಜನಿಕರು ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ನ್ಯೂನತೆಯನ್ನು ಗುರುತಿಸಲು ಮತ್ತು ಸರ್ಕಾರವನ್ನು ಎಚ್ಚರಿಸಲು ಒಂದು ಅವಕಾಶವನ್ನು ನೀಡಿದೆ. ಸರ್ಕಾರಕ್ಕೆ ಸಾರ್ವಜನಿಕರು ನೀತಿ ನಿಯಮಗಳ ಬಗ್ಗೆ ಪ್ರಶ್ನಿಸುವ ಮತ್ತು ಸೇವಾ ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವ ಒಂದು ವ್ಯವಸ್ಥೆ.

ಮಾಹಿತಿ ಹಕ್ಕು ಕಾಯಿದೆ ಕೆಲವು ರಾಜ್ಯಗಳಲ್ಲಿ ಮಾಹಿತಿ ಕಾಯಿದೆಯಡಿ ಬರುತ್ತವೆಂದು ಮಾರ್ಪಾಡುಮಾಡಿವೆ. ಆದರೆ ಹಲವು ರಾಜ್ಯಗಳಿಗೆ ಮಾಹಿತಿ ಕಾಯಿದೆ ಅನ್ವಯವಾಗುವುದರ ಬಗ್ಗೆ

ಸ್ಪಷ್ಟತೆ ಇಲ್ಲದಿರುವಾಗ ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯಗಳು ಈ ಬಗ್ಗೆ ತೀರ್ಮಾನಿಸುತ್ತವೆ. ಮದ್ಯಪ್ರದೇಶ ಸಹಕಾರಿ ಕಾಯಿದೆಯಡಿ ಶೇ.50 ಕ್ಕಿಂತ ಹೆಚ್ಚು ಸರ್ಕಾರದ ಪಾಲುಬಂಡವಾಳ ಹೂಡಿದ್ದರೆ, ಅಂತಹ ಸಹಕಾರಿ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಗೆ ಬರುತ್ತವೆ ಎಂದು ಉಲ್ಲೇಖಿಸಿದೆ. ಗೋವ ಸರ್ಕಾರವು 1997 ರಲ್ಲಿ ರೂಪಿಸಿದ ಮಾಹಿತಿ ಹಕ್ಕು ಕಾಯಿದೆಯಡಿ ಸರ್ಕಾರವು ಹಣ ಸಹಾಯ ನೀಡಿದ್ದರೆ ಅಥವಾ ನಿಯಂತ್ರಿಸುತ್ತಿದ್ದರೆ ಅಂತಹ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಗೆ ಬರುತ್ತವೆ ಎಂದು ಉಲ್ಲೇಖಿಸಿದೆ. ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಹಕಾರಿ ಸಂಸ್ಥೆಗಳಲ್ಲಿ ಹಣ ಹೂಡಿದ್ದರೆ ಮಾಲೀಕತ್ವ ಇದ್ದರೆ ಅಥವಾ ನಿಯಂತ್ರಿಸುತ್ತಿದ್ದರೆ, ಅಂತಹ ಸಹಕಾರಿ ಸಂಸ್ಥೆಗಳನ್ನು ಸಾರ್ವಜನಿಕ ಸಂಸ್ಥೆ ಎಂದು ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರುವುದರ ಬಗ್ಗೆ ಉಲ್ಲೇಖಿಸಿದೆ. ಇದೇ ರೀತಿ ಮಹಾರಾಷ್ಟ್ರ ಮಾಹಿತಿ ಹಕ್ಕು ಕಾಯಿದೆಯಲ್ಲಿ, ರಾಜಾಸ್ಥಾನ ಮಾಹಿತಿ ಹಕ್ಕು ಕಾಯಿದೆಯಲ್ಲಿ ಮತ್ತು ತಮಿಳುನಾಡು ಮಾಹಿತಿ ಹಕ್ಕು ಕಾಯಿದೆಯಲ್ಲಿ ಈ ಮೇಲ್ಕಂಡ ಅರ್ಥವನ್ನೇ ನೀಡಲಾಗಿದೆ.

ಸಹಕಾರಿ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಯಡಿ ಬರುವುದರ ಬಗ್ಗೆ ಉಚ್ಚನ್ಯಾಯಾಲಯಗಳು ಏಕ ರೀತಿಯ ನಿಲುವನ್ನು ವ್ಯಕ್ತಪಡಿಸಿಲ್ಲ. ಶ್ರೇಷ್ಠ ನ್ಯಾಯಾಲಯವು ಕೆಲವು ಪ್ರಸಂಗಗಳನ್ನು ವಿಮರ್ಶಿಸಿದ್ದು ಅಂತಿಮವಾಗಿ ಕೇರಳ ಉಚ್ಚನ್ಯಾಯಾಲಯದ ತೀರ್ಮಾನಕ್ಕೆ ಅಂತಿಮವಾಗಿ ಸರ್ಕಾರದಿಂದ ಸಹಾಯ ಧನ ಪಡೆಯಲಾರದ ಸಂಸ್ಥೆಗಳು ಬರುವುದಿಲ್ಲವೆಂದು ಅಂತಿಮ ತೀರ್ಪನ್ನು ನೀಡಿದೆ.

1. ಕರ್ನಾಟಕ ಉಚ್ಚನ್ಯಾಯಾಲಯ ದತ್ತಪ್ರಸಾದ್ ಗೃಹ ನಿರ್ಮಾಣ ಸಹಕಾರ ಸಂಘದ ಪ್ರಸಂಗದಲ್ಲಿ ನಿಬಂಧಕರು ಸಹಕಾರಿ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳು ಎಂದು ಹೊರಡಿಸಿದ ಅಧಿಸೂಚನೆ ಈ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅನ್ವಯವಾಗುವುದಿಲ್ಲವೆಂದು ತೀರ್ಮಾನಿಸಿತು. ಅರ್ಜಿದಾರರು ಸಹಕಾರ ಸಂಘವು ಸರ್ಕಾರದ ಮಾಲೀಕತ್ವ, ನಿಯಂತ್ರಣ ಅಥವಾ ಪ್ರತ್ಯಕ್ಷ ಹಾಗೂ ಪರೋಕ್ಷ ಸಹಾಯ ಧನ ಪಡೆದಿಲ್ಲವಾದ್ದರಿಂದ ಹಾಗೂ ನಿಬಂಧಕರ ಮೇಲ್ವಿಚಾರಣೆ ಇರುವುದರ ಬಗ್ಗೆ ಮತ್ತು ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ಸಹಕಾರಿ ಸಂಸ್ಥೆಗಳು ಒಂದು ಸಾರ್ವಜನಿಕ ಪ್ರಾಧಿಕಾರ ಎಂಬ ಕಾರಣದಿಂದಲೇ ಮಾಹಿತಿ ಹಕ್ಕು ಕಾಯಿದೆಯಡಿ ಬರುವುದಿಲ್ಲವೆಂದು ತೀರ್ಮಾನಿಸಿತು. AIR 2009 Kar 1/2009 (1) ID 323/2008 (4) KCCR 2357
2. ಅರ್ಜಿದಾರ ಬ್ಯಾಂಕ್ ಸರ್ಕಾರಕ್ಕೆ ಕೊಡಬೇಕಾದ ಪೂರ್ಣ ಪಾಲುಬಂಡವಾಳವನ್ನು ಮರು ಪಾವತಿ ಮಾಡಿರುವುದರಿಂದ ಮತ್ತು ನಿಬಂಧಕರು ಮೇಲ್ವಿಚಾರಣೆ ಮತ್ತು ನಿಯಂತ್ರಣ ಇದೆ ಎಂಬ ಕಾರಣದಿಂದ ಮಾಹಿತಿ ಹಕ್ಕು ಕಾಯಿದೆಯಡಿ ಬರುವುದಿಲ್ಲ ಎಂದು ಬೀದರ್ ಡಿಸಿಸಿ ಬ್ಯಾಂಕ್ ಪ್ರಕರಣದಲ್ಲಿ ಕರ್ನಾಟಕ ಉಚ್ಚನ್ಯಾಯಾಲಯ ತೀರ್ಮಾನಿಸಿತು. ನಿಬಂಧಕರು ಮೇಲ್ವಿಚಾರಣೆ ಮಾಡುವ ಮತ್ತು ನಿಯಂತ್ರಿಸುವ ಅಧಿಕಾರ ಕಾಯಿದೆಯಲ್ಲಿ ಇದೆ ಎಂಬ ಮಾತ್ರಕ್ಕೆ, ಅದನ್ನು ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರುತ್ತದೆಂದು ಅರ್ಥೈಸತಕ್ಕದ್ದಲ್ಲ. 2009 (1) ID 138/AIR 2009 (NOC) 1049 (KAR)
3. ಸಹಕಾರಿ ಬ್ಯಾಂಕ್ ಒಂದು ಸಾರ್ವಜನಿಕ ಪ್ರಾಧಿಕಾರವಲ್ಲ ಮತ್ತು ಅದು ಕಲಂ.2(ಹೆಚ್) ರಡಿ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ ಎಂದು ಬಾಂಬೆ ಉಚ್ಚನ್ಯಾಯಾಲಯ ಶಿಕ್ಷಕ ಸಹಕಾರ

ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. AIR 2010 Bom 61

4. ಖಾಸಗಿ ಸಂಸ್ಥೆಗಳ ಬಗ್ಗೆ ಮಾಹಿತಿ ಹಕ್ಕು ಕಾಯಿದೆಯಲ್ಲಿ ಮಾಹಿತಿ ಎಂದು ಪರಿಗಣಿಸಬಹುದು. ಆದರೆ ಅದಕ್ಕೆ ಪೂರಕವಾಗಿ ಆ ಮಾಹಿತಿಯು ಸಾರ್ವಜನಿಕ ಪ್ರಾಧಿಕಾರಕ್ಕೆ ಪಡೆಯುವ ಅಧಿಕಾರ ಇದೆ ಎಂದಾಗ ಮಾತ್ರ. ಎಲ್ಲಾ ಸಹಕಾರಿ ಸಂಸ್ಥೆಗಳು ಕಲಂ.2(ಹೆಚ್) ಅನ್ವಯ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ ಎಂದು ಆಂದ್ರಪ್ರದೇಶ ಉಚ್ಚನ್ಯಾಯಾಲಯ ಶ್ರೀ ಭವನ್ ರಿಷಿ ಸಹಕಾರ ಗೃಹ ನಿರ್ಮಾಣ ಸಹಕಾರ ಸಂಘದ ಪ್ರಕರಣದಲ್ಲಿ ತೀರ್ಮಾನಿಸಿತು. ಅಂದರೆ ಸರ್ಕಾರದಿಂದ ದೊಡ್ಡ ಪ್ರಮಾಣದಲ್ಲಿ ಹಣಕಾಸು ನೇರವು ಪಡೆದಿದ್ದರೆ ಅಥವಾ ಪ್ರತ್ಯಕ್ಷ ಪರೋಕ್ಷವಾಗಿ ಬಂಡವಾಳ ಪಡೆದಿದ್ದರೆ, ಅಂತಹ ಸಂಸ್ಥೆ ಸಾರ್ವಜನಿಕ ಸಂಸ್ಥೆಯಾಗುವುದಿಲ್ಲ. ಸಹಕಾರಿ ಸಂಸ್ಥೆಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ತೀರ್ಮಾನಿಸಿದಾಗ, ಅಂತಹ ಸಹಕಾರಿ ಸಂಸ್ಥೆಯ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಅಧಿಕಾರ ಪಡೆಯುತ್ತಾರೆ. AIR 2010 AP 127/2011 (1) ID 11

5. ಸಹಕಾರಿ ಸಂಸ್ಥೆಗಳನ್ನು ಸಾರ್ವಜನಿಕ ಪ್ರಾಧಿಕಾರಗಳೆಂದು ತೀರ್ಮಾನಿಸತಕ್ಕದ್ದಲ್ಲವೆಂದು ಮತ್ತು ಮಾಹಿತಿ ಹಕ್ಕು ಕಾಯಿದೆ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯ ಸಾರ್ವಜನಿಕ ಮಾಹಿತಿ ಅಧಿಕಾರಿ ಪ್ರಕರಣದಲ್ಲಿ ತೀರ್ಮಾನಿಸಿತು. ಇದರಲ್ಲಿ ಉಲ್ಲೇಖಿಸಿದ ಅಂಶವೆಂದರೆ ದಾಖಲೆಗಳಲ್ಲಿ ಈ ಸಹಕಾರಿ ಸಂಸ್ಥೆಯ ಮಾಲೀಕತ್ವವನ್ನು ಸರ್ಕಾರ ಪಡೆದಿದೆ ಅಥವಾ ದೊಡ್ಡ ಪ್ರಕಾರಣದ ಹಣಕಾಸು ನೇರವು ನೀಡಿದೆ ಹಾಗೂ ನಿಯಂತ್ರಿಸುತ್ತಿದೆ ಎಂದು ತೊರಿಸಿಲ್ಲವಾದರಿಂದ ಈ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆಯಡಿ ಬರುವುದಿಲ್ಲ. W.P No.17889/2007 dated 25.02.2009

6. ಒಂದು ಸಹಕಾರಿ ಬ್ಯಾಂಕಿನ ಸದಸ್ಯ, ಮಾಹಿತಿ ಹಕ್ಕು ಕಾಯಿದೆಯಲ್ಲಿ ಮಾಹಿತಿ ಕೇಳಿ ಅರ್ಜಿ ಸಲ್ಲಿಸಿದಾಗ ಈ ಸಹಕಾರಿ ಬ್ಯಾಂಕ್ ಸಾರ್ವಜನಿಕ ಪ್ರಾಧಿಕಾರವಲ್ಲವೆಂದು ಬಾಂಬೆ ಉಚ್ಚನ್ಯಾಯಾಲಯ ಡಾ. ಪಂಜಾಬ್ ರಾವ್ ದೇಶ್‌ಮುಕ್ ಪಟ್ಟಣ ಸಹಕಾರಿ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ದಾಖಲೆಗಳಲ್ಲಿ ಈ ಸಹಕಾರಿ ಬ್ಯಾಂಕ್ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಿಯಂತ್ರಣದಲ್ಲಿದೆ ಎಂದು ತಿಳಿಯತಕ್ಕದ್ದಲ್ಲ. ಈ ಪ್ರಕರಣದಲ್ಲಿ ಸರ್ಕಾರದ ನಿಯಂತ್ರಣದ ಬಗ್ಗೆ ವಿಮರ್ಶಿಸಿದಾಗ, ಈ ಬ್ಯಾಂಕಿನ ಮೇಲೆ ನಿಯಂತ್ರಣದ ಅರ್ಥದೊಳಗೆ ಮತ್ತು ರಾಜ್ಯ ಎಂಬ ಅರ್ಥದೊಳಗೆ ಸೇರಿಸಲಾಗದು. ಆದ್ದರಿಂದ ಈ ಪ್ರಕರಣ ಊರ್ಜಿತವಲ್ಲ ಎಂದು ವಜಾ ಮಾಡಿತು. AIR 2009 Bom 75/2009 (3) KLT SN 6/2009 (2) ID 156

7. ಒಂದು ಸಹಕಾರಿ ಸಂಘದ ಸದಸ್ಯರಿಗೆ ಸಹಾಯ ಧನ ನೀಡಿದ್ದರೆ, ಆ ಸಹಕಾರಿ ಸಂಸ್ಥೆಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸತಕ್ಕದ್ದಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯ ಟೆಕ್ಸ್‌ಟೈಲ್ ಕೋಆಪರೇಟಿವ್ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ಸಂಘದ ಸದಸ್ಯರಾದ ನೇಕಾರರಿಗೆ ರಾಜ್ಯ ಸರ್ಕಾರದ ಬಡ್ಡಿ ಸಹಾಯ ಧನ ಎಂದು ನೀಡಿದ ಹಣ, ಸಹಕಾರಿ ಸಂಘಕ್ಕೆ ನೀಡಿದಂತಾಗುವುದಿಲ್ಲ. ಅಂದರೆ 2003-2004 ರಿಂದ 2006-2007 ರವರೆಗೆ ನೇಕಾರರಿಗೆ ಸಹಕಾರಿ ಬ್ಯಾಂಕಿನ ಮೂಲಕ ಬಡ್ಡಿ ಸಹಾಯ ಧನವನ್ನು ವಿತರಣೆ ಮಾಡಲಾಗಿತ್ತು. ಆ ಕಾರಣದಿಂದ ಸಹಕಾರಿ ಬ್ಯಾಂಕ್ ಸಾರ್ವಜನಿಕ ಪ್ರಾಧಿಕಾರವಾಗುವುದಿಲ್ಲ. ಬ್ಯಾಂಕಿನ ಸದಸ್ಯರು ಪಡೆದ ಸಾಲಕ್ಕೆ ಬಡ್ಡಿ ಸಹಾಯ ಧನವನ್ನು ಸದಸ್ಯರಿಗೆ ನೀಡಲಾಗಿದ್ದು, ಅದನ್ನು ಬ್ಯಾಂಕ್‌ನಿಂದ ವಿತರಿಸಲಾಗಿದೆ ಎಂಬ ಕಾರಣದಿಂದಲೆ ಮಾಹಿತಿ ಹಕ್ಕು ಕಾಯಿದೆಯಡಿ ಬರುವುದಿಲ್ಲ. 2010 (1) ID 521

8. ಕೇರಳ ಸಹಕಾರಿ ಸಂಘಗಳ ಕಾಯಿದೆಯಡಿ ನೋಂದಣಿಯಾದ ಸಹಕಾರಿ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳೆಂದು ಕೇರಳ ಉಚ್ಚನ್ಯಾಯಾಲಯ ತಲಪಾಲಂ ಸೇವಾ ಸಹಕಾರಿ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಪ್ರಶ್ನಿಸಲಾದ ವಿಷಯಗಳೆಂದರೆ (1) ಕೇರಳ ಕಾಯಿದೆಯಲ್ಲಿ ನೋಂದಣಿಯಾದ ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳೆ (2) ಮಾಹಿತಿ ಹಕ್ಕು ಅಥವಾ ಮಾಹಿತ ಪಡೆಯುವ ಹಕ್ಕು ಮೂಲಭೂತ ಹಕ್ಕೆ? (3) ಸಂಬಂಧಪಟ್ಟ ಸರ್ಕಾರದಿಂದ ಹಣ ಸಹಾಯ ಪಡೆದಿದ್ದಾರೆಯೇ? ಎಂದು ಪರಿಶೀಲಿಸಿತು. ಒಂದು ಸಹಕಾರಿ ಸಂಘವು ಖಾಸಗಿ ಸಂಸ್ಥೆ, ಯಾವ ವ್ಯಕ್ತಿ ಆ ಸಂಘದ ಬಗ್ಗೆ ಮಾಹಿತಿ ಪಡೆಯಬೇಕಾದರೆ ಆ ಸಂಸ್ಥೆಯನ್ನು ನಿಯಂತ್ರಿಸುವ ಸಾರ್ವಜನಿಕ ಪ್ರಾಧಿಕಾರವನ್ನು ಸಂಪರ್ಕಿಸಬೇಕು. ಅವನು ಕೇಳಿದ ಮಾಹಿತಿಯನ್ನು ನೀಡಬಾರದೆಂದು/ನೀಡಬೇಕಿಲ್ಲವೆಂದು ಕಾಯಿದೆಯಲ್ಲಿ ಅವಕಾಶವಿದ್ದರೆ ಅಂತಹ ಮಾಹಿತಿಯನ್ನು ಹೊರತು ಪಡಿಸಿ ಉಳಿದ ಮಾಹಿತಿಯನ್ನು ಪಡೆಯಬಹುದು. ಸಹಕಾರಿ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಲ್ಲ, ಸಹಕಾರಿ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣಕಾಸು ನೇರವು ನೀಡಿ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹಣ ನೀಡಿದರೆ, ಅಂತಹ ಸಂಸ್ಥೆಗಳು ಮಾತ್ರ ಸಾರ್ವಜನಿಕ ಪ್ರಾಧಿಕಾರಗಳು. ಎರಡನೇ ಪ್ರಶ್ನೆಗೆ ಉಚ್ಚನ್ಯಾಯಾಲಯವು ಗೌಪ್ಯತೆ ಆಧಾರದ ಮೇಲೆ ಮಾಹಿತಿ ನೀಡುವ ಬಗ್ಗೆ ಮೂಲ ಭೂತ ಹಕ್ಕಿನ ಜೊತೆ ವಿಮರ್ಶಿಸಬೇಕು. ಹಣಕಾಸು ನೇರವನ್ನು ಸಂಬಂಧಪಟ್ಟ ಸರ್ಕಾರದಿಂದ ಪಡೆದಾಗ ಅದನ್ನು ಸರ್ಕಾರದ ಸಹಾಯ ಧನವೆಂದು ಪರಿಗಣಿಸಬಹುದು ಎಂದು ಕೇರಳ ಉಚ್ಚನ್ಯಾಯಾಲಯ ತೀರ್ಮಾನಿಸಿತು. ಅಂದರೆ ಕೇರಳ ಸಹಕಾರಿ ಕಾಯಿದೆಯಡಿ ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳು ಎಂದು ತೀರ್ಮಾನಿಸಿತು. 2009 (2) KLT 507/2009 (2) ID 1/AIR 2009 (NOC) 2185 (KER)

9. ಮೇಲ್ಕಂಡ ಏಕ ಸದಸ್ಯ ಪೀಠದ ಆದೇಶವನ್ನು ಕೇರಳ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಸರ್ಕಾರದಿಂದ ಸಾಕಷ್ಟು ಹಣಸಹಾಯ ಪಡೆಯದಿದ್ದರೆ, ಅದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ ಎಂದು ತಲಪಾಲಂ ಸೇವಾ ಸಹಕಾರಿ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ಇದನ್ನು ವಿಮರ್ಶಿಸುವಾಗ ವಿಭಾಗೀಯ ಪೀಠ ಎರಡು ಪ್ರಶ್ನೆಗಳನ್ನು ಮಾಡಿದೆ (1) ಯಾವುದೇ ಪ್ರಾಧಿಕಾರವನ್ನು ಸರ್ಕಾರ ಸ್ಥಾಪಿಸಿದ್ದು ಅಥವಾ ರೂಪಿಸಿದ್ದು ಮತ್ತು (2) ಆ ಸಂಸ್ಥೆಯನ್ನು ಮಾಲೀಕತ್ವ ಅಥವಾ ನಿಯಂತ್ರಣ ಅಥವಾ ದೊಡ್ಡ ಪ್ರಮಾಣದ ಹಣಕಾಸು ನೇರವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೀಡಿದ್ದರೆ, ಅದು ಸಾರ್ವಜನಿಕ ಪ್ರಾಧಿಕಾರವಾಗುತ್ತದೆ. ಈ ಪ್ರಕರಣವನ್ನು ಎರಡನೇ ವರ್ಗಕ್ಕೆ ಸೇರಿಸಿ ಈ ಸಹಕಾರಿ ಸಂಸ್ಥೆಯು ಸಾರ್ವಜನಿಕ ಪ್ರಾಧಿಕಾರ ಮತ್ತು ಈ ಸಹಕಾರಿ ಸಂಸ್ಥೆಯು ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೇರವು ಪಡೆದಿದ್ದೆ ಎಂಬುದನ್ನು ಪರಿಶೀಲಿಸಬೇಕು. ಕೇರಳ ಸಹಕಾರಿ ಕಾಯಿದೆಯಡಿ ನಿಬಂಧಕರು ನಿಯಂತ್ರಣ ಮಾಡುತ್ತಾರೆ ಮತ್ತು ಅದೇ ಕಾರಣಕ್ಕೆ ಆ ನಿಯಂತ್ರಿಸುವ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆಗೆ ಬರುತ್ತದೆ ಎಂದು ತಿಳಿಯತಕ್ಕದ್ದಲ್ಲ. ಸಹಕಾರಿ ಸಂಸ್ಥೆ ಖಾಸಗಿ ಸಂಸ್ಥೆ ಎಂದು ತಿಳಿದರೂ, ಅದರ ಮಾಹಿತಿಯನ್ನು ಮಾಹಿತಿ ಅಧಿಕಾರಿ ಪಡೆದು ಸಲ್ಲಿಸಬಹುದಾಗಿದೆ ಎಂದು ತೀರ್ಮಾನಿಸಿತು. 2009 (3) KLT 1001/2010 (1) ID 83/2009 (3) KHC 901

10. ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳು ಎಂದು ಕೇರಳ ಉಚ್ಚನ್ಯಾಯಾಲಯದ ಪೂರ್ಣ

ಪೀಠವು ಮೂಲೂರು ಗ್ರಾಮೀಣ ಸಹಕಾರಿ ಸಂಘದ ಪ್ರಕರಣದಲ್ಲಿ ತೀರ್ಮಾನಿಸಿತು. ವಿಭಾಗೀಯ ಪೀಠವು ತಲಪಾಲಂ ಸೇವಾ ಸಹಕಾರಿ ಬ್ಯಾಂಕ್ ಪ್ರಕರಣವನ್ನು ಪೂರ್ಣ ಪೀಠಕ್ಕೆ ವರ್ಗಾಯಿಸಿರುವುದನ್ನು ಪರಿಗಣಿಸಿ ಪೂರ್ಣ ಪೀಠವು ಆದೇಶಿಸಿದೆ. 97ನೇ ಸಂವಿಧಾನ ತಿದ್ದುಪಡಿಯಲ್ಲಿ ಸಹಕಾರಿ ಸಂಸ್ಥೆಗಳ ಸ್ಥಾಪನೆಯನ್ನು ಅನುಚ್ಛೇದ 19(1)(ಸಿ) ಅಡಿಯಲ್ಲಿ ಮೂಲಭೂತ ಹಕ್ಕಾಗಿ ಸೇರಿಸಿರುವುದನ್ನು ಪರಿಗಣಿಸಿರುವುದರಿಂದ ಮತ್ತು ಮಾಹಿತಿ ಹಕ್ಕು ಕಾಯಿದೆಯಡಿ ಸಾರ್ವಜನಿಕ ಪ್ರಾಧಿಕಾರವನ್ನು ಪಾರದರ್ಶಕತೆ ಮತ್ತು ಜವಾಬ್ದಾರಿ ನಿಗದಿ ಪಡಿಸುವ ಉದ್ದೇಶದಿಂದ ಸೇರಿಸಿರುವುದನ್ನು ಪರಿಗಣಿಸಿ ವಿಭಾಗೀಯ ಪೀಠ ವರ್ಗಾಯಿಸಿದ ಪ್ರಶ್ನೆ ಕೇರಳ ಸಹಕಾರಿ ಕಾಯಿದೆಯಡಿ, ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಿಗಳು ಎಂಬ ತೀರ್ಮಾನವನ್ನು, ಏಕ ಸದಸ್ಯ ಪೀಠದ ಆದೇಶ ಸಹಕಾರಿ ಸಂಘಗಳ ನಿಬಂಧಕರು ಹೊರಡಿಸಿದ ಸುತ್ತೋಲೆಯಲ್ಲಿ ಸಹಕಾರಿ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಗೆ ಒಳಪಡುತ್ತದೆ ಎಂಬುದನ್ನು ಸಮರ್ಥಿಸಿತು.

ಸೂಚನೆ : ಈ ಪೂರ್ಣ ಪೀಠದ ಆದೇಶವನ್ನು ಶ್ರೇಷ್ಠ ನ್ಯಾಯಾಲಯ ಪ್ರಾರಂಭದಲ್ಲೇ ತಡೆಯಾಜ್ಞೆ ನೀಡಿ ಆ ನಂತರ ತೀರ್ಪಿನಲ್ಲಿ ಸಹಕಾರಿ ಸಂಸ್ಥೆ ಸಾರ್ವಜನಿಕ ಪ್ರಾಧಿಕಾರಗಳಲ್ಲವೆಂದು ತೀರ್ಮಾನಿಸಿತು.

11. ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಸರ್ಕಾರದ ನೌಕರರಾಗಿದ್ದು ಸರ್ಕಾರದಿಂದ ಪಡೆದ ಸಹಾಯ ಧನ, ಪಾಲುಬಂಡಾವಳ ಮತ್ತು ಹೂಡಿಕೆಗಳ ಮಾಹಿತಿ ನೀಡಲು ಕೇಳಿದರೂ ನೀಡುತ್ತಿಲ್ಲವಾದರಿಂದ, ಆ ಮಾಹಿತಿಯನ್ನು ನೀಡಿದರೆ ಅದು ಸಂಸ್ಥೆಯ ವಿರುದ್ಧವಾಗಿ ಆದೇಶ ಮಾಡುತ್ತಾರೆಂದು ಮಾಹಿತಿ ನೀಡದೆ ಇರುವುದನ್ನು ಗಮನಿಸಿ, ಏಕ ಸದಸ್ಯ ಪೀಠ ನೀಡಿದ ಆದೇಶವನ್ನು ಸಮರ್ಥಿಸಿ ಪಂಜಾಜ್ ಮತ್ತು ಹರಿಯಾಣ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಕರ್ನಲ್ ಸಹಕಾರಿ ಸಕ್ಕರೆ ಕಾರ್ಖಾನೆ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಏಕ ಸದಸ್ಯ ಪೀಠ ನೀಡಿದ ಆದೇಶವನ್ನು ಊರ್ಜಿತಗೊಳಿಸಿ ಮೇಲ್ಮನವಿಯನ್ನು ತಿರಸ್ಕರಿಸಿತು. AIR 2011 (NOC) 181 (P&H)/2011 (1) ID 430

12. ಬಹು ರಾಜ್ಯ ಕಾಯಿದೆಯಡಿ ನೋಂದಾವಣೆಯಾದ ಕ್ರಿಬ್‌ಕೋ, ಎನ್‌ಸಿಸಿಎಫ್ ಮತ್ತು ನೆಫೆಡ್ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಗಳೆಂದು ದೆಹಲಿ ಉಚ್ಚನ್ಯಾಯಾಲಯ ಕೃಷಿಕ್ ಭಾರತಿ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಪರಿಶೀಲಿಸಬೇಕಾದ ಅಂಶವೆಂದರೆ ಬಹು ರಾಜ್ಯ ಕಾಯಿದೆಯಡಿ ಈ ಮೇಲ್ಕಂಡ ಸಂಸ್ಥೆಗಳ ಕಾರ್ಯ ನಿರ್ವಹಣೆ ಬಗ್ಗೆ ನಿಯಂತ್ರಿಸುವ ಅಧಿಕಾರ ಸರ್ಕಾರಕ್ಕೆ ಇದೆ, ಆದ್ದರಿಂದ ಈ ಎಲ್ಲಾ ಸಂಸ್ಥೆಗಳು ರಾಷ್ಟ್ರ ಮಟ್ಟದ ಸಾರ್ವಜನಿಕ ಪ್ರಾಧಿಕಾರಗಳು ಎಂದು ಮುಖ್ಯ ಮಾಹಿತಿ ಆಯುಕ್ತರು/ಆಯೋಗ ನೀಡಿದ ಆದೇಶವು ಸಮರ್ಥನೀಯವೆಂದು ದೆಹಲಿ ನ್ಯಾಯಾಲಯ ಆದೇಶಿಸಿತು. 010 (2) ID 1

13. ತಮಿಳುನಾಡು ಸಹಕಾರಿ ಸಂಘಗಳ ಕಾಯಿದೆಯಡಿ ಬರುವ ಸಹಕಾರಿಗಳು ಸಾರ್ವಜನಿಕ ಪ್ರಾಧಿಕಾರಗಳೆಂದು ಮದ್ರಾಸ್ ಉಚ್ಚನ್ಯಾಯಾಲಯ ಎ.ಸಿ.ಶೇಖರ್ ಪ್ರಕರಣದಲ್ಲಿ ತೀರ್ಮಾನಿಸಿತು. ತಮಿಳುನಾಡು ರಾಜ್ಯದಲ್ಲಿ ಕಳೆದ ಮೂವತ್ತು ವರ್ಷಗಳಿಂದ ಸಹಕಾರಿ ಸಂಸ್ಥೆಗಳಿಗೆ ಚುನಾವಣೆ ನಡೆದಿಲ್ಲ. ರಾಜ್ಯ ಸರ್ಕಾರ ಆಡಳಿತ ಮಂಡಳಿಯನ್ನು ರದ್ದು ಪಡಿಸಿ ವಿಶೇಷಾಧಿಕಾರಿಯನ್ನು ನೇಮಿಸುತ್ತಾ ಬಂದಿದೆ. ಈ ವಿಶೇಷಾಧಿಕಾರಿಗಳು ವಿವಿಧ ದರ್ಜೆ ಸಹಕಾರಿ ಇಲಾಖೆಯ

ಅಧಿಕಾರಿಗಳಾಗಿದ್ದು, ಆಡಳಿತ ಮಂಡಳಿಯ ಸ್ಥಾನವನ್ನು ಅಲಂಕರಿಸಿದ್ದು, ನೇರವಾಗಿ ನಿಬಂಧಕರ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಕರಣಗಳಲ್ಲಿ ಮಾಹಿತಿ ಹಕ್ಕು ಕಾಯಿದೆ ಕಲಂ.2(ಹೆಚ್)(ಡಿ) ಅಡಿ ಸಾರ್ವನಿಕ ಪ್ರಾಧಿಕಾರಿಗಳು, ಏಕೆಂದರೆ ಈ ಎಲ್ಲಾ ಸಹಕಾರಿ ಸಂಘಗಳು ಸರ್ಕಾರಿ ಅಧಿಕಾರಿಗಳಾಗಿದ್ದು, ಸರ್ಕಾರದ ನಿಯಂತ್ರಣದಲ್ಲಿ ಕೆಲಸ ಮಾಡುವುದರಿಂದ ಹಾಗೂ ಲೆಕ್ಕ ತಪಾಸಣೆ, ವಿಚಾರಣೆ ಮತ್ತು ಸಂಘಗಳ ತಪಾಸಣೆ ಮತ್ತು ಪರಿಶೀಲನೆ ಮಾಡುವ ಜವಾಬ್ದಾರಿಯನ್ನು ನಿಬಂಧಕರು ನಿರ್ವಹಿಸುತ್ತಿದ್ದು, ಇವರ ನಿಯಂತ್ರಣದಲ್ಲಿ ಈ ಎಲ್ಲಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಪ್ರಾಧಿಕಾರಿಗಳು ಎಂದು ತೀರ್ಮಾನಿಸಿತು. 2008 (1) CTC 838/2008 (2) MLJ 733/2008 (2) ID 172

14. ಪಂಜಾಬ್ ಮತ್ತು ಹರಿಯಾಣ ಸಹಕಾರಿ ಸಂಘಗಳ ಕಾಯಿದೆಯಡಿ, ನೋಂದಾವಣೆಯಾದ ಸಹಕಾರಿ ಸಂಸ್ಥೆಗಳು, ಸರ್ವಾಜನಕ ಪ್ರಾಧಿಕಾರಗಳಾಗಿದ್ದು, ಮಾಹಿತಿ ಕಾಯಿದೆಯಡಿ ಬರುತ್ತವೆ ಎಂಬು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ ಹಿಂದು ಪಟ್ಟಣ ಸಹಕಾರಿ ಬ್ಯಾಂಕ್ ಪ್ರಕರಣದಲ್ಲಿ ತೀರ್ಮಾನಿಸಿತು. ಈ ಪ್ರಕರಣ ತಿರ್ಮಾನ ಮಾಡುವಾಗ ಉಚ್ಚನ್ಯಾಯಾಲಯ ಪರಿಗಣಿಸಿದ ವಿಷಯಗಳೆಂದರೆ ವಿವಿಧ ಉಚ್ಚನ್ಯಾಯಾಲಯಗಳು, ಸರ್ಕಾರದಿಂದ ಸಹಕಾರಿ ಸಂಸ್ಥೆಗಳು ಸಾಕಷ್ಟು ಹಣಕಾಸು ನೇರವು ಪಡೆದಿದ್ದರೆ, ಅಂತಹ ಸಂಸ್ಥೆ ಮಾಹಿತಿ ಹಕ್ಕು ಕಾಯಿದೆಯಡಿ ಬರುತ್ತವೆ ಎಂದು ತೀರ್ಮಾನಿಸಿದೆ. ಸಾರ್ವಜನಿಕ ಪ್ರಾಧಿಕಾರಗಳೆಂದು ತೀರ್ಮಾನಿಸುವಾಗ ಪರಿಶೀಲಿಸಬೇಕಾದ ಅಂಶಗಳೆಂದರೆ, (1) ಈ ಸಹಕಾರಿ ಸಂಸ್ಥೆಗಳು ಅಸ್ತಿತ್ವಕ್ಕೆ ಬರುವುದು ಅವುಗಳನ್ನು ನೋಂದಾಯಿಸಿದಾಗ (2) ಆ ಸಂಸ್ಥೆಗಳ ಮೇಲೆ ಸಹಕಾರಿ ಕಾಯಿದೆಯಡಿ ಸರ್ಕಾರದ ನಿಯಂತ್ರಣವಿರುವುದು (3) ಸರ್ಕಾರದಿಂದ ಸಾಕಷ್ಟು ಪ್ರಮಾಣದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಧನ ನೀಡಿರುವುದು (4) ಮಾಹಿತಿ ಕಾಯಿದೆಯಡಿ ರೂಪಿಸಿದ ಧ್ಯೇಯೋದ್ದೇಶಗಳು (5) ಸಹಕಾರಿ ಸಂಸ್ಥೆಗಳು ಸಾರ್ವಜನಿಕರ ಜೊತೆ ಇರುವ ವ್ಯವಹಾರಿ ಸಂಬಂಧ (6) ಸಹಕಾರಿ ಸಂಘದ ಪೀಟಿಕೆ, ಉದ್ದೇಶಗಳು, ಧ್ಯೇಯೋದ್ದೇಶಗಳು ಇವುಗಳ ಮಾಹಿತಿಯನ್ನು ಸಂಗ್ರಹಿಸಿದ ನಂತರ ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರುವ ಬಗ್ಗೆ ನಿರ್ಧರಿಸಬೇಕೆಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ ಸೂಚಿಸಿತು.

ಸಹಕಾರಿ ಸಂಸ್ಥೆಗಳು ಮಾಹಿತಿ ಹಕ್ಕು ಕಾಯಿದೆಯಲ್ಲಿ ತಾವು ಬರುವುದಿಲ್ಲವೆಂಬ ವಾದವನ್ನು ಮಂಡಿಸಿದಾಗ ಪರಿಶೀಲಿಸಬೇಕಾದ ಅಂಶಗಳೆಂದರೆ (1) ಸಹಕಾರಿ ಸಂಸ್ಥೆಗಳು ಅನುಚ್ಛೇದ 12 ರಡಿ "ರಾಜ್ಯ" ಎಂಬ ಅರ್ಥವಿವರಣೆಗೆ ಬರುವುದಿಲ್ಲವಾದರಿಂದ ಮಾಹಿತಿ ಕಾಯಿದೆಯಡಿ ಬರುವುದಿಲ್ಲ. (2) ಸಹಕಾರಿ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರದ ಪೂರ್ಣ ಪ್ರಮಾಣದ ನಿಯಂತ್ರಣವಿಲ್ಲ. (3) ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಮಾತ್ರ ಮತ್ತು ಹೊರಗಿನ ವ್ಯಕ್ತಿಗಳಿಗೆ ಯಾವುದೇ ಆಸಕ್ತಿ ಇರುವುದಿಲ್ಲ. (4) ಸದಸ್ಯರಿಗೆ ಆಡಳಿತದಲ್ಲಿ ಭಾಗವಹಿಸಲು ಸಾಕಷ್ಟ ಅವಕಾಶಗಳನ್ನು ಕಲ್ಪಿಸಿದೆ. (5) ಸದಸ್ಯರು ತಮ್ಮ ಲೆಕ್ಕಪತ್ರಗಳ ಪರಿಶೀಲನೆ ಬಗ್ಗೆ ಅವಕಾಶ ಕಲ್ಪಿಸಿದೆ. (6) ಕಾನೂನಿನ್ವಯ ವಿವಾದಗಳು ಏರ್ಪಟ್ಟಾಗ ಅದನ್ನು ಪರಿಹರಿಸಿಕೊಳ್ಳಲು ಅವಕಾಶವಿದೆ. (7) ಸಹಕಾರಿ ಸಂಸ್ಥೆಗಳಲ್ಲಿ ಸೀಮಿತ ವ್ಯಕ್ತಿಗಳಿದ್ದು ನೌಕರರು ಕಾನೂನಿನ ಬಗ್ಗೆ ಸಾಕಷ್ಟು ಅರಿವಿಲ್ಲದೆ ಇರುವುದು. (8) ಸಂಘದ ಅಧ್ಯಕ್ಷರ ಹುದ್ದೆಯು ಗೌರವಾನ್ವಿತವಾಗಿದ್ದು, ಸಾರ್ವಜನಿಕ ಮಾಹಿತಿ ಅಧಿಕಾರಿ ಕೆಲವನ್ನು ನಿರ್ವಹಿಸಬೇಕಾಗಿದ್ದು. (9) ಸಹಕಾರಿ ಸಂಘಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆ

ಸಮರ್ಪಕವಾಗಿಲ್ಲದೆ ಇರುವುದು. (10) ಈ ಸಹಕಾರಿ ಸಂಸ್ಥೆಗಳು ಗ್ರಾಮಾಂತರ ಪ್ರದೇಶದಲ್ಲಿ ವಿವಿಧ ಗುಂಪುಗಳ ನೌಕರರ ಮತ್ತು ಅಧಿಕಾರಿಗಳ ಬಗ್ಗೆ ಸಣ್ಣ ಪುಟ್ಟ ಪ್ರಶ್ನೆ ಕೇಳುತ್ತಿದ್ದು, ಇಂತಹ ಅನುಮಾನಗಳ ಆಧಾರದ ಮೇಲೆ ಸಂಸ್ಥೆಗಳನ್ನು ಪರಿಶೀಲಿಸಬೇಕು ಎಂದು ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯ ವಿಮರ್ಶಿಸಿತು. ಈ ಮೇಲ್ಕಂಡ ವಿಷಯವನ್ನು ಪರಿಶೀಲಿಸುವಾಗ ಸಹಕಾರಿ ಸಂಸ್ಥೆಗಳನ್ನು ಸಾರ್ವಜನಿಕ ಪ್ರಾಧಿಕಾರಗಳೆಂದು ಪರಿಗಣಿಸಬೇಕೆಂದು ಕೇರಳ ಉಚ್ಚನ್ಯಾಯಾಲಯ ಶ್ರೀ ವರ್ಗೀಸ್ ಪ್ರಕರಣದಲ್ಲಿ ತೀರ್ಮಾನಿಸಿತು. ಸಾರ್ವಜನಿಕ ಪ್ರಾಧಿಕಾರಗಳೆಂದು ತೀರ್ಮಾನಿಸುವಾಗ ಸೀಮಿತ ಅರ್ಥ ವಿವರಣೆಗಳನ್ನು ನೀಡತಕ್ಕದ್ದಲ್ಲ. ಸರ್ಕಾರದ/ನಿಬಂಧಕರ ನಿಯಂತ್ರಣ ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ರೀತಿ ಅರ್ಥೈಸಬೇಕು. ಈ ರೀತಿ ವಿಮರ್ಶಿಸುವಾಗ ಪುದುಚರಿ ಸಹಕಾರಿ ಕಾಯಿದೆ (ಕಲಂ.26) ತಮಿಳುನಾಡು ಸಹಕಾರಿ ಕಾಯಿದೆ ಕಲಂ.27, ಕೇರಳ ಸಹಕಾರಿ ಸಂಘಗಳ ನಿಯಮ 25 ರಲ್ಲಿ ನೀಡಿದ ನಿರ್ಬಂದಗಳನ್ನು ಪರಿಶೀಲಸಬೇಕು. ಯಾವನೇ ಒಬ್ಬ ಸದಸ್ಯ ತನ್ನ ವಿವಾದವನ್ನು ಪರಿಹರಿಸಿಕ್ಕೊಳ್ಳಲು ಸಹಕಾರಿ ಕಾಯಿದೆಯಲ್ಲಿ ಅವಕಾಶವಿದೆ. (ತಮಿಳುನಾಡು ಸಹಕಾರಿ ಕಾಯಿದೆ ಕಲಂ.24, ಆಂದ್ರಪ್ರದೇಶ ಸಹಕಾರಿ ಕಾಯಿದೆ ಕಲಂ.22, ಪುದುಚರಿ ಸಹಕಾರಿ ಕಾಯಿದೆ ಕಲಂ.23) ಇಂತಹ ವಿವಾದಗಳನ್ನು ಪರಿಹರಿಸಿಕೊಳ್ಳಲು ಬೇಕಾದ ಮಾಹಿತಿಯನ್ನು ಪಡೆಯಬೇಕಾದರೆ ಮಾಹಿತಿ ಕಾಯಿದೆ ಅವಶ್ಯಕ. 2007 (3) KLT 486

15. ಬಾಂಬೆ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಎಪಿಎಂಸಿ ಪ್ರಕರಣದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ.

“ಸಹಕಾರ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ಹಣ ದುರುಪಯೋಗ ಪ್ರಕರಣಗಳನ್ನು ಪ್ರಮುಖವಾಗಿ ಸಾಲ ನೀಡುವ ಪ್ರಾಥಮಿಕ ಸಂಘಗಳು, ಪಟ್ಟಣ ಮತ್ತು ಇತರ ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆಯುವ ಅವ್ಯವಹಾರಗಳನ್ನು ನಡೆಸುತ್ತಿರುವ ವ್ಯಕ್ತಿಗಳು ಮತ್ತು ಅದರಿಂದಾಗುತ್ತಿರುವ ನಷ್ಟಗಳನ್ನು, ಠೇವಣಿದಾರರು ಮಾಡಿದ ಠೇವಣಿಯ ದುರುಪಯೋಗವಾಗುವುದರಿಂದ, ಈ ಸಹಕಾರಿ ಸಂಸ್ಥೆಗಳನ್ನು ಮಾಹಿತಿ ಕಾಯಿದೆಯಡಿಯಲ್ಲಿ ಸೇರಿಸುವುದು ಸೂಕ್ತ. ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಈ ತೀರ್ಪಿನ ಪತ್ರಿಯನ್ನು ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ರವಾನಿಸಿತು.” 2011 (1) ID 135